ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

ಡಿಸೆಂಬರ್ 04, 2013 ಪುಟ 20 ರೂ. 15/-



ಹಿರಿಯ ವಕೀಲ ಪೂಜಾರಿ ಸಂದರ್ಶನ


ಮೋದಿಯ ಬೆಂಗಳೂರು ಪ್ರೇಯಸಿ



ಯಾರಿವಳು ಮಾನಸಿ?



ಒಂದು ನಿಗೂಢ ಪ್ರೇಮಕಥೆ




ಜೀವರಾಜ್‌ನ ಕೀಚಕ ಪುರಾಣ



ಜಟಕಾ ಬಂಡಿ

ಮಾನಗೇಡಿ ಮಾಳವಿಕಾ

ಮಂಡ್ಯ:ಒಕ್ಕಲಿಗರ ಸಂಘದ ಚುನಾವಣೆ ಅಬ್ಬರ



ಯಡ್ಡಿಯ ತಬ್ಬಲಿ ರಾಜಕೀಯ

ನಾಸ್ತಿಕ... ನಾಸ್ತಿಕರೆಂದೇಕೆ ಹೀಗಳೆಯುವಿರಿ

ಇತ್ತೀಚೆಗೆ ಹಿಂದೂ ಕೋಮುವಾದಿಗಳು ಕ್ರಿಶ್ಚಿಯನ್, ಮುಸ್ಲಿಮರನ್ನು ಬಯ್ಯುತ್ತಿರುವುದರ ಜೊತೆಗೆ ನಾಸ್ತಿಕರನ್ನು ಬಯ್ಯಲು ತೊಡಗಿದ್ದಾರೆ. ಉಡುಪಿಯಲ್ಲಿ ಶೋಕಮಾತಾ ಚರ್ಚ್‌ನಲ್ಲಿ ಸೌಹಾರ್ದ ದೀಪಾವಳಿ ಆಚರಣೆ ನಡೆದಾಗ ಉಡುಪಿ ಮಠಾಧೀಶರೊಬ್ಬರು ಹೀಗೆ ಹೇಳಿದರು :"ನಾವು-ಹಿಂದೂ, ಮುಸ್ಲಿಂ ಮತ್ತು ಕ್ರಿಶ್ಚಿಯನ್ನರ ನಡುವೆ ತಾತ್ವಿಕ ಭಿನ್ನಾಭಿಪ್ರಾಯಗಳಿರಬಹುದು, ನಮ್ಮ ಆಚರಣೆಗಳಲ್ಲಿ ವ್ಯತ್ಯಾಸಗಳಿವೆ. ಆದರೆ ನಾವೆಲ್ಲರೂ ದೇವರನ್ನು ನಂಬುವವರು, ದೇವ ಭಕ್ತರು. ಈ ಅರ್ಥದಲ್ಲಿ ನಾವೆಲ್ಲಾ ಒಂದು. ನಮ್ಮೆಲ್ಲರ ಸಮಾನ ಶತ್ರುಗಳು ನಾಸ್ತಿಕರಾದ ಬುದ್ಧಿಜೀವಿಗಳು ಮತ್ತು ಎಡಪಂಥೀಯರು. ನಾವು ಆತ್ಮವನ್ನು ಪ್ರೀತಿಸುವವರು, ಅವರು ದೇಹವನ್ನು ಪ್ರೀತಿಸುವವರು; ಭೌತವಾದಿಗಳು..."

-ಕಾವಿ ಬಟ್ಟೆ ಧರಿಸಿದ್ದ ಜಗದ್ಗುರುಗಳು ಹೀಗೆ ಹೇಳುತ್ತಿರು ವಾಗ ವೇದಿಕೆಯ ಮೇಲೆ ಅವರ ಜತೆ ಇದ್ದ ಬಿಳಿ ಬಣ್ಣದ ಉದ್ದನೆಯ ಉಡುಪು ಧರಿಸಿದ್ದ ಕೆಥೋಲಿಕ್/ ಪ್ರೊಟೆಸ್ಟೆಂಟ್ ಕ್ರೈಸ್ತ ಮತ್ತು ಮುಸ್ಲಿಂ ಜಗದ್ಗುರುಗಳು ಮುಗುಳುನಗುತ್ತಾ ತಲೆ ಅಲ್ಲಾಡಿಸುತ್ತಿದ್ದರು.

ಅಮೆರಿಕಕ್ಕೆ ಹೋಗಿ ಮಧ್ವ ಸಿದ್ಧಾಂತ ಪ್ರಚಾರ ಮಾಡುತ್ತಿರುವ ಮತ್ತೊಬ್ಬ ಜಗದ್ಗುರು ತಮ್ಮ ಒಂದು ಕಾರ್ಯಕ್ರಮದಲ್ಲಿ ಇದೇ ಅರ್ಥ ಬರುವ ಮಾತುಗಳನ್ನು ಹೇಳಿದ್ದು ಪತ್ರಿಕೆಗಳಲ್ಲಿ ವರದಿಯಾಗಿದೆ. "ನಾಸ್ತಿಕದ ಮೌಢ್ಯ ನಿವಾರಣೆಗೆ ಆಸ್ತಿಕರೆಲ್ಲಾ ಒಂದಾಗೋಣ" ಎನ್ನುವ ಕರೆಯನ್ನು ಅವರು ನೀಡಿದ್ದಾರೆ.


ನಂತರ ಸಿದ್ದರಾಮಯ್ಯನವರ ಸರ್ಕಾರಕ್ಕೆ ವಿಚಾರವಾದಿಗಳು "ಮೂಢನಂಬಿಕೆ ವಿರೋಧೀ ಮಸೂದೆ"ಗೆ ಬೇಕಾದ ಕರಡು ಪ್ರಸ್ತಾಪ ಸಲ್ಲಿಸಿದಾಗ ಮಾಜಿ ಪ್ರಧಾನಿ ದೇವೇಗೌಡರು- "ನಾಸ್ತಿಕರ ಮಾತು ಕೇಳಿ ಈ ಮಸೂದೆಯನ್ನು ಜಾರಿಗೆ ತರಬೇಡಿ" ಎಂದು ಗುಡುಗಿದರು. ತಾನು ಮುಖ್ಯಮಂತ್ರಿ ಆಗಿದ್ದಾಗ ದಕ್ಷಿಣ ಕನ್ನಡದ ಸುಳ್ಯದಲ್ಲಿ ಹೋಮ ಮಾಡಿಸಿ ಒಂದು ಕೋಣವನ್ನು ಬಲಿ ಕೊಡಿಸಿದ್ದರು ಈ ಮಾಜಿ ಪ್ರಧಾನಿ. ಅವರ ಮಗ ಮಾಜಿ ಮುಖ್ಯಮಂತ್ರಿ ಕುಮಾರ ಸ್ವಾಮಿಗಳು ಅದೇರೀತಿ ಬುದ್ಧಿಜೀವಿಗಳನ್ನು, ನಾಸ್ತಿಕರನ್ನು ಗೇಲಿ ಮಾಡುತ್ತಿದ್ದಾರೆ. ಕಾಂಗ್ರೆಸ್‌ನವರಾದ ಜನಾರ್ದನ ಪೂಜಾರಿಯೂ 'ನಾಸ್ತಿಕ'ರನ್ನು ಬಯ್ಯುವುದರಲ್ಲಿ ಹಿಂದೆ ಬಿದ್ದಿಲ್ಲ. ಅವರ ಅಧಿಪತ್ಯದಲ್ಲಿರುವ ಮಂಗಳೂರಿನ ಕುದ್ರೋಳಿಯಲ್ಲಿ ತಮ್ಮ 'ಆಸ್ತಿಕ್ಯವನ್ನೇ ವಿವಿಧ ದೇವರುಗಳ ಮೂಲಕ ಪ್ರದರ್ಶನ'ಕ್ಕೆ ಇಟ್ಟಿದ್ದಾರೆ. ಇನ್ನು ಬಿಜೆಪಿ/ ಸಂಘ ಪರಿವಾರದವರ ನಿಲುವನ್ನು ಹೇಳದಿರುವುದೇ ಲೇಸು. ಅವರಿಗೆ ಕ್ರಿಶ್ಚಿಯನ್, ಮುಸ್ಲಿಂರಿಗಿಂತಲೂ ದೊಡ್ಡ ಶತ್ರುಗಳು ಎಡಪಂಥೀಯ ನಾಸ್ತಿಕರು.

ಹೀಗೆ ಎಲ್ಲೆಲ್ಲೂ ಆಕ್ರಮಣಕ್ಕೊಳಗಾಗುತ್ತಿರುವ 'ನಾಸ್ತಿಕ'ರ ಜನಪರ ಮತ್ತು ಸಕಲ ಜೀವಪರ ತಾತ್ವಿಕ ನಿಲುವನ್ನು ಎತ್ತಿ ಹಿಡಿಯುವುದು ಈಗ ಅನಿವಾರ್ಯವಾಗಿದೆ.

ವಾಸ್ತವವಾಗಿ ಈ ನಾಸ್ತಿಕ ಶಬ್ದವನ್ನೆ ತಪ್ಪಾಗಿ ಬಳಸಲಾಗುತ್ತಿದೆ. ಪ್ರತ್ಯಕ್ಷ, ಪ್ರಮಾಣ, ಪುರಾವೆಗಳ ಆಧಾರದಲ್ಲಿ ವಾಸ್ತವವನ್ನು ಅದು ಇರುವ ಹಾಗೆಯೇ ಒಪ್ಪುವ ನಾಸ್ತಿಕರೇ ನಿಜವಾದ ಆಸ್ತಿಕರು, ವಾಸ್ತವದಲ್ಲಿ ಅಸ್ತಿತ್ವದಲ್ಲೇ ಇಲ್ಲದ-ದೇವರು, ದೆವ್ವಗಳನ್ನು, ಸ್ವರ್ಗ ನರಕದ ಪುರಾಣಗಳನ್ನು ಯಾವುದೇ ಪುರಾವೆ ಬೆಂಬಲಗಳಿಲ್ಲದೆ ಕುರುಡಾಗಿ ನಂಬುವ ಭ್ರಮಾಧೀನರೇ ಆಸ್ತಿಕರೆಂದುಕೊಳ್ಳುತ್ತಿರುವ ನಾಸ್ತಿಕರು. ಇರಲಿ. ಈಗ ವಾದದ ಅನುಕೂಲಕ್ಕಾಗಿ ರೂಢಿಯಲ್ಲಿರುವ ನಾಸ್ತಿಕ-ಆಸ್ತಿಕ ಶಬ್ದಗಳನ್ನೆ ಇಟ್ಟುಕೊಂಡು ಮುಂದುವರಿಯೋಣ.

ವೈದಿಕರ ಪ್ರಕಾರ-ವೇದಪ್ರಾಮಾಣ್ಯ ಮತ್ತು ಜಾತಿ ಪದ್ಧತಿಯನ್ನು ಒಪ್ಪದವರೆಲ್ಲಾ ನಾಸ್ತಿಕರು. ಈ ಅರ್ಥದಲ್ಲಿ ಭಾರತದ ಮಣ್ಣಿನಲ್ಲಿ ಹುಟ್ಟಿದ ಜೈನ, ಬೌದ್ಧ ಧರ್ಮಗಳು ನಾಸ್ತಿಕ ಮತಗಳು. ಮುಸ್ಲಿಮರ ಪ್ರಕಾರ ತಮ್ಮ ಅಲ್ಲಾಹು ಮತ್ತು ಖುರಾನ್ ದೇವವಾಣಿಯನ್ನು ನಂಬದವರೆಲ್ಲಾ ಕಾಫಿರರು. ಕ್ರೈಸ್ತರ ಪ್ರಕಾರ ದೇವರ ಮಗ ಜೀಸಸ್‌ನ ದೈವತ್ವ ಮತ್ತು ದೇವವಾಣಿ ಬೈಬಲ್ ನಂಬದವರೆಲ್ಲಾ ನಾಸ್ತಿಕರು. ಹೀಗೆ ಆಸ್ತಿಕರಲ್ಲೆ ನಾಸ್ತಿಕ್ಯದ ಬಗ್ಗೆ ಒಮ್ಮತದ ಅಭಿಪ್ರಾಯವಿಲ್ಲ.


ನಾಸ್ತಿಕರು ವೈಜ್ಞಾನಿಕ ಮನೋಭಾವ ಉಳ್ಳವರು. ಭಾರತ ಪುಣ್ಯಭೂಮಿ, ಈ ಪುಣ್ಯ ಭೂಮಿಯಲ್ಲೇ ಎಲ್ಲಾ ದೇವರುಗಳು ಅವತಾರ ತಾಳಿದ್ದಾರೆ ಎನ್ನುವುದನ್ನು ಅವರಿಗೆ ನಂಬಲಾಗುವುದಿಲ್ಲ, ಭೂಗ್ರಹದಲ್ಲಿರುವ ನೂರಾರು ದೇಶಗಳಲ್ಲಿ ಕೇವಲ ಒಂದು ದೇಶ ಭಾರತ. ಈ ಭೂಮಿ ಸೂರ್ಯನ ಸುತ್ತ ತಿರುಗುತ್ತಿರುವ 9 ಗ್ರಹಗಳಲ್ಲಿ ಒಂದು - ಗುರುಗ್ರಹ ಭೂಮಿಗಿಂತ ತುಂಬಾ ದೊಡ್ಡದು. ಎಲ್ಲಾ ಗ್ರಹಗಳಿಗಿಂತಲೂ ಸೂರ್ಯ ದೊಡ್ಡದು. ನೀಹಾರಿಕೆಯಲ್ಲಿರುವ ಕೋಟಿಗಟ್ಟಲೆ ನಕ್ಷತ್ರಗಳಲ್ಲಿ ಒಂದು ನಮ್ಮ ಈ ಸೂರ್ಯ. ಅಂತಹ ಅಸಂಖ್ಯ ನೀಹಾರಿಕೆಗಳಿವೆ. ವಿಶ್ವದ ದೂರ ಅಳೆಯಲು ಬೆಳಕಿನ ವೇಗದ ಮಾನದಂಡ



ನಾವೆಲ್ಲ ನಾಸ್ತಿಕರಾಗಿ ಜನ್ಮವೆತ್ತುತ್ತೇವೆ... ಆ ನಂತರ ದೊಡ್ಡವರು ಸುಳ್ಳುಗಳನ್ನು ಹೇಳಲಾರಂಭಿಸುತ್ತಾರೆ

ಉಪಯೋಗಿಸಲಾಗುತ್ತಿದೆ. ಐನ್‌ಸ್ಟೀನ್‌ನ ಸಂಶೋಧನೆಯ ಪ್ರಕಾರ ಬೆಳಕಿನ ವೇಗ ಒಂದು ನಿಮಿಷಕ್ಕೆ ಮೂರು ಲಕ್ಷ ಕಿಲೋಮೀಟರ್. ನಕ್ಷತ್ರಗಳ ನಡುವಿನ ದೂರವನ್ನು ಸಾವಿರಾರು ಜ್ಯೋತಿರ್ ವರ್ಷಗಳಲ್ಲಿ ಅಳೆಯುತ್ತಾರೆ. ಹಾಗಾದರೆ ನಮ್ಮ ವಿಶ್ವ ಎಷ್ಟು ದೊಡ್ಡದಾಗಿದೆ ಇಂದು ಊಹಿಸಿ. ಸಾವಿರಾರು ವರ್ಷಗಳ ಬೆಳಕಿನ ವೇಗದಲ್ಲಿ ಹರಡಿಕೊಂಡಿರುವ ಪ್ರಾರಂಭ ಕೊನೆಇಲ್ಲದ ಕಾಲ/ದೇಶಗಳ ಈ ಬೃಹತ್ ವಿಶ್ವದ ಅತಿ ಸಣ್ಣ ಎಳೆಯನ್ನು ಕೂಡ ಮನೋಜೀವಿಗಳಾದ ಮಾನವರಿಗೆ ಪೂರ್ತಿಯಾಗಿ ತಿಳಿಯಲಾಗಿಲ್ಲ, ಭಾರತ ಈಗಿನ್ನೂ ಮಂಗಳ ಗ್ರಹಕ್ಕೆ PSLV-C25 ಉಪಗ್ರಹವನ್ನು ಕಳುಹಿಸುತ್ತಿದೆ. ವಸ್ತುಸ್ಥಿತಿ ಹೀಗಿರುವಾಗ ಈ ಜಗದ್ಗುರುಗಳು ತಮ್ಮ ತಮ್ಮ ದೇವರುಗಳೇ ಈ ಪ್ರಪಂಚವನ್ನು ಸೃಷ್ಟಿಸಿದ್ದಾರೆಂದು ಸುಳ್ಳು ಸುಳ್ಳು ಹೇಳ್ತಿದ್ದಾರಲ್ಲ?!! ಇವರ ಅಜ್ಞಾನದ ಆಳ, ಅಗಲಗಳಿಗೆ ಏನು ಹೇಳಬೇಕು.

2500 ವರ್ಷಗಳ ಹಿಂದೆ ಗ್ರೀಕ್ ದೇಶದ ಅರಿಸ್ಟಾಟಲ್ ವಿಶ್ವದ ಕೇಂದ್ರ 'ಭೂಮಿ' ಎನ್ನುವ ಸಿದ್ಧಾಂತ ಇಟ್ಟಿದ್ದ.



ಅದನ್ನು ಪ್ರಶ್ನಿಸಿದ ವಿಜ್ಞಾನಿ ಬ್ರುನೋ ಅನ್ನು ಜೀವಂತ ಸುಡಲಾಯಿತು. ನಂತರ ಕೆಪ್ಲರ್, ಗೆಲಿಲಿಯೋರಿಗೆ ಚಿತ್ರ ಹಿಂಸೆ ಕೊಡಲಾಯಿತು. ಆದರೆ ಆ ವಿಜ್ಞಾನಿಗಳು ಸರಿಯಾಗಿಯೇ ಹೇಳಿದ್ದರು; ಭೂಮಿ ವಿಶ್ವದ ಕೇಂದ್ರವಲ್ಲ; ಸೂರ್ಯ ಈ ಸೌರವ್ಯೂಹದ ಕೇಂದ್ರ. ಆಕಾಶದ ತುಂಬ ಹರಡಿರುವ ನಕ್ಷತ್ರಗಳ ರಾಶಿಗಳನ್ನು ನೋಡಿದರೆ ಈ ವಿಶ್ವಕ್ಕೆ ಒಂದು ಕೇಂದ್ರ ಇರುವುದೇ ಅನುಮಾನ. ಇನ್ನು ಈ ಭೂಮಿಯಲ್ಲಿರುವ 'ಮನುಷ್ಯ'ರೇ ಶ್ರೇಷ್ಠ ಸೃಷ್ಟಿಯೆಂದು ಆಸ್ತಿಕರ ಮತಾಚಾರ್ಯರೆಲ್ಲಾ ವಾದಿಸಿದ್ದಾರೆ. ಈಗಲೂ ವಾದಿಸುತ್ತಿದ್ದಾರೆ. ಕೆಲವು ಮತಗಳು ಹೇಳುತ್ತವೆ "ಈ ಭೂಗ್ರಹದ ಮೇಲಿನ ಪ್ರಾಣಿ, ಪಕ್ಷಿ, ಸಸ್ಯಗಳನ್ನೆಲ್ಲಾ ಸೃಷ್ಟಿಕರ್ತನಾದ ದೇವರು 'ಮನುಷ್ಯ'ನ ಉಪಭೋಗಕ್ಕಾಗಿಯೇ ಸೃಷ್ಟಿಸಿದ್ದಾನೆ" ಎಂದು. ಈ ನಂಬಿಕೆ ಎಷ್ಟು ಹಾಸ್ಯಾಸ್ಪದ ಎಂದು ಚಾರ್ಲ್ಸ್ ಡಾರ್ವಿನ್ ತನ್ನ "ಒರಿಜಿನ್ ಆಫ್ ಸ್ಪೀಸಿಸ್" ಪುಸ್ತಕದಲ್ಲಿ ತೋರಿಸಿಕೊಟ್ಟ. ತನ್ನ ಬೀಗಲ್ ಎನ್ನುವ ಹಡಗಿನಲ್ಲಿ ಪ್ರಪಂಚವೆಲ್ಲಾ ಸುತ್ತಾಡಿ, ಪಳೆಯುಳಿಕೆಯನ್ನೆಲ್ಲ ಸಂಗ್ರಹಿಸಿ, ಚಾರ್ಲ್ಸ್ ಡಾರ್ವಿನ್ ಪುರಾವೆಗಳ ಸಹಿತ ಹೇಳಿದ "ಭೂಗ್ರಹದ ಮೇಲೆ ಮನುಷ್ಯನನ್ನು ದೇವರು ಸೃಷ್ಟಿಸಿದ್ದಲ್ಲ. 460 ಕೋಟಿ ವರ್ಷಗಳ ಹಿಂದೆ ಸೂರ್ಯನಿಂದ ಸಿಡಿದ ಒಂದು ಬೆಂಕಿ ಕಿಡಿಯೇ ಬಿಸಿ ಆರಿದ ಮೇಲೆ ನಮ್ಮ ಈ ಭೂಮಿಯಾಯಿತು. ಪ್ರಾರಂಭದಲ್ಲಿ ಯಾವ ಜೀವಿಗಳೂ ಈ ಭೂಗ್ರಹದ ಮೇಲಿರಲಿಲ್ಲ, ಅನಂತರ ನಿಧಾನಕ್ಕೆ ಅಮೀಬಾದಂತಹ ಏಕಕೋಶ ಜೀವಿಗಳು ಅಸ್ತಿತ್ವಕ್ಕೆ ಬಂದು-ಅದೇ ಬಹುಕೋಶ ಜೀವಿಗಳಾಗುತ್ತಾ ಮೀನು, ಪ್ರಾಣಿ, ಪಕ್ಷಿಗಳೆಲ್ಲಾ ವಿಕಾಸವಾಗುತ್ತಾ ಸುಮಾರು 25 ಲಕ್ಷ ವರ್ಷಗಳ ಈಚೆಗೆ- ಮಂಗನಿಂದ ಮಾನವ ಜೀವಿಯ ವಿಕಾಸವಾಯಿತು."

ಚಾರ್ಲ್ಸ್ ಡಾರ್ವಿನ್‌ನ ಈ ಸಂಶೋಧನೆ ಎಲ್ಲಾ ಮತ ಧರ್ಮಗಳ ನೆಲೆಗಟ್ಟನ್ನೇ ಅಲ್ಲಾಡಿಸಿತು. ಈಗ ನಾವು ಒಪ್ಪಿಕೊಳ್ಳಲೇಬೇಕಾಗಿದೆ. ಆ ಜಾತಿ ಈ ಜಾತಿ ಶ್ರೇಷ್ಠವಲ್ಲ; ಮನುಷ್ಯ ಜೀವಿಯೇ ಶ್ರೇಷ್ಠವಲ್ಲ, ಭೂಮಿಯ ಮೇಲಿನ ಎಲ್ಲಾ ಜೀವಿಗಳು ಸಮಾನವಾಗಿ ಶ್ರೇಷ್ಠರು. ಅಷ್ಟು ಮಾತ್ರವಲ್ಲ ಎಲ್ಲಾ ಜೀವಿಗಳ ಬದುಕು ಪರಸ್ಪರ ಹೆಣೆದುಕೊಂಡಿದೆ. ಒಂದು ಜೀವ ಪ್ರಬೇಧಕ್ಕೆ ತೊಂದರೆ ಆದರೂ ಇತರ ಎಲ್ಲಾ ಜೀವ ಪ್ರಬೇಧಗಳಿಗೂ ತೊಂದರೆ ಆಗುತ್ತದೆ. ಇದನ್ನು ಅರ್ಥ ಮಾಡಿಕೊಂಡ 'ನಾಸ್ತಿಕ'ರು ವಿಶ್ವ ಮಾನವ ತತ್ವವನ್ನು ಎತ್ತಿಹಿಡಿದಿರುತ್ತಾರೆ. ಹರಿ ಹರ, ಅಲ್ಲಾಹು, ಜೀಸಸ್ ಮುಂತಾದ ತಮ್ಮ ತಮ್ಮ ದೇವರನ್ನು ನಂಬದವರೆಲ್ಲಾ ನರಕಕ್ಕೆ ಹೋಗುತ್ತಾರೆ ಎಂದು 'ಜಗದ್ಗುರು'ಗಳು ಹೇಳಿಕೆ ಕೊಟ್ಟರೆ - ನಾಸ್ತಿಕರಿಗೆ ನಗೆ ಬಾರದೆ ಇರುತ್ತದೆಯೇ?

ಇರಲಿ ಈಗ ಈ ವೈಜ್ಞಾನಿಕ ಮನೋಭಾವದ ನಾಸ್ತಿಕರಿಂದ ಜಗತ್ತಿಗೆ ಎಷ್ಟೆಲ್ಲಾ ಉಪಕಾರವಾಗಿದೆ ನೋಡೋಣ.

ಕಾಲರಾದಿಂದ ಜನ ಸಾಯುತ್ತಿದ್ದರು. ಈ ರೋಗವನ್ನು ದೇವರು ದುಷ್ಟರನ್ನು ಶಿಕ್ಷಿಸಲಿಕ್ಕಾಗಿ ಕೊಡುತ್ತಾನೆ ಎಂದು ಆಸ್ತಿಕರು ನಂಬಿದ್ದರು. ಫ್ರಾನ್ಸ್‌ನ ವಿಜ್ಞಾನಿ ಲೂಯಿ ಪ್ಯಾಶ್ಚರ್ ಸೂಕ್ಷ್ಮಾಣುಜೀವಿಗಳಿಂದ ಕಾಲರಾ, ಕ್ಷಯಗಳಂತಹ, ರೋಗಗಳು ಹರಡುತ್ತವೆ ಎಂದು ಕಂಡುಹಿಡಿದ. ಅವನ ಈ ಜೆರ್ಮ್ ಥಿಯರಿಯಿಂದ ಈಗ ಕಾಲರಾ, ಕ್ಷಯ, ಸಿಡುಬುಗಳಂತಹ ರೋಗಗಳೇ ಜಗತ್ತಿನಿಂದ ಮರೆಯಾಗುತ್ತಿವೆ. ಅದೇ ರೀತಿ ಹುಚ್ಚುನಾಯಿ ಕಡಿತದಿಂದ ಜನರು ಕರುಣಾಜನಕವಾಗಿ ಸಾಯುತ್ತಿದ್ದರು. ಈ ಲೂಯಿ ಪ್ಯಾಶ್ಚರ್-ಚರ್ಚ್‌ನಲ್ಲಿ ಕೂತು ದೇವರ ಪ್ರಾರ್ಥನೆ ಮಾಡುತ್ತಾ ಸಮಯ ಕಳೆಯಲಿಲ್ಲ, ಜೀವವನ್ನೇ ಪಣಕ್ಕೊಡ್ಡಿ ರೇಬೀಸ್ ಬಗ್ಗೆ ಸಂಶೋಧನೆ ನಡಿಸಿ ಅದಕ್ಕೆ ಸರಿಯಾದ ಔಷಧಿ ಕಂಡುಹಿಡಿದ. ಇದು ಸಾಧ್ಯವಾದದ್ದು ವೈಜ್ಞಾನಿಕ ಮನೋಭಾವದ ಒಬ್ಬ ನಾಸ್ತಿಕನಿಂದ. ದೇವರೇ ನಮ್ಮ ಎಲ್ಲಾ ಸಮಸ್ಯೆಗಳನ್ನು ಪರಿಹಾರ ಮಾಡುತ್ತಾನೆಂದು ನಂಬಿ, ಭಜನೆ ಮಾಡುತ್ತಾ ಕುಳಿತ 'ಆಸ್ತಿಕ'ರಿಂದ ಅಲ್ಲ.

ಮೈಕೇಲ್ ಫ್ಯಾರಡೇ ಇಂಗ್ಲೆಂಡ್‌ನವನು. 'ವಿದ್ಯುತ್ ಶಕ್ತಿ'ಯ ರಹಸ್ಯ ಕಂಡುಹಿಡಿದನು. ಇವತ್ತು ಇಡೀ ಜಗತ್ತೇ ನಿಂತಿರುವುದು ಈ ವಿದ್ಯುತ್ ಶಕ್ತಿಯ ಸಲಕರಣೆಗಳ ಮೇಲೆ. ಈ ವಿಜ್ಞಾನಿಗಳು ದ್ವೈತ, ಅದ್ವೈತ, ವಿಶಿಷ್ಟಾದ್ವೈತಗಳ ಊಹಾಪೋಹಗಳಲ್ಲಿ ಸಮಯ ವ್ಯರ್ಥ ಮಾಡಲಿಲ್ಲ, ತಮ್ಮ ಬುದ್ಧಿಶಕ್ತಿಯನ್ನು ಉಪಯೊಗಿಸಿಕೊಂಡು 'ಪ್ರಕೃತಿಯ ರಹಸ್ಯ'ಗಳನ್ನು ಸಂಶೋಧಿಸುತ್ತಾ, ಆ ಮೂಲಕ ಮನುಷ್ಯ ನಾಗರಿಕತೆಯ ಬೆಳವಣಿಗೆಗೆ ತಮ್ಮ ಕೊಡುಗೆ ನೀಡುತ್ತಾ ಹೋದರು.

ದುರದೃಷ್ಟವಶಾತ್ ನಮ್ಮಲ್ಲಿರುವವರು ಇಸ್ರೋದ ಅಧ್ಯಕ್ಷ ಕೆ.ರಾಧಾಕೃಷ್ಣನ್‌ರಂತಹ ಸುಳ್ಳು ವಿಜ್ಞಾನಿಗಳು. ಮಂಗಳಗ್ರಹಕ್ಕೆ ಉಪಗ್ರಹ PSLV-ಅ25 ಕಳುಹಿಸುವ ಮೊದಲು ತಿರುಪತಿಗೆ ಹೋಗಿ ವೆಂಕಟೇಶ್ವರನ ಪಾದದಲ್ಲಿ ಆ ಉಪಗ್ರಹದ ಪ್ರತಿಕೃತಿ ಇಟ್ಟು ಪ್ರಾರ್ಥನೆ ನಡೆಸಿ ಬಂದ ಮಹಾ ಆಸ್ತಿಕ ಈ ಕೆ.ಆರ್ ಅವರಂತಹ ವಿಜ್ಞಾನಿಗಳಿದ್ದರೆ ನಮ್ಮ ದೇಶದಲ್ಲಿ 'ಮೂಲವಿಜ್ಞಾನ' ಬೆಳೆದ ಹಾಗೆಯೇ?

ಇನ್ನು ನಾಸ್ತಿಕ ಎಡಪಂಥೀಯರ ಬಗ್ಗೆ ಒಂದೆರಡು ಮಾತು. ಇದು ಯಾಕೆಂದರೆ ಪೇಜಾವರ ಶ್ರೀ ಮತ್ತು ಅವರ ಗುಂಪಿನವರು ನಾಸ್ತಿಕರನ್ನು ಬೈಯುವಾಗ ಎಡಪಂಥೀಯ ಬುದ್ಧಿಜೀವಿಗಳನ್ನು ಬಯ್ಯುತ್ತಿದ್ದಾರೆ.

ಪ್ರಾಕೃತಿಕ ವಿಜ್ಞಾನಿಗಳು ಪ್ರಕೃತಿಯ ರಹಸ[್ಯ] ಕಂಡುಹಿಡಿಯಲು ತಮ್ಮ ವೈಜ್ಞಾನಿಕ ಪ್ರಯೋಗ[...] ನಡೆಸಿದರೆ, ಈ ಎಡಪಂಥೀಯರು ಮನುಷ್ಯ ನಾಗರಿ[...] ಸೃಷ್ಟಿಗಳಾದ ರಾಜಕೀಯ, ಆರ್ಥಿಕ, ಸಾಮಾಜಿಕ ವ್ಯವ[...] ಕೂಡಾ ವೈಜ್ಞಾನಿಕವಾಗಿ ಗಮನಿಸಿ ವಿಶ್ಲೇಷಿಸ[...] ಮಾತ್ರವಲ್ಲ ಎಲ್ಲ ವ್ಯವಸ್ಥೆಗಳನ್ನು ಎಲ್ಲ ಮ[...] ಸುಖಸಂತೋಷಕ್ಕಾಗಿ 'ಬದಲಾಯಿಸುವ' ಪ್ರಯ[...] ತೊಡಗುತ್ತಾರೆ. ಅವರು ಯಥಾಸ್ಥಿತಿವಾದಿಗಳಲ್ಲ, ಸಾ[...] ಆರ್ಥಿಕ, ರಾಜಕೀಯ ವ್ಯವಸ್ಥೆಗಳಲ್ಲಿ 'ಬದಲಾವಣೆ' [...] ಎಂದು ನಂಬುವವರು. ಜಮೀನುದಾರಿ ವ್ಯವಸ್ಥೆ, [...] ರಾಜಪ್ರಭುತ್ವ ಶಾಶ್ವತ; ಅದನ್ನು ದೇವರೇ ಸೃಷ್ಟಿಸಿದ್ದು [...] ಅವರು ನಂಬುವುದಿಲ್ಲ, ಪಾಳೇಗಾರಿ ವ್ಯವಸ್ಥೆಯನ್ನು ಸ[...] ಸಮಪಾಲು, ಸರ್ವರಿಗೆ ಸಮಬಾಳು [...] ಪ್ರಜಾಪ್ರಭುತ್ವವನ್ನಾಗಿ ಬದಲಾಯಿಸಬಹುದು ಎಂ[...] ಎಡಪಂಥೀಯ ಬುದ್ಧಿಜೀವಿಗಳು ನಂಬುತ್ತಾರೆ. ನಂಬ[...] ಮಾತ್ರವಲ್ಲ, ಆ ರೀತಿಯ 'ಬದಲಾವಣೆ'ಗಾಗಿ [...] ಕೂಡಾ ನಡೆಸುತ್ತಾರೆ. ಬಂಡವಾಳಶಾಹಿ ವ್ಯವಸ್ಥೆ [...] ಸಾಮ್ರಾಜ್ಯಶಾಹಿ ವ್ಯವಸ್ಥೆ ಆಗಲಿ ಅನಿವಾರ್ಯ [...] ನಂಬದ ಅವರು ಸಮಾಜವಾದೀ ಸಮಾಜ ವ್ಯ[...] ಪ್ರಯತ್ನಿಸುತ್ತಾರೆ. ಹಾಗೆ ಪ್ರಯತ್ನಿಸುವ ಮೂಲಕ ಸ[...] ಅಲ್ಲ- ಬದುಕಿರುವಾಗಲೇ ಇಡೀ ಸಮುದಾಯಕ್ಕೆ '[...] ಸಿಗುವ ಹಾಗೆ ಮಾಡುತ್ತಾರೆ. ಖಂಡಿತವಾಗಿ [...] ಸತ್ತಮೇಲಿನ ಬದುಕಿನ ಮೇಲೆ ನಂಬಿಕೆ ಇಲ್ಲ, [...] ಅವರಿಗೆ ಸ್ವರ್ಗ-ನರಕಗಳ ಇರುವಿಕೆಯ ಬಗ್ಗೆ [...] ದೇಹವನ್ನು ಹೊರತುಪಡಿಸಿದ 'ಆತ್ಮ'ದ ಅಸ್ತಿತ್ವ[...] ಪುರಾವೆಗಳು ಸಿಕ್ಕಿಲ್ಲ, ಅವರಿಗೆ ಇಲ್ಲಿನ, ಈಗಿನ [...] ಮುಖ್ಯ, ಎಲ್ಲ ಮನುಷ್ಯರೂ ಜಾತಿ, ಮತ, [...] ಭೇದವಿಲ್ಲದೆ, ಶೋಷಣೆ ಇಲ್ಲದೆ ನೆಮ್ಮದಿ[...] ಬದುಕುವುದು ಮುಖ್ಯ.

ಇಂತಹ ಎಲ್ಲ ಜನರ, ಎಲ್ಲ ಜೀವಿಗಳ [...] ಬಯಸುವ ಎಡಪಂಥೀಯ ನಾಸ್ತಿಕ ಬುದ್ಧಿಜೀವಿಗ[...] ಬಲಪಂಥೀಯರಿಗೆ ಯಾಕೆ ಸಿಟ್ಟು?

ಈಗ ಹೇಳಿ ಪೇಜಾವರ ಶ್ರೀ ಕೊಡುವ [...] ದೀಕ್ಷೆ ಮುಖ್ಯವೋ, ಎಡಪಂಥೀಯ ನಾಸ್ತಿಕರು [...] ಬಯಸುವ ಸ್ಪಷ್ಟ ವೈಜ್ಞಾನಿಕ ಮನೋಭಾವದ, [...] ಜೀವಕಾರುಣ್ಯದ ದೀಕ್ಷೆ ಮುಖ್ಯವೋ? ಕೇವಲ [...] ಒಳಜಾತಿಯ ಜನರ ದುಃಖ ಸರಿಪಡಿಸಿ ಎ[...] ಪ್ರಯತ್ನಿಸುವುದು ಮುಖ್ಯವೋ? ಜಾತಿ, ಮತ [...] ಎಲ್ಲೆ ಮೀರಿ ಎಲ್ಲ ಜನರ ಕಣ್ಣೀರನ್ನು ಒರೆಸಿ, [...] ಒಳಿತಿಗಾಗಿ ಹೋರಾಟ ನಡೆಸುವುದು ನ್ಯಾಯವೋ?

ಇಡೀ ವಿಶ್ವವನ್ನೇ ಒಂದೆಂದು ಪರಿಗಣಿಸುವ ನಾ[...] ಭೂಮಿಯ ಮೇಲಿನ ಹಿಂದೂಗಳು, ಮುಸ್ಲಿ[...] ಕ್ರಿಶ್ಚಿಯನ್ನರು ಕರಿಯರು, ಬಿಳಿಯರು ಎಲ್ಲ ಬೇರೆ ಬೇ[...] ಕಾಣದೆ ಎಲ್ಲರೂ ಒಂದೇ ಪ್ರಕೃತಿಯ ಮಕ್ಕಳಂತೆ ಕಾ[...] ಹಿಟ್ಲರ್ ತನ್ನ ಮತದ ಜನರು ಮಾತ್ರ ಶ್ರೇಷ್ಠರು [...] ಪರಿಗಣಿಸಿ, ಯಹೂದಿ ಜನಾಂಗದ ಮರಣ[...] ನಡೆಸಿದಾಗ, ಆ ಯಹೂದಿ ಜನಾಂಗದ 'ಮನುಷ್[...] 'ನಾಸ್ತಿಕ'ರ ಹೃದಯ ಮಿಡಿದಿದೆ. ಗುಜರಾತ್‌ನಲ್ಲಿ 20[...] ನರೇಂದ್ರ ಮೋದಿ 2000 ಮುಸ್ಲಿಮರ ನ[...] ನಡೆಸಿದಾಗ ಆ ಮನುಷ್ಯರ ದುಃಖಕ್ಕಾಗಿ ನಾಸ್ತಿಕರ [...] ಮಿಡಿದಿದೆ. ದಲಿತರ ಕಗ್ಗೊಲೆ ಆದಾಗ ನ[...] ಪ್ರತಿಭಟಿಸುತ್ತಾರೆ. ಎಲ್ಲೂ, ಯಾರ ನರಮೇ[...] ಆಗಬಾರದು. ನೋವು, ವೇದನೆ ಎನ್ನುವುದು ಎ[...] ಒಂದೇ. ನೋವಿನಲ್ಲಿ, ಹಸಿವಿನಲ್ಲಿ ಆ ಜಾತಿ/ಈ [...] ಆ ಮತ ಈ ಮತ ಎನ್ನುವ ಭೇದವಿಲ್ಲ.

ರೂಸೋ, ವಾಲ್ಟೇರ್, ಮಾಂಟೆಗ್‌ರಂತಹ [...] ಬುದ್ಧಿಜೀವಿಗಳ ವೈಚಾರಿಕತೆಯಿಂದ ಫ್ರೆಂಚ್ [...] 1789ರಲ್ಲಿ ಸಂಭವಿಸಿ ಸಮಾನತೆ, ಸ್ವಾತಂತ್ರ್ಯ, ಸ[...] ಗಳಂತಹ ಜೀವನ ಪರ ಸಿದ್ಧಾಂತಗಳು ಒಡಮೂಡಿ [...]

ಎಡಪಂಥೀಯ ನಾಸ್ತಿಕ ಬುದ್ಧಿಜೀವಿಗ[...] ಸಮಾನತೆ, ಸ್ವಾತಂತ್ರ್ಯ ಸಹಭ್ರಾತೃತ್ವಗಳೇ ದಾರಿದೀ[...] ಇಷ್ಟಾಗಿಯೂ, 'ನಾಸ್ತಿಕ'ರು ಆಸ್ತಿಕರನ್ನು ದ್ವೇಷಿಸ[...] ಎಲ್ಲ ಮತಧರ್ಮದವರನ್ನು ಸಮಾನವಾಗಿ ಗೌರವಿ[...] ಅವರ ನಂಬಿಕೆಗಳ ಹಕ್ಕನ್ನು ಎತ್ತಿಹಿಡಿಯುತ್ತಾರೆ. [...] ಸೌಹಾರ್ದಕ್ಕಾಗಿ ಪ್ರಾಮಾಣಿಕವಾಗಿ ಶ್ರಮಿ[...] ಹಾಗಿರುವಾಗ ಅವರನ್ನು ನಾಸ್ತಿಕರು, ನಾಸ್ತಿ[...] ಹೀಗಳೆಯುವುದು ಎಷ್ಟು ಸರಿ? ನೆನಪಿರಲಿ, [...] ಸಂವಿಧಾನದಲ್ಲಿ 'ಸಂವಿಧಾನ ಕಲಂ 19(1) [...] ಪ್ರಕಾರ 'ನಾಸ್ತಿಕ'ರಿಗೂ ನಂಬಿಕೆಯ ಹಕ್ಕು ನೀಡ[...]

■ ಡಾ. ಹಯವದನ ಮೂಡ[...]

ಕುಂ[...]

ಮಹಿಳೆಯರ ಪ್ರತಿರೋಧದ ಹೊಸ ಆಯುಧಗಳು...

ಸುಪ್ರೀಂಕೋರ್ಟಿನ ಮಾಜಿ ನ್ಯಾಯಾಧೀಶರೊಬ್ಬರು ಲಾ ಇಂಟರ್ನ್ ವಕೀಲೆಗೆ ಲೈಂಗಿಕ ಕಿರುಕುಳ ಕೊಟ್ಟ ಬಗ್ಗೆ ದೂರು; ನರೇಂದ್ರ ಮೋದಿ ತನ್ನ ಅಕ್ರಮ ಸಂಬಂಧವನ್ನು ಮುಚ್ಚಿ ಹಾಕಲು ಅಧಿಕಾರವನ್ನು ದುರ್ಬಳಕೆ ಮಾಡಿಕೊಂಡಿದ್ದ ಹಗರಣ, ತೆಹೆಲ್ಕಾ ಪತ್ರಿಕೆಯ ಸಂಪಾದಕ ತರುಣ್ ತೇಜ್ಪಾಲ್ ಸಹೋದ್ಯೋಗಿಯೊಬ್ಬಳಿಗೆ ಲೈಂಗಿಕ ಕಿರುಕುಳ ಕೊಟ್ಟಿದ್ದರ ಸುತ್ತಲಿನ ಚರ್ಚೆ...

ಇವೆಲ್ಲ ನಮ್ಮ ಸಮಾಜದಲ್ಲಿ ಮಹಿಳೆಯರ ಮೇಲಾಗುತ್ತಿರುವ ದೌರ್ಜನ್ಯ, ಅತ್ಯಾಚಾರ, ದಬ್ಬಾಳಿಕೆ, ಕಿರುಕುಳ ಇತ್ಯಾದಿಗಳತ್ತ ಮತ್ತೆ ಎಲ್ಲರ ಗಮನ ಹರಿಸಿವೆ. ದೆಹಲಿಯ 'ನಿರ್ಭಯ', ಮುಂಬೈನ ಪತ್ರಕರ್ತೆ, ಧರ್ಮಸ್ಥಳದ ಸೌಜನ್ಯ, ಮೊನ್ನೆ ಬೆಂಗಳೂರಿನ ಸಮೀಪವಿರುವ ದೊಡ್ಡಬಳ್ಳಾಪುರದಲ್ಲಿ ದಲಿತ ಯುವತಿಯ ಮೇಲಾಗಿರುವ ಸಾಮೂಹಿಕ ಅತ್ಯಾಚಾರ... ಇವೆಲ್ಲ ಮರುಕಳಿಸದಂತ ಸ್ಥಿತಿ ಬರುವುದು ಎಂದು ಎಂಬ ಜಿಗುಪ್ಸೆ ಎಲ್ಲರನ್ನು ಕಾಡುತ್ತಿದೆ.

ಮಹಿಳೆಯರ ಸ್ಥಿತಿಗತಿಯ ಬಗ್ಗೆ ಚಿಂತಿಸುತ್ತಿದ್ದಾಗ ನನ್ನ ಗಮನ ಸೆಳೆದದ್ದು ಎರಡು ಕಿರುಚಿತ್ರಗಳು. ಮೊದಲನೆಯದು 'ಇಟ್ಸ್ ಯುವರ್ ಫಾಲ್ಟ್' ಎಂಬ ಮೂರೂವರೆ ನಿಮಿಷಗಳ ಚಿಕ್ಕ ಚಿತ್ರ. ಅತ್ಯಾಚಾರಗಳಿಗೆ ಮಹಿಳೆಯರೇ ಕಾರಣ ಎಂಬ ವಾದವನ್ನು ಲೇವಡಿ ಮಾಡುವ ಚಿತ್ರವಿದು.

ಅತ್ಯಾಚಾರಕ್ಕೆ ಮಹಿಳೆಯರು ಧರಿಸುವ ಉಡುಪುಗಳೇ ಕಾರಣ ಎಂಬ ನಿಲುವನ್ನು ಗೇಲಿ ಮಾಡುವ ಪಾತ್ರಧಾರಿಣಿ ಸ್ಕರ್ಟ್, ಬುರ್ಖಾ, ಆಸ್ಟ್ರೋನಾಟ್‌ಗಳು ಧರಿಸುವ ಉಡುಪನ್ನೂ ತೊಟ್ಟಿರುವ ಮಹಿಳೆಯರನ್ನು ತೋರಿಸುತ್ತಾರೆ. ಪುರುಷರೇ ಅತ್ಯಾಚಾರ ಎಸಗುವುದರಿಂದ ಅವರಿಗೆ ಜನ್ಮ ನೀಡಿದ ಮಹಿಳೆಯರನ್ನೇ ದೂಷಿಸುತ್ತಾರೆ. 'ಚೌಮೀನ್' ತಿನ್ನುವುದರಿಂದ ಗಂಡಸರು ಅತ್ಯಾಚಾರದಲ್ಲಿ ತೊಡಗುತ್ತಾರೆ ಎಂಬುದು ಹಲವರ ಅಭಿಪ್ರಾಯವಾದ್ದರಿಂದ 'ಚೌಮೀನ್' ತಯಾರಿಸುವ ಮಹಿಳೆಯರನ್ನೇ ಆರೋಪಿ ಸ್ಥಾನದಲ್ಲಿ ನಿಲ್ಲಿಸುತ್ತಾರೆ. ಗಂಡನೇ ಹೆಂಡತಿಯ ಮೇಲೆ ಅತ್ಯಾಚಾರ ಮಾಡಿದರೆ ಅದು ರೇಪ್ ಅಲ್ಲ ಎನ್ನುತ್ತಾರೆ. ಒಟ್ಟಾರೆ ಅತ್ಯಾಚಾರಕ್ಕೆ ಪುರುಷರನ್ನು ದೂಷಿಸುವುದನ್ನು ಬಿಟ್ಟು ಅತ್ಯಾಚಾರಕ್ಕೆ ಗುರಿಯಾಗುವ ಮಹಿಳೆಯರನ್ನೇ ವಿವಿಧ ಕಾರಣಗಳಿಗೆ ಅಪರಾಧಿಯನ್ನಾಗಿಸುತ್ತಾರೆ.

ಅತ್ಯಾಚಾರದಂತಹ ಘೋರ ಅಪರಾಧದ ಸುತ್ತ ತಯಾರಿಸಲಾಗಿರುವ ಈ ಹಾಸ್ಯಭರಿತ ಇಂಗ್ಲಿಷ್ ಚಿತ್ರದ ಹಿಂದಿರುವವರು ಆಲ್ ಇಂಡಿಯ ಬಕ್‌ಚೊಡ್ ಎಂಬ ಕಾಮಡಿಯನ್ನರ ತಂಡ. ಇದರಲ್ಲಿ ಕಲ್ಕಿ ಕೋಯಿಲಿನ್ ಮತ್ತು ಜೂಹಿ ಪಾಂಡೆ ನಟಿಸಿದ್ದಾರೆ. ಕೆಲ ತಿಂಗಳ ಹಿಂದೆ ಇದನ್ನು ಇಂಟರ್‌ನೆಟ್‌ನಲ್ಲಿ ಬಿಡುಗಡೆ ಮಾಡಿದಾಗ ಇದು ಪಾದರಸದಂತೆ ಎಲ್ಲೆಡೆ ಹರಡಿ ಅಂತರರಾಷ್ಟ್ರೀಯ ಮಟ್ಟದಲ್ಲೂ ಎಲ್ಲರ ಗಮನ ಸೆಳೆದಿತ್ತು. ಯೂ ಟ್ಯೂಬ್‌ನಲ್ಲಿ **'It's your fault'** ಎಂದು ಕೀ ಮಾಡಿದರೆ ಇದು ಸುಲಭವಾಗಿ ಸಿಗುತ್ತದೆ.


ಹಾಗೆಯೇ ನನ್ನ ಗಮನ ಸೆಳೆದ ಎರಡನೆ ಚಿತ್ರ **'The day after Everyday'**. ಸುಮಾರು ಐವತ್ತು ನಿಮಿಷಗಳ ಈ ಹಿಂದಿ ಚಿತ್ರವನ್ನು ನಿರ್ದೇಶಿಸಿರುವವರು ಖ್ಯಾತ ಚಲನಚಿತ್ರ ನಿರ್ದೇಶಕ ಅನುರಾಗ್ ಕಶ್ಯಪ್. ಮಹಿಳೆಯರ ಮೇಲಾಗುವ ಲೈಂಗಿಕ ದೌರ್ಜನ್ಯ ಮತ್ತು ದೈಹಿಕ ದಾಳಿಯನ್ನೇ ಕೇಂದ್ರವಾಗಿಸಿಕೊಂಡಿರುವ ಈ ಚಿತ್ರ ಇತ್ತೀಚೆಗೆ ಇಂಟರ್‌ನೆಟ್‌ನಲ್ಲಿ ಬಿಡುಗಡೆಯಾಗಿದೆ.


ಈ ಚಿತ್ರ ಆರಂಭವಾಗುವುದು ಗಂಡನೊಬ್ಬ ಬೆಳಗ್ಗಿನ ಪತ್ರಿಕೆಗಳಲ್ಲಿ ಮಹಿಳೆಯರ ಮೇಲಾಗುವ ದೌರ್ಜನ್ಯಗಳನ್ನು ಕುರಿತು ಪ್ರಕಟಗೊಂಡಿರುವ ವರದಿಗಳನ್ನು ಅಡುಗೆ ತಯಾರಿಸುತ್ತಿರುವ ತನ್ನ ಹೆಂಡತಿಗೆ ಜೋರಾಗಿ ಓದಿ ಹೇಳುವ ಮೂಲಕ. ಜೊತೆಗೆ ಗಂಡ ತನ್ನದೇ ಆದ ಕಾಮೆಂಟರಿಯನ್ನೂ ಸೇರಿಸುತ್ತಾನೆ. "ನೋಡು, ಎಷ್ಟೊಂದು ಅತ್ಯಾಚಾರ ಪ್ರಕರಣಗಳು ನಡೆಯುತ್ತಿವೆ. ಇದಕ್ಕೆಲ್ಲ ಚೌಮೀನ್ ತಿನ್ನುವುದೇ ಕಾರಣವಂತೆ. ನಮ್ಮ ಕಾಲೋನಿ ಮುಂದೆ ಮೂರು ಚೌಮೀನ್ ಅಂಗಡಿಗಳಿವೆ. ಅದಕ್ಕೆ ಅಲ್ಲಿರುವ ಪಡ್ಡೆ ಹುಡುಗರು ಹಾಗೆಲ್ಲ ಮಹಿಳೆಯರನ್ನು ಚುಡಾಯಿಸುವುದು. ನೀನು ಹೊರಗೆ ಹೋಗಿ ಕೆಲಸ ಮಾಡುವ ಅಗತ್ಯವೇನು. ಮನೆಯಲ್ಲೇ ಕೂತು ದುಡಿಯಬಹುದು" ಎಂದೆಲ್ಲ ಲೆಕ್ಚರ್ ಕೊಡುತ್ತಾನೆ. ಹೆಂಡತಿ ತನ್ನ ಪಾಡಿಗೆ ತನ್ನ ಅಡುಗೆ ಕೆಲಸವನ್ನು ಮುಗಿಸಿ, ತಿಂಡಿ ತಿನ್ನಲೂ ಬಿಡುವಿಲ್ಲದೆ, ನೀರು ಕುಡಿದೇ ಕೆಲಸಕ್ಕೆ ಹೊರಡುತ್ತಾಳೆ.

ಆಕೆಯ ಗೆಳತಿಯ ಮನೆಯಲ್ಲಿನ ಸ್ಥಿತಿಯೂ ಇದಕ್ಕಿಂತ ಭಿನ್ನವಾಗಿಲ್ಲ, ಗೆಳತಿಯ ಮಗುವಿಗೆ ಜ್ವರ ಇದೆ. ಟಿವಿಯಲ್ಲಿ ಅತ್ಯಾಚಾರ ಪ್ರಕರಣದ ವರದಿ ಕೇಳಿಸುತ್ತಿದೆ. ಆಗ ಗೆಳತಿಯ ತಾಯಿಯೂ "ನೀನು ಯಾಕೆ ಹೊರಗೆ ಹೋಗಿ ಕೆಲಸ ಮಾಡಬೇಕು. ನಿನಗೇನು ಕಡಿಮೆ? ಮನೆಯಲ್ಲೇ ಇರೋದಿಕ್ಕೆ ಆಗಲ್ಲವಾ?" ಎಂದೆಲ್ಲ ಪ್ರಶ್ನಿಸುತ್ತಾಳೆ. ಗೆಳತಿ ಏನನ್ನೂ ಹೇಳದೆ ಆಫೀಸಿಗೆ ಹೊರಡುತ್ತಾಳೆ.

ಮೂರನೆ ಗೆಳತಿ ಅವರಿಬ್ಬರನ್ನು ಸೇರುತ್ತಾಳೆ. ಮೂವರು ಕಾಲೋನಿಯಲ್ಲಿ ನಡೆದು ಹೋಗುತ್ತಿರುವಾಗ ಇಬ್ಬರು ಪುಂಡರು ತಮ್ಮ ಮೊಬೈಲ್ ಕ್ಯಾಮೆರಾವನ್ನು ಈ ಮಹಿಳೆಯರ ಅಂಗಾಂಗಗಳ ಮೇಲೆ ಫೋಕಸ್ ಮಾಡಿ ವಿಕೃತ ಆನಂದ ಅನುಭವಿಸುತ್ತಾರೆ. ಕಾಲೋನಿಯ ಹೊರಗಡೆ ಇರುವ ಪುಂಡರು ಇವರಿಗಾಗಿ ಕಾದಿರುತ್ತಾರೆ. ಮೊದಲನೆಯವಳತ್ತ ಕಲ್ಲು ತೂರುತ್ತಾರೆ. ಆಕೆ ಅದನ್ನು ವಿರೋಧಿಸಿದಾಗ ಆಕೆಯನ್ನು ಸುತ್ತುವರಿಯುವ ಪುಂಡರು "ನಾವು ಹಕ್ಕಿಗಳತ್ತ ಕಲ್ಲು ತೂರುತ್ತಿದ್ದೆವು. ಅದು ನಿನಗೆ ಬಡಿಯಿತು. ತೋರಿಸು ಎಲ್ಲಿಗೆ ಏಟು ಬಿತ್ತು ಅಂತ" ಎಂದು ಕಾಡಲಾರಂಭಿಸುತ್ತಾರೆ. ಇವರ ಅಟ್ಟಹಾಸ ನೋಡಿ ಉಳಿದ ಇಬ್ಬರು ಗೆಳತಿಯರು ಅಲ್ಲಿಂದ ಪರಾರಿ ಆಗುತ್ತಾರೆ. ಮೊದಲನೆಯವಳು ಜೀವಕ್ಕೆ ಹೋರಾಡುವವಳಂತೆ ಅಲ್ಲಿಂದು ಜೋರಾಗಿ ಓಡಿ ಪರಾರಿ ಆಗುತ್ತಾಳೆ.

ಆಫೀಸಿನಲ್ಲೂ ಇಂತಹದ್ದೇ ಲೈಂಗಿಕ ಕಿರುಕುಳ. ಫೋನ್ ಮೂಲಕ ಮಹಿಳೆಯನ್ನು ನೋಡುತ್ತಾ "ಆಹಾ, ಎಂತಹ ತುಟಿ, ಎಂತಹ ಸ್ಮೈಲ್" ಎಂದೆಲ್ಲ ಚಡಪಡಿಸುವುದು, ಕಪಾಟಿನಿಂದ ಫೈಲ್ ತೆಗೆಯುವ ನೆಪದಲ್ಲಿ ಮೈ ಸೋಂಕಿಸುವುದು, ಇತ್ಯಾದಿ.





ಗೆಳತಿಯರಿಬ್ಬರು ಬಸ್‌ನಲ್ಲಿ ಪ್ರಯಾಣಿಸುವಾಗಲೂ ಇದರ ಮುಂದುವರಿಕೆ. ಒಬ್ಬಳ ಹಿಂದೆ ನಿಂತಿರುವ ಪುರುಷ ಬೇಕಂತಲೇ ಹಿಂದಿನಿಂದ ಆಕೆಗೆ ಡಿಕ್ಕಿ ಹೊಡೆಯುತ್ತಿರುತ್ತಾನೆ. ಒಂದೆರಡು ನಿಮಿಷ ಸಹಿಸುವ ಗೆಳತಿ ಕೊನೆಗೆ ಕೈಯನ್ನು ಬಿಗಿಮುಷ್ಟಿ ಮಾಡಿಕೊಂಡು ಸರಿಯಾದ ಜಾಗಕ್ಕೆ ಬಿಗಿಯುತ್ತಾಳೆ. ಆ ನೋವನ್ನು ಸಹಿಸದೇ ಆತ ಪಕ್ಕದ ಸೀಟಿಗೆ ಉರುಳುತ್ತಾನೆ.

ಸಂಜೆ ಮೂವರು ಗೆಳತಿಯರು ಫಿಟ್‌ನೆಸ್ ಕ್ಲಾಸಿಗೆ ಹಾಜರಾಗುತ್ತಾರೆ. ಅಲ್ಲಿಂದ ಹೊರಟಾಗ ಅವರ ಟೀಚರ್ ಮೂವರನ್ನೂ ತನ್ನ ಕಾರಿಗೆ ಹತ್ತಿಸಿಕೊಂಡು ಅವರನ್ನೆಲ್ಲ ಮನೆಯ ತನಕ ಬಿಡುವುದಾಗಿ ಹೇಳುತ್ತಾಳೆ. ಆಗ ಒಬ್ಬಳು "ಮೇಡಂ ನಾವು ತಯಾರಿ ಆಗಲು ಇನ್ನೆಷ್ಟು ದಿನ ಬೇಕು?" ಎಂದು ಕೇಳುತ್ತಾಳೆ.

ಆಗ ಟೀಚರ್ "ಯಾವಾಗ ನಿನಗೆ ತಯಾರಿ ಆಗಿದ್ದೇನೆ ಅನ್ನಿಸುತ್ತೋ ಅವತ್ತು ನೀನು ತಯಾರಿ ಆಗುತ್ತೀಯ. ನಿನ್ನೊಳಗೆ ಹೆದರಿಕೆ ಇರುವತನಕ ನೀನು ತಯಾರಾಗುವುದಿಲ್ಲ, ನಿನ್ನೊಳಗೆ ಧೈರ್ಯ ಮನೆ ಮಾಡಿದಾಗ ನೀನು ರೆಡಿ. ಯಾಕೆಂದರೆ ತಾಕತ್ತು ಮೂಡೋದು ನಿನ್ನ ದೇಹದಲ್ಲಲ್ಲ, ಬದಲಾಗಿ ನಿನ್ನ ಮನಸ್ಸಿನಲ್ಲಿ" ಎಂದು ಉತ್ತರಿಸುತ್ತಾಳೆ.

ಮೂವರೂ ಮಹಿಳೆಯರು ಕಾರಿನಿಂದ ಇಳಿದು ತಮ್ಮ ಮನೆಯತ್ತ ನಡೆದಾಗ ಕಾಲೋನಿಯ ಮುಂದೆ ಮತ್ತದೆ ಪುಂಡರ ಗುಂಪು. ಆದರೆ ಈ ಬಾರಿ ಅವರೆಲ್ಲ ಕುಡಿದಿದ್ದಾರೆ. ಆಗ ಒಬ್ಬಳು ಹತ್ತಿರದಲ್ಲೇ ತನ್ನ ಕಾರಿನಲ್ಲಿ ಕೂತಿರುವ ಟೀಚರ್‌ಗೆ ಫೋನ್ ಮಾಡಿ ವಿಷಯ ತಿಳಿಸುತ್ತಾಳೆ. ಟೀಚರ್ "ನೀವು ಹೆದರಬೇಡಿ. ನಿಮ್ಮ ಸಹಾಯಕ್ಕೆ ನಾನಿದ್ದೀನಿ. ನೀವು ಇವತ್ತು ಧೈರ್ಯ ಮಾಡಿ ನಿಲ್ಲದಿದ್ದರೆ ನೀವೆಂದೂ ಇಂತಹದ್ದನ್ನು ಎದುರಿಸಲಾರಿರಿ" ಎಂದು ಹುರಿದುಂಬಿಸುತ್ತಾಳೆ. ಅಷ್ಟು ಹೊತ್ತಿಗೆ ಪುಂಡರು ಮಹಿಳೆಯರನ್ನು ಸುತ್ತುವರೆದಿದ್ದಾರೆ.

ಮೊದಮೊದಲು ಮಹಿಳೆಯರು ಅಲ್ಲಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ಅದು ಸುಲಭ ಸಾಧ್ಯವಲ್ಲ. ಆಗ ಮೊದಲನೆಯವಳು ಎದಿರೇಟು ಕೊಡಲು ನಿರ್ಧರಿಸುತ್ತಾಳೆ. ಅವಳ ಏಟಿನಿಂದ ಕ್ಷುದ್ರವಾಗುವ ಪುಂಡ ಅವಳ ಮೇಲೇರಗುತ್ತಾನೆ. ಆಗ ವಿಧಿ ಇಲ್ಲದೆ ಆಕೆ ತನ್ನೆಲ್ಲ ಶಕ್ತಿ ಬಳಸಿ ಹೋರಾಡಬೇಕಾಗುತ್ತದೆ. ಆಕೆಯ ಗೆಳತಿಯರೂ ಇತರೆ ಪುಂಡರೊಂದಿಗೆ ಹೊಡೆದಾಡಲಾರಂಭಿಸುತ್ತಾರೆ. ಸುತ್ತಮುತ್ತ ಜನ ಸೇರುತ್ತಾರೆ. ಕೊನೆಗೆ ಪುಂಡರಿಗೆ ಸಮಾ ಏಟು ಬಿದ್ದು, ಮೈ ಮೂಳೆ ಮುರಿಸಿಕೊಂಡು ಬೀಳುತ್ತಾರೆ. ಮೂವರು ಮಹಿಳೆಯರು ಗೆಲ್ಲುತ್ತಾರೆ.

ಮಾರನೆ ಬೆಳಗ್ಗೆ ಗಂಡ ಟೀ ಮಾಡುತ್ತಿದ್ದಾನೆ. ತೆರೆಯ ಮೇಲೆ ಕಾಣದಿರುವ ತನ್ನ ಹೆಂಡತಿಗೆ ಆತ ಹೇಳುತ್ತಿದ್ದಾನೆ: "ನಾನು ನೆನ್ನೆ ಬೆಳಗ್ಗೆಯಿಂದ ಯೋಚನೆ ಮಾಡುತ್ತಿದ್ದೆ, ಇಂತಹವರಿಗೆ ಸರಿಯಾದ ಪಾಠ ಕಲಿಸಬೇಕು ಅಂತ. ಆದರೆ ನೀನು ಅವರಿಗೆ ಸರಿಯಾದದ್ದನ್ನೇ ಮಾಡಿದೆ. ನಾನು ಇವತ್ತು ಸಾಯಂಕಾಲ ಅವರನ್ನೆಲ್ಲ ವಿಚಾರಿಸಿಕೊಳ್ಳಬೇಕು ಅಂತಿದ್ದೆ. ಇಂತಹ ಪುಂಡರನ್ನು ಜರೂರಾಗಿ ಲೈನಿಗೆ ತರಬೇಕು. ಅಂದಹಾಗೆ, ನೀನು ನಿನ್ನ ಚಹಾದಲ್ಲಿ ಎಷ್ಟು ಚಮಚ ಸಕ್ಕರೆ ಹಾಕಿಕೊಳ್ಳುತ್ತೀ..."

ಅಲ್ಲಿಗೆ ಸಿನಿಮಾ ಅಂತ್ಯಗೊಳ್ಳುತ್ತದೆ.

ಇದು ಅದ್ಭುತ ಸಿನಿಮಾವೇನಲ್ಲ, ಹಾಗೆಯೇ ಮಹಿಳೆಯರು ರಸ್ತೆಬದಿಯಲ್ಲಿ ದೈಹಿಕ ಹೋರಾಟಕ್ಕೆ ನಿಂತು ಗೆಲ್ಲುವುದೂ ಸಮಸ್ಯೆಗೆ ಇರುವ ಏಕೈಕ ಪರಿಹಾರವೂ ಅಲ್ಲ. ಆದರೂ ಮಹಿಳೆಯರ ರಕ್ಷಣೆಗೆ ಹಲವಾರು ಪರಿಹಾರ ಸೂತ್ರಗಳು ಬೇಕಾಗಿರುವ ಇವತ್ತಿನ ಕ್ಲಿಷ್ಟಕರ ಪರಿಸ್ಥಿತಿಯಲ್ಲಿ ಇವೆರಡೂ ಚಿಕ್ಕ ಸಿನಿಮಾಗಳು ಆ ನಿಟ್ಟಿನಲ್ಲಿ ಪ್ರಾಮಾಣಿಕವಾಗಿ ಪ್ರಯತ್ನಿಸಿರುವುದರಿಂದ ಇವುಗಳತ್ತ ನಮ್ಮ ಓದುಗರ ಗಮನ ಹರಿಸಬೇಕು ಅನ್ನಿಸಿತು... ■



ಕಂಡಹಾಗೆ

• ಗೌರಿ ಲಂಕೇಶ್
editorlankesh@gmail.com

ಈ ವಾರದಿಂದ ಪತ್ರಿಕೆಯ ಬೆಲೆ 15 ರೂ.

ಲಂಕೇಶ್ ವಾರ ಪತ್ರಿಕೆಯ ಬೆಲೆ ಈ ವಾರದಿಂದ ಹದಿನೈದು ರೂಪಾಯಿ ಆಗಲಿದೆ. ಕಳೆದ ನಾಲ್ಕು ವರ್ಷಗಳಿಂದ 14 ರೂಪಾಯಿ ಬೆಲೆ ನಿಗದಿ ಮಾಡಿ ಪತ್ರಿಕೆಯನ್ನು ನಮ್ಮ ತಂಡ ನೀಡುತ್ತಾ ಬಂದಿದೆ. ಈ ಅವಧಿಯಲ್ಲಿ ನ್ಯೂಸ್‌ಪ್ರಿಂಟ್, ಮುದ್ರಣ, ಸಾಗಾಣಿಕೆ-ಕಚೇರಿ ವೆಚ್ಚಗಳು ಒಂದಕ್ಕೆರಡರಷ್ಟಾಗಿವೆ. ನಿತ್ಯ ಜೀವನದಲ್ಲಿ ಎಲ್ಲಾ ವಸ್ತುಗಳ ಬೆಲೆ ಏರಿಕೆ ನಿಮ್ಮ ಅನುಭವಕ್ಕೂ ಬಂದಿರುತ್ತದೆ. ಹಾಗಾಗಿ ಕೇವಲ ಒಂದು ರೂಪಾಯಿಯ ಹೆಚ್ಚಳ ಯಾರಿಗೂ ಹೊರೆಯಾಗಲಾರದೆಂಬ ನಿರೀಕ್ಷೆ ನಮ್ಮದು.

ಓದುಗರು ಹಾಗೂ ಏಜೆಂಟರು ಸಹಕರಿಸಲು ಕೋರುತ್ತೇವೆ.

-ವ್ಯವಸ್ಥಾಪಕರು, ಲಂಕೇಶ್ ಮೀಡಿಯಾ



ಆಯೇಷಾ ಬಾನು

ಮಂಗಳೂರು: ಹವಾಲಾ ಭಾನ್ಗಡಿಯಲ್ಲಿ 'ಭಯೋತ್ಪಾದಕಿ'ಯಾದ ಆಯೇಷಾ!

ಮಂಗಳೂರಿನ ಆಶಾ ಯಾನೆ ಆಯೇಷಾ ಬಾನು ಮತ್ತಾಕೆಯ ಮುಸ್ಲಿಂ ಪತಿರಾಯನನ್ನು ಬಿಹಾರದ ಪೊಲೀಸರು ಎತ್ತಾಕಿಕೊಂಡು ಹೋಗುತ್ತಿದ್ದಂತೆಯೇ ಕರಾವಳಿಯ ಸುಳ್ಳುಗಾರ ಸಂಘಪರಿವಾರಿಗಳು ಸಂತೋಷೋನ್ಮಾದದಲ್ಲಿ ಹಾರಾಡುತ್ತಿದ್ದಾರೆ. ಹಿಂದುತ್ವದ ಅಪಪ್ರಚಾರಕ್ಕೊಂದು ಭರ್ಜರಿ ಈಶ್ಯೂ ಸಿಕ್ಕಿತೆಂದು ಹಿರಿಹಿರಿ ಹಿಗ್ಗುತ್ತಿದ್ದಾರೆ. ಆಯೇಷಾಳ ಅಂತರ್ಧರ್ಮೀಯ ಮದುವೆ ಮತ್ತಾಕೆಯ ಬಂಧನಕ್ಕೆ 'ಲವ್ ಜೆಹಾದ್' ಲಿಂಕ್ ಬೆಸೆದು ಮತಾಂಧ ಮಸಲತ್ತು ಮಾಡಲು ಹವಣಿಸುತ್ತಿದ್ದಾರೆ; ಆಯೇಷಾ 'ಭಯೋತ್ಪಾದಕಿ' ಎಂದು ಬಿರುದು ಕೊಟ್ಟು ಬೊಬ್ಬೆ ಹೊಡೆಯುತ್ತಿದ್ದಾರೆ...

ರಾಷ್ಟ್ರೀಯ ತನಿಖಾ ದಳ (ಎನ್‌ಐಎ) ಅಥವಾ ಬಿಹಾರ ಪೊಲೀಸರೇನೂ ಈವರೆಗೆ ಆಯೇಷಾ ಇಂಡಿಯನ್ ಮುಜಾಹಿದೀನ್ ಸದಸ್ಯೆ ಎಂದಾಗಲೀ, ಪಾಟ್ನಾದಲ್ಲಿ ನಡೆದ ಮೋದಿಯ 'ದುರಹಂಕಾರ್' ರ್‍ಯಾಲಿಯಲ್ಲಾದ ಸ್ಫೋಟಕ್ಕೆ ಆಕೆಯ ನಂಟಿದೆಯೆಂದಾಗಲೀ ಹೇಳಿಲ್ಲ, ಆಕೆಯ ಹವಾಲಾ ಮಾದರಿಯ ಹಣಕಾಸು ಅವ್ಯವಹಾರದ ತನಿಖೆಗಾಗಿ ಬಂಧಿಸಲಾಗಿದೆ ಎನ್ನುತ್ತಿವೆ ತನಿಖಾ ಏಜೆನ್ಸಿ ಮೂಲಗಳು. ಐಎಂನ ಭಯೋತ್ಪಾದಕರು ಆಯೇಷಾ ಮತ್ತಾಕೆಯ ಗಂಡನ ಹವಾಲಾ ದಂಧೆಯ ದುರುಪಯೋಗ ಪಡೆದುಕೊಂಡಿರುವ ಅನುಮಾನ ತನಿಖಾ ತಂಡಕ್ಕೆ ಕಾಡುತ್ತಿದೆ. ಆಯೇಷಾ ಬಂಧನ ಇದೆಯಲ್ಲ ಅದು, ದೇಶದ ಭಯೋತ್ಪಾದಕ ಮತಾಂಧ ರಾಜಕಾರಣದಲ್ಲಿ ದೊಡ್ಡ ಸುದ್ದಿಯೇನೋ ನಿಜ! ಆದರೆ ಆಯೇಷಾಳ ಅಂತರ್ಧರ್ಮೀಯ ಪ್ರೇಮ ವಿವಾಹ, ಹೆತ್ತ ಮಕ್ಕಳನ್ನು ಒಂಟಿಯಾಗಿ ಸಾಕಬೇಕಾಗಿ ಬಂದ ಸಂಕಷ್ಟ ಮತ್ತು ಮತಲಬಿ ಗಂಡನ ಹವಾಲಾ ದುರಾಸೆಯ ವೃತ್ತಾಂತ ಸೂಕ್ಷ್ಮವಾಗಿ ಅವಲೋಕಿಸಿದರೆ ಆಕೆ 'ಬಲಿ ಪಶು' ಎಂಬುದು ಎಂಥವರಿಗೂ ಅರ್ಥವಾಗುತ್ತದೆ; ಆಯೇಷಾ ಭಯೋತ್ಪಾದಕಿ ಅಲ್ಲವೆಂಬುದು ಖಾತ್ರಿಯಾಗುತ್ತದೆ.

ಆಯೇಷಾ ಅರೆಸ್ಟ್

ಪಾಟ್ನಾದಲ್ಲಿ ಮೋಸಗಾರ ಮೋದಿಯ ರ್‍ಯಾಲಿಯಲ್ಲಿ ಬಾಂಬ್‌ಗಳು ಹೂಂಕರಿಸಿದ್ದವು. ಅದಕ್ಕೂ ಹಿಂದೆ ಬೋಧಗಯಾದಲ್ಲಿ ಸ್ಫೋಟವಾಗಿತ್ತು, ಈ ಬಾಂಬ್ ಬ್ಲಾಸ್ಟ್‌ನ ತನಿಖೆಯನ್ನು ಪೊಲೀಸರು ಇಂಡಿಯನ್ ಮುಜಾಹಿದ್ದೀನ್ (ಐಎಂ) ಸಂಘಟನೆಯನ್ನು ಕೇಂದ್ರವಾಗಿಟ್ಟುಕೊಂಡು ನಡೆಸಲಾರಂಭಿಸಿದ್ದರು. ಈ ಐಎಂನ ಭಯೋತ್ಪಾದಕರಿಗೆ ಎಲ್ಲಿಂದ ಹಣ ಹರಿದು ಬರುತ್ತಿದೆಯೆಂಬುದೇ ಪೊಲೀಸರಿಗೆ ದೊಡ್ಡ ತಲೆನೋವಿನ ಸಂಗತಿಯಾಗಿತ್ತು. ಐಎಂಗೆ ಬರುವ ಹಣದ ಸರಬರಾಜಿನ ನಿಯಂತ್ರಕರ್‍ಯಾರೆಂಬ ತನಿಖೆಗೆ ಬಿದ್ದರು ಪೊಲೀಸರು. ಒಮ್ಮೆ ಬಿಹಾರದ ಲಖ್ಖೀಸರಾಯ್ ಠಾಣಾ ವ್ಯಾಪ್ತಿಯ ಬ್ಯಾಂಕ್ ಒಂದರಲ್ಲಿ ನಾಲ್ವರು ಸೇರಿ ಸಂಶಯಾಸ್ಪದವಾಗಿ ಓಡಾಡುತ್ತಿದ್ದರು! ಈ ಗ್ಯಾಂಗ್ ಮೇಲೆ ಕಣ್ಣಿಟ್ಟ ಅಲ್ಲಿಯ ಪೊಲೀಸ್ ಅಧಿಕಾರಿ ಸಂತೋಷ್‌ಕುಮಾರ್ ಎಂಬಾತ. ಈ ನಾಲ್ವರು ಒಂದು ಬ್ಯಾಂಕ್ ಖಾತೆಗೆ ಹಣ ಹಾಕುತ್ತಿದ್ದಾಗ ಐಎಂ ವಾಸನೆ ಆ ಅಧಿಕಾರಿಗೆ ಹೊಡೆಯುತ್ತದೆ. ಆ ಹಿಂದೂ ಹುಡುಗರ ಗ್ಯಾಂಗ್ ಬಂಧಿಸಿ ವಿಚಾರಣೆ ಮಾಡಿದಾಗ ಮಂಗಳೂರಿನ ಪಂಜಿಮೊಗರು ಏರಿಯಾದ ಆಯೇಷಾ ಬಾನು ಹೆಸರು ಉಲ್ಲೇಖವಾಗುತ್ತದೆ.

ಲಖ್ಖೀಸರಾಯ ನಿವಾಸಿಗಳಾದ ಗೋಪಾಲ ಪ್ರಸಾದ್ ಗೋಯಲ್, ವಿಕಾಸ್ ಕುಮಾರ್, ಗಣೇಶ್ ಪ್ರಸಾದ್ ಮತ್ತು ಪವನ್‌ಕುಮಾರ್ ಗುಪ್ತಗೆ ಐಎಂ ನಂಟಿರುವ ಗುಮಾನಿ ಪೊಲೀಸರಿಗೆ ಬರುತ್ತದೆ. ಹಾಗೆಯೇ ಪಾಟ್ನಾ ಸ್ಫೋಟದಲ್ಲಿ ಮಂಗಳೂರಿನ ಆಯೇಷಾಗೆ ನೇರ ಸಂಬಂಧ ಇಲ್ಲವೆಂಬುದೂ ಖಾತ್ರಿಯಾಗುತ್ತದೆ. ಆಕೆಗೆ ಐಎಂನ ಸಂಬಂಧ ಇರುವ ಅನುಮಾನವೂ ಇರಲಿಲ್ಲ, ಆದರೆ ಆಕೆ ಐಎಂ ಜತೆ ನಂಟಿದ್ದವರೊಂದಿಗೆ ಅಥವಾ ಐಎಂ ಸದಸ್ಯರೊಂದಿಗೇ ಹಣದ ವ್ಯವಹಾರ ನಡೆಸಿದ್ದು ಪೊಲೀಸರನ್ನು ಗೊಂದಲಗೊಳಿಸುತ್ತದೆ. ವಿಚಾರಣೆಗಾಗಿ ಲಖ್ಖೀಸರಾಯ ಪೊಲೀಸರು ಆಯೇಷಾ ಮತ್ತಾಕೆಯ ಗಂಡ ಜುಬೇರ್‌ನನ್ನು ಬಂಧಿಸಿ ಪಾಟ್ನಾಕ್ಕೆ ಹೊತ್ತೊಯ್ಯುತ್ತಾರೆ.

ಹವಾಲಾ ಮತ್ತು ಐಎಂ

ಅದು ಪಕ್ಕಾ ಹವಾಲಾ ಅವ್ಯವಹಾರ. ಈ ದಂಧೆಯನ್ನು ಐಎಂ ತನ್ನ ಹಣಕಾಸು ಸರಬರಾಜಿಗೆ ನಾಜೂಕಾಗಿ ಬಳಸಿಕೊಂಡಿತ್ತು, ಒಂದು ನಿರ್ದಿಷ್ಟ ಮೊತ್ತವನ್ನು ಒಂದು ಬ್ಯಾಂಕ್ ಖಾತೆಯಿಂದ ಎಟಿಎಂ ಮೂಲಕ ತೆಗೆದು ಮತ್ತೊಂದು ಖಾತೆಗೆ ಜಮಾ ಮಾಡಲಾಗುತ್ತಿತ್ತು, ಒಂದು ಬಾರಿ ಬರೋಬ್ಬರಿ 49 ಸಾವಿರ ರೂ. ತೆಗೆಯಲಾಗುತ್ತಿತ್ತು, ಹೀಗೆ ತೆಗೆದ ಹಣ ಇನ್ನೊಂದು ಖಾತೆಗೆ ವರ್ಗಾಯಿಸುವಾಗ ಶೇಕಡಾ ಹತ್ತರಷ್ಟು ಕಮೀಷನ್ 'ಸರಬರಾಜುದಾರ' ಹೊಡೆಯುತ್ತಿದ್ದ. ಈ ಅಕ್ರಮ ವಹಿವಾಟಿಗಾಗಿ ನಕಲಿ ಹೆಸರು-ಖೋಟಾ ವಿಳಾಸದಿಂದ ಅನೇಕ ಬ್ಯಾಂಕುಗಳಲ್ಲಿ ಪಾಸ್‌ಬುಕ್-ಚೆಕ್‌ಬುಕ್ ಪಡೆಯಲಾಗಿತ್ತು.


ಹಣ ತೆಗೆದಾಕ್ಷಣ ಮಂಗಳೂರಿನ ಆಯೇಷಾ ಮತ್ತು ಪಾಕಿಸ್ತಾನದಲ್ಲಿದ್ದ ಇಬ್ರಾಹಿಂಗೆ ಎಸ್‌ಎಂಎಸ್ ಅಥವಾ ಕರೆ ಮಾಡಿ ಹೇಳಬೇಕಿತ್ತು, ಇದೊಂದು ಚೈನ್ ವ್ಯವಸ್ಥೆಯ ಮಾರ್ಕೆಟಿಂಗ್ ಎಂದೋ, ಹವಾಲಾ ವ್ಯವಹಾರವೆಂದೊ ಭಾವಿಸಿ ಅನೇಕ ಅಮಾಯಕರು ವಿವಿಧ ಬ್ಯಾಂಕಲ್ಲಿ ಅಕೌಂಟ್ ತೆರೆದು 'ಬಿಸಿನೆಸ್' ಆರಂಭಿಸಿದ್ದರು. ಹಾಗೆ ಮೋಸ ಹೋದವರಲ್ಲಿ ಮುಗ್ಧ ಆಯೇಷಾ ಬಾನು ಕೂಡ ಒಬ್ಬಳು ಎಂದೀಗ ತರ್ಕಿಸಲಾಗುತ್ತಿದೆ! ಹಾಗಂತ ಆಕೆಯ ಗಂಡ ಜುಬೇರ್ ಅಮಾಯಕನೆಂದು ಹೇಳೋದು ಕಷ್ಟ. ಏಕೆಂದರೆ, ದುಬೈನಲ್ಲಿದ್ದ ಆತನಿಗೆ ಹವಾಲ ಜಾಲದ ನಿಕಟ ನಂಟಿದೆ. ಈ ಹವಾಲಾ ಮತ್ತು ಐಎಂ ನಡುವೆ ಟೈಅಪ್ ಇರುವ ಸಂಗತಿ ಜುಬೇರ್ ಹೆಂಡತಿಯಿಂದ ಮುಚ್ಚಿಟ್ಟು ಆಕೆಯ ಹೆಸರಲ್ಲಿ ದಗಲುಬಾಜಿ ದಂಧೆ ನಡೆಸಿದ್ದಾನೆಂಬ ಅಭಿಪ್ರಾಯ ಮಂಗಳೂರಲ್ಲಿದೆ.

ಆಯೇಷಾ ಹೆಸರಲ್ಲಿ ಬರೋಬ್ಬರಿ 56 ಬ್ಯಾಂಕ್ ಖಾತೆ ತೆರೆಯಲಾಗಿತ್ತು. ಅವುಗಳನ್ನು ಯಾರ್‍ಯಾರೋ ನಿರ್ವಹಿಸುತ್ತಿದ್ದರು. ಆದರೆ ಬ್ಯಾಂಕ್ ಅಕೌಂಟ್‌ಗೆಲ್ಲ ಆಯೇಷಾಳ ಮೊಬೈಲ್ ನಂಬರ್ ಮಾತ್ರ ಕೊಡಲಾಗಿತ್ತು. ಯಾವುದೇ ಎಟಿಎಂನಿಂದ ಹಣ ತೆಗೆದಾಗ ಅಥವಾ ವಿದೇಶಿ ಮೂಲದಿಂದ ಹಣ ಜಮೆಯಾದಾಗ ಸಂದೇಶ ಬರುತ್ತಿದ್ದುದು ಆಯೇಷಾಗೆ. ಅಂದರೆ ಆಕೆಯ ಗಂಡ ಜುಬೇರ್‌ಗೆ ಮಾತ್ರ ಅರ್ಥವಾಗುವ ಸಂದೇಶ ಅದು. ಆತ ಆ ಮೆಸೇಜ್ ಬಳಸಿ ಹವಾಲಾ ಆಟ ಆಡುತ್ತಿದ್ದ. ಬಿಹಾರದಲ್ಲಿ ಬಂಧಿತರಾದ ನಾಲ್ವರು ಹಿಂದೂ ಆರೋಪಿ ಮತ್ತು ಆಯೇಷಾಳ ಖಾತೆಯಿಂದ ಐಎಂ ಸದಸ್ಯರು ಹೆಚ್ಚುಕಮ್ಮಿ 30 ಕೋಟಿ ವಹಿವಾಟು ನಡೆಸಿದ್ದಾರೆಂದು ಪೊಲೀಸರು ಊಹಿಸಿದ್ದಾರೆ.

ಕುತೂಹಲಕರ ಸಂಗತಿಯೆಂದರೆ, ಆಯೇಷಾ ಇಷ್ಟು ದೊಡ್ಡ ಹಣದ ವಹಿವಾಟು ನಡೆಸಿದ್ದರೂ ಆಕೆಗೊಂದು ಪಾನ್ ಕಾರ್ಡ್ ಇರಲಿಲ್ಲ, ಆದರೂ ವಿವಿಧ ರಾಷ್ಟ್ರೀಕೃತ ಬ್ಯಾಂಕ್‌ನ ಪ್ರಭೃತಿಗಳು ಅಕ್ರಮ ವ್ಯವಹಾರಕ್ಕೆ ಆಸ್ಪದ ನೀಡಿದ್ದರು. ಇದರಲ್ಲಿ ಬ್ಯಾಂಕ್ ಅಧಿಕಾರಿಗಳ ಅವಾಂತರವಷ್ಟೇ ಅಲ್ಲ, ಅವ್ಯವಹಾರವೂ ನಡೆದಿರುವ ಸಾಧ್ಯತೆಯಿದೆ. ಬ್ಯಾಂಕ್ ಅಧಿಕಾರಿಗಳ ಅಧಿಕ ಪ್ರಸಂಗ ಅನೇಕ ಅನುಮಾನಕ್ಕೆ ಎಡೆಕೊಡುವಂತಿದೆ. ದುಬೈನ ಮನಿ ಎಕ್ಸ್‌ಚೇಂಜ್ ಬ್ಯಾಂಕ್‌ನ ಕಾರ್ಡ್ ಹೊಂದಿದ್ದ ಆಯೇಷಾಳ ಪತಿ ಜುಬೇರ್ ಆ ಮೂಲಕ ವಿದೇಶದಲ್ಲೂ ಹಣದ ಟರ್ನ್‌ಓವರ್ ನಡೆಸುತ್ತಿದ್ದ!

ಜುಬೇರ್ ಜಾಲ

ಆಯೇಷಾ ಪತಿ ಜುಬೇರ್‌ಗೆ ವಿದೇಶದಲ್ಲಿರುವಾಗಲೇ ಹವಾಲದವರ ಒಡನಾಟ ಕುದುರಿತ್ತು ಆತ ದುಬೈ ಬಿಟ್ಟು ಮಂಗಳೂರಲ್ಲಿ ನೆಲೆ ನಿಂತಾಗ ತನ್ನ ಬೀಡಿ ಬ್ರ್ಯಾಂಚ್ ವ್ಯವಹಾರ ಜತೆಜತೆಗೆ ಹವಾಲಾ ಜಾಲ ಹೆಣೆದುಕೊಂಡಿದ್ದ.



ಕಲ್ಲಡ್ಕ ಪ್ರಭಾಕರ ಭಟ್ಟ

ಇದಕ್ಕಾತ ಹೆಂಡತಿಯನ್ನೇ ಅಖಾಡಕ್ಕೆ ಇಳಿಸಿದ್ದ. ಬಡತನದ ಬದುಕು ನಡೆಸಿ ಹೈರಾಣಾಗಿದ್ದ ಆಯೇಷಾ ಗಂಡನ ಹವಾಲ ದಂಧೆಗೆ ಸಹಜವಾಗೇ ಮಾರು ಹೋಗಿದ್ದಳು. ಮು ಆಯೇಷಾ ಇದೊಂದು ಹಣ ಬರುವ ನೆಟ್‌ವರ್ಕ್ ಸ್ಕೀಮ ಎಂದೇ ಭಾವಿಸಿದ್ದಳು.

ಈ ಸ್ಕೀಮಿಂದ ಆಕೆ ಆರ್ಥಿಕ ನೆಮ್ಮದಿ ಕಂಡಿದ್ದಳ ಬಾಡಿಗೆ ಗುಡಿಸಲಲ್ಲಿ ಒದ್ದಾಡುತ್ತಿದ್ದ ಆಯೇಷಾ ಐದೂವ ಲಕ್ಷದ ಮನೆ ನಿವೇಶನ ಗಂಡ ಖರೀದಿಸಿದಾ ಖುಷಿಗೊಂಡಿದ್ದಳು. ಜುಬೇರ್ ಒಂದೆರಡು ವಾಹನವನ ಕೊಂಡುಕೊಂಡಿದ್ದ. ಇದೆಲ್ಲ ನೋಡಿದ 'ಪೆದ್ದಿ' ಆಯೇಷ ಗಂಡನ ಹವಾಲಾ ದಂಧೆಯನ್ನು ನೆಟ್‌ವರ್ಕ್ ಸ್ಕೀಮ ಎಂದೇ ಅರ್ಥೈಸಿಕೊಂಡಿದ್ದಳು. ಗಂಡನೂ ಆಕೆಗೆ ಹಾಗೆ ದಾರಿ ತಪ್ಪಿಸಿದ್ದ ಹಾಗಾಗಿ ಆಯೇಷಾ ನೆಟ್‌ವರ್ಕ್ ವಿಸ್ತರಿಸು ಪ್ರಯತ್ನ ನಡೆಸಿದ್ದಳು. ಪಂಜಿ ಮೊಗರು ಮತ್ತು ತವರೂರ ಕೊಡಗಿನ ದೇವಣಗೇರಿಯ ಆಸುಪಾಸಿನ ಕೆಲವ ಯುವಕರು-ಮಹಿಳೆಯರು ಈ ಜಾಲಕ್ಕೆ ಸೇರುವಂ ಪ್ರೇರೇಪಿಸಿದ್ದಳು. ಆದರೆ ಈ ಮೋಟಿವೇಷನ್ ಹವಾಲ ಜಾಲಕ್ಕೆ ಅನುಕೂಲ ಮಾಡುತ್ತಿದೆ ಎಂಬುದಾಗಲಿ ಅಂತಿಮವಾಗಿ ಭಯೋತ್ಪಾದಕರಿಗೆ ಹಣ ಸಂದಾಯ ವಾಗುತ್ತದೆ ಎಂದಾಗಲಿ ಆಯೇಷಾ ಕನಸು-ಮನಸ್ಸಲ್ಲು ಭಾವಿಸಿರಲಿಲ್ಲ! ಒಟ್ಟಿನಲ್ಲಿ ಗಂಡನ ಹವಾಲಾ ಹರಾಮಿತನ ತನಗರಿವಿಲ್ಲದೆ ಬಲಿಯಾದ ಆಯೇಷಾ ಈಗ ಜೈಲ ಪಾಲಾಗಿದ್ದಾಳೆ.

ಕೇಸರಿ ಕರಾಮತ್ತು!

ಆಯೇಷಾ ಭಯೋತ್ಪಾದಕಿಯಲ್ಲ, ಅಂಥದೊಂದ ಅನುಮಾನ ಸ್ಥಳೀಯ ಪೊಲೀಸರಾದಿಯಾಗಿ ರಾಷ್ಟ್ರೀಯ ತನಿಖಾ ದಳಕ್ಕೂ ಇಲ್ಲ, ಆಕೆ ಪ್ರಜ್ಞಾಪೂರ್ವಕವಾಗಿ ಐಎ ಸಂಘಟನೆಗೆ ನೆರವಾದ ಯಾವ ಕುರುಹೂ ಇಲ್ಲ. ಆಕೆಯ ಬದುಕು ಲಾಗಾಯ್ತಿ

⏭ 05

ಆಯೇಷಾಳ ಲವ್ ಮತ್ತು ಜೆಹಾದ್!!

ಭಯೋತ್ಪಾದಕರಿಗೆ ದುಡ್ಡಿನ ಮೂಲವಾಗಿದ್ದ ಹವಾಲಾ ವ್ಯವಹಾರದಲ್ಲಿ (ತನಗರಿವಿಲ್ಲದೆ) ಭಾಗಿಯಾದ ಆರೋಪದಲ್ಲಿ ಬಂಧಿತಳಾಗಿರುವ ಮಂಗಳೂರಿನ ಆಯೇಷಾ ಬಾನುಳ ಲವ್-ಲೈಫ್‌ಗಳೇ ಒಂದು 'ಜೆಹಾದ್' ಕಥನದಂತಿದೆ. ಆಯೇಷಾಳ ಮೂಲ ಹೆಸರು ಆಶಾ. ಆಕೆಯನ್ನು ಪ್ರೀತಿಯಿಂದ 'ಪುತ್ತೋಳಿ' ಎಂದು ಕರೆಯುತ್ತಿದ್ದರು. ಕೊಡಗು ಜಿಲ್ಲೆಯ ವಿರಾಜಪೇಟೆ ಬಳಿಯ ದೇವಣಗಿರಿಯ ಬಡ ಕೂಲಿ ದಂಪತಿಗಳ ಮಗಳೀಕೆ. ಕಲಿಕೆಯಲ್ಲಿ ಜಾಣೆಯಾಗಿದ್ದ ಈಕೆ ವಿರಾಜಪೇಟೆಯಲ್ಲಿ ಪಿಯುಸಿ ಮುಗಿಸಿ ಮಡಿಕೇರಿಯಲ್ಲಿ ಐಟಿಐ ಮಾಡಿದ್ದಳು.



ಝುಬೇರ್

ಆಕೆ ಮಡಿಕೇರಿಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾಗ ಮಂಗಳೂರಿನ ವಿಮಾನ ನಿಲ್ದಾಣದಲ್ಲಿ ಟ್ಯಾಕ್ಸಿ ಡ್ರೈವರ್ ಆಗಿದ್ದ ಬಜಪೆಯ ಜುಬೇರ್‌ನ ಪರಿಚಯವಾಗುತ್ತದೆ. ಆತ ಆಗಾಗ ತನ್ನ ಟ್ಯಾಕ್ಸಿಯನ್ನು ಬಾಡಿಗೆಗೆ ಮಡಿಕೇರಿಗೆ ಒಯ್ಯುತ್ತಿದ್ದ. ಆಶಾ-ಜುಬೇರ್ ಪರಿಚಯ ಪ್ರಣಯಕ್ಕೆ ತಿರುಗುತ್ತದೆ. ಧಾಡಸಿಯಾಗಿದ್ದ ಆಶಾ ತಂದೆ-ತಾಯಿ ಜಾತಿ-ಧರ್ಮ ಯಾವುದೂ ಲೆಕ್ಕಿಸದೇ ತನ್ನ 23ನೇ ವಯಸ್ಸಿಗೇ ಮುಸ್ಲಿಮ್ ಧರ್ಮದ ಜುಬೇರ್‌ನ ವರಿಸುತ್ತಾಳೆ. ಜುಬೇರ್ ಆಕೆಯನ್ನು ಇಸ್ಲಾಮ್‌ಗೆ ಮತಾಂತರ ಮಾಡಿಸಿ ಹೆತ್ತವರ ಒಲೈಸಲು ನೋಡುತ್ತಾನೆ.

ಆಗ ಆಶಾ, ಆಯೇಷಾ ಬಾನು ಆಗಿ ಪರಿವರ್ತಿತಳಾಗುತ್ತಾಳೆ. ಆದರೆ ಜುಬೇರನ ತಾಯ್ತಂದೆ ಮಾತ್ರ ಆಯೇಷಾಳ ಸೊಸೆಯಾಗಿ ಸ್ವೀಕರಿಸಲು ಸಿದ್ಧರಾಗುವುದೇ ಇಲ್ಲ. ಬೇರೆ ದಾರಿಯಿಲ್ಲದೆ ಬಜಪೆಯ ಬಾಡಿಗೆ ಮನೆಯೊಂದರಲ್ಲಿ ಈ ಅಂತರ್ಧರ್ಮೀಯ ದಂಪತಿಗಳು ಸಂಸಾರ ಹೂಡುತ್ತಾರೆ. ಇತ್ತ ಜುಬೇರನ ಪಾಲಕರು ಆತನಿಗೆ ಶುದ್ಧ ಸಾಬಿ ಹುಡುಗಿ ಜತೆ ಪಾಣಿಗ್ರಹಣ ಮಾಡಿಸಲು ಹವಣಿಸುತ್ತಿರುತ್ತಾರೆ. ಹೆತ್ತವರ ಒತ್ತಡಕ್ಕೋ, ತೆವಲಿಗೋ ಅಂತೂ ಜುಬೇರ್ ಮತ್ತೊಂದು ಮದುವೆ ಸ್ವ-ಧರ್ಮೀಯಳೊಂದಿಗೆ ಆಗುತ್ತಾನೆ. ಎರಡನೇ ಮದುವೆ ಹೊತ್ತಿಗೆ ಆಯೇಷಾ-ಜುಬೇರ್ ಸಂಸಾರ ಆರು ವರ್ಷ ಕಳೆದಿರುತ್ತದೆ. ಇಬ್ಬರು ಗಂಡು ಮಕ್ಕಳೂ ಹುಟ್ಟುತ್ತಾರೆ. ಈಗವರಿಗೆ 15 ಮತ್ತು 10 ವರ್ಷ ಪ್ರಾಯ.


ಜುಬೇರ್‌ಗೆ ದುಬೈಗೆ ಹೋಗಿ ದುಡಿವ ಹುಕ್ಕಿ ಬರುತ್ತದೆ. ಆಯೇಷಾಳ ಬಂಗಾರ ಮಾರಿ ವಿದೇಶಕ್ಕೆ ಹಾರುತ್ತಾನೆ. ನೆನಪಾದಾಗ ಒಂದಿಷ್ಟು ಹಣ ಹೆಂಡತಿಗೆ ಕಳಿಸುತ್ತಿದ್ದ. ಕಡೆಕಡೆಗೆ ಜುಬೇರ್ ಅದ್ಯಾಕೋ ಆಯೇಷಾಳ ಮರೆತೇಬಿಟ್ಟ! ಆಯೇಷಾಗೇ ದಿಕ್ಕೇ ಕಾಣದಂತಾಯ್ತು. ಎರಡು ಮಕ್ಕಳನ್ನು ಎದೆಗವಚಿಕೊಂಡು ಆಕೆ ಅಕ್ಷರಶಃ ಬೀದಿ ಪಾಲಾದಳು!! ಮನೆ ಬಾಡಿಗೆ ಕೊಡಲಾಗದೆ, ಮಕ್ಕಳಿಗೆ ಗಂಜಿ ಬೇಯಿಸಿ ಹಾಕಲಾಗದೇ ಆಕೆ ಪಟ್ಟಪಾಡು ಹೇಳತೀರದು. ಈಕೆಯ ಕಷ್ಟ ಕಂಡ ಕೆಲವು ಮಾನವೀಯತೆಯ ಮಂದಿ ಒಂದು ಬಾಡಿಗೆ ಮನೆ ಕುಳಾಯಿಯ ರೈಲ್ವೆ ಸೇತುವೆ ಬಳಿ ಮಾಡಿಕೊಡುತ್ತಾರೆ. ಬೈಕಂಪಾಡಿಯ ಫ್ಯಾಕ್ಟರಿಯೊಂದರ ಪ್ಯಾಕಿಂಗ್ ಕೆಲಸ ಮನೆಯಲ್ಲೇ ಮಾಡಿಕೊಡುತ್ತಾಳೆ. ಈ ಸಂದರ್ಭದಲ್ಲಿ ಸಹಾಯ ಮಾಡಿ ಕೆಲವರು ಮನೆಗೆ ಬಂದು ಹೋಗುತ್ತಿದ್ದರು. ಇದು ಮುಸ್ಲಿಮ್ ಮೂಲಭೂತವಾದಿಗಳ ಕಣ್ಣು ಕೆಂಪಾಗಿಸಿತು; ಆಯೇಷಾ ಮತ್ತವಳ ಪರಿಚಿತರಿಗೆ ಹಿಗ್ಗಾಮುಗ್ಗಾ ಹೊಡೆಯಲಾಯ್ತು!!

ಈ ಹಲ್ಲೆಯ ನಂತರ ಆಯೇಷಾ ಕಂಗಾಲಾಗಿ ಹೋದಳು. ಪಂಜಿ ಮೊಗರು ಎಂಬಲ್ಲಿಗೆ ಬಿಡಾರ ಬದಲಿಸಿದಳು. ಮಕ್ಕಳನ್ನೂ ಅಲ್ಲಿಯೇ ಶಾಲೆಗೆ ಸೇರಿಸಿ ಯಾವ್ಯಾವುದೋ ಕೂಲಿ-ನಾಲಿ ಮಾಡಿ ಬದುಕ ಹತ್ತಿದಳು. ಆಕೆಗೆ ಪತಿಯಿಂದಾದ ಅನ್ಯಾಯ, ಮುಸ್ಲಿಂ ಮತಾಂಧರಿಂದಾದ ಹಲ್ಲೆ ತುತ್ತು ಅನ್ನಕ್ಕೂ ಗತಿಯಿಲ್ಲದಿರುವುದು, ಮಕ್ಕಳ ಓದು-ಬರಹಕ್ಕೂ ಸಂಚಕಾರ ಬಂದಿರುವುದೇ ಎಡಪಂಥೀಯ ಸಂಘಟನೆಯೊಂದಕ್ಕೆ ಗೊತ್ತಾಗುತ್ತದೆ. ಜುಬೇರನ ಮನೆಯವರಿ ಆ ಸಂಘಟನೆಯವರು ಎಚ್ಚರಿಸುತ್ತಾರೆ. ಜುಬೇರ್ ಹೆಂಡತಿ-ಮಕ್ಕಳಿಗೆ ಸರಿಯಾ ನೋಡಿಕೊಳ್ಳದಿದ್ದರೆ ಆತ ದುಬೈನಿಂದ ಬಂದಾಗ ದೊಡ್ಡ ಪ್ರತಿಭಟ ಮಾಡುವುದಾಗಿ ಬೆದರಿಸುತ್ತಾರೆ. ಇದಕ್ಕೆ ಹೆದರಿದ ಜುಬೇರ್ ಆಯೇಷ ಮತ್ತು ಮಕ್ಕಳ ಜೀವನ ನಿರ್ವಹಣೆ ನೋಡಿಕೊಳ್ಳಲು ಶುರು ಮಾಡ್ತಾನೆ.

ಜುಬೇರ್ ದುಬೈ ಬಿಟ್ಟು ಊರಿಗೆ ಬಂದಾಗ ಆತನ ತಂ ತೀರಿಕೊಂಡಿದ್ದರು. ಹಾಗಾಗಿ ಅಪ್ಪನ ಒಳ್ಳೆ ಕಮಾಯಿ ಮಾಡುತ್ತಿದ್ದ ಬೀ ಬ್ರ್ಯಾಂಚ್-ವ್ಯವಹಾರ ಜುಬೇರನೇ ವಹಿಸಿಕೊಂಡು ನಿಭಾಯಿಸುತ್ತಾನ ಆಯೇಷಾಳೊಂದಿಗೆ ಚೆನ್ನಾಗಿ ಸಂಸಾರವೂ ಮಾಡಿಕೊಂಡಿರುತ್ತಾನೆ. ಮ ಕಟ್ಟುತ್ತಾನೆ. ಕಾರು ಖರೀದಿಸುತ್ತಾನೆ. ಆಯೇಷಾಳ (ಆಶಾಳ) ತೌರು ಮ ಸಂಬಂಧವೂ ಸಾಧಿಸುತ್ತಾನೆ. ಆಯೇಷಾ ಆಗೀಗ ತೌರಿಗೆ ಹೋಗಿ ಬರುತ್ತಾ ಆಕೆಯ ಅಕ್ಕ-ತಮ್ಮ-ತಾಯಿಯೂ ಆಯೇಷಾ ಮನೆಗೆ ಬಂದುಹೋಗುತ್ತಾ ನಾಲ್ಕು ತಿಂಗಳ ಹಿಂದೆ ಹೆಣ್ಣು ಮಗುವಿಗೆ ಆಕೆ ಜನ್ಮ ನೀಡಿದಾಗ ತೌರಿನವ ಬಾಣಂತನ ಮಾಡಿದ್ದರಂತೆ. ಗಂಡ ಹಾಕಿಕೊಟ್ಟಿದ್ದ ಹವಾಲಾ (ಆಕೆಗದ ಅಕ್ರಮ ದಂಧೆಯೆಂದು ಗೊತ್ತಿರಲಿಲ್ಲ) ವ್ಯವಹಾರವು ನೋಡಿಕೊಳ್ಳುತ್ತಿದ್ದಳ ಜಾಲ ಬೆಳೆಸಲು ತೌರೂರು-ಮಂಗಳೂರು ಎರಡೂ ಕಡೆ ಪ್ರಯತ್ನ ಮಾಡಿದ್ದಳ ತಮ್ಮನ ಹೆಸರಲ್ಲೇ ಬ್ಯಾಂಕ್ ಅಕೌಂಟ್ ತೆಗೆದಿದ್ದಳು. ಒಟ್ಟಿನ ಖುಷ್‌ಖುಷಿಯಾಗಿದ್ದಳು.

ಎಲ್ಲ ಎಡವಟ್ಟಾಗಿದ್ದೇ ಜುಬೇರನ ಹವಾಲಾ ಹಲ್ಕಟ್‌ಗಿರಿಯಿಂದ ವಿದೇಶದಲ್ಲಿದ್ದಾಗ ಆತನಿಗಿದ್ದ ಹವಾಲಾ ನಂಟು ಊರಿಗೆ ಬಂದಾಗಲು ಮುಂದುವರಿಸಿದ್ದೇ ಆಯೇಷಾಗೀಗ ಕಂಟಕವಾಗಿದೆ. ಹೆಂಡತಿಗೆ ಹವಾಲ 'ಗುಟ್ಟು' ಹೇಳದೇ ದಾರಿ ತಪ್ಪಿಸಿದ್ದ. ಹಣವನ್ನು ಖಾತೆಯಿಂದ ಖಾತೆ ಬದಲಾಯಿಸುವ 'ಸ್ಕೀಮ್ ನೆಟ್‌ವರ್ಕ್' ಭಯೋತ್ಪಾದಕರ ಅಡ್ಡೆಗೆ ಹೋ ನಿಂತಿದೆಯೆಂದು ಅಮಾಯಕ ಆಯೇಷಾಗೇನು ಗೊತ್ತು, ಪಾಪ?! ನಾಲ ತಿಂಗಳ ಹೆಣ್ಣು ಬಾಲೆಯೊಂದಿಗೆ ಜೈಲು ಸೇರಿರುವ ಆಯೇಷಾಳ ಇದ ಬದುಕೇ ಅತ್ತ ಕಸುಬಿ ಗಂಡ ಜುಬೇರ್‌ನಿಂದಾಗಿ 'ಜೆಹಾದ್' ಆಗಿದೆ!!


ಮಂಡ್ಯ: ಒಕ್ಕಲಿಗರ ಸಂಘದ ಚುನಾವಣೆಯದ್ದೇ ಅಬ್ಬರ



ಚುನಾವಣಾ ಪ್ರಚಾರದ ಅಬ್ಬರಕ್ಕೆ ಸಾಕ್ಷಿಯಂತಿರುವ ಬ್ಯಾನರ್

ರಾಜ್ಯ ಒಕ್ಕಲಿಗರ ಸಂಘದ ಚುನಾವಣೆಗೆ 2014ರ ಜನವರಿ 5ರಂದು ಮುಹೂರ್ತ ಫಿಕ್ಸ್ ಆಗುತ್ತಿದ್ದಂತೆ ಮಂಡ್ಯ ಜಿಲ್ಲೆಯಲ್ಲಿ ಚುನಾವಣೆಯ ಅಬ್ಬರ ಜೋರಾಗಿದೆ. ಮಂಡ್ಯ ಜಿಲ್ಲೆಯಿಂದ ಒಕ್ಕಲಿಗರ ಸಂಘಕ್ಕೆ ನಿರ್ದೇಶಕರಾಗಲು ತುದಿಗಾಲಲ್ಲಿ ನಿಂತಿರುವವರ ಸಾಲು ದಿನೇದಿನೇ ಹನುಮಂತನ ಬಾಲದಂತೆ ಬೆಳೆಯುತ್ತಲೇ ಇದೆ. ಈ ಹಿಂದೆ ನಡೆದ ಚುನಾವಣೆಗಳದ್ದೇ ಒಂದು ತೂಕವಾದರೆ, ಈ ಬಾರಿಯ ಚುನಾವಣೆಯ ತೂಕವೇ ಬೇರೆ. ಬರೋಬ್ಬರಿ ಎರಡು ಡಜನ್‌ಗೂ ಹೆಚ್ಚು ಅಭ್ಯರ್ಥಿಗಳು ಚುನಾವಣೆಯಲ್ಲಿ ಸ್ಪರ್ಧಿಸಲಿದ್ದು, ಅವರ ಅಬ್ಬರದ ಪ್ರಚಾರ ನೋಡುತ್ತಿದ್ದರೆ ಈ ಬಾರಿಯ ಒಕ್ಕಲಿಗರ ಸಂಘದ ಚುನಾವಣೆಯ ಖದರ್ರೇ ಬೇರೆಯೆಂಬ ಭಾವನೆ ಜಿಲ್ಲೆಯ ಒಕ್ಕಲಿಗ ಮತದಾರರಲ್ಲಿ ಮೂಡಿದೆ.

ಈ ಬಾರಿಯ ಒಕ್ಕಲಿಗರ ಸಂಘದ ಚುನಾವಣೆ ಮಿನಿ ಮಹಾಚುನಾವಣೆಯೆಂದೇ ಬಿಂಬಿತವಾಗಿದೆ. ಏಕೆಂದರೆ ಕಳೆದ 2008ರ ಚುನಾವಣೆಯಲ್ಲಿ ಕೇವಲ ನಾಲ್ಕು ಸಾವಿರ ಮಂದಿ ಒಕ್ಕಲಿಗ ಮತದಾರಿದ್ದರು. ಒಕ್ಕಲಿಗರ ಸಂಘ ಬಲಿಷ್ಟವಾಗಿ, ಆಸ್ತಿ-ಪಾಸ್ತಿಗಳು ಬೆಳೆದಂತೆ ನಿರ್ದೇಶಕರಾದವರ ಹಣ-ಅಂತಸ್ತು ಕೂಡ ಸಾಕಷ್ಟು ಬೆಳೆಯುತ್ತಲೇ ಹೋಯಿತು. ಇದುವರೆಗೂ ಸಂಘದ ಸದಸ್ಯತ್ವ ನಿರ್ದೇಶಕರ ಕುಟುಂಬ ವರ್ಗ ಮತ್ತು ಆಪ್ತರಿಗಷ್ಟೇ ಸೀಮಿತವಾಗಿತ್ತು. ನಾಲ್ಕು



ಕುಮಾರ್‌ಗೌಡ



ಪತ್ನಿ ಜೊತೆಗೂಡಿ ಪ್ರಚಾರ ನಡೆಸುತ್ತಿರುವ ಶಿವಲಿಂಗಯ್ಯ

ಸಾವಿರ ಮತದಾರರಲ್ಲಿ ಬಹುತೇಕ ಮತದಾರರು ನಿರ್ದೇಶಕರ ಸ್ಥಾನಕ್ಕೆ ಸ್ಪರ್ಧಿಸುವವರ ಅಂಕೆಯಲ್ಲೇ ಇದ್ದುದ್ದರಿಂದ ನಿರಾಯಾಸವಾಗಿ ಅವರವರೇ ಗೆದ್ದು ಬರುತ್ತಿದ್ದರು. ಆದರೆ ಈ ಬಾರಿ ಅಂತಹ ಯಾವ ಅನುಕೂಲವೂ ಇಲ್ಲ. ನಾಲ್ಕು ಸಾವಿರ ಮತದಾರರ ಸಂಖ್ಯೆ ಬರೋಬ್ಬರಿ ಒಂಭತ್ತು ಪಟ್ಟು ಜಾಸ್ತಿಯಾಗಿ ಈಗ ಜಿಲ್ಲೆಯಲ್ಲೇ 37,881 ಮತದಾರರಿದ್ದು ಅವರೆಲ್ಲ ನಾಲ್ಕು ಮಂದಿ ನಿರ್ದೇಶಕರ ಹಣೆಬರಹವನ್ನು ಬರೆಯಲಿದ್ದಾರೆ.

ಮಂಡ್ಯದಲ್ಲಿ 14,023, ನಾಗಮಂಗಲ 6,915, ಮಳವಳ್ಳಿ 3486, ಮದ್ದೂರು 8,588, ಕೆ.ಆರ್.ಪೇಟೆ 1,555, ಶ್ರೀರಂಗಪಟ್ಟಣ 1,871 ಹಾಗೂ ಪಾಂಡವಪುರ ತಾಲ್ಲೂಕಿನಲ್ಲಿ 1,443 ಮಂದಿ ಮತದಾನ ಮಾಡುವ ಹಕ್ಕು ಪಡೆದುಕೊಂಡಿದ್ದಾರೆ. ಪ್ರತಿ ಮತದಾರರು ನಾಲ್ಕು ಅಭ್ಯರ್ಥಿಗಳನ್ನು ಗೆಲ್ಲಿಸುವ ತಾಕತ್ತು ಹೊಂದಿರುವುದರಿಂದ ಈ ಬಾರಿಯ ಚುನಾವಣೆ ಹಿಂದಿನ ಚುನಾವಣೆಗಳಿಗಿಂತ ಪ್ರತಿಷ್ಠೆಯೆನಿಸಿದೆ. ಅಭ್ಯರ್ಥಿಗಳು ಮತದಾರರ ಮನೆ ಬಾಗಿಲಿಗೆ ಎಡತಾಕುತ್ತಾ ಬೆವರು ಹರಿಸುತ್ತಿರುವುದನ್ನು ನೋಡಿದರೆ ಮಿನಿ ವಿಧಾನಸಭಾ ಚುನಾವಣೆಯನ್ನು ನೆನಪಿಸುವಂತಿದೆ.

ದೊಡ್ಡ ದಂಡೇ ನೆರೆದಿದೆ

ಒಕ್ಕಲಿಗರ ಸಂಘದ ನಿರ್ದೇಶಕನಾಗಿ ಆಯ್ಕೆಯಾದರೆ ಅಲ್ಲಿ ಸಿಗುವ ಅವಕಾಶಗಳು, ಲಾಭಗಳು, ಗೌರವ, ಪ್ರತಿಷ್ಠೆಯನ್ನು ನೆನೆಯುತ್ತ 'ಮನಸ್ಸಿನಲ್ಲೇ ಮಂಡಿಗೆ ತಿನ್ನುತ್ತಿರುವವರ' ಸಂಖ್ಯೆ ಈ ಬಾರಿ ಸಾಕಷ್ಟು ಹೆಚ್ಚಿದೆ. ಸಾರ್ವಜನಿಕ ಕ್ಷೇತ್ರದಲ್ಲಿ ತಾವು ಮಾಡಿರುವ ಸಾಧನೆ, ಒಕ್ಕಲಿಗರ ಸಂಘಕ್ಕೆ ಆಯ್ಕೆಯಾದರೆ ಮಾಡುವ ಅಭಿವೃದ್ಧಿ ಕಾರ್ಯಗಳ ಬಗ್ಗೆ ದೊಡ್ಡದೊಂದು ಪಟ್ಟಿಯನ್ನೇ ಮತದಾರರ ಮುಂದಿಟ್ಟಿದ್ದಾರೆ. ಕಳೆದ ಆರು ತಿಂಗಳಿನಿಂದ ಅಂಚೆ, ಎಸ್‌ಎಂಎಸ್, ಮೊಬೈಲ್ ಹಾಗೂ ಕರಪತ್ರದ ಮೂಲಕ ತಮಗೆ ಮತ ಹಾಕಬೇಕೆಂದು ಕೋರುವವರ ದೊಡ್ಡ ದಂಡೇ ಮಂಡ್ಯ ಜಿಲ್ಲೆಯಲ್ಲಿ ಸೃಷ್ಟಿಯಾಗಿದೆ.

ತಂತ್ರಗಾರಿಕೆ

ಒಬ್ಬ ಮತದಾರ ನಾಲ್ವರಿಗೆ ಮತ ಹಾಕುವ ಅವಕಾಶ ಹೊಂದಿರುವುದರಿಂದ ಇದರ ಪ್ರಯೋಜನ ಪಡೆದುಕೊಳ್ಳಲು ಕೆಲವರು ಜಿಲ್ಲೆಯಲ್ಲಿ ತಮ್ಮದೇ ಆದ ಸಿಂಡಿಕೇಟ್ ಕಟ್ಟಿಕೊಂಡಿದ್ದಾರೆ. ಸತತ ಆರು ಬಾರಿ ಸಂಘದ ನಿರ್ದೇಶಕರಾಗಿರುವ ಮಾಜಿ ಶಾಸಕ ಎಂ.ಶ್ರೀನಿವಾಸ್ ಏಳನೇ ಬಾರಿಗೂ ಆಯ್ಕೆಯಾಗಿ ಅಧ್ಯಕ್ಷರಾಗುವ ಕನಸು ಕಾಣುತ್ತಿದ್ದಾರೆ. ಇದಕ್ಕಾಗೇ ವಿಧಾನಪರಿಷತ್ ಸದಸ್ಯ ಬಿ.ರಾಮಕೃಷ್ಣ ಹಾಗೂ ನಾಗಮಂಗಲದ ನೆಲ್ಲಿಗೆರೆ ಬಾಲಕೃಷ್ಣರನ್ನು ಜೊತೆಗಾಕಿಕೊಂಡಿರುವ ಎಂ.ಶ್ರೀನಿವಾಸ್ ಪ್ರತ್ಯೇಕ ಸಿಂಡಿಕೇಟ್ ಮಾಡಿಕೊಂಡಿದ್ದಾರೆ. ಮೂವರೂ ಜೆಡಿಎಸ್ ನಾಯಕರೇ ಆಗಿರುವುದರಿಂದ ಮೂವರು ಒಟ್ಟಾಗಿ ಮತಯಾಚಿಸುತ್ತಿದ್ದಾರೆ. ಜಿಲ್ಲೆಯ ನಾಲ್ಕು ವಿಧಾನಸಭಾ ಕ್ಷೇತ್ರಗಳಲ್ಲಿ ಜೆಡಿಎಸ್ ಶಾಸಕರೇ ಇರುವುದರಿಂದ, ಮತದಾರರನ್ನು ಸೆಳೆಯುವುದು ಸುಲಭ ಎಂಬ ತಂತ್ರಗಾರಿಕೆ ಇದರ ಹಿಂದಿದೆ.

ಹಾಲಿ ನಿರ್ದೇಶಕ ಡಿ.ಎನ್.ಬೆಟ್ಟೇಗೌಡ, ಮೂರು ಬಾರಿ ನಿರ್ದೇಶಕರಾಗಿ ಕಳೆದ ಬಾರಿ ಸೋತಿದ್ದ ಸ್ವಾಭಿಮಾನಿ ಒಕ್ಕಲಿಗರ ಒಕ್ಕೂಟದ ಅಧ್ಯಕ್ಷ ಡಾ.ಲೋಕೇಶ್‌ಬಾಬು, ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಮಾಜಿ ಅಧ್ಯಕ್ಷ ಡಾ.ಬಿ.ಶಿವಲಿಂಗಯ್ಯ, ಕಳೆದ ಬಾರಿ ಕಡಿಮೆ ಅಂತರದಲ್ಲಿ ಸೋಲುಕಂಡಿದ್ದ ಖ್ಯಾತ ಹೃದ್ರೋಗ ತಜ್ಞ ಡಾ.ಬಿ.ಸಿ.ಬೊಮ್ಮಯ್ಯ, ನಾಗಮಂಗಲದ ಮಾಜಿ ಶಾಸಕ ಹೆಚ್.ಟಿ.ಕೃಷ್ಣಪ್ಪನವರ ಅಣ್ಣನ ಮಗ ಗುತ್ತಿಗೆದಾರ ಹೆಚ್.ಎಂ.ನಾರಾಯಣಸ್ವಾಮಿ, ನಾಗಮಂಗಲದ ಕುಮಾರಗೌಡ, ಮದ್ದೂರು ಎಪಿಎಂಸಿಯ ಮಾಜಿ ಅಧ್ಯಕ್ಷ ಮೂಡ್ಯಚಂದ್ರು, ಗ್ರಾ.ಪಂ.ಸದಸ್ಯ ಬಾಣಸವಾಡಿ ನಾಗಣ್ಣ, ಕಾಂಗ್ರೆಸ್ ಮುಖಂಡ ಸಿ.ಎಂ.ದ್ಯಾವಪ್ಪ, ಉದ್ಯಮಿ ವರಪ್ರಸಾದ್, ಬಿಜೆಪಿ ಮುಖಂಡರಾದ ಜಿ.ಎಂ.ರವೀಂದ್ರ, ಮಳವಳ್ಳಿ ಅಶೋಕ, ಎಲ್‌ಐಸಿ ಪ್ರತಿನಿಧಿ ಬಂದೀಗೌಡ, ಮದ್ದೂರಿನ ಚನ್ನಸಂದ್ರ ಲಕ್ಷ್ಮಣ್ ಸೇರಿದಂತೆ ಹಲವರು ಈಗಾಗಲೇ ಪ್ರಚಾರದಲ್ಲಿ ತೊಡಗಿಕೊಂಡಿದ್ದಾರೆ.

ಜಿಲ್ಲೆಯ ನಾಗಮಂಗಲ ತಾಲ್ಲೂಕಿಗೆ ಸೇರಿದ ವಿಧಾನಪರಿಷತ್ ಸದಸ್ಯ ಅಶ್ವಥ್‌ನಾರಾಯಣ್ ಹೆಸರು ಸಾಕಷ್ಟು ಕೇಳಿಬರುತ್ತಿದೆ. ಮಂಡ್ಯದಲ್ಲಿ ಒಂದಷ್ಟು ಹೆಸರು ಮಾಡಿರುವ ಅಶ್ವಥ್‌ನಾರಾಯಣ್ ನಿಲ್ಲುವುದೋ ಬೇಡವೋ ಎಂಬ ಗೊಂದಲದಲ್ಲಿದ್ದಾರೆ. ಈಗಾಗಲೇ ಹಲವು ಮುಖಂಡರು, ಮಿತ್ರರೊಂದಿಗೆ ಸಮಾಲೋಚನೆ ನಡೆಸಿರುವ ಅಶ್ವಥ್‌ನಾರಾಯಣ್ ಅವರೆಲ್ಲರ ಅಭಿಪ್ರಾಯದ ನಂತರ ಕಣಕ್ಕಿಳಿಯುತ್ತಾರೆಂಬ ಮಾತುಗಳು ಚಾಲ್ತಿಯಲ್ಲಿದೆ. ಚುನಾವಣೆ ದಿನಾಂಕ ನಿಗದಿಗೂ ಮುನ್ನ ಡಜನ್‌ನಷ್ಟಿದ್ದ ಆಕಾಂಕ್ಷಿತರ ಸಂಖ್ಯೆ ದಿನಾಂಕ ನಿಗದಿಯಾಗುತ್ತಿದ್ದಂತೆ ಎರಡು ಡಜನ್ ದಾಟಿದೆ. ಈಗಿರುವ ಹವಾ ನೋಡಿದರೆ ದಿನಕಳೆದಂತೆ ಆಕಾಂಕ್ಷಿತರ ಸಂಖ್ಯೆ ಹೆಚ್ಚಳವಾಗುವ ಎಲ್ಲಾ ಸಾಧ್ಯತೆಗಳಿಗೂ ಕಂಡು ಬರುತ್ತಿದೆ.

ಕಡಿದದ್ದು ಅಷ್ಟರಲ್ಲೇ ಇದೆ

ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕರಾಗಿ ಹಲವರು ಆಯ್ಕೆಯಾಗಿ ಹೋಗಿ ಜಿಲ್ಲೆಯ ಒಕ್ಕಲಿಗ ಬಾಂಧವರ ಅಭಿವೃದ್ಧಿಗೆ ಕಡಿದುಕಟ್ಟೆ ಹಾಕಿದ್ದು ಅಷ್ಟರಲ್ಲೇ ಇದೆ. ಗೆದ್ದು ಹೋದ ನಿರ್ದೇಶಕರು ಒಕ್ಕಲಿಗರ ಸಂಘದ ಮೆಡಿಕಲ್, ಇಂಜಿನಿಯರಿಂಗ್, ಡೆಂಟಲ್ ಮೊದಲಾದ ಕಾಲೇಜುಗಳಲ್ಲಿ ತಮ್ಮ ಪಾಲಿಗೆ ಬರುವ ಖೋಟಾದಡಿ ಸೀಟುಗಳನ್ನು ಮಾರಿಕೊಂಡು ದುಂಡಗಾದರೇ ಹೊರತು ಜಿಲ್ಲೆಯ ಒಕ್ಕಲಿಗರಿಗೆ ಮಾತ್ರ ಹೇಳಿಕೊಳ್ಳುವಂತಹ ಯಾವುದೇ ಕೆಲಸ ಮಾಡಿಲ್ಲ.

ಒಕ್ಕಲಿಗರ ಸಮುದಾಯದ ಜನರ ನೋವು-ನಲಿವುಗಳಿಗೆ ಸ್ಪಂದಿಸಿ ಅವರು ಅಭಿವೃದ್ಧಿಗೆ ಯತ್ನಿಸುವ ದೃಷ್ಟಿಯಿಂದ ನಾಲ್ಕು ದಶಕಗಳ ಹಿಂದೆ ಒಕ್ಕಲಿಗರ ಸಂಘ ಸ್ಥಾಪನೆಯಾಯಿತು. ಅಲ್ಲಿಂದ ಮುಂದೆ ಸಂಘ ಮತ್ತು ನಿರ್ದೇಶಕರು ಹೆಮ್ಮರವಾಗಿ ಬೆಳೆದರೇ ವಿನಃ ಬಡ ಒಕ್ಕಲಿಗರ, ರೈತರ ಅಭಿವೃದ್ಧಿಗೆ ಏನನ್ನೂ ಮಾಡಿಲ್ಲದಿರುವುದು ಮತದಾರರ ಮನಸ್ಸಿನಲ್ಲಿದೆ.

ಮಾಜಿ ಶಾಸಕ ಎಂ.ಶ್ರೀನಿವಾಸ್ ಅಧ್ಯಕ್ಷ ಸ್ಥಾನದ ಮೇಲೆ ಕಣ್ಣಿಟ್ಟು, ದಾಖಲೆಯ ಏಳನೇ ಬಾರಿ ಚುನಾವಣೆಗೆ ಧುಮುಕಿದ್ದಾರೆ. ಎರಡು ಬಾರಿ ಶಾಸಕರಾಗಿದ್ದ ಅವಧಿಯಲ್ಲಿ ಕೆಲವು ಅಭಿವೃದ್ಧಿ ಕಾರ್ಯಗಳನ್ನು ಮಾಡಿ ಜನರ ಮಧ್ಯೆ ಹೆಸರು ಉಳಿಸಿಕೊಂಡಿದ್ದಾರೆ. ಆದರೆ ಒಕ್ಕಲಿಗ ಸಮುದಾಯಕ್ಕೆ ಅವರ ಕೊಡುಗೆ ನಿರೀಕ್ಷಿಸಿದಷ್ಟು ಮಟ್ಟದಲ್ಲಿ ಸಿಕ್ಕಿಲ್ಲ. ಕಿಮ್ಸ್‌ನಲ್ಲಿ ಒಂದಷ್ಟು ಜನರಿಗೆ ಉದ್ಯೋಗ, ಚಿಕಿತ್ಸೆ ಕೊಡಿಸಿದ್ದು ಬಿಟ್ಟರೆ ಇಡೀ ಸಮುದಾಯವೇ ನೆನಪಿಸಿಕೊಳ್ಳುವಂತಹ ಕಾರ್ಯಗಳನ್ನು ಮಾಡಿಲ್ಲ. ಬೆಂಗಳೂರು- ಮೈಸೂರು ಹೆದ್ದಾರಿಯ ಶ್ರೀನಿವಾಸಪುರ ಗೇಟ್ ಬಳಿ ನಾಲ್ಕು ಎಕರೆ ಜಮೀನು ಖರೀದಿ ಮಾಡಲಾಗಿದ್ದು, ಇದು ವಿವಾದಿತ ಜಾಗವಾದ್ದರಿಂದ ಹಾಸ್ಟೆಲ್, ಕಾಲೇಜು ಏನೂ ತಲೆಎತ್ತದೆ ಹಾಗೇ ಬಿದ್ದಿದೆ. ಇದು ಬಿಟ್ಟರೆ ಒಕ್ಕಲಿಗರ ಸಂಘಕ್ಕೆ ನಿರ್ದೇಶಕರಾದವರು ಜಿಲ್ಲೆಯ ಒಕ್ಕಲಿಗರಿಗಾಗಿ ಕಡಿದದ್ದು ಏನೂ ಇಲ್ಲ.

ಹಾಲಿ ನಿರ್ದೇಶಕರಾದ ಡಿ.ಎನ್.ಬೆಟ್ಟೇಗೌಡ ಈ ಬಾರಿಯೂ ಸ್ಪರ್ಧಿಸಿದ್ದಾರೆ. ನಿರ್ದೇಶಕರಾದ ಅವಧಿಯಲ್ಲಿ ಸ್ವಯಂವೃದ್ಧಿ ಸಿದ್ಧಾಂತ ಅಳವಡಿಸಿಕೊಂಡ ಬೆಟ್ಟೇಗೌಡರು ಸಮುದಾಯಕ್ಕೆ ಮಾಡಿದ್ದು ಅಷ್ಟರಲ್ಲೇ ಇತ್ತು. ಇನ್ನು ಹಾಲಿ ನಿರ್ದೇಶಕರಾದ ಹೊಳಲಿನ ಹೆಚ್.ಎಲ್.ಶಿವಣ್ಣ, ನಾಗಮಂಗಲದ ಕೃಷ್ಣೇಗೌಡ ಈ ಬಾರಿ ನಿಂತರೆ ಒಕ್ಕಲಿಗರೇ ಮನೆಗಟ್ಟುತ್ತಾರೆಂಬುದನ್ನು ತಿಳಿದೇ ಕಣದಿಂದ ದೂರ ಸರಿದಿದ್ದಾರೆ. ಮೂರು ಬಾರಿ ನಿರ್ದೇಶಕರಾಗಿದ್ದ ಡಾ.ಲೋಕೇಶ್‌ಬಾಬು ಒಕ್ಕಲಿಗ ಸಮುದಾಯಕ್ಕೆ ಕಿಸಿದಿದ್ದೇನೂ ಇಲ್ಲ, ಅದಕ್ಕೆ ಮತದಾರರು ಕಳೆದ ಬಾರಿ ಸೋಲಿಸಿ ಮನೆಗೆ ಕಳುಹಿಸಿದ್ದರು. ಈ ಬಾರಿ ಮತ್ತೆ ಸ್ಪರ್ಧೆ ಬಯಸಿದ್ದಾರೆ. ಖ್ಯಾತ ಹೃದ್ರೋಗ ತಜ್ಞ ಡಾ.ಬಿ.ಸಿ.ಬೊಮ್ಮಯ್ಯ ಕಳೆದ ಬಾರಿ ಅಲ್ಪಮತಗಳಿಂದ ಸೋತಿದ್ದರು. ಸೋತರೂ ಒಕ್ಕಲಿಗ ಜನಾಂಗದವರಿಗೆ ಒಂದಷ್ಟು ಕೆಲಸಗಳನ್ನು ಮಾಡಬೇಕೆಂಬ ಪ್ರಾಮಾಣಿಕ ಕಾಳಜಿ ಹೊಂದಿದ್ದ ಡಾ.ಬೊಮ್ಮಯ್ಯ ಜಿಲ್ಲೆಯಲ್ಲಿ ಹಲವು ಕಡೆ ಆರೋಗ್ಯ ಶಿಬಿರಗಳನ್ನು ಮಾಡುತ್ತಾ ಜಿಲ್ಲೆಯ ಒಕ್ಕಲಿಗರ ಮಧ್ಯೆ ಹೆಸರು ಉಳಿಸಿಕೊಂಡಿದ್ದು, ಕಣದಲ್ಲಿದ್ದಾರೆ. ಕಳೆದ ಬಾರಿ ಪರಾಭವಗೊಂಡಿದ್ದ ನಾಗಮಂಗಲದ ಕುಮಾರ್‌ಗೌಡ (ಲಕ್ಕಪ್ಪಗೌಡ) ಕೂಡ ಸ್ಪರ್ಧಿಸಿದ್ದಾರೆ.

ಹೊಸಮುಖಗಳ ಅಬ್ಬರ

ಒಕ್ಕಲಿಗ ಸಂಘದ ನಿರ್ದೇಶಕರಾದರೆ ಸಿಗುವ ಲಾಭ-ನಷ್ಟದ ಲೆಕ್ಕಾಚಾರ ಹಾಕಿಯೇ ಈ ಬಾರಿ 20ಕ್ಕೂ ಹೆಚ್ಚು ಹೊಸ ಮುಖಗಳು ಕಣಕ್ಕೆ ಇಳಿದಿವೆ. ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯ ಮಾಜಿ ಅಧ್ಯಕ್ಷ ಬಿ.ಶಿವಲಿಂಗಯ್ಯ 63ರ ಇಳಿವಯಸ್ಸಿನಲ್ಲಿ ಮೊದಲ ಬಾರಿಗೆ ಸ್ಪರ್ಧೆ ಬಯಸಿದ್ದಾರೆ. ಜಿಲ್ಲಾ ಕಸಾಪ ಚುನಾವಣೆಯನ್ನು ಅಬ್ಬರದಿಂದಲೇ ಗೆದ್ದು ಅಧ್ಯಕ್ಷರಾಗಿರುವ ಮೀರಾ ಶಿವಲಿಂಗಯ್ಯ ಪತಿ ಬಿ.ಶಿವಲಿಂಗಯ್ಯನವರನ್ನು ಒಕ್ಕಲಿಗ ಸಂಘದ ನಿರ್ದೇಶಕರನ್ನಾಗಿ ಮಾಡಲು ಪಣ ತೊಟ್ಟಿದ್ದು, ಏನಾದರೂ ಸರಿಯೇ ಗೆಲ್ಲಿಸಬೇಕೆಂದು ಪತಿ ಶಿವಲಿಂಗಯ್ಯನವರ ಸಾಧನೆಗಳ ಪಟ್ಟಿಯನ್ನೆ ಮುಂದಿಟ್ಟುಕೊಂಡು ಜಿಲ್ಲೆಯಲ್ಲಿ ಗರಗರನೆ ಸುತ್ತುತ್ತಿದ್ದಾರೆ.

ಮದ್ದೂರು ಎಪಿಎಂಸಿ ಮಾಜಿ ಅಧ್ಯಕ್ಷ ಮೂಡ್ಯಚಂದ್ರು, ಬಾಣಸವಾಡಿ ನಾಗಣ್ಣ, ಸಿ.ಎಂ.ದ್ಯಾವಪ್ಪ, ವರಪ್ರಸಾದ್, ಜಿ.ಎಂ.ರವೀಂದ್ರ, ಅಶೋಕ್‌ಕುಮಾರ್, ಚನ್ನಸಂದ್ರ ಲಕ್ಷ್ಮಣ್ ಸೇರಿದಂತೆ ಹಲವರು ಇದೇ ಮೊದಲ ಬಾರಿಗೆ ಕಣಕ್ಕಿಳಿದಿದ್ದಾರೆ. ಜೆಡಿಎಸ್‌ನ ಹಾಲಿ ವಿಧಾನಪರಿಷತ್ ಸದಸ್ಯ ಬಿ.ರಾಮಕೃಷ್ಣ ಹಾಗೂ ನಾಗಮಂಗಲದ ನೆಲ್ಲಿಗೆರೆ ಬಾಲು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಹಾಗೂ ಚಲುವರಾಯಸ್ವಾಮಿಯ ಬಲ ನಂಬಿಕೊಂಡು ಕಣಕ್ಕೆ ಧುಮುಕಿದ್ದಾರೆ. ವಿಧಾನಪರಿಷತ್ ಸದಸ್ಯರಾಗಿ ಮಾಡಿರುವ ಅಭಿವೃದ್ಧಿ ಕೆಲಸಗಳನ್ನು ಮುಂದಿಟ್ಟುಕೊಂಡು ಪ್ರಚಾರ ನಡೆಸುತ್ತಿರುವ ಬಿ.ರಾಮಕೃಷ್ಣ ಒಂದು ಬಾರಿ ಅವಕಾಶ ಕೊಡಿ ಎಂದು ಕೇಳುತ್ತಿದ್ದರೆ, ಉದ್ಯಮಿ ನೆಲ್ಲಿಗೆರೆ ಬಾಲು ಕೂಡ ಯುವ ನಾಯಕತ್ವಕ್ಕೆ ಮತ ನೀಡಿ ಎಂದು ಶಾಸಕ ಚಲುವರಾಯಸ್ವಾಮಿ ನಾಮಬಲ ಹಾಗೂ ಹಣಬಲ ನೆಚ್ಚಿಕೊಂಡಿದ್ದಾರೆ. ಜೆಡಿಎಸ್ ಪಕ್ಷಕ್ಕೆ ಸೇರಿರುವ ಬಿ.ರಾಮಕೃಷ್ಣ ನೆಲ್ಲಿಗೆರೆ ಬಾಲು ಮಾಜಿ ಶಾಸಕ ಎಂ.ಶ್ರೀನಿವಾಸ್ ಜೊತೆ ಕೈಜೋಡಿಸಿದ್ದು, ಮೂವರು ಒಂದೇ ಮತಪತ್ರದಲ್ಲಿ ಮತ ಕೇಳುತ್ತಿದ್ದಾರೆ.

ಒಟ್ಟಾರೆ ಮಂಡ್ಯ ಜಿಲ್ಲೆಯಲ್ಲಿ ಒಕ್ಕಲಿಗರ ಸಂಘದ ಚುನಾವಣೆಯ ಅಬ್ಬರ ದಿನಕಳೆದಂತೆ ಜೋರಾಗುತ್ತಿದೆ. ಹಾಲಿ ನಿರ್ದೇಶಕರ ಜೊತೆಗೆ ಹೊಸಮುಖಗಳು ಕೂಡ ಸಖತ್ತಾಗಿಯೇ ಸೌಂಡ್ ಮಾಡುತ್ತಿವೆ. ಜಿಲ್ಲೆಯ ಒಕ್ಕಲಿಗ ಮತದಾರರು ಬುದ್ಧಿವಂತರಾಗಿರುವುದರಿಂದಲೇ ನಾಲ್ಕು ಸಾವಿರದಷ್ಟಿದ್ದ ಮತದಾರರ ಸಂಖ್ಯೆ 37,881ಕ್ಕೇರಿದೆ. ಒಕ್ಕಲಿಗ ಸಮುದಾಯದ ಅಭಿವೃದ್ಧಿ ಹೆಸರಲ್ಲಿ ತಾವೇ ಅಭಿವೃದ್ಧಿಯಾಗುವ ನಿರ್ದೇಶಕರ ಬಂಡವಾಳ ಜಿಲ್ಲೆಯ ಒಕ್ಕಲಿಗ ಮತದಾರರಿಗೂ ಚೆನ್ನಾಗಿ ಅರಿವಾಗಿದ್ದು ಈ ಹಿನ್ನೆಲೆಯಲ್ಲಿ ಈ ಬಾರಿಯ ಒಕ್ಕಲಿಗರ ಸಂಘದ ಚುನಾವಣಾ ಕದನ ಜಿಲ್ಲೆಯಲ್ಲಿ ಸಾಕಷ್ಟು ಕಂಪನಗಳನ್ನು ಎಬ್ಬಿಸಿದೆ.

■ ನಾಗೇಶ್

---

04 ⏮ ನಿಂದಲೂ ಒಂದು ದುರಂತ ಗಾಥೆ! ಪ್ರೀತಿಸಿ ಮದುವೆಯಾದ ತಪ್ಪಿಗೆ ತನ್ನ ರಕ್ತ-ಮಾಂಸ ಹಂಚಿಕೊಂಡು ಹುಟ್ಟಿದ ಮಕ್ಕಳ ತುತ್ತು ಗಂಜಿಗೆ, ಅಂತಿಮವಾಗಿ ಗಂಡನ ಕ್ರೌರ್ಯ ಮತ್ತು ಧನದಾಹಕ್ಕೆ ಆಯೇಷಾ ಅನುಭವಿಸಿದ ಹಿಂಸೆ- ಕಳೆದ ಕಣ್ಣೀರಿನ ಬದುಕು ಘೋರಾ ಅಘೋರ! ನಾಲ್ಕು ತಿಂಗಳ ಹಸುಗೂಸಿನ ತಾಯಿಯಾದ ಆಯೇಷಾ ತಾನು ಮಾಡದ ತಪ್ಪಿಗೆ ಜೈಲು ಸೇರಬೇಕಾಗಿ ಬಂದಿದೆ; ಕೇಸರಿ ಪಡೆಗಳ ಧರ್ಮಕಾರಣದ ಮೈಲೇಜಿನ ತೀಟೆಗೆ 'ಭಯೋತ್ಪಾದಕಿ' ಆಗಬೇಕಾಗಿದೆ!

ಕರಾವಳಿಯ ಹಿಂದೂ ಡಾನ್ ಕಲ್ಲಡ್ಕ ಭಟ್ಟನ ಶಿಷ್ಯಾಗ್ರೇಸರಾದ 'ವಿಹಿಂಪ'ನ ಜಗದೀಶ್ ಶೇಣವ ಮತ್ತು ಭಜರಂಗದಳದ ಶರಣ್ ಪಂಪ್‌ವೆಲ್ ಲವ್ ಜೆಹಾದ್-ಮತಾಂತರ-ಭಯೋತ್ಪಾದನೆ ಎಂದೆಲ್ಲ ಬಡಬಡಿಸುತ್ತಿದ್ದಾರೆ. ಕೇರಳದ ಪೊನ್ನಾನಿಯ ಮುಸ್ಲಿಮ್ ಧಾರ್ಮಿಕ ಕೇಂದ್ರದಲ್ಲಿ ಹಿಂದೂ ಹುಡುಗೀರ ಮತಾಂತರ ಆಗುತ್ತಿದೆ; ಹಿಂದೂವಾಗಿದ್ದ ಆಶಾಳನ್ನು ಆಯೇಷಾ ಮಾಡಿ ಭಯೋತ್ಪಾದನೆಗೆ ಬಳಸಲಾಗಿದೆ ಎಂದೆಲ್ಲ ಮತಾಂಧ ಮಾತಾಡಿ ಹಿಂದೂತ್ವದ ಉದ್ಧಾರಕ್ಕೆ ಹವಣಿಸುತ್ತಿದ್ದಾರೆ. ವಾಸ್ತವವೆಂದರೆ, ಕಲ್ಲಡ್ಕ ಭಟ್ಟನ ಹಿಂದೂತ್ವ ಪಡೆಯ ಲವ್ ಜೆಹಾದ್ ಭೂತದ ಆವಿಷ್ಕಾರ ಆಗುವ ಮೊದಲೇ ಆಶಾ (ಆಯೇಷಾ)-ಜುಬೇರ್ ಪ್ರೇಮಿಸಿ ಮದುವೆ ಆಗಿದ್ದಾರೆ. ಆಯೇಷಾಳ ಬಂಧನಕ್ಕೂ, ಪೊನ್ನಾನಿ ಧಾರ್ಮಿಕ ಕೇಂದ್ರಕ್ಕೆ ಅಥವಾ ಲವ್ ಜೆಹಾದ್‌ಗೆ ಯಾವುದೇ ಸಂಬಂಧ ಇಲ್ಲ! ಆಯೇಷಾ ಮುಸ್ಲಿಮ್ ಮೂಲಭೂತವಾದಿಗಳಿಂದ-ಜುಬೇರನ ಹೆತ್ತವರಿಂದ ಅನುಭವಿಸಿದ ತೊಂದರೆ-ಕೋಳಲಾಟ ಹೇಳತೀರದು! ಜುಬೇರನೂ ಆರಂಭದಲ್ಲಿ ಹೊಡತಿಂದು ಗೋಳು ಹೊಯ್ದುಕೊಂಡ ಕಿರಾತಕನೇ. ಈತ ದುಡ್ಡಿನ ಆಸೆಗೆ ಆಯೇಷಾಳನ್ನು ಹವಾಲಾ ಅವ್ಯವಹಾರಕ್ಕೆ ಸಿಲುಕಿಸಿದ್ದಾನೆಯೇ ಹೊರತು ಭಯೋತ್ಪಾದಕತೆ ದುರುದ್ದೇಶದಿಂದ ಕಾರ್ಯಾಚರಣೆ ಮಾಡಿದಂತಿಲ್ಲ!

ಅಮಾಯಕ ಆಯೇಷಾಳ ಬಂಧನ-ಬವಣೆ ಯಾವ ಆ್ಯಂಗಲ್‌ನಿಂದ ನೋಡಿದರೂ ಇದೊಂದು ಭಾರತದ 'ಭಯೋತ್ಪಾದಕ ರಾಜಕಾರಣ'ದ ಅನಾಹುತದಂತೆ ಕಾಣಿಸುತ್ತದೆ! ತಪ್ಪಗುರಿಯಿಲ್ಲದೆ ಮಾಡಿದ ತಪ್ಪಿಗೆ ನಾಲ್ಕು ತಿಂಗಳ ಹಸೀ ಬಾಣಂತಿ ಹಸುಗೂಸಿನೊಂದಿಗೆ ದೂರದ (ಕಾಶ್ಮೀರ) ಜೈಲು ಕೋಣೆ ಸೇರಬೇಕಾಗಿ ಬಂದಿರುವುದು ದೊಡ್ಡ ದುರಂತವೇ ಸರಿ!!

■ ನಹುಷ

ಯಡಿಯೂರಪ್ಪನ ತಬ್ಬಲಿ ರಾಜಕೀಯ!

ಇತ್ತೀಚಿನ ವರ್ಷಗಳಲ್ಲಿ ಕರ್ನಾಟಕದ ಬೇರೆ ಯಾವ ರಾಜಕೀಯ ನಾಯಕನಿಗೂ ಬಂದಿರದ ಬಿಕ್ಕಟ್ಟು ಯಡಿಯೂರಪ್ಪನಿಗೆ ಬಂದಿದೆ.

ಅದು ತಬ್ಬಲಿ ಸ್ಥಿತಿ!

ಅತ್ತ ಕೆಜೆಪಿ ಮುನ್ನಡೆಸಲಾಗದೆ, ಇತ್ತ ಬಿಜೆಪಿ ಸೇರಲು ಅವಕಾಶವೂ ಸಿಗದೆ, ಕೊನೆಗೆ ತಕ್ಷಣಕ್ಕೆ ಏನೂ ಮಾಡಲು ತೋಚದೆ ಕನ್‌ಫ್ಯೂಸ್ ಆದಂತೆ ಬೆಂಗಳೂರಿನ ಆನಂದ್‌ರಾವ್ ಸರ್ಕಲ್‌ನಲ್ಲಿ 'ಶಾದಿ ಭಾಗ್ಯ'ಕ್ಕಾಗಿ ಹಗಲು ರಾತ್ರಿ ಧರಣಿ ನಡೆಸುತ್ತಿರುವ ಯಡಿಯೂರಪ್ಪನ ಸ್ಥಿತಿ ನಿಜಕ್ಕೂ ಕರುಣಾಜನಕವಾಗಿದೆ. ಅಷ್ಟೇ ಅಲ್ಲ, ಹಾಸ್ಯಾಸ್ಪದವಾಗಿಯೂ ಕಾಣುತ್ತಿದೆ.

2011 ರ ಜೂನ್‌ನಲ್ಲಿ ಕರ್ನಾಟಕದ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿ ಹೊರಬಿದ್ದ ನಂತರ ಒಂದೂವರೆ ವರ್ಷ ವಿಪರೀತ ಹಾರಾಡಿದ ಯಡ್ಡಿ ಈಗ ಬಳಲಿ ಬೆಂಡಾಗಿದ್ದಾರೆ. 2013 ರ ಅಸೆಂಬ್ಲಿ ಎಲೆಕ್ಷನ್ ಫಲಿತಾಂಶ ಬಂದನಂತರ ಯಡ್ಡಿಗಿದ್ದ ರಾಜಕೀಯ ಕನಸು-ಭ್ರಮೆಗಳೆಲ್ಲಾ ಕರಗಿ ಹೋಗಿವೆ. ಗೆದ್ದ ಆರು ಸೀಟುಗಳು ಹಾಗೂ ಒಟ್ಟಾರೆ ಪಡೆದ ಶೇ. 10 ರಷ್ಟು ಓಟುಗಳು ಕೆಲ ದಿನಗಳ ಕಾಲ ಯಡ್ಡಿಗೆ 'ಕರ್ನಾಟಕದಲ್ಲಿ ತಾನೊಬ್ಬ ಶಕ್ತಿಶಾಲಿ ನಾಯಕ'ನೆಂಬ ಆತ್ಮವಿಶ್ವಾಸ ತಂದಿದ್ದು ನಿಜ. ಆದರೆ ಅದು ಹೆಚ್ಚು ದಿನ ಉಳಿಯಲಿಲ್ಲ, ಬಿಜೆಪಿಗಳು ಅಸೆಂಬ್ಲಿ ಎಲೆಕ್ಷನ್ ಸೋತ ನಂತರ ಯಡ್ಡಿ ಪಕ್ಷ ಬಿಟ್ಟು ಹೋಗಿದ್ದಕ್ಕೇ ಬಿಜೆಪಿ ಸೋತದ್ದು ಎಂತಲೂ ಕೆಲದಿನ ಮಾತಾಡಿಕೊಂಡರು. ಅಲ್ಲದೆ ಯಡ್ಡಿಯನ್ನು ಪುನಃ ಬಿಜೆಪಿಗೆ ಕರೆತಂದರೆ ಮಾತ್ರ 2014 ರ ಸಂಸತ್ ಚುನಾವಣೆಯಲ್ಲಿ ಹುಮ್ಮಸ್ಸಿನಿಂದ ಹೋರಾಡಲು ಸಾಧ್ಯವೆಂದು ನಂಬಿದ್ದರು.

ಆದರೆ ಬಿಜೆಪಿಯೊಳಗೆ ಇದು ಏಕಾಭಿಪ್ರಾಯವಾಗಿರಲಿಲ್ಲ, ಜಗದೀಶ್ ಶೆಟ್ಟರ್, ಸದಾನಂದ ಗೌಡ ಮುಂತಾದವರಿಗೆ ಯಡ್ಡಿ ಮರುಸೇರ್ಪಡೆ ಬೇಕಿದೆಯಾದರೂ ಈಶ್ವರಪ್ಪ ಅನಂತ್‌ಕುಮಾರ್, ಸಿ.ಟಿ. ರವಿ ಮುಂತಾದವರು ಅದಕ್ಕೆ ಅಡ್ಡಗಾಲು ಹಾಕುತ್ತಲೇ ಬಂದರು.

ಹಾಗಾಗಿ ಯಡ್ಡಿಯ ಬಿಜೆಪಿ ಮರು ಸೇರ್ಪಡೆಯೆಂಬ ಸಿನಿಮಾ ಶೂಟಿಂಗ್ ಈಗ ಶತದಿನೋತ್ಸವ ಆಚರಿಸಿ ಮುಂದುವರೆಯುತ್ತಲೇ ಇದ್ದರೂ ಯಾವುದೂ ಖಚಿತವಾಗಿ ನಿರ್ಧಾರವಾಗಿಲ್ಲ, ಯಡ್ಡಿ ಬಿಜೆಪಿ ಸೇರಲು ತುದಿಗಾಲಲ್ಲಿ ನಿಂತಿದ್ದರೂ ಪಾರ್ಟಿ ಬಾಗಿಲು ತೆಗೆಯುತ್ತಿಲ್ಲ.

ಇದು ಸ್ಪಷ್ಟವಾಗಿ ಗೊತ್ತಾಗಿದ್ದು ಮೊನ್ನೆ ನವೆಂಬರ್ 17 ರಂದು ನರೇಂದ್ರ ಮೋದಿ ಬೆಂಗಳೂರಿಗೆ ಬಂದು ಹೋದಾಗ!





ಯಡ್ಡಿಯ ದುಃಖ-ದುಮ್ಮಾನ

ಬೆಂಗಳೂರಿನ ಮೌರ್ಯ ಹೋಟೆಲಿನಲ್ಲಿ ಕುಳಿತು ನರೇಂದ್ರ ಮೋದಿಯ ಬೆಂಗಳೂರು ಭಾಷಣವನ್ನು ಟಿವಿಯಲ್ಲಿ ನೋಡಿ ಮುಗಿಸುವ ವೇಳೆಗೆ ಯಡ್ಡಿಗೆ ಅಳು ಬರುವಂತಾಗಿತ್ತು, ಅದನ್ನವರು ಮುಚ್ಚಿಟ್ಟುಕೊಳ್ಳಲೂ ಇಲ್ಲ.

"ಮೋದಿ ನನ್ನ ಹೆಸರು ಪ್ರಸ್ತಾಪಿಸಲಿಲ್ಲ, ದಕ್ಷಿಣ ಭಾರತದಲ್ಲಿ ಮೊದಲ ಬಾರಿಗೆ ಬಿಜೆಪಿ ಸರ್ಕಾರವನ್ನು ಅಧಿಕಾರಕ್ಕೆ ತಂದವನು ನಾನು. ಆದರೆ ನನ್ನನ್ನು ಅಲ್ಲಿ ಯಾರೂ ನೆನೆಯಲಿಲ್ಲ" ಎಂದು ಯಡ್ಡಿ ತನ್ನ ಆಪ್ತರ ಹತ್ತಿರ ಗೋಳಾಡಿದ್ದು ಮಾಧ್ಯಮಗಳಲ್ಲೂ ಬಂತು. ಅದೇ ಸಿಟ್ಟು, ಹತಾಶೆ ಹಾಗೂ ದುಃಖವನ್ನು ತಡೆಯಲಾರದೆ ಯಡ್ಡಿ "ನಾನು ಇನ್ನು ಯಾರಿಗೂ ಕಾಯಲಾರೆ, ಸಂಸತ್ ಚುನಾವಣೆ ಕೆಜೆಪಿಯನ್ನು ಸಜ್ಜುಗೊಳಿಸುತ್ತೇನೆ" ಅಂದರು.

ಯಡ್ಡಿಗೆ ಹಾಗನ್ನದೆ ಬೇರೆ ಮಾತಾಡಲು ತಾನೆ ಏನಿತ್ತು?

ಈ ಹತಾಶೆಯ ಮಾತಾಡುವ ಹೊತ್ತಿಗೆ ಯಡ್ಡಿಗಾಗಿದ್ದ ಅವಮಾನಗಳು ಒಂದಾ ಎರಡಾ?

ಕಳೆದ ಜೂನ್-ಜುಲೈ ಹೊತ್ತಿಗೆ ಯಡ್ಡಿಯ ಬಿಜೆಪಿ ಮರುಸೇರ್ಪಡೆಯ ವಿಚಾರ ಆಗಿಂದಾಗ್ಗೆ ಹವಾ ಎಬ್ಬಿಸುತ್ತಲೇ ಇತ್ತು, ಬಿಜೆಪಿ-ಕೆಜೆಪಿ ಪಾರ್ಟಿ ನಾಯಕರ ಮೀಟಿಂಗ್‌ಗಳಲ್ಲೂ ಅದು ಪ್ರತಿಧ್ವನಿಸುತ್ತಿತ್ತು, ಆವಾಗೊಮ್ಮೆ ಯಡ್ಡಿ 'ತಾನು ಬಿಜೆಪಿಗೆ ಪುನಃ ಸೇರಬೇಕೆಂದರೆ ಕೆಲವು ಶರತ್ತುಗಳಿವೆ' ಎಂದಿದ್ದು ಆಯಿತು. ಯಡ್ಡಿಗೆ ಬಿಜೆಪಿ ರಾಜ್ಯಾಧ್ಯಕ್ಷ ಸ್ಥಾನ ಹಾಗೂ ವಿರೋಧ ಪಕ್ಷದ ಲೀಡರ್ ಹುದ್ದೆ, ಸಂಸತ್ ಚುನಾವಣೆಯಲ್ಲಿ ತಾನು ಹೇಳಿದವರಿಗೆ ಟಿಕೆಟ್ ಕೊಡಬೇಕು. ಶೋಭಾ ಕರಂದ್ಲಾಜೆ, ಧನಂಜಯ ಕುಮಾರ್ ಮತ್ತಿತರ ಕೆಜೆಪಿ ಮುಖಂಡರಿಗೆ ಸೂಕ್ತ ಸ್ಥಾನಮಾನ ಎಂಬತ್ಯಾದಿ ಷರತ್ತುಗಳವು. ಆ ಮಧ್ಯೆ ರಾಜ್ಯ ಬಿಜೆಪಿಗಳೂ ಒಂದು ಮೀಟಿಂಗ್ ನಡೆಸಿ ಯಡ್ಡಿ ಸೇರ್ಪಡೆ ಬಗ್ಗೆ ನಿರ್ಧರಿಸಿ ಬಿಜೆಪಿ ಹೈಕಮಾಂಡ್‌ಗೆ ಠರಾವು ಕಳುಹಿಸಿದರು.

ಆದರೆ ದೆಹಲಿ ನಾಯಕರು ಕ್ಯಾರೆ ಅನ್ನಲಿಲ್ಲ!

ಇತ್ತ ಮರುಸೇರ್ಪಡೆಗೆಂದು ಸಂಭ್ರಮದಿಂದ ಕಾದಿದ್ದ ಯಡ್ಡಿ ಮತ್ತು ಗ್ಯಾಂಗ್‌ಗೆ ಚಟಪಟಿಕೆ ಶುರುವಾಯಿತು. ಅದಾದ ಮೇಲೆ ಸೆಪ್ಟೆಂಬರ್ ತಿಂಗಳಲ್ಲಿ ನರೇಂದ್ರ ಮೋದಿ ಬಿಜೆಪಿಯ ಪ್ರಧಾನಿ ಅಭ್ಯರ್ಥಿ ಎಂದು ಘೋಷಣೆಯಾದ ತಕ್ಷಣ ಈ ಯಡ್ಡಿ ಯಾರೂ ಕೇಳದೆ ಇದ್ದಾಗಲೂ ತಾನೇ ಸ್ವಯಂ ಹೇಳಿಕೆ ನೀಡಿ "ಮೋದಿಯನ್ನು ಪ್ರಧಾನಮಂತ್ರಿ ಮಾಡುವುದೇ ನನ್ನ ಗುರಿ" ಅಂತ ಕಿರುಚಿದರು.

ಉಹುಂ. ಆಗಲೂ ಬಿಜೆಪಿಯ ದೆಹಲಿ ನಾಯಕರು "ನೀನು ಯಾವೂರ ದಾಸಯ್ಯ" ಎಂಬಂತೆ ಯಡ್ಡಿನ್ನು ನಿರ್ಲಕ್ಷಿಸಿಬಿಟ್ಟರು. ಇತ್ತ ಯಡ್ಡಿಗೆ ಅದೇನನಿಸಿತ್ತೋ "ನಾನು ಬಿಜೆಪಿ ಸೇರದಿದ್ದರೂ ಪರವಾಗಿಲ್ಲ, ಆದರೆ ಕೆಜೆಪಿನ ಎನ್‌ಡಿಎ ಮೈತ್ರಿಕೂಟಕ್ಕೆ ಸೇರಿಸಿಕೊಳ್ಳಿ" ಎಂದು ಅಕ್ಟೋಬರ್ 18 ರಂದು ಅಡ್ವಾಣಿಗೇ ಪತ್ರ ಬರೆದರು.

ಅದು ಮೀಡಿಯಾಗಳಲ್ಲೂ ಸುದ್ದಿಯಾಯಿತು.

ಆಶ್ಚರ್ಯ ಅಂದರೆ ದೆಹಲಿ ಬಿಜೆಪಿ ಅದಕ್ಕೂ ಉತ್ತರಿಸದೆ ಯಡ್ಡಿಯನ್ನು ನಿರ್ಲಕ್ಷಿಸಿತು. ಇದಾದನಂತರ ಮೋದಿಯ ಬೆಂಗಳೂರು ರ್‍ಯಾಲಿ ನವೆಂಬರ್ 17 ರಂದು ಎಂದು ನಿರ್ಧಾರವಾಯಿತು. ಪುನಃ ಬಿಜೆಪಿ ಸೇರ್ಪಡೆಯ ಕನಸು ಕಾಣುತ್ತಾ ಯಡ್ಡಿ ಥ್ರಿಲ್ ಆಗಿ ಕಾಯತೊಡಗಿದರು. ಮೋದಿ ಬೆಂಗಳೂರಿಗೆ ಬರುವ ಮುನ್ನ ಬಿಜೆಪಿ-ಕೆಜೆಪಿ ವಿಲೀನವಾಗಿ ತಾನು ಮೋದಿ ಜೊತೆ ವೇದಿಕೆಯೇರುವುದು ಗ್ಯಾರಂಟಿ ಎಂದು ಯಡ್ಡಿ ಸಂಭ್ರಮಿಸತೊಡಗಿದ್ದರು. ಆದರೆ ಆಗಿದ್ದೇನು? ಪಕ್ಷಗಳ ವಿಲೀನವಿರಲಿ ಬೆಂಗಳೂರಿಗೆ ಬಂದ ಮೋದಿ ಯಡಿಯೂರಪ್ಪ ಎಂಬ ರಾಜಕಾರಣಿ ಕರ್ನಾಟಕದಲ್ಲಿ ಇಲ್ಲವೇ ಇಲ್ಲ ಎಂಬಂತೆ ಲೆಕ್ಕಕ್ಕಿರದ ವ್ಯಕ್ತಿಯೆಂಬಂತೆ ಚಿಲ್ಲರೆ ಭಾಷಣ ಮಾಡಿ ಹೋದ.

ಇದರಿಂದ ಯಡ್ಡಿಯ ಮನಸ್ಥಿತಿ ಏನಾಗಿರಬೇಡ?

ಒಂದೆಡೆ ಬಿಜೆಪಿಯಿಂದ ವಿಲೀನದ ಮಾತಿಲ್ಲ,

ಎನ್‌ಡಿಎ ಮೈತ್ರಿಕೂಟಕ್ಕೂ ಪ್ರವೇಶವಿಲ್ಲ,

ತನ್ನನ್ನು ಯಾರೂ ಕ್ಯಾರೆ ಅನ್ನುತ್ತಿಲ್ಲ.

ಮತ್ತೊಂದೆಡೆ ಕೆಜೆಪಿ ಸ್ಥಿತಿ ನೋಡಿದರೆ ಕಾರ್ಯಕರ್ತರಿಲ್ಲ, ಇರುವ ನಾಯಕರಿಗೆ ಭವಿಷ್ಯ ಆಶಾದಾಯಕವಾಗಿ ಕಾಣುತ್ತಿಲ್ಲ, ಸಂಸತ್ ಚುನಾವಣೆಯನ್ನು ಸ್ವತಂತ್ರವಾಗಿ ಎದುರಿಸಿ ಗೆಲ್ಲುತ್ತೇವೆಂಬ ಧೈರ್ಯವೂ ಇಲ್ಲ. ಹಣಬಲ, ಜನಬಲವಿಲ್ಲ... ಪರಿಸ್ಥಿತಿ ಹೀಗೇ ಮುಂದುವರೆದರೆ ಕೆಜೆಪಿ ಚಿಪ್ಪೆಯಾಗಿರುವ ತೆಂಗಿನ ಚಿಪ್ಪು ಬಿಟ್ಟರೆ ಬೇರೇನೂ ಕೈಲಿ ಉಳಿಯುವಂತೆ ಕಾಣುತ್ತಿಲ್ಲ. ಇದೆಲ್ಲಾ ನೋಡಿ ನೋಡಿಯೇ ಇರಬೇಕು ಯಡಿಯೂರಪ್ಪ ದುಃಖ ಹತಾಶೆಯಿಂದ "ನಾನು ಅಂದುಕೊಂಡಿದ್ದು ಯಾವುದೂ ಆಗುತ್ತಿಲ್ಲ" ಎಂದು ಹೇಳಿಕೆ ಕೊಟ್ಟಿದ್ದಾರೆ.

ಈ ಯಡ್ಡಿ ಒಂದು ಸಾರಿ ದೇವೇಗೌಡ-ಕುಮಾರಸ್ವಾಮಿಯವರನ್ನಾದರೂ ನೋಡಿ ರಾಜಕೀಯದ ಪಾಠ ಕಲಿಯಬೇಕಿದೆ. ಏನೇ ಸೋಲು-ಗೆಲುವು ಬರಲಿ ಇಲ್ಲಾ ಹೋಗಲಿ ಇವರೆಲ್ಲಾ ಯಡ್ಡಿಯಂತೆ ತಲೆ ಮೇಲೆ ಬಟ್ಟೆ ಹಾಕಿಕೊಂಡು ಅಳುವುದಿಲ್ಲ.

ಯಡಿಯೂರಪ್ಪ ತಬ್ಬಲಿ ರಾಜಕಾರಣಿಯಂತೆ ದಿಕ್ಕು ತೋಚದೆ, ಬಿಜೆಪಿಗೂ ಸೇರಲಾಗದೆ ಹತಾಶೆಯಿಂದ 'ಶಾದಿಭಾಗ್ಯ' ವಿಚಾರವನ್ನೇ ಈ ದೇಶದ ಪ್ರಮುಖ ವಿಷಯವೆಂಬಂತೆ ವಾರಗಟ್ಟಲೆ ಧರಣಿ ನಡೆಸುತ್ತಿದ್ದಾರೆ.

ಇಂಥ ತಬ್ಬಲಿ ಸ್ಥಿತಿ ಯಾರಿಗೂ ಬರಬಾರದು.

■ ವರದಿಗಾರ

ಜಗದ್ಗುರು ಗಡ್ಡಕ್ಕೆ ಡೈ ಮಾಡುವುದೂ ಮೂಢನಂಬಿಕೆ

ಥೂತ್ತೇರಿ

■ ಯಾಹು

ಸರ್ಕಾರ ಮೂಢನಂಬಿಕೆ ಮಸೂದೆಯನ್ನು ಸದನದಲ್ಲಿ ಮಂಡಿಸುವುದಕ್ಕೂ ಮೊದಲೆ ಮಠಗಳಲ್ಲಿನ ಮೂಲವ್ಯಾಧಿಗಳು ಮಮ್ಮಲ ಮರುಗಿ ತಮ್ಮತಮ್ಮಲ್ಲೇ ಗುದುಮುರುಗಿಯಾಗಿವೆಯಂತಲ್ಲಾ. ಈ ಪೈಕಿ ಮಠೋಪಜೀವಿಗಳ ನಡುವೆ ವೀರಾಭಿಮನ್ಯುವಿನಂತೆ ಹೋರಾಡುತ್ತಾ ಬಂದಿರುವ ನಿಡುಮಾಮಿಡಿಯ ವೀರಭದ್ರರು ಒಂದು ಕಡೆಯಾದರೆ, ಎಡೂರಪ್ಪನ ಸರ್ಕಾರದಿಂದ ಶಾನೆ ಧನಕನಕ ವಸ್ತು ಪಡೆದು ಸರ್ಕಾರಕ್ಕೆ ಲೆಕ್ಕ ಕೊಡದೆ ಕುಳಿತಿರುವ ಬಾಳೆಹೊನ್ನೂರು ಪ್ರಾಂತ್ಯದ ಪಲ್ಲಕ್ಕಿ ಜಗದ್ಗುರು ರಂಭಾಪುರಿಯವರು ಇನ್ನೊಂದು ಕಡೆ ನಿಂತು ಸಮರವನ್ನೆ ಘೋಷಿಸಿದ್ದಾರಂತಲ್ಲಾ, "ಈ ಹಾಳು ಮೂಢನಂಬಿಕೆ ಪ್ರತಿಬಂಧಕ ಮಸೂದೆಯನ್ನು ನೇರವಾಗಿ ವೀರಶೈವ ಸಂಪ್ರದಾಯದ ವಿರುದ್ಧವೇ ತಯಾರಿಸಿದಂತಿದೆ. ಪಾದಪೂಜೆ, ಅಡ್ಡಪಲ್ಲಕ್ಕಿ, ಶರಣರ ನಂಬಿಕೆಗಳು, ಇವುಗಳನ್ನು ವ್ಯಾಪಾರವೆನ್ನುವ ನಿಡುಮಾಮಿಡಿ ಸ್ವಾಮಿ ಸ್ವಾಮಿಯಾಗಿರಲು ಯೋಗ್ಯರಲ್ಲ, ಆದ್ದರಿಂದ ನೂತನ ಕರಡು ತಯಾರಿಸಿ ಅದರಲ್ಲಿ ಪಾದಪೂಜೆ, ಪಾದೋದಕ ಮತ್ತು ಮೈಲಿಗಟ್ಟಲೆ ಅಡ್ಡಪಲ್ಲಕ್ಕಿ ಸೇರಿಸಬೇಕು. ಜೊತೆಗೆ ರಂಭಾಪುರಿಯ ಕಿರೀಟ, ಉಂಗುರಕ್ಕೂ ಅವಕಾಶವಿರಬೇಕು. ಅಲ್ಲದೆ ಕಿರೀಟ ಶೋಭಿತ ಪಲ್ಲಕ್ಕಿ ಜಗದ್ಗುರು ಶೋಭಾಯಮಾನವಾಗಿ ಕಾಣಬೇಕಾದರೆ, ಅವರು ಗಡ್ಡಕ್ಕೆ ಗೋದ್ರೇಜ್ ಡೈಯಿಂಗ್ ಹಚ್ಚಿಕೊಳ್ಳುವುದನ್ನು ಮೆಚ್ಚಿಕೊಳ್ಳಬೇಕು" ಎಂದೇನೂ ಸೇರಿಸಿಲ್ಲವಂತಲ್ಲಾ, "ತನ್ನ ಕೂದಲು ಬಿಳಿಯಾಗುವುದನ್ನು ನೋಡಲಾಗದವನೂ ಒಬ್ಬ ಗುರುವೆ" ಎಂದು ಚಂಪಾ ಡೈಯಿಂಗ್ ಮಾಡುತ್ತ ನಕ್ಕನಂತಲ್ಲಾ, ಥೂತ್ತೇರಿ!


***

ಒಂದು ಕಾಲದಲ್ಲಿ ಮೂಢನಂಬಿಕೆಯ ಆರಾಧಕರಾಗಿದ್ದ ಕಾಂಗ್ರೆಸ್ಸಿಗರು ಇಂದು ಈ ನಂಬಿಕೆಗಳನ್ನೇ ತೊಡೆದು ಹಾಕುವಂತಹ ಪ್ರಗತಿಪರರಾಗಿ, ಮೂಢನಂಬಿಕೆ ವಿರೋಧಿಗಳಾಗಿದ್ದ ಜನತಾದಳದವರು ಇಂದು ಯಜ್ಞ, ಯಾಗ, ಮಾಟ, ಮಂತ್ರಗಳ ಪಿಂಡಗಳಾಗಿ ಹೋಗಿರುವುದು ಕಾಲಮಾನದ ಮಹಿಮೆಯಲ್ಲವೆ. ಇಂತಹ ನಂಬಿಕೆಗಳ ಪಿತಾಮಹರಾದ ದೇವೇಗೌಡರು "ಈ ಸರ್ಕಾರ ಹೆಚ್ಚು ದಿನ ಬಾಳಲಾರದು" ಎಂದು ಶಾಪ ಕೊಟ್ಟಿದ್ದಾರಂತಲ್ಲಾ, ಶಾಪ ಕೊಟ್ಟ ನಂತರ ಕಣ್ಮುಚ್ಚಿದ ಗೌಡರನ್ನು "ಈ ಸರ್ಕಾರ ಬಹಳ ದಿನ ಬಾಳಬಾರದೆಂಬುದು ತಮ್ಮ ಅಪೇಕ್ಷೆಯೆ?" ಎಂದು ಕಿಡಿಗೇಡಿ ಪತ್ರಕರ್ತರು ಕೇಳಲಾಗಿ, "ನಾನು ಬೆವರು ಸುರಿಸಿ ದೈವಾನುಗ್ರಹದ ಬಲದಿಂದ ಕಟ್ಟಿದ ಜನತಾದಳವನ್ನು ಮುಗಿಸೋದಕ್ಕೆ ಹೊರಟ ಯಾರೂ ಉದ್ಧಾರವಾಗಿಲ್ಲ, ನಾನು ಜೀವಂತವಿರುವವರೆಗೆ ಜೆಡಿಎಸ್ಸನ್ನ ಮುಗಿಸಲು ಯಾರಿಂದಲೂ ಸಾಧ್ಯವಿಲ್ಲ" ಎಂದರಂತಲ್ಲಾ, "ಅಂದರೆ, ನಿಮ್ಮ ನಂತರ ಮುಗಿದುಹೋಗುತ್ತೆ ಎನ್ನುವಂತಾಯ್ತಲ್ಲ ಗೌಡರೆ" ಎಂದಾಗ "ತಾವು ಹೇಗೇ ಬೇಕಾದು, ಭಾವಿಸಬಹುದು. ಕೊಲ್ಲೂರು ಮೂಕಾಂಬಿಕೆ ಪ್ರಸಾದ ತಂದಿದ್ದೀನಿ, ತಗೊಂಡು ಹೋಗಿ" ಎಂದರಂತಲ್ಲಾ, ಈ ನಡುವೆ ಗೌಡರ ಅಭಿಮಾನಿಯಾಗಿದ್ದ ಶಿವಮೊಗ್ಗದ ಭಕ್ತನೊಬ್ಬ ಇದ್ದಕ್ಕಿದ್ದಂತೆ ಬಿಳಿ ಬಟ್ಟೆ ತೆಗೆದು ಖಾದಿ ಹಾಕಿಕೊಂಡು, ಸುಂದರವಾದ ಹುಡುಗರನ್ನು ದುರುಗುಟ್ಟಿ ನೋಡುವುದಲ್ಲದೆ, ಸಿಕ್ಕಸಿಕ್ಕವರ ಎದುರು "ಮೂಲ ನಂಬಿಕೆ ಬೇರೆ, ಮೂಢನಂಬಿಕೆ ಬೇರೆ" ಎಂದು ಕೊರೆಯುತ್ತಿದ್ದಾನಂತಲ್ಲಾ, ಥೂತ್ತೇರಿ!!

***

"ನರೇಂದ್ರ ಮೋದಿ ನಮೋ" ಎಂದುಕೊಂಡು ಕರ್ನಾಟಕದ ತುಂಬಾ ತಿರುಗಿ ಕಾಸೆತ್ತಿದ ಮಂಗಳಾರತಿ ತಟ್ಟೆ, ಜನ ಚಿಲ್ಲರೆ ಕಾಸನ್ನೆಲ್ಲಾ ಜೇಬಿಗಿಳಿಸಿ ಉಳಿದ ಮೂವತ್ತೈದು ಲಕ್ಷ ರೂ.ಗಳನ್ನು ಸೋತ ಮ್ಯಾಚಿನ ಲೀಡರ್‌ಗೆ ಒಪ್ಪಿಸಿದಂತೆ ನರಹಂತಕ ಮೋದಿಗೆ ಕೊಟ್ಟವಂತಲ್ಲಾ, ಮೋದಿ ಕರೆ ತಂದು ರಕ್ತವಾಸನೆಯ ಸಂಚಲನವುಂಟುಮಾಡಿ ಅದೇ ಗುಂಗಿನಲ್ಲಿ ತಿಂಗಳಾನುಗಟ್ಟಲೆ ಮಲುಕಾಡಿಸುವ ಕನಸು ಕಂಡಿದ್ದ ಚಡ್ಡಿ ವೀರರಿಗೆ ಮೋದಿ ನಿರಾಶೆ ಮೂಡಿಸಿ ಹೋದನಂತಲ್ಲಾ, ಮುಖ್ಯವಾಗಿ ಚಡ್ಡಿಗಳು ಮೋದಿಯಿಂದ ನಿರೀಕ್ಷಿಸಿದ್ದು ಮೂಢನಂಬಿಕೆ ಮಸೂದೆ ವಿಷಯ, ಶಾದಿಭಾಗ್ಯದ ಟೀಕೆ ಮತ್ತು ಸಿದ್ದು ಸರ್ಕಾರದ ಲೇವಡಿ. ಇದೆಲ್ಲದರಿಂದ ಸ್ಫೂರ್ತಿಗೊಂಡು ಮತ್ತೆ ಚಂದ ವಸೂಲಿಗೆ ಹೊರಡಲಿದ್ದ ಚಡ್ಡಿಗಳಿಗೆ ಬೆಂಗಳೂರು ಹವಾಮಾನ ಮತ್ತು ಮೋದಿ ಇಬ್ಬರೂ ಮೋಸ ಮಾಡುವುದೆ?

ಇದೆಲ್ಲಕ್ಕಿಂತಲೂ ದಾರುಣವಾದ ಸಮಸ್ಯೆಯೆಂದರೆ ಅಡ್ವಾಣಿ ಬಂದಾಗ ಜೈಲಿನಲ್ಲಿದ್ದ ಎಡೂರಪ್ಪ ಮೋದಿ ಬಂದಾಗ ಬೀದಿಯಲ್ಲಿ ಕುಳಿತಿದ್ದರಲ್ಲಾ, ಜನಮಾನಸದಿಂದ ಎಂದೂ ಮರೆಯಾಗದಂತೆ ಸದಾ ಏನಾದರೊಂದು ಸುದ್ದಿ ಮಾಡುತ್ತಲೇ ಇರಬೇಕು ಎಂಬ ತತ್ವವನ್ನು ಬಲವಾಗಿ ನಂಬಿರುವ ಎಡೂರಪ್ಪನವರು "ಅಮ್ಮಾತಾಯೀ" ಎನ್ನುವಂತೆ ಆನಂದರಾವ್ ಸರ್ಕಲ್ ಬಳಿ ಅರ್ಧ ತಿಂಗಳಿನಿಂದ ಕುಳಿತಿರುವುದು ಸಿದ್ದು ಸರ್ಕಾರಕ್ಕೆ ಗೇಲಿಯ, ತಾತ್ಸಾರದ ಸಂಗತಿಯಾದರೆ, ಮೋದಿ ಟೀಮಿಗೆ ಮರೆತು ಹೋದ ನಾಯಕನ ಸುದ್ದಿಯಂತಾಗಿದೆಯಲ್ಲಾ, ಥೂತ್ತೇರಿ!!



***

ಮೋದಿ ಬರುವ ಉಮೇದಿನಲ್ಲಿ ಭಯಂಕರ ಭಾಷಣ ಚಚ್ಚಿದ ನಮ್ಮ ಅಪರೂಪದ ರಾಜಕಾರಣಿ ಈಶ್ವರಪ್ಪನನ್ನು ಮಾತನಾಡಿಸಿ, ಅಭಿನಂದನೆ ಹೇಳಬೇಕೆನಿಸಿತಲ್ಲಾ, ತಡಮಾಡದೆ ಫೋನ್ ಮಾಡಲಾಗಿ ರಿಂಗಾಯ್ತು,

ರಿಂಗ್ ಟೋನ್: ಕರಿಯ ಕಂಬಳಿ ಗದ್ದುಗೆ ಮಾಡಿ ವೀರದೊಳ್ಳ ತಂದಿರಿಸಿದರೊ....

"ಹಲೋ ಯಾರು"

"ನಮಸ್ಕಾರ ಸಾರ್, ನಾನು ಯಾಹು."

"ಏನ್ರಿ ಯಾಹು ಎಲ್ಲಿದ್ದಿರಿ, ಈಚೆಗೆ ಫೋನ್ ಮಾಡ್ಲಿಲ್ಲ ಯಾಕೆ?"

"ಸಾರಿ ಸಾರ್. ಫೋನ್ ಪದೆಪದೇ ಮಾಡಕ್ಕಾಗಲ್ಲ. ಏನಾದ್ರು ವಿಶೇಷ ಇದ್ರೆ ಮಾಡ್ತಿನಿ."

"ಈಗೇನು ವಿಶೇಷ ಹೇಳಿ."

"ಏನಿಲ್ಲ ಸಾರ್, ಅವತ್ತು ಮೋದಿ ಬರದ್ಕ ಮೊದ್ಲು ನೀವು ಭಾಷಣ ಮಾಡಿದ್ರಿ. ನಿಜಕ್ಕೂ ಆ ಭಾಷಣ ಕೇಳಿದ್ರೆ ಅದ್ರೂ ಮೊದ್ಲು ನೀವು ಪ್ರತಾಪಸಿಂಹನ ಜೊತೆ ಮಾತಾಡಿರಬೇಕು ಅಂದುಕೊಂಡೆ ಸಾರ್. ಅಷ್ಟು ಚೆನ್ನಾಗಿತ್ತು."

"ಏನು ಮಾತಾಡಿದೆ ಹೇಳಿ ಮರತೋಗ್ಯದೆ."

"ನಿಜ ಸಾರ್, ಯೋಚನೆ ಮಾಡದೆ ಆಡೋ ಮಾತು ಮರತೋಗುತ್ತೆ ಸಾರ್. ನೀವೇನಂದ್ರಿ ಅಂದ್ರೇ, ಮೋದಿ ಪ್ರಧಾನಿಯಾದ್ರೆ ಪಾಕಿಸ್ತಾನದ ಮೇಲೆ ಹೋಗಿ ಭಾರತದ ಬಾವುಟ ಅರುಸ್ತರೆ ಅಂದ್ರಿ. ಇದ್ಯಂಗೆ ಸಾಧ್ಯ?"

"ಯಂಗೆ ಸಾಧ್ಯ ಅಂದ್ರೆ, ಯುದ್ಧ ಮಾಡ್ತಿವಿ. ನಾವು ದೊಡ್ಡ ದೇಶ ಆದ್ರಿಂದ ಗೆಲ್ತಿವಿ. ಪಾಕಿಸ್ತಾನದ ಪಾರ್ಲಿಮೆಂಟ್ ಮೇಲೆ ನಮ್ಮ ಬಾವುಟ ಅರುಸ್ತಿವಿ ಅಷ್ಟೆ ಕಂಡ್ರಿ."

"ಕೇಳಕ್ಕೆ ರೋಮಾಂಚನ ಆಗುತ್ತೆ ಮತ್ತೆ ಭಯಾನು ಆಗುತ್ತೆ ಸಾರ್."

"ಭಯ ಯಾಕ್ರಿ?"



ಜೀ ಟಿವಿ ಬದುಕು ಜಟಕಾ ಬಂಡಿ

ಮಾನಗೇಡಿ ಮಾಳವಿಕಾ!

ಕೇವಲ ನಟಿ ಮಾಳವಿಕಾ ಜೀ ಟಿವಿಯಲ್ಲಿ ನಡೆಸುತ್ತಿರುವ ಬದುಕು ಜಟಕಾ ಬಂಡಿ ಎಂಬ ಕಾರ್ಯಕ್ರಮದ ಹಿಂದಿರುವ ಕ್ರೌರ್ಯ, ಟಿಆರ್‌ಪಿ ಹಿಂದಿರುವ ಲೆಕ್ಕಾಚಾರಗಳು ಮತ್ತದಕ್ಕೆ ಅವಮಾಯಕರನ್ನು ಎಳೆತಂದು ಶೋಷಿಸುತ್ತಿರುವ ಪ್ರಕರಣವಿದು.


ಮೊನ್ನೆ ನವೆಂಬರ್ 13ರಂದು ಬೆಂಗಳೂರಿನ ಅಬ್ಬಾಯಿ ನಾಯ್ಡು ಸ್ಟುಡಿಯೋದಲ್ಲಿ ರೆಕಾರ್ಡ್ ಆದ ಜಟಕಾ ಬಂಡಿ ಕಾರ್ಯಕ್ರಮಕ್ಕೆ ಪೂರ್ವಿ ಎಂಬ ಅಮಾಯಕ ಹುಡುಗಿಯೊಬ್ಬಳನ್ನು ಬೇರೇನೊ ಸುಳ್ಳು ಹೇಳಿ ಸ್ಟುಡಿಯೋಗೆ ಕರೆಸಿ ಆಕೆಯ ಗಂಡ ಸಂತೋಷ್ ಎಂಬುವನಿಂದ ಬೇಕಾಬಿಟ್ಟಿ ಹಲ್ಲೆ ಮಾಡಿಸಿ ಆ ಹುಡುಗಿ ಆಸ್ಪತ್ರೆ ಸೇರುವಂತ ಸನ್ನಿವೇಶವನ್ನು ಮಾಳವಿಕಾ ಟೀಂ ಮಾಡಿದೆ. ಪೆದ್ದು ಹೆಂಗಸು ಮಾಳವಿಕಾ ಟಿವಿ ಕ್ಯಾಮರಾ ಎದುರಿಗಿಟ್ಟು ಆ ಯುವತಿಗೆ 'ನಿನಗೆ ಯಾರ್‍ಯಾರೊಂದಿಗೆ ಸಂಬಂಧ ಇದೆ' ಎನ್ನುವಂತ ಅಸಹ್ಯ ಪ್ರಶ್ನೆಗಳನ್ನೆಲ್ಲಾ ಕೇಳಿ ತನ್ನ ಅಯೋಗ್ಯತೆ ಎಷ್ಟೆಂಬುದನ್ನು ತೋರಿಸಿಕೊಂಡಿದ್ದಾಳೆ.

ಈ ಪ್ರಕರಣವು ಇನ್ನೇನು ಪೊಲೀಸ್ ಸ್ಟೇಷನ್ ಮೆಟ್ಟಿಲು ಹತ್ತುವ ಸಂದರ್ಭ ಬಂದಿದ್ದು ಮುಂದೆ ಕೋರ್ಟು ಕೇಸಾಗುವ ಎಲ್ಲಾ ಸೂಚನೆಗಳೂ ಇವೆ.

ಮಾಳವಿಕಾ ಜೊತೆಗೆ ಈಕೆಯ ಗುಂಪಿನ ಅವಿವೇಕಿ ಹೆಂಗಸರಾದ ಉಷಾ ಮತ್ತು ಲಕ್ಷ್ಮೀ ಎಂಬುವರಿಗೂ ಸರಿಯಾದ ಪಾಠ ಕಲಿಸಲು ವಕೀಲರ ಗುಂಪೊಂದು ತಯಾರಾಗುತ್ತಿದೆ.

ಸುಳ್ಳು ಹೇಳಿ ಕರೆ ತಂದರು

ಉತ್ತರ ಕನ್ನಡ ಜಿಲ್ಲೆ ಮೂಲದ ಪೂರ್ವಿ (ಹೆಸರು ಬದಲಿಸಲಾಗಿದೆ) ಎಂಬ ಯುವತಿಯು ತನ್ನ ನೆಂಟರ



ಹುಡುಗ ಸಂತೋಷ್ ಎಂಬುವರೊಡನೆ ಮದುವೆಯಾಗಿ ಒಂದು ಮಗುವು ಇತ್ತು. ಪಕ್ಕಾ ಕುಡುಕನಾಗಿದ್ದ ಸಂತೋಷ್‌ಗೆ ನೀಚ ಅನುಮಾನ ಪ್ರವೃತ್ತಿ, ಚೆಂಗಲು ತಿರುಗುವ ದುಶ್ಚಟಗಳೆಲ್ಲಾ ಇದ್ದ ಕಾರಣ ಮತ್ತು ಪತ್ನಿಗೆ ವಿಪರೀತ ಹಿಂಸೆ ನೀಡುತ್ತಿದ್ದ ಕಾರಣ ಆಕೆ ಆತನ ವಿರುದ್ಧ ಪೊಲೀಸ್ ಕಂಪ್ಲೆಂಟ್ ನೀಡಿದ್ದರು. ಅಲ್ಲದೆ ಕೌಟುಂಬಿಕ ಹಿಂಸೆ ತಡೆ ಕಾಯ್ದೆಯನ್ವಯ ನ್ಯಾಯಾಲಯದಲ್ಲಿ ಕೇಸ್ ಸಹ ಹಾಕಿದ್ದರು. ಬ್ಯೂಟಿಷಿಯನ್ ವೃತ್ತಿ ನಡೆಸುತ್ತಿದ್ದ ಈಕೆ ಗಂಡ ಸಂತೋಷ್‌ನಿಂದ ಬೇರೆಯಾಗಿ ಜೀವನ ನಡೆಸುತ್ತಿದ್ದರು. ಈ ನಡುವೆ ನಾಲ್ಕು ವರ್ಷದ ಆಕೆಯ ಮಗು ಅನಾರೋಗ್ಯದಿಂದ ಸಾವಿಗೀಡಾಯಿತು. ಹೀಗೆ ವೈಯಕ್ತಿಕ ಜೀವನದ ನೋವುಗಳು, ಹಣಕಾಸಿನ, ಕಷ್ಟಗಳು ಹಾಗೂ ಅಭದ್ರತೆಯ ಬದುಕಿನ ಬವಣೆಗಳಲ್ಲಿದ್ದ ಪೂರ್ವಿಯನ್ನು ನವೆಂಬರ್ 1ನೇ ತಾರೀಖು ಲಕ್ಷ್ಮೀ ಹಾಗೂ ಉಷಾ ಎಂಬುವರು ಫೋನ್ ಮೂಲಕ ಸಂಪರ್ಕಿಸಿದ್ದಾರೆ. ಒಂದು ಮದುವೆಗೆ ವಧುವಿಗೆ ಮೇಕಪ್ ಮಾಡಲು ಬರುವಂತೆ ಒಪ್ಪಿಸಿ ನಂತರ ಮನೆಗೆ ಬಂದು ಒಂದು ಸಾವಿರ ರೂಪಾಯಿ ಅಡ್ವಾನ್ಸ್ ಹಣ ನೀಡಿದ್ದಾರೆ. ನವೆಂಬರ್ 13ರಂದು ತಾವೇ ಟಾಟಾ ಸುಮೋದಲ್ಲಿ ಬಂದು ಕರೆದುಕೊಂಡು ಹೋಗಿ ನಂತರ ಮೇಕಪ್ ಕೆಲಸ ಮುಗಿದನಂತರ ಮನೆಗೆ ಹಿಂತಿರುಗಿ ಡ್ರಾಪ್ ಸಹ ನೀಡುವುದಾಗಿ ಹೇಳಿ ಹೋಗಿದ್ದಾರೆ.

ಅದರಂತೆ ನವೆಂಬರ್ 13ರ ಬೆಳಗ್ಗೆ ರೆಡಿಯಾಗಿ ಕಾದಿದ್ದ ಪೂರ್ವಿಯನ್ನು ಮಾಳವಿಕಾ ಟೀಂನ ಲಕ್ಷ್ಮೀ ಹಾಗೂ ಉಷಾ ಎಂಬ ಹೆಂಗಸರು ಬಂದು ಕಾರ್‌ನಲ್ಲಿ ಕರೆದುಕೊಂಡು ಸೀದಾ ಅಬ್ಬಾಯಿ ನಾಯ್ಡು ಸ್ಟುಡಿಯೋಗೆ ತಂದಿಳಿಸಿದ್ದಾರೆ. ಆ ಯುವತಿ 'ಇಲ್ಲಿಗ್ಯಾಕೆ ಕರೆದುಕೊಂಡು ಬಂದಿರಿ?' ಅಂತ ಕೇಳಿದಾಗ ಆ ಸುಳ್ಳು ಬುರುಕಿ ಲಕ್ಷ್ಮಿ-ಉಷಾ 'ನಿನಗೆ ಮೇಕಪ್ ಕೆಲಸ ಇರೋದು ಇಲ್ಲೇ' ಅಂದಿದ್ದಾರೆ.


ಆ ಯುವತಿ ಕೂತಿದ್ದು, ನಿಂತಿದ್ದು ಓಡಾಡಿದ್ದನ್ನೆಲ್ಲಾ ಕ್ಯಾಮರಾದಲ್ಲಿ ಶೂಟ್ ಮಾಡಿಕೊಳ್ಳಲು ಅವರು ಶುರು ಮಾಡಿದ್ದಾಗ ಪೂರ್ವಿಗೆ ಇದೇನೆಂಬ ಅನುಮಾನ ಬಂದಿದೆ. ನಂತರ ಲಕ್ಷ್ಮೀ-ಉಷಾ ಎಂಬ ವಂಚಕಿಯರು ಪೂರ್ವಿಯನ್ನು ಸ್ಟುಡಿಯೋದೊಳಗೆ ಕರೆದೊಯ್ದು ನಿಲ್ಲಿಸಿದಾಗ ಕಂಡದ್ದು

ಇಡೀ ಕರ್ನಾಟಕದ ಎಲ್ಲರ ಸಂಸಾರ ತಾಪತ್ರಯಗಳೆಲ್ಲಾ ತನ್ನ ತಲೆ ಮೇಲೆ ಬಿದ್ದಿದೆಯೇನೋ ಎಂಬಂತೆ ಪೋಜು ಕೊಡುವ ಮಾಳವಿಕ!

ಜೊತೆಗೆ ಪಕ್ಕದಲ್ಲಿ ಬಿಟ್ಟು ಹೋಗಿದ್ದ ಕುಡುಕ ಗಂಡ ಸಂತೋಷನೂ ಕೂತಿದ್ದ! ಏನಾಗಿತ್ತೆಂದರೆ ತನ್ನ ಪತ್ನಿಗೆ ಸದಾ ಕಿರುಕುಳ ನೀಡುತ್ತಿದ್ದ ಸಂತೋಷ್ ಹೋಗಿ ಮಾಳವಿಕಾಗೆ ತಾನೇ ನೊಂದವನಂತೆ ತೋರಿಸಿಕೊಂಡು 'ಜಟಕಾ ಬಂಡಿ' ಪ್ರೋಗ್ರಾಂಗೆ ಪತ್ನಿ ಪೂರ್ವಿಯನ್ನು ಕರೆಸಲು ಹೇಳಿಕೊಟ್ಟಿದ್ದ. ಆಕೆಯ ವಿಳಾಸ ಫೋನ್ ನಂಬರ್‌ನ್ನೂ ನೀಡಿದ್ದ. ಇದನ್ನು ನೋಡಿ ಶಾಕ್ ಆದ ಪೂರ್ವಿ ಸ್ಟುಡಿಯೋದಿಂದ ಹೊರಬರಲು ಯತ್ನಿಸಿದಾಗ ಮಾಳವಿಕಾ ಟೀಂ ಆಕೆಯನ್ನು ಬೆದರಿಸಿ, ಹೊಡೆದು ಕ್ಯಾಮರಾದೆದುರು ಕೂರಿಸಿದೆ. ಹೆದರಿದ ಆ ಯುವತಿ ವಿಧಿಯಿಲ್ಲದೆ ತಮ್ಮ ಸಂಸಾರದ ವಿಚಾರವನ್ನು ಕೊಂಚ ಹೇಳಿಕೊಂಡಿದ್ದಾಳೆ. ಸಂತೋಷನೂ ಬಾಯಿಗೆ ಬಂದ ಕೀಳು ಮಾತನಾಡಿದ್ದಾನೆ. ಅದು ಕೊನೆಗೆ ವಾಗ್ವಾದವಾಗಿ ಬೆಳೆದು ಬೈಗುಳಗಳಾದಾಗ



'..ಜಟಕಾ ಬಂಡಿಯಲ್ಲಿ....' ಗಂಡ ಹೆಂಡತಿಯನ್ನು ಹೊಡೆದಾಟಕ್ಕೆ ಹಚ್ಚುವ ಮಾಳವಿಕಾ



ಮಾಳವಿಕಾಗೆ ಟಿಆರ್‌ಪಿ ಸಿಗುವ ನೆಮ್ಮದಿ. ಆದರೆ ಅಷ್ಟು ಸಾಕೆ?

ಕೊಂಚ ಆಕ್ಷನ್ ಬೇಡವೆ?

ಹಾಗಾಗಿ ಮಾಳವಿಕಾ ಟೀಂನವರು ಸಂತೋಷ್‌ಗೆ ಪ್ರಚೋದನೆ ಕೊಟ್ಟು ಆತ ಸ್ಟುಡಿಯೋದಲ್ಲೇ ತನ್ನ ಅಣ್ಣನೊಂದಿಗೆ ಸೇರಿ ಆ ಯುವತಿಗೆ ಮೇಲೇರಿ ಹೋಗಿ ಮನಬಂದಂತೆ ಹೊಡೆಯುವಂತೆ ಮಾಡಿ ಅದನ್ನೆಲ್ಲಾ ತಣ್ಣಗೆ ಕ್ಯಾಮರಾದಲ್ಲಿ ಶೂಟ್ ಮಾಡಿಕೊಂಡಿದ್ದಾರೆ. ಅನಿರೀಕ್ಷಿತವಾಗಿ ಬಿದ್ದ ಏಟುಗಳಿಂದ ತತ್ತರಿಸುತ್ತಾ ಕೆಳಗೆ ಬಿದ್ದ ಪೂರ್ವಿಗೆ ಪುನಃ ಸಂತೋಷ್ ಹೋಗಿ ಎದೆಗೆ ಗುದ್ದಿದ್ದಾನೆ. ಆ ಏಟುಗಳಿಂದ ಯುವತಿ ಪ್ರಜ್ಞೆ ತಪ್ಪುವ ಸ್ಥಿತಿ ತಲುಪಿದಾಗ ಈ ಮಹಾನ್ ಕಲಾವಿದೆ ಮಾಳವಿಕ ಇನ್ನೊಬ್ಬ ವ್ಯಕ್ತಿಯನ್ನು ಕರೆಸಿ "ನಿನಗೂ ಇವನಿಗೂ ಸಂಬಂಧ ಇದೆ ಅಂತಾ ನಿನ್ನ ಗಂಡ ಹೇಳುತ್ತಿದ್ದಾನೆ. ಇದಕ್ಕೆ ನೀನೇನು ಹೇಳುತ್ತೀಯಾ?" ಅಂತಾ ಪೂರ್ವಿಗೆ ಕೇಳಿದ್ದಾಳೆ!

ಇಲ್ಲಿ ಒಂದುಕ್ಷಣ ನಿಂತು ಯೋಚಿಸಿ ಹೊಟ್ಟೆಗೆ ಅನ್ನ ತಿನ್ನುವವರು ಇಂತಾ ಪ್ರಶ್ನೆ ಕೇಳುತ್ತಾರಾ? ಅದೂ ಟೀವಿ ಕಾರ್ಯಕ್ರಮದಲ್ಲಿ? ಇಂತಾ ಪ್ರಶ್ನೆ ಕೇಳಲು ಈ ಮಾಳವಿಕಾ ಯಾರು? ಆಕೆಗೆ ಈ ಅಧಿಕಾರ ಕೊಟ್ಟವರ್‍ಯಾರು? ಕೊನೆಗೆ ಬದುಕು ಜಟಕಾ ಬಂಡಿಯೆಂಬ ಈ ನೀಚ ನಾಟಕವೆಲ್ಲಾ ಮುಗಿದ ನಂತರ ಆ ಯುವತಿಯನ್ನು ಅಬ್ಬಾಯಿ ನಾಯ್ಡು ಸ್ಟುಡಿಯೋದಿಂದ ಹೊರ ಕಳಿಸಿ ಮಾಳವಿಕಾ, ಲಕ್ಷ್ಮಿ, ಉಷಾ ಎಲ್ಲಾ ನಾಪತ್ತೆಯಾಗಿದ್ದಾರೆ.

ವಿನಾಕಾರಣ ಏಟು ತಿಂದು ಅಸಹ್ಯ ಹುಟ್ಟಿಸುವ ಮಾಳವಿಕಾ ಪ್ರಶ್ನೆಗಳಿಗೆಲ್ಲಾ ಟಿವಿ ಕ್ಯಾಮೆರಾದೆದುರು ಹಾಗೂ ಗ್ಯಾಲರಿಯಲ್ಲಿದ್ದ ಜನರೆದುರು ಮುಜುಗರ, ನೋವಿಗೀಡಾದ ಪೂರ್ವಿ ಏಕಾಂಗಿಯಾಗಿ ತನ್ನ ಊರಿಗೆ ಹಿಂತಿರುಗಿದ್ದಾರೆ.

ಕೊನೆಗೆ ಈ ಸುದ್ದಿ ತಿಳಿದ ಬೆಂಗಳೂರಿನ ವಕೀಲ ಕಾಶಿ ಎಂಬುವರು ಜೀ ಟಿವಿಯಲ್ಲಿ ಮಾಳವಿಕಾಳ ಈ ಗಬ್ಬು ಜಟಕಾ ಬಂಡಿ ಎಪಿಸೋಡ್ ಟೆಲಿಕಾಸ್ಟ್ ಆಗದಂತೆ ತಡೆಯಾಜ್ಞೆ ತಂದಿದ್ದಾರೆ.

ಈಗ ಮಾಳವಿಕಾ ಲಕ್ಷ್ಮಿ-ಉಷಾ ಎಂಬ ಮನುಷ್ಯತ್ವವಿಲ್ಲದ, ಜನರ ಸಂಸಾರದ ವಿಚಾರ ಮಾರಿಕೊಂಡು ಜೀವನ ನಡೆಸುತ್ತಿರುವ ಈ ಹರಾಮಲಂಬಿ ಹೀನರ ವಿರುದ್ಧ ಪೂರ್ವಿ ಪೊಲೀಸರಿಗೆ ದೂರು ಸಲ್ಲಿಸುವ ಸಾಧ್ಯತೆಗಳಿವೆ.

■ ವರದಿಗಾರ

ಸೆಟ್‌ನಲ್ಲಿ ಮಾಳವಿಕಾ ಎಂಬುವರು ಕುಳಿತಿದ್ದರು ನಾನು ಅವರಿಗೆ ಮೇಡಂ ನಿಮಗೆ ಮೇಕಪ್ ಮಾಡಲು ಲಕ್ಷ್ಮಿ ಎಂಬುವರು ನನ್ನನ್ನು 'ಕರೆತಂದಿದ್ದಾರೆ ಎಂದು ತಿಳಿಸಿದಾಗ ಮಾಳವಿಕಾ ರವರು ಇಲ್ಲಮ್ಮ ನನಗೆ ಮೇಕಪ್ ಮಾಡಲು ನೀವು ಬಂದಿಲ್ಲ ನಿಮ್ಮ ಸಂಸಾರದಲ್ಲಿ ತೊಂದರೆ ಇದೆ ಎಂಬುದಾಗಿ ಸಂತೋಷ್ ಎಂಬುವರು ಇಲ್ಲಿಗೆ ಬಂದಿರುವ ಕಾರಣದಿಂದ ನಿಮ್ಮನ್ನು ಕರೆಸಿಕೊಂಡಿದ್ದೇವೆ. ಇದು ಜಿ. ಕನ್ನಡ ವಾಹಿನಿಯ ಬದುಕು ಜಟಕಾ ಬಂಡಿ ಎಂಬ ಕಾರ್ಯಕ್ರಮ ಎಂದು ತಿಳಿಸಿದರು ಆಗ ನಾನು ಮಾಳವಿಕಾರಲ್ಲಿ ನನ್ನ ಮತ್ತು ನನ್ನ ಗಂಡನ ವಿಷಯವಾಗಿ ಕೋರ್ಟಿನಲ್ಲಿ ಕೇಸು ನಡೆಯುತ್ತಿದ್ದು ನನಗೆ ಜಿ. ವಾಹಿನಿಯ ಮೂಲಕವಾಗಿ ಮಾತನಾಡಲು ಇಷ್ಟವಿಲ್ಲ ಎಂದು ತಿಳಿಸಿದಾಗ ಮೇಲ್ಕಂಡ ವ್ಯಕ್ತಿಗಳಾದ ಲಕ್ಷ್ಮಿ, ಉಷಾ ಮತ್ತು ಸವಿತ ಹಾಗೂ ಸಂತೋಷ ಮತ್ತು ಅವನ ಅಣ್ಣನಾದ ಜನಾರ್ಧನ ಐದು ಜನರೂ ಏಕಾಏಕೀ ನನ್ನ ಮೇಲೆ ಹಲ್ಲೆ ಮಾಡಿದರು ಹಾಗೂ ಜೀವ ಬೆದರಿಕೆಯನ್ನು ಹಾಕಿ ನೀನು ಈಗ ಈ ಕಾರ್ಯಕ್ರಮದಲ್ಲಿ ಮಾತನಾಡದೇ ಹೋಗಲು ಸಾಧ್ಯವೇ ಇಲ್ಲ ನಿನ್ನ ಗಂಡನಿಗೆ ನಿನ್ನನ್ನು ಹೊಡೆದು ಸಾಯಿಸಲು ಹೇಳುತ್ತೇವೆ. ಎಂದು ಹೇಳುತ್ತಾ ಸ್ಟುಡಿಯೋ ಬಾಗಿಲನ್ನು ಮುಚ್ಚಿಬಿಟ್ಟರು. ನನಗೆ ಮಾನಸಿಕವಾಗಿ, ದೈಹಿಕವಾಗಿ ಹಿಂಸೆ ನೀಡುವುದರ ಜೊತೆಗೆ ನನ್ನ ಮಾನವ ಹಕ್ಕುಗಳನ್ನು ಕಿತ್ತುಕೊಂಡಿರುತ್ತಾರೆ. ನಾನು ಅವರನ್ನು ಪ್ರತಿಭಟಿಸಲು ಪ್ರಯತ್ನಿಸಿದಾಗ ಲಕ್ಷ್ಮಿ ಎಂಬುವರು ನನಗೆ ನಿನ್ನ ನೆಲಮಂಗಲದ ಬೆತ್ತನಗೆರೆಯ ಎಲ್ಲಾ ರೌಡಿಗಳು ಗೊತ್ತು ನಾನು ಒಂದು ಫೋನು ಮಾಡಿದರೆ ಸಾಕು ನಿನ್ನನ್ನು ಕೊಲ್ಲಲು ಎಂಬುದಾಗಿ ಬೆದರಿಕೆ ಹಾಕಿರುತ್ತಾರೆ. ನನಗೆ ಇಷ್ಟ ಇಲ್ಲದಿದ್ದರೂ ನನ್ನ ಅನುಮತಿ ಪಡೆಯದೇ ಜಿ. ಕನ್ನಡ ವಾಹಿನಿಯಲ್ಲಿ ಪ್ರಸಾರವಾಗುಂತ ಬದುಕು ಜಟಕಾ ಬಂಡಿ ಎಂಬ ಕಾರ್ಯಕ್ರಮದಲ್ಲಿ ಬಲವಂತಾಗಿ ನನ್ನನ್ನು ಕೂರಿಸಿ ನನ್ನ ಮಾನ ಹರಾಜು ಹಾಕುವುದರ ಮೂಲಕ ನನ್ನ ಜೀವನವನ್ನು ನಾಶ ಮಾಡಿರುತ್ತಾರೆ. ದಯಮಾಡಿ ಮೇಲ್ಕಂಡ ವ್ಯಕ್ತಿಗಳ ಮೇಲೆ ಕಾನೂನು ರೀತಿಯ ಕ್ರಮ ಕೈಗೊಳ್ಳಲು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಹಲ್ಲೆಗೆ ಪ್ರಚೋದನೆ ನೀಡಿದ ಮಾಳವಿಕಾ ವಿರುದ್ಧ ಪೋಲೀಸರಿಗೆ ದೂರು

ಜಟಕಾ ಬಂಡಿಯಲ್ಲೊಬ್ಬ ಹೆಣ್ಣುಬಾಕ ಟಿವಿ ಪತ್ರಕರ್ತ

ತಮ್ಮ ವೈಯಕ್ತಿಕ ಬದುಕಿನ ಹಾಗೂ ಸಂಸಾರದ ಕಷ್ಟಗಳನ್ನು ಹೇಳಿಕೊಳ್ಳಲು ಯಾವ್ಯಾವುದೋ ಊರುಗಳಿಂದ ಬರುವ ಹೆಣ್ಣುಮಕ್ಕಳನ್ನು ಜಟಕಾ ಬಂಡಿ ಕಾರ್ಯಕ್ರಮಕ್ಕೆ ಬಳಸಿಕೊಂಡು ಕೈತುಂಬಾ ಕಾಸು ಎಣಿಸಿಕೊಳ್ಳುವ ಜನ ಒಂದೆಡೆಯಾದರೆ....

ಅದೇ ಟೀಂನಲ್ಲಿರುವ ಇನ್ನೊಬ್ಬ ಟಿವಿ ಪತ್ರಕರ್ತ ಅಂತಹ ನೊಂದ ಮಹಿಳೆಯರನ್ನೇ ಹಿಡಿದು ಏನೇನೊ ಆಮಿಷ ತೋರಿಸಿ ತನ್ನ ತೀಟೆ ತೀರಿಸಿಕೊಳ್ಳುತ್ತಿರುವ ಬಗ್ಗೆ ವಿಪರೀತ ಆನಿಸುವಷ್ಟು ದೂರುಗಳು ಕೇಳಿಬರುತ್ತಿವೆ. ಹೊನ್ನಾವರ ಮೂಲದ ಈ ಪತ್ರಕರ್ತ ಈ ಹಿಂದೆ ಕಾರವಾರದಲ್ಲಿ ಇಂತದ್ದೇ ಘನಕಾರ್ಯ ಮಾಡಿ ಜನರಿಂದ ಸಖತ್ ಒದೆ ತಿಂದು ಬಂದಿದ್ದಾನೆ. ಅಲ್ಲಿ ಇವನ ವಿರುದ್ಧ ಪೊಲೀಸ್ ಕೇಸ್‌ಗಳೂ ಇವೆ.

ಜಟಕಾ ಬಂಡಿ ಹತ್ತಲು ಬರುವ ಹೆಂಗಸರು ಆಕಸ್ಮಾತ್ ನಿಗದಿಯಾದ ದಿನ ಶೂಟಿಂಗ್ ಮುಗಿಯದಿದ್ದಾಗ ಈ ನೀಚ ಅವರನ್ನು ಯಾವುದಾದರೂ ಹೋಟೆಲ್ ರೂಂಗೆ ಕರೆದೊಯ್ದು ವಸತಿ ವ್ಯವಸ್ಥೆ ಮಾಡಿಕೊಡುತ್ತಾನೆ. ಹಾಗೆ ಮಾಡುವಾಗ ಕೆಲವರ ಕಷ್ಟ-ಹತಾಶೆಗಳನ್ನೇ ಬಳಸಿಕೊಂಡು ಸಂಜೆ ಲಾಡ್ಜ್‌ಗೆ ಹೋಗಿ ನೆಲೆಸುವ ಅಭ್ಯಾಸ ಮಾಡಿಕೊಂಡಿದ್ದಾನೆ. ಟಿವಿ ಪತ್ರಕರ್ತರ ನಡುವೆ ಇವನ ದುಷ್ಟ ಕೆಲಸಗಳ ಮೆಗಾ ಸೀರಿಯಲ್‌ನಷ್ಟು ಪ್ರಕರಣಗಳು ಹರಿದಾಡುತ್ತಿವೆ. ಜೊತೆಗೆ ಹಣ ವಸೂಲಿಯ ಡೀಲುಗಳೂ ನಡೆಯುತ್ತಿವೆ.

ಹೀಗೆ ಬೇಲಿಯೆ ಎದ್ದು ಹೊಲ ಮೇಯುತ್ತಿರುವ ಪತ್ರಕರ್ತನ ಹೆಸರು... ಜೆಬಿ!

"ನೋಡಿ, ಪಾಕಿಸ್ತಾನ ಸಣ್ಣ ದೇಶ, ನಮ್ಮದು ದೊಡ್ಡ ದೇಶ ಅಂದ್ರಿ. ಸಣ್ಣ ಕಾಡಿನ ಹುಲಿ ಸಣ್ಣಗೆ ದೊಡ್ಡ ಕಾಡಿನ ಹುಲಿ ದೊಡ್ಡದಾಗಿರಲ್ಲ, ಎರಡೂ ಸಮಬಲಕ್ಕೆ ಇರತವೆ. ಇಬ್ಬರ ಕೈಲೂ ಅಣುಬಾಂಬು ಇರೋದ್ರಿಂದ ಪಾಕಿಸ್ತಾನದಷ್ಟೇ ನಮ್ಮದೂ ಹೋಗುತ್ತೆ, ಬಾಯಿಬಿಟ್ರೆ ಸರ್ವನಾಶ ಮಾತಾಡ್ತಿರಲ್ಲ ಹ್ಯಂಗೆ?"

"ರಿ ಪದೇಪದೇ ನಮ್ಮ ಸೈನಿಕರ ಕೆಣಕಿ ಸಾಯಿಸ್ತಾರಲ್ಲ ಅದ ನೋಡಿಕೊಂಡು ಸುಮ್ಮನಿರಕ್ಕಾಗತ್ತೇನ್ರಿ. ಅದ್ಕೆ ನಾನು ಪ್ರಧಾನಿನ ಷಂಡ ಅಂತ ಕರದದ್ದು."

"ಷಂಡ ಅಂತ ಕರೀಬೇಕಾದ್ರೆ ನೀವು ಪ್ರಧಾನಿ ಸಂಗ ಮಾಡಿದ್ರ? ಅವ್ರುರಿಗೂ ಮಕ್ಕಳಿದಾವೆ. ಬೇಕಿದ್ರೆ ನಿಮ್ಮ ವಾಜಪೇಯಿನ ಹಾಗೆ ಕರೀಬವುದು. ಸಜ್ಜನರನ್ನೆಲ್ಲಾ ಷಂಡ ಅನ್ನದಾದ್ರೆ ನಿಮ್ಮಲ್ಲಿ ಎಷ್ಟು ಜನ ಇದಾರೆ. ಒಂದು ವೇಳೆ ಮದುವೆ ಆಗದೆ ಇರೋರನ್ನ ಷಂಡ ಅನ್ನದಾದ್ರೆ ನಿಮ್ಮಲ್ಲಿ ಒಂದು ಡಜೆನ್ನವ್ರುರೆ."

"ರೀ ಏನೇನೋ ಹೇಳ್ತಿರಲ್ರೀ ಸರಿಯಾಗಿ ಮಾತಾಡ್ರಿ."


"ಸಾರಿ ಸಾರ್ ಈಗ ಪಾಕಿಸ್ತಾನ ವಶಪಡಿಸಿಕೊಂಡ ಮೇಲೆ ಏನು ಮಾಡ್ತಿರಿ?"

"ಏನು ಮಾಡ್ತೀರಿ ಅಂದ್ರೆ ನಮ್ಮ ಭಾರತದ ಜೊತೆ ಸೇರಿಸಿಕೊಳ್ತೀವಿ."

"ಅದ್ಭುತವಾದ ಕನಸು ಕಂಡ್ರಿ. ಪಾಪ ಆ ಪಾಕಿಸ್ತಾನ ಭಾರತದಿಂದ ಬೇರೆಯಾದಾಗಿನಿಂದ್ಲೂ ನೆಮ್ಮದಿಯಾಗಿಲ್ಲ. ಅಲ್ಲಿ ಪ್ರಧಾನಿ ಆಡಳಿತನೆ ಬೇರೆ, ಮಿಲಿಟ್ರಿ ಆಡಳಿತನೆ ಬೇರೆ. ಇನ್ನು ಉಗ್ರಗಾಮಿಗಳ ಆಡಳಿತನೆ ಬೇರೆ. ಈ ಹಡ ಮೂರು ಸೈತಾನ್ ತುಕಡಿನ ಭಾರತಕ್ಕೆ ಸೇರಿಸಿಕೊಂಡು ನಿಮ್ಮ ಪಾರ್ಟಿ ಕೊಳ್ಳಿ ದೆವ್ವಗಳೂ ಸೇರಿಕೊಂಡ್ರೆ ಮುಗದೆ ಹೋಯ್ತು ಸಾರ್. ಪ್ರತಿದಿನ ಹೆಣದ ರಾಶಿ ನೋಡಬವುದು. ಅದ್ರ ಒಂದು ವಿಶೇಷ ಏನು ಗೊತ್ತೆ ಸಾರ್?"

"ಏನು?"

"ಆ ಹೆಣದ ರಾಶಿಲಿ ಒಂದೇ ಒಂದು ಚೆಡ್ಡಿ ಹೆಣ ಸಿಗಲ್ಲ, ಇಂಡಿಯಾದಲ್ಲಿ ಈವರಗೂ ನಡೆದ ಗಲಭೇಲಿ ಗಲಭೆಗೆ ಕಾರಣವಾದ ಚೆಡ್ಡಿಗಳು ಒಂದೂ ಸತ್ತಿಲ್ಲ, ಇದೊಂದು ಗಿನ್ನಿಸ್ ದಾಖಲೆ ಮಾಡುತ್ತೆ ಸಾರ್. ನಿಮ್ಮ ಹಿಡಿಸೊಗ್ಗದಲ್ಲೇ ನೋಡಿ ಎಷ್ಟು ಸೇಫಾಗವ್ರುರೆ ಅಲ್ವ ಸಾರ್. ಹುಲೋ ಹುಲೋ ಹುಲೋ? ಥೂತ್ತೇರಿ!!! ■




ಜೀವರಾಜ್‌ನ ಕೀಚಕ ಪುರಾಣ

ಜೀವರಾಜ್ ಮಾಮೂಲಿ ಆಸಾಮಿಯೇನಲ್ಲ. ಬಿಜೆಪಿ ಆಡಳಿತದಲ್ಲಿ ಕ್ಯಾಬಿನೆಟ್ ದರ್ಜೆಯ ಮುಖ್ಯ ಸಚೇತಕರಾಗಿದ್ದವರು, ಹಾಲಿ ಶೃಂಗೇರಿ ಕ್ಷೇತ್ರದ ಜನಪ್ರತಿನಿಧಿಯಾಗಿ 'ಜನಸೇವೆ'ಯಲ್ಲಿ ನಿರತರಾಗಿದ್ದಾರೆ. ಇಂಥಾ ಗಣ್ಯ ವ್ಯಕ್ತಿಗೆ ತಮ್ಮದೇ ಪಕ್ಷದ ಯಃಕಶ್ಚಿತ್ ಕಾರ್ಯಕರ್ತನೊಬ್ಬ ಜೀವಬೆದರಿಕೆ ಹಾಕುವುದೆಂದರೇನು? ಒಬ್ಬ ಹೆಣ್ಣುಮಗಳ ಬದುಕನ್ನು ನಾಶಮಾಡಿ, ಅವಳ ಮಾನವನ್ನು ಹರಾಜು ಹಾಕಿದ ಇದೇ ಆಸಾಮಿ ಈಗ ತನ್ನ ಮಾನಹಾನಿ ಆಗುತ್ತಿದೆಯೆಂದು ಕಂಡಕಂಡವರಲ್ಲಿ ಅಲವತ್ತುಕೊಳ್ಳುತ್ತಿದ್ದಾನೆ

ರಾಮಭಕ್ತರ ಪಕ್ಷದ ಮತ್ತೊಬ್ಬ ಘಟಾನುಘಟಿ, ಮಾಜಿ ಸಚೇತಕ ಹಾಗೂ ಶೃಂಗೇರಿ ಕ್ಷೇತ್ರದ ಹಾಲಿ ಶಾಸಕ ಜೀವರಾಜ್ ಎಂಬ ಆಸಾಮಿಯ ಕೀಚಕ ಪುರಾಣ ಇದೀಗ ಬಯಲಾಗಿದೆ. ಈ ಪುರಾಣ ಬಯಲಾಗಿ 'ಪತ್ರಿಕೆ'ಗೆ ಲಭ್ಯವಾಗಿದ್ದು ಸಹ ಜೀವರಾಜನ ಪಂಚರಂಗಿ ನಾಟಕದಿಂದಲೇ ಎಂಬುದು ಮಾತ್ರ ವಿಚಿತ್ರ ಸತ್ಯ.

ಈ ಪಂಚರಂಗಿ ನಾಟಕ ಆರಂಭವಾಗುವುದು ಶಾಸಕರ ಭವನದ ಕೊಠಡಿ ಸಂಖ್ಯೆ 134ರಿಂದ. ಶೃಂಗೇರಿ ಶಾಸಕ ಜೀವರಾಜ ಈ 134ನೇ ಕೊಠಡಿಯಲ್ಲಿ ವಾಸ್ತವ್ಯವಿರು



ಅರಣ್ಯ

ಶೃಂಗೇರಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಡಿ ಬರುವ ಎನ್.ಆರ್.ಪುರ ತಾಲೂಕಿನ ಮುಡಬೂರು ಗ್ರಾಮದ ಫಾಸಲೆಯ ಯಾರನ್ನೇ ಕೇಳಿದರೂ ಈ ಕೀಚಕ ಎಂಎಲ್‌ಎ ಬಗ್ಗೆ ನಖಶಿಖಾಂತ ಉರಿದುಬೀಳುತ್ತಾರೆ. ಇವನ ಹಾದರದ ಕತೆಯನ್ನು ಪುಂಖಾನುಪುಂಖವಾಗಿ ಬಿಚ್ಚಿಡುತ್ತಾರೆ. ಅರಣ್ಯ ಎಂಬ ನತದೃಷ್ಟ ಯುವತಿಯ ಮೇಲೆ ಈ ಜೀವರಾಜ್ ನಡೆಸಿದ ಅಮಾನವೀಯ ಅತ್ಯಾಚಾರ, ದೌರ್ಜನ್ಯದ ಬಗ್ಗೆ ಇಲ್ಲಿನ ಜನರಲ್ಲಿ ಆಕ್ರೋಶ ಮಡುಗಟ್ಟಿದೆ. ಆ ಊರಿನ ಜನರ ಬಾಯಲ್ಲಿ ಜನಜನಿತವಾಗಿರುವ ಈ ದುರಂತ ಕತೆ ಕೇಳಿ.

ಮಡಬೂರು ಗ್ರಾಮದ ಕೇಸಕ್ಕಿ ಎಂಬ ಹಳ್ಳಿಯ ಸಂಪತ್‌ಕುಮಾರ್ ಬೇಸಾಯ ಮಾಡಿ ಜೀವನ ಸಾಗಿಸುವ ರೈತ. 2010ರ ಮೇ ತಿಂಗಳಿನಲ್ಲಿ ಒಂದು ದಿನ ತಮ್ಮ ಜಮೀನಿನಲ್ಲಿ ಬೇಸಾಯ ಚಟುವಟಿಕೆ ನಡೆಸಲು ತೊಂದರೆ ಕೊಡುತ್ತಿರುವ ಅರಣ್ಯ ಇಲಾಖೆಯವರಿಂದ ರಕ್ಷಣೆ ಕೋರಿ ಸಂಪತ್‌ಕುಮಾರ್ ಮನೆಯವರು ಕ್ಷೇತ್ರದ ಶಾಸಕ ಜೀವರಾಜ್‌ನಿಗೆ ಫೋನಾಯಿಸಿದರು. ಹೀಗೆ ನೇರವಾಗಿ ಫೋನು ಮಾಡಲು ಕಾರಣವೆಂದರೆ ಸಂಪತ್‌ಕುಮಾರ್‌ರ ಹತ್ತಿರದ ಬಂಧು ಮನು ಎಂಬುವವರು ಬಿಜೆಪಿ ಕಾರ್ಯಕರ್ತರಾಗಿದ್ದು


ಶಾಸಕರ ಭವನ ದುರ್ಬಳಕೆ

ಜೀವರಾಜನಿಂದ ಕಂಪ್ಲೇಂಟ್ ತೆಗೆದುಕೊಂಡ ಪೊಲೀಸರು ಮಾಡಿದ ಒಂದೇ ಕೆಲಸವೆಂದರೆ ಅರಣ್ಯ ಭಾವ ಮನುವಿಗೆ ಬೆದರಿಕೆ ಹಾಕಿ ರೂಂ ನಂ 134ಕ್ಕೆ ಕರೆಸಿಕೊಂಡಿದ್ದು. ಆ ಸಂದರ್ಭದಲ್ಲಿ ವಿಧಾನಸೌಧ ಠಾಣೆ ಇನ್‌ಸ್ಪೆಕ್ಟರ್ ಅಕ್ಷಯ್‌ಕುಮಾರ್ ಮತ್ತು ಅದೇ ಠಾಣೆಯ ಪೇದೆ ರವಿ ಎಂಬುವವರು ಜೀವರಾಜ್ ಜೊತೆಗಿದ್ದರು. ಆಶ್ಚರ್ಯವೆಂಬಂತೆ ಈ ಕೇಸಿನೊಂದಿಗೆ ಯಾವರೀತಿಯ ಸಂಬಂಧವೂ ಇಲ್ಲದಿದ್ದ ಹೊಸಕೋಟೆಯ ಇನ್‌ಸ್ಪೆಕ್ಟರ್ ಕಾಶಿ ಕೂಡ ಅಂದು ಜೀವರಾಜನ ಸೇವೆಗಾಗಿ ಅಲ್ಲಿ ಹಾಜರಿದ್ದ. ಈ ಕಾಶಿ ಸ್ವತಃ ತೀರ್ಥಹಳ್ಳಿ ತಾಲೂಕಿನವನಾಗಿದ್ದು, ಈ ಹಿಂದೆ ಚಿಕ್ಕಮಗಳೂರು ಜಿಲ್ಲೆಯಲ್ಲಿ ಡ್ಯೂಟಿ ಮಾಡಿದ್ದ. ಆಗಿನಿಂದಲೂ ಜೀವರಾಜ್‌ಗೂ ಈತನಿಗೂ ಎಲ್ಲಿಲ್ಲದ ನಂಟು.


ಹೀಗೆ ಕೇಸಿನ ಭಯ ತೋರಿಸಿ ಒತ್ತಡ ಹೇರಿದ ಈ ದುಷ್ಟಕೂಟ ಮನು ಅವರಿಂದ ಒಂದು ತಪ್ಪೊಪ್ಪಿಗೆ ಹೇಳಿಕೆಗೆ ಸಹಿ ಹಾಕಿಸಿಕೊಂಡರು. ಅರಣ್ಯಳನ್ನು ಕರೆತಂದು ಅವಳಿಂದಲೂ ಮುಚ್ಚಳಿಕೆ ಬರೆಸಿಕೊಟ್ಟರೆ ಈ ಕೇಸಿನಲ್ಲಿ ಬಿ ರಿಪೋರ್ಟ್ ಹಾಕಿ ಕೇಸನ್ನು ಕ್ಲೋಸ್ ಮಾಡುವುದಾಗಿಯೂ, ಇಲ್ಲವಾದರೆ ನಿಮಗ ಒಂದು ಗತಿ ಕಾಣಿಸುವುದಾಗಿಯೂ ಬೆದರಿಕೆ ಹಾಕಿದರು. ಈ ವಿಷಯಕ್ಕೆ ಸಂಬಂಧಿಸಿ ಪೊಲೀಸ್ ಅಧಿಕಾರಿಗಳು ಮನು ಜೊತೆಗೆ ನಡೆಸಿದ ಫೋನ್ ಸಂಭಾಷಣೆಯ ರೆಕಾರ್ಡ್ ತೆಗೆಸಿದರೆ ಈ ಕೇಸಿನ ಒಳಮರ್ಮ ಬಯಲಾಗುತ್ತದೆ.

ಫೋನ್‌ಕಾಲ್ ಸಂಪತ್‌ಕುಮಾರ್‌ನ ಸಂಸಾರವನ್ನು ಕಣ್ಣೀರಿನಲ್ಲಿ ಮುಳುಗಿಸಿಬಿಡುತ್ತದೆ ಎಂದು ಯಾರೂ ಊಹಿಸಿರಲಿಲ್ಲ.


ಸಂಪತ್ ಕುಮಾರ್‌ಗೆ ಸುಮಾರು 22 ವರ್ಷ ವಯಸ್ಸಿನ ಕುಮಾರಿ ಅರಣ್ಯ ಎಂಬ ಮಗಳಿದ್ದಾಳೆ. ಆಗ ಅವಳ ವಯಸ್ಸು ಸುಮಾರು 18 ವರ್ಷ. ಜಮೀನು ದಾಖಲೆಪತ್ರದ ನೆಪ ಬಳಸಿಕೊಂಡ ಜೀವರಾಜ ಆ ನಂಬರಿಗೆ ಫೋನ್ ಮಾಡಲು ಶುರು ಮಾಡಿಕೊಂಡ. ಹೀಗೆ ಒಂದು ದಿನ ಫೋನ್‌ನಲ್ಲಿ ಸಿಕ್ಕ ಅರಣ್ಯಳೊಂದಿಗೆ ಮಾತನಾಡಿದ, ಈ




ಹೆಚ್.ಎಂ.ಮನು




ಬಿ.ಎಸ್ ಅಶೀಶ್ ಕುಮಾರ್



ಜೆ.ಜೆ.ನಾಗರಾಜ್





ಇನ್‌ಸ್ಪೆಕ್ಟರ್ ವಿರುದ್ಧ ಅರಣ್ಯ ನೀಡಿರುವ ದೂರು

ತ್ತೇನೆಂದು ಹೇಳಿಕೊಂಡು ತಾರೀಖು 20/08/2013ರಂದು ವಿಧಾನಸೌಧ ಪೊಲೀಸ್ ಠಾಣೆಗೆ ಒಂದು ಫಿರ್ಯಾದು ಕೊಟ್ಟಿದ್ದಾನೆ. ಚಿಕ್ಕಮಗಳೂರು ಜಿಲ್ಲೆ ನರಸಿಂಹರಾಜಪುರದ ಮನು ಎಂಬ ಬಿಜೆಪಿ ಕಾರ್ಯಕರ್ತ ಅರಣ್ಯ ಎಂಬ ಹುಡುಗಿ ಯನ್ನು ಮುಂದಿಟ್ಟುಕೊಂಡು ತನ್ನನ್ನು ಬ್ಲ್ಯಾಕ್‌ಮೇಲ್ ಮಾಡುತ್ತಿದ್ದಾನೆ ಮತ್ತು ಜೀವ ಬೆದರಿಕೆ ಹಾಕಿದ್ದಾನೆ ಎಂಬುದು ಅದರ ಸಾರಾಂಶ.

ಜೀವರಾಜ್ ಮಾಮೂಲಿ ಆಸಾಮಿಯೇನಲ್ಲ, ಬಿಜೆಪಿ ಆಡಳಿತದಲ್ಲಿ ಕ್ಯಾಬಿನೆಟ್ ದರ್ಜೆಯ ಮುಖ್ಯ ಸಚೇತಕ ರಾಗಿದ್ದವರು, ಹಾಲಿ ಶೃಂಗೇರಿ ಕ್ಷೇತ್ರದ ಜನಪ್ರತಿನಿಧಿಯಾಗಿ 'ಜನಸೇವೆ'ಯಲ್ಲಿ ನಿರತರಾಗಿದ್ದಾರೆ. ಇಂಥಾ ಗಣ್ಯ ವ್ಯಕ್ತಿಗೆ ತಮ್ಮದೇ ಪಕ್ಷದ ಯಃಕಶ್ಚಿತ್ ಕಾರ್ಯಕರ್ತನೊಬ್ಬ ಜೀವ ಬೆದರಿಕೆ ಹಾಕುವುದೆಂದರೇನು? ಅದರಲ್ಲೂ ಅರಣ್ಯ ಎಂಬ ಹುಡುಗಿಯನ್ನು ಮುಂದಿಟ್ಟುಕೊಂಡು ಬ್ಲ್ಯಾಕ್‌ಮೇಲ್ ಮಾಡುತ್ತಿದ್ದಾನೆಂಬ ಆರೋಪದ ಹಿನ್ನೆಲೆಯೇನು? ತನ್ನದೇ ಕ್ಷೇತ್ರದ ವ್ಯಾಪ್ತಿಯ ಎನ್‌ಆರ್ ಪುರದ ವ್ಯಕ್ತಿಯ ಮೇಲೆ ಸ್ಥಳೀಯ ಠಾಣೆಯಲ್ಲಿ ದೂರು ದಾಖಲಿಸದೆ, ಶಾಸಕರ ಭವನದಲ್ಲಿ ವಾಸ್ತವ್ಯ ಇರುವುದಾಗಿ ಹೇಳಿ ವಿಧಾನಸೌಧ ಠಾಣೆಗೆ ದೂರು ನೀಡಲು ಕಾರಣವೇನು? ಎಂಬ ಕುತೂಹಲಕಾರಿ ಪ್ರಶ್ನೆಗಳು ಯಾರಿಗಾದರೂ ಹುಟ್ಟುವುದು ಸಹಜವೇ.

ಅಷ್ಟು ಮಾತ್ರವಲ್ಲ; ಈ ಎಲ್ಲ ಗುಮಾನಿಗಳನ್ನು ಪುಷ್ಟೀಕರಿಸುವ ಇನ್ನೊಂದು ಬಲವಾದ ಅಂಶವೂ ಇದೆ. ಒಬ್ಬ ಮಾಜಿ ಸಚೇತಕ- ಹಾಲಿ ಎಂಎಲ್‌ಎಯಿಂದ ಜೀವ ಬೆದರಿಕೆ ಕಂಪ್ಲೈಂಟ್ ಬಂದು 3 ತಿಂಗಳಾಗಿದ್ದರೂ ಕೂಡ ವಿಧಾನಸೌಧ ಪೊಲೀಸರು ಇದುವರೆಗೂ ಆರೋಪಿಗಳನ್ನು ಬಂಧಿಸಲು ಯಾವುದೇ ಕ್ರಮ ಕೈಗೊಂಡಿಲ್ಲವೆಂದರೆ ಏನರ್ಥ? ಹೀಗೆ ನಾನಾ ಗೊಂದಲದ ಗೂಡಾಗಿರುವ ಈ ಪ್ರಕರಣದಲ್ಲಿ ಏನೋ ಭಾರೀ ಮಸಲತ್ತಿದ್ದಂತಿದೆ ಎಂಬ ಗುಮಾನಿಯಿಂದ ಈ ಪ್ರಕರಣದ ಬೆನ್ನು ಹತ್ತಿದ ಲಂಕೇಶ್ ತನಿಖಾ ತಂಡಕ್ಕೆ ಕ-ಮಲ ಶಾಸಕ ಜೀವರಾಜ್‌ನ ಕೀಚಕ ವೃತ್ತಾಂತ ಅನಾವರಣಗೊಂಡಿದೆ.

ಜೀವರಾಜ್‌ಗೆ ಹತ್ತಿರದವರಾಗಿದ್ದರು. ಅಲ್ಲದೆ ಜೀವರಾಜನ ಪತ್ನಿಯ ಅಜ್ಜಿಯ ಮನೆ ಇವರ ನೆರೆಯಲ್ಲೇ ಇರೋದರಿಂದ ಜೀವರಾಜ್ ಆಗಾಗ ತಮ್ಮ ನೆಂಟರ ಮನೆಗೆ ಬರುತ್ತಿದ್ದುದೂ ಉಂಟು. ಹೀಗಾಗಿ ತಮ್ಮ ಕೆಲಸ ಸಲೀಸಾಗಿ ಆಗುತ್ತದೆಂದು ಭಾವಿಸಿ ಫೋನ್ ಕಾಲ್ ಮಾಡಿದ್ದರು. ಆದರೆ ಆ ಒಂದು

ಧರ್ಮಸ್ಥಳದಲ್ಲಿ ಆಣೆ ಮಾಡದೆ ಪರಾರಿ!

ತನ್ನ ಕೀಚಕ ಕೃತ್ಯದ ಬಗ್ಗೆ ಪ್ರಶ್ನೆ ಮಾಡಿದ ಅರಣ್ಯಳ ಬಂಧುಗಳು ಹಾಗೂ ಹಿತೈಷಿಗಳನ್ನೇ ಬಾಯಿಬಡಿವ ಜೀವರಾಜ ಬಲಿಪಶುಗಳ ಮೇಲೆ ಪ್ರತ್ಯಾರೋಪ ಹೊರಿಸಲು ಶುರುಮಾಡಿದ. ಇಂಥಾ ಸಂದಿಗ್ಧ ಸನ್ನಿವೇಶದಲ್ಲಿ ಹುಡುಗಿಯ ಬಂಧುಗಳು ಹೊಸ ಬೇಡಿಕೆಯನ್ನು ಮುಂದಿಟ್ಟರು. "ಆ ಹುಡುಗಿಯನ್ನು ತಾನು ಮುಟ್ಟಿಯೇ ಇಲ್ಲ, ಯಾವುದೇ ತೊಂದರೆ ಕೊಟ್ಟಿಲ್ಲ ಅಂತ ಧರ್ಮಸ್ಥಳದಲ್ಲಿ ಪ್ರಮಾಣ ಮಾಡಿಬಿಡು, ನಾವು ಮರುಮಾತನಾಡದೆ ಸುಮ್ಮನಿದ್ದುಬಿಡುತ್ತೇವೆ; ನಿನ್ನ ತಂಟೆಗೇ ಬರೋದಿಲ್ಲ" ಅಂತ ಅರಣ್ಯಳ ಬಂಧುಗಳು ಒತ್ತಡ ಹೇರಿದರು. ಈ ಬೇಡಿಕೆಯನ್ನು ಒಪ್ಪಿಕೊಳ್ಳದೇ ಹೋದರೆ ತನ್ನ ಬಣ್ಣ ಬಯಲಾಗುತ್ತದೆ ಎಂದು ಅಂಜಿದ ಜೀವರಾಜ್ ಧರ್ಮಸ್ಥಳಕ್ಕೆ ಬರುವುದಾಗಿ ಬಾಯಿಮಾತಿಗೆ ಒಪ್ಪಿಕೊಂಡ.

ಅದರಂತೆ ಸೆಪ್ಟೆಂಬರ್ ಮೂರರಂದು ಎಲ್ಲರೂ ಧರ್ಮಸ್ಥಳಕ್ಕೆ ಹೋದರು. ಈ ಒಪ್ಪಂದಕ್ಕೆ ಸಾಕ್ಷಿಯಾಗಿದ್ದ ಬಿಜೆಪಿ ಮುಖಂಡರಾದ ಜಿ.ಪಂ. ಸದಸ್ಯ ರವೀಂದ್ರ ಕುಕ್ಕುಡಿಗೆ, ಅಪೆಕ್ಸ್ ಬ್ಯಾಂಕ್ ನಿರ್ದೇಶಕ ರಾಮಸ್ವಾಮಿ ಮುಂತಾದವರೂ ಧರ್ಮಸ್ಥಳಕ್ಕೆ ಹೋದರು. ಮನು ದೇವರ ಮುಂದೆ ಧೈರ್ಯವಾಗಿ ಪ್ರಮಾಣ ಮಾಡಿದ. ಆದರೆ ದೈವಭೀತಿಯಿಂದ ನಡುಗಲು ಶುರು ಮಾಡಿದ್ದ ಜೀವರಾಜ 'ಒಳಗೆ ಸಿಸಿ ಟಿವಿ ಕ್ಯಾಮೆರಾಗಳಿವೆ. ನಾನು ನಂತರ ಒಬ್ಬನೇ ಹೋಗಿ ಪ್ರಮಾಣ ಮಾಡುತ್ತೇನೆ' ಅಂತ ಸಬೂಬು ಹೇಳಿ ಆಣೆ ಪ್ರಮಾಣ ಮಾಡದೆ ನುಣುಚಿಕೊಂಡ.

ಆಣೆ ಮಾಡದೆ ಜೀವರಾಜ ಪರಾರಿಯಾದದ್ದನ್ನು ತಿಳಿದ ಅರಣ್ಯಳ ಬಂಧುಗಳಿಗೆ ಹಾಗೂ ಗ್ರಾಮಸ್ಥರಿಗೆ ಮತ್ತೆ ಯಾವ ಅನುಮಾನವೂ ಉಳಿದಿರಲಿಲ್ಲ; ಅವನ ಪಾಪಕೃತ್ಯ ಬಟಾಬಯಲಾಗಿಹೋಗಿತ್ತು. ಹೀಗಾಗಿ ತಮ್ಮ ಊರಿನ ಹೆಣ್ಣು ಮಗಳಿಗಾದ ಈ ಅನ್ಯಾಯದ ವಿರುದ್ಧ ಹೋರಾಡಲು ಸಿದ್ಧರಾಗಿದ್ದಾರೆ.

ಇತ್ತ ಧರ್ಮಸ್ಥಳದಿಂದ ಪರಾರಿಯಾದ ಈ ಮೋದಿ ಶಿಷ್ಯ ಜೀವರಾಜ ಹೊಸ ವರಸೆ ಶುರು ಮಾಡಿದ್ದಾನಂತೆ. "ಸತ್ಯ ಏನು ಅಂತ ಶೃಂಗೇರಿ ಶಾರದಾಂಬೆಗೆ ಗೊತ್ತು, ಆ ದೇವಿಯೇ ನನ್ನನ್ನು ಕಾಪಾಡುತ್ತಾಳೆ" ಅಂತ ಹೇಳಿಕೊಂಡು ಮುಖ ಉಳಿಸಿಕೊಳ್ಳುವ ಪ್ರಯತ್ನ ಮಾಡುತ್ತಿದ್ದಾನಂತೆ!

ಪಾಖಂಡಿ ಶಾಸಕ 2010ರ ಮೇ ತಿಂಗಳ ಒಂದು ದಿನ ಜಮೀನಿನ ದಾಖಲೆಪತ್ರಗಳನ್ನು ತೆಗೆದುಕೊಂಡು ತಮ್ಮ ನೆಂಟರ ಮನೆಯ ಬಳಿಗೆ ಬರುವಂತೆ ತಿಳಿಸಿದ. ಕ್ಷೇತ್ರದ ಶಾಸಕರು ಕರೆಯುತ್ತಿದ್ದಾರೆಂಬ ಗೌರವಭಾವದಿಂದ ನೆರೆಮನೆಯ ಬಳಿಗೆ ಹೊರಟಳು. ಆದರೆ ಹೋಗುವ ಹಾದಿಯಲ್ಲೇ ಕಾರು ನಿಲ್ಲಿಸಿ ಕಾಯುತ್ತಿದ್ದ ಜೀವರಾಜ ಬಹಳ ಅರ್ಜೆಂಟು ಇರುವುದರಿಂದ ಕಾರಿನಲ್ಲಿ ಕುಳಿತುಕೊಳ್ಳುವಂತೆ ಆಹ್ವಾನಿಸಿದ. 5-10 ನಿಮಿಷದಲ್ಲೇ ವಾಪಸ್ ತಂದು ಬಿಡುವುದಾಗಿ ಪುಸಲಾಯಿಸಿದ. ಹೀಗೆ ಖುದ್ದು ಶಾಸಕರೇ ಕರೆಯುತ್ತಿರುವುದರಿಂದ ಯಾವುದೇ ಅನುಮಾನವಿಲ್ಲದೆ ಆ ನತದೃಷ್ಟ ಹುಡುಗಿ ಕಾರನ್ನೇರಿದಳು. ಅಲ್ಲಿಗೆ ಅವಳ ಗ್ರಹಗತಿಗಳು ಕೆಟ್ಟುಹೋಗಿದ್ದವು.

ಆಗ ಜೀವರಾಜನ ಕಾರಿನ ಡ್ರೈವರ್ ಆಗಿ ಜೆ.ಜೆ.ನಾಗರಾಜ್ ಎಂಬ ಬಿಜೆಪಿ ಕಾರ್ಯಕರ್ತನೂ ಇದ್ದ. ಮೊದಲೇ ಸ್ಕೆಚ್ಚು ಹಾಕಿಕೊಂಡಿದ್ದ ಪ್ರಕಾರ ಜೀವರಾಜ ಕಾರನ್ನು ಒಂದು ತೋಟದ ಮನೆಗೆ ಕೊಂಡೊಯ್ದು ಅಸಹಾಯಕಳಾಗಿದ್ದ ಹುಡುಗಿಯ ಮೇಲೆ ಅತ್ಯಾಚಾರವೆಸಗಿದ. ಅಷ್ಟು ಮಾತ್ರವಲ್ಲ; ಜೆಜೆ ನಾಗರಾಜ್ ಎಂಬುವವನು ಈ ಹುಡುಗಿಯ ಬೆತ್ತಲೆ ಚಿತ್ರಗಳನ್ನು ತೆಗೆದುಕೊಂಡ.

ಆ ಒಂಟಿ ಮನೆಯಲ್ಲಿ ಅರಣ್ಯಳ ಗೋಳು ಅರಣ್ಯ ರೋದನವೇ ಆಯಿತು. ಕೀಚಕ ಜೀವರಾಜ್ ಅಮಾನವೀಯ ಅಟ್ಟಹಾಸ ಮೆರೆದಿದ್ದ. ತಮ್ಮದೇ ಸರ್ಕಾರವಿದ್ದುದರಿಂದ ತನ್ನನ್ನು ಯಾರೂ ಏನೂ ಮಾಡಲಾಗದು ಎಂಬ ಅಧಿಕಾರ ಮದ ನೆತ್ತಿಗೇರಿತ್ತು. ತನ್ನ ನೀಚ ತೃಷೆ ತೀರಿಸಿಕೊಂಡ ನಂತರ ಜೀವರಾಜ್ ಏನು ಹೇಳಿದನಂತೆ ಗೊತ್ತೆ? "ನೀನು ಪಿಯುಸಿಗೆ ಹೋಗುತ್ತಿದ್ದಾಗಲಿಂದಲೂ ನಿನ್ನ ಮೇಲೆ ಕಣ್ಣಿತ್ತು

▶▶ 15



ಅಬಕಾರಿ ಸುಲಿಗೆ ಆರಂಭ

ಜಾರಕಿಹೊಳಿ ತಂಗಿ ಗಂಡನೇ ಅಬಕಾರಿ ಡಿಸಿ!

...ತೊಲಗಿದೆಯಾ ಬಿಜೆಪಿ ಅಂದರೆ ಬಂದೆ ಗವಾಕ್ಷೀಲಿ ...ಂತಾಗಿದೆ ಅಬಕಾರಿ ಲೋಕದ ದುರ್ಗತಿ. ಬಿಜೆಪಿ ...ಕಾಲದಲ್ಲಿ ಮಂತ್ರಿಯಾಗಿದ್ದಷ್ಟೂ ಕಾಲ ಕರ್ನಾಟಕ ...ಷ್ಟೂ ಬಾರು, ವೈನ್‌ಸ್ಟೋರುಗಳವರನ್ನು ಇನ್ನಿಲ್ಲದಂತೆ ...ಗೆ ನಡೆಸಿದ ಬಿಜೆಪಿ ಅಬಕಾರಿ ಮಂತ್ರಿ ರೇಣುಕಾಚಾರ್ಯ ...ಳಿದ ಸಂಭ್ರಮದಲ್ಲಿ ನಿಟ್ಟುಸಿರಿಟ್ಟ ಲಿಕ್ಕರ್ ವಹಿವಾಟು ...ರೆಲ್ಲ ಈಗ ಹಣೆಹಣೆ ಚಚ್ಚಿಕೊಳ್ಳುತ್ತಿದ್ದಾರೆಂದರೆ ಅದಕ್ಕೆ ...ಣ ಕಾಂಗ್ರೆಸ್ ಅಬಕಾರಿ ಮಂತ್ರಿ ಸತೀಶ್ ಜಾರಕಿಹೊಳಿ!


...ಸಿದ್ದು ಮುಖ್ಯಮಂತ್ರಿಯಾಗಿ ಇನ್ನೇನು 'ಅರಸು ಕ್ರಾಂತಿ' ...ನಡೆದು ಬಿಡುತ್ತದೆಯೆಂದು ಸಮಸ್ತರೆಲ್ಲ ಕುತೂಹಲ ...ರುವಾಗಲೇ ಸದ್ದಿಲ್ಲದೆ ಶುರುವಾಗಿದೆ ಅಬಕಾರಿ ಸುಲಿಗೆ. ...ಸದ್ಯ ಅಬಕಾರಿ ಆಯುಕ್ತರಾಗಿರುವ ಶಂಭು ದಯಾಳ್ ...ನಾ ಕರ್ನಾಟಕದ ನಿಷ್ಠೂರಿ ಐಎಎಸ್‌ಗಳಲ್ಲೊಬ್ಬರೆಂಬ ...ಎರಡು ಮಾತಿಲ್ಲ ನಿಜ. ಆದರೆ ಮೀನಾರಂಥ ದಕ್ಷರ ...ಲುಗಳನ್ನೇ ಕಟ್ಟಿಹಾಕಿ ರಬ್ಬರ್‌ಸ್ಟಾಂಪ್ ಮಾಡಿಕೊಂಡು ...ಟಿಮಾಡುವ ಷಡ್ಯಂತ್ರವೊಂದಕ್ಕೆ ಮಂತ್ರಿ ಜಾರಕಿಹೊಳಿ ...ಹೊಸೆಯತೊಡಗಿದ್ದಾರೆ. ಅದು ಕರ್ನಾಟಕ ಕಂಡ ಪರಮಭ್ರಷ್ಟ ...ಬಕಾರಿ ಡಿಸಿ ಮಂಜುನಾಥ್ ಎಂಬಾತನ ಮೂಲಕ!

...ಬಿಜೆಪಿ ಅಧಿಕಾರದಲ್ಲಿದ್ದಷ್ಟೂ ದಿನ ಇಡೀ ಅಬಕಾರಿ ...ಖೆಗೆ ಅನಭಿಷಕ್ತ ದೊರೆಯಂತೆ ಮೆರೆದವನು ಸದ್ಯ ...ಗಳೂರು ನಗರ ದಕ್ಷಿಣ ವಿಭಾಗದ ಅಬಕಾರಿ ಡಿಸಿಯಾಗಿ ...ವ ಡಾ.ವೈ.ಮಂಜುನಾಥ್. ಈತನದ್ದು ಕಮ್ಮಿಯ ಜಾತಕ ...ಲ್ಲ. ರಾಜಕೀಯವಾಗಿ ಈತ ಎಂಥಾ ಬಲಾಢ್ಯನೆಂದರೆ ...ಲಿ ಅಬಕಾರಿ ಮಂತ್ರಿ ಜಾರಕಿಹೊಳಿಗೆ ಈತ ಸ್ವಂತ ...ಗಿಯ ಗಂಡ. ಅಂದರೆ ಅಬಕಾರಿ ಮಂತ್ರಿಯೇ ಈತನ ...ಮೈದುನ. ಹಿಂದೆ ಬಿಜೆಪಿ ಸರ್ಕಾರವಿದ್ದಾಗಲೂ ಹಾಲಿ ...ಂತ್ರಿ ಜಾರಕಿಹೊಳಿಯ ಖಾಸಾ ತಮ್ಮ ಬಾಲಚಂದ್ರ ...ರಕಿಹೊಳಿ ಮಂತ್ರಿಯಾಗಿದ್ದರಲ್ಲ; ಅವರ ಆಪ್ತಗೆಳೆಯ ...ಣುಕಾಚಾರ್ಯನೇ ಅಬಕಾರಿ ಮಂತ್ರಿಯಾಗಿದ್ದ ಮೇಲೆ ...ಬೇಕೆ? ಬಿಜೆಪಿ ಆಳ್ವಿಕೆಯಲ್ಲಿ ಹೆಸರಿಗಷ್ಟೇ ಐಎಎಸ್ ...ಮ ಶೇಖರ್ ಅಬಕಾರಿ ಆಯುಕ್ತರಾದರೆ, ಇಡೀ ...ಖೆಯನ್ನು ತನ್ನ ಮೂಗಿನ ನೇರಕ್ಕೆ ಆಡಿಸಿದ್ದು ಇದೇ ...ಮಂಜುನಾಥ್. ಬಿಜೆಪಿ ಮಂತ್ರಿ ಬಾಲಚಂದ್ರ ಜಾರಕಿ ...ಳಿಯ ಶ್ರೀರಕ್ಷೆಯಿಂದಲೇ ಬಡ್ತಿಯ ಮೇಲೆ ಬಡ್ತಿ ...ಡೆದು ಮೇಲೇರಿದ ಡಾ. ಮಂಜುನಾಥ್ ಪ್ರಾರಂಭದಲ್ಲಿ ...ನಗರ ವಿಚಕ್ಷಣ ದಳಕ್ಕೆ ಡೆಪ್ಯುಟಿ ಸೂಪರಿಂಟೆಂಡೆಂಟ್ ...ಗಿದ್ದ. ಎರಡನೇ ವರ್ಷಕ್ಕೆ ಪ್ರಮೋಷನ್ ಗಿಟ್ಟಿಸಿ ರಾಜ್ಯ ...ಚಕ್ಷಣ ದಳಕ್ಕೆ ಸೂಪರಿಂಟೆಂಡೆಂಟ್ ಹುದ್ದೆಗೇರಿದ. ಇದಾಗಿ ...ದೇ ವರ್ಷಕ್ಕೆ ಎರಡನೇ ಬಡ್ತಿಯಾಗಿ ಮೈಸೂರಿಗೆ ...ಬಕಾರಿ ಡಿಸಿಯಾದ. ಮೈಸೂರಿಗೆ ಬಂದಿದ್ದೇ ಅಲ್ಲಿನ ...ರು, ವೈನ್‌ಸ್ಟೋರ್ ಮಾಲಿಕರನ್ನು ಇನ್ನಿಲ್ಲದಂತೆ ಸುಲಿಗೆ ...ಡೆಸಿದ ಪರಿಣಾಮವಾಗಿ ರೋಸತ್ತ ವೈನ್ಸ್ ಮಾಲೀಕರೇ ಈತನನ್ನು ಲೋಕಾಯುಕ್ತಕ್ಕೆ ಹಿಡಿದುಕೊಟ್ಟರು. ಹಾಗೆ ರೆಡ್‌ಹ್ಯಾಂಡ್ ಸಿಕ್ಕಿಬಿದ್ದು ಜೈಲಿಗೂ ಹೋಗಿ ಬಂದ ಮಂಜುನಾಥ್‌ಗೆ ಸಹಜವಾಗೇ ಇಲಾಖೆ ಹಿಂಬಡ್ತಿ ಮಾಡಿ ಶಿಕ್ಷಿಸಬೇಕಿತ್ತಲ್ಲವೇ?

ತಿಂಗಳಿಗೆ 1 ಕೋಟಿ

ವಿಪರ್ಯಾಸವೆಂದರೆ ಹೊಡೆದ ಲಂಚಕ್ಕೆ ಜೈಲು ಕಂಡಿದ್ದನ್ನೇ ಮಹಾನ್ ಸೇವೆಯೆಂಬಂತೆ ಪರಿಗಣಿಸಿದ ಬಿಜೆಪಿ ಸರ್ಕಾರ ಮತ್ತೆ ಮಂಜುನಾಥ್‌ಗೆ ಬಡ್ತಿ ಕೊಟ್ಟು ಫಲವತ್ತಾದ ಬೆಂಗಳೂರು ದಕ್ಷಿಣ ಡಿಸಿಯನ್ನಾಗಿಸಿತು. ಆ ಹೊತ್ತಿಗೆ EIB ಅಂದರೆ ರಾಜ್ಯ ವಿಚಕ್ಷಣ ದಳಕ್ಕೆ ಜಂಟಿ ಆಯುಕ್ತರಾಗಿದ್ದದ್ದು ಬಿಜೆಪಿಯ ಮತ್ತೊಬ್ಬ ಮಂತ್ರಿಯಾಗಿದ್ದ ಸೋಮಣ್ಣನ ಖಾಸಾ ಬೀಗರಾದ ಈರಪ್ಪ. ಈರಪ್ಪ ಇದ್ದಾಗಲೂ EIBಯ ವ್ಯವಹಾರದಲ್ಲಿ ಕೈಯಾಡಿಸುತ್ತಿದ್ದ ಮಂಜುನಾಥ್ ಈರಪ್ಪ ನಿವೃತ್ತಿಯಾಗಿದ್ದೇ ತಡ ಬೆಂಗಳೂರು ದಕ್ಷಿಣ ಡಿಸಿ ಹುದ್ದೆಯಷ್ಟೇ ಅಲ್ಲದೆ ಹೆಚ್ಚುವರಿಯಾಗಿ ರಾಜ್ಯ ವಿಚಕ್ಷಣ ದಳದ ಇನ್‌ಚಾರ್ಜ್ ಜಂಟಿ ಆಯುಕ್ತನೂ ಆಗಿಬಿಟ್ಟ.

ಇದರರ್ಥ ಅಬಕಾರಿ ಆಯುಕ್ತರ ನಂತರದ ಅತ್ಯಂತ ಪ್ರಭಾವಿ ಹುದ್ದೆಯಲ್ಲಿ ಭ್ರಷ್ಟ ಮಂಜುನಾಥ್ ರನ್ನು ಹೆಚ್ಚುವರಿ ಅಧಿಕಾರ ಕೊಟ್ಟು ಪ್ರತಿಷ್ಠಾಪಿಸಲಾಗಿತ್ತು!



ಮಂಜುನಾಥ್ ಎಂಬ ಅಬಕಾರಿ ಅಧಿಕಾರಿಯ ಬಗ್ಗೆ ಇಷ್ಟೆಲ್ಲವನ್ನೂ ವಿವರಿಸುವುದಕ್ಕೂ ಕಾರಣವಿದೆ. ಈಗ ಅಬಕಾರಿ ಮಂತ್ರಿ ಸತೀಶ್ ಜಾರಕಿಹೊಳಿ ಮತ್ತೆ ಸ್ಟೇಟ್ ಇಐಬಿಗೆ ಅಂದರೆ ರಾಜ್ಯ ವಿಚಕ್ಷಣ ದಳಕ್ಕೆ ಅಧಿಪತಿಯನ್ನಾಗಿ ಮಾಡಹೊರಟಿರುವುದು ಇದೇ ತನ್ನ ಖಾಸಾ ಭಾವ ಮಂಜುನಾಥನನ್ನು ಅಬಕಾರಿ ಡಿಸಿ ಮಂಜುನಾಥ್ ಮತ್ತು ಮಂತ್ರಿ ಜಾರಕಿಹೊಳಿಯ ಸಂಬಂಧ ಒತ್ತಟ್ಟಿಗಿರಲಿ: ರಾಜ್ಯ ವಿಚಕ್ಷಣ ದಳದ ಜಂಟಿ ಕಮೀಷನರ್ ಹುದ್ದೆಯ ಮಹಾತ್ಮೆಯಾದರೂ ಎಂಥಾದ್ದು?

ರಾಜ್ಯದ ತರಹೇವಾರಿ ಸರಕಾರಿ ಸರ್ಕಾರಿ ಇಲಾಖೆಗಳ ಯಾವ್ಯಾವ ಪ್ರಮುಖ ಹುದ್ದೆಗಳ ಆಮದನಿ ಏನೇನಿದೆಯೋ. ಆದರೆ ಅಬಕಾರಿ ಇಂಟಲಿಜೆನ್ಸ್ ಬ್ಯುರೋದ ಮುಖ್ಯಸ್ಥನ ಹುದ್ದೆಯೆಂದರೆ ಅದು ತಿಂಗಳೊಂದಕ್ಕೆ ಕಮ್ಮಿಯೆಂದರೂ ಒಂದು ಕೋಟಿ ರೂಪಾಯಿಗಳ ಉತ್ಪತ್ತಿಯ ಹುದ್ದೆ. ಆಯಾ ಜಿಲ್ಲೆಗಳ ಅಬಕಾರಿ ಡಿಸಿಗಳು, ಸೂಪರಿಂಟೆಂಡೆಂಟರು, ಇನ್ಸ್‌ಪೆಕ್ಟರ್‌ಗಳಿಗೆ ಅಲ್ಲಲ್ಲಿನ ಬಾರು, ವೈನ್ಸ್‌ಸ್ಟೋರ್, ಹೋಲ್‌ಸೇಲ್‌ಗಳಿಂದ ಮಂತ್ಲಿ ಕಲೆಕ್ಷನ್ನಾಗುವ ಹಾಗೆಯೇ ರಾಜ್ಯ ವಿಚಕ್ಷಣ ದಳಕ್ಕೆಂದೇ ಪ್ರತ್ಯೇಕ ಎತ್ತುವಳಿಯಿರುತ್ತದೆ.

ಎತ್ತುವಳಿ ಜಾಲ

ಹಿಂದೆ ಎನ್.ಎಸ್. ನಾಗರಾಜ್, ರಾಜಣ್ಣ, ಗುರುಶಾಂತಪ್ಪರಂಥ ನಿರುಪದ್ರವಿ ಅಧಿಕಾರಿಗಳಿದ್ದಾಗ ಈ ಪಾಟಿ ಸುಲಿಗೆಯಿರಲಿಲ್ಲ. ಬಿಜೆಪಿ ಅಧಿಕಾರಕ್ಕೇರಿದ್ದೇ ಸೋಮಣ್ಣ ಬೀಗರಾದ ಈರಪ್ಪ ಜೆ.ಸಿ.ಯಾದರಲ್ಲ ಆಗ ರಾಜ್ಯಾದ್ಯಂತ ವ್ಯವಸ್ಥಿತ ಮಂತ್ಲಿ ವಸೂಲಿಗೆಂದೇ ನಾಲ್ವರು ಇನ್ಸ್‌ಪೆಕ್ಟರ್‌ಗಳನ್ನು ನೇಮಿಸಲಾಯ್ತು. ಅದು ಲೋಕಾಯುಕ್ತದ ಕಣ್ಣಿಗೆ ಬಿದ್ದು ರಾದ್ಧಾಂತವಾಗಿದ್ದೇ ಆಯಾ ಜಿಲ್ಲೆಗಳ ಡಿಸಿಗಳೇ ಇಐಬಿಯ ಮಂತ್ಲಿಯನ್ನು ವಸೂಲಿ ಮಾಡಿ ಬೆಂಗಳೂರಿಗೆ ರವಾನಿಸಬೇಕೆಂಬ ಕಟ್ಟಾಜ್ಞೆಯಾಯಿತು.



ಈ ಥರದ ವ್ಯವಸ್ಥಿತ ಎತ್ತುವಳಿಯ ರೂವಾರಿಯೇ ಡಾ. ಮಂಜುನಾಥ್. ಇಐಬಿಯ ಜಂಟಿ ಕಮೀಷನರ್ ಕೆಲಸವೇ ಕುಂತ ಜಾಗದಲ್ಲಿ ತಿಂಗಳಾಂಪ್ರತಿ 1 ಕೋಟಿ ಎಣಿಸಿಕೊಳ್ಳುವುದು!

ಇಐಬಿಯ ಎತ್ತುವಳಿಯಲ್ಲದೆ ಅಬಕಾರಿ ಮಂತ್ರಿಗೆಂದು ಇಂತಿಷ್ಟು, ಆಯುಕ್ತರಿಗೆಂದು ಇಂತಿಷ್ಟು, ಆಯಾ ಜಿಲ್ಲೆಗಳ ಡಿಸಿಗಳಿಗೆ ಇನ್ಸ್‌ಪೆಕ್ಟರ್‌ಗಳಿಗೆ ಪ್ರತ್ಯೇಕ ಮಂತ್ಲಿ ಸಂಗ್ರಹಣಾ ವ್ಯವಸ್ಥೆಯಿದೆ. ರೇಣುಕಾಚಾರ್ಯ ಅಬಕಾರಿ ಮಂತ್ರಿಯಾಗುತ್ತಿದ್ದಂತೆ ಇದು ಭಯಾನಕ ರೂಪ ತಳೆದು ಹಿಂದಿದ್ದ ಎಲ್ಲಾ ದಾಖಲೆಗಳನ್ನೂ ಮುರಿಯಿತು. ಸಿಎಲ್9 ಅಂದರೆ ಬಾರೊಂದರ ಪ್ರತಿ ವರ್ಷದ ಲೈಸೆನ್ಸ್ ರಿನೀವಲ್‌ಗೆ ಬಿಜೆಪಿಗೂ ಮುನ್ನ ನಲವತ್ತೋ, ಐವತ್ತೋ ಸಾವಿರವಿದ್ದದ್ದು ರೇಣುಕಾಚಾರ್ಯನ ಕಾಲಕ್ಕದು ಲಕ್ಷಕ್ಕೇರಿತ್ತು. ಸಿಎಲ್2 ಎಂದರೆ ವೈನ್ ಸ್ಟೋರ್ ಒಂದರ ಲೈಸೆನ್ಸ್ ನವೀಕರಣಕ್ಕೆ ಇಪ್ಪತ್ತೊ, ಮೂವತ್ತೋ ಸಾವಿರ ಲಂಚವಿದ್ದದ್ದು ಬಿಜೆಪಿ ಕಾಲಕ್ಕೆ 60 ಸಾವಿರಕ್ಕೇರಿತು.

ಇದಿಷ್ಟೇ ಅಲ್ಲದೆ ಯಾವುದೇ ಬಾರು ಅಥವಾ ವೈನ್‌ಸ್ಟೋರ್‌ನ ಶಿಫ್ಟಿಂಗ್ ಅಂದರೆ ಸ್ಥಳಾಂತರಕ್ಕೆಂದು ಹಿಂದೆ ಲಂಚವಾಗಿ ಪಡೆಯುತ್ತಿದ್ದುದ್ದರ ದುಪ್ಪಟ್ಟು ಹೆಚ್ಚಿಸಿದ್ದ ದಾಖಲೆಗೂ ರೇಣುಕಾಚಾರ್ಯನೇ ಕಾರಣನಾದ. ವೈನ್ ಸ್ಟೋರ್‌ನ ಸ್ಥಳಾಂತರಕ್ಕೆ ಲಂಚವಾಗಿ 2 ಲಕ್ಷವಿದ್ದದ್ದು ಬಿಜೆಪಿ ಕಾಲಕ್ಕೆ ನಾಲ್ಕಕ್ಕೇರಿತ್ತು. ಬಾರೊಂದರ ಶಿಫ್ಟಿಂಗ್ ಲಂಚ 8 ರಿಂದ 10 ಲಕ್ಷಕ್ಕೇರಿಸಿದ ಕೀರ್ತಿಯೂ ರೇಣುಕನಿಗೇ ಸಲ್ಲಬೇಕು. ಬಿಜೆಪಿ ಅಧಿಕಾರದುದ್ದಕ್ಕೂ ಹೈರಾಣಾದ ಬಾರು, ವೈನ್‌ಸ್ಟೋರ್ ಮಾಲಿಕರೆಲ್ಲ ಇನ್ನೇನು ಬೀದಿಗಿಳಿಯ ಬೇಕೆನ್ನುವಷ್ಟರಲ್ಲೇ ಬಿಜೆಪಿ ಬಿಂದಿಯೆದ್ದು ಕಾಂಗ್ರೆಸ್ ಅಧಿಕಾರಕ್ಕೆ ಬಂದಿತ್ತು.

ಈತನದ್ದೇ ವಿಪರೀತ

ಸಿದ್ದು ಮುಖ್ಯಮಂತ್ರಿಯಾದ ಹೊಸದರಲ್ಲೇ ಕರ್ನಾಟಕದ ಮದ್ಯ ಮಾರಾಟಗಾರರ ನಿಯೋಗವೊಂದು ಮುಖ್ಯಮಂತ್ರಿಗಳನ್ನು ಕಂಡು ಬಿಜೆಪಿ ಕಾಲದ ಸುಲಿಗೆ, ದಬ್ಬಾಳಿಕೆಗೆ ಕೊನೆ ಹಾಡುವಂತೆ ಕಣ್ಣೀರಿಟ್ಟದ್ದೂ ಆಯ್ತು. ಅದಕ್ಕೆ ತಕ್ಕಂತೆಯೇ ಹೊಸ ಅಬಕಾರಿ ಆಯುಕ್ತರಾಗಿ ಬಂದ ಶಂಭು ದಯಾಳ್ ಮೀನಾ ಅಧಿಕಾರಿಗಳನ್ನು ಕರೆದು ಝಾಡಿಸಲಾಗಿ ರಾತ್ರೋರಾತ್ರಿ ಲಂಚದ ರೇಟು ಅರ್ಧಕ್ಕಿಳಿಯಿತು.

ಸದ್ಯ ಬೆಂಗಳೂರು ನಗರ ಜಿಲ್ಲೆಗೆಂದೇ ನಾಲ್ವರು ಅಬಕಾರಿ ಡಿಸಿಗಳಿದ್ದು ಬೆಂಗಳೂರು ಉತ್ತರದ ಡಿಸಿ ಜಯಸಿಂಹ, ಪೂರ್ವ ವಲಯದ ಡಿಸಿ ಸೋಮಶೇಖರ್, ತುಮಕೂರು ಡಿಸಿ ಮೋಹನ್, ಬೆಂಗಳೂರು ಗ್ರಾಮಾಂತರದ ಬಸವರಾಜ್ ಕಣಜಿಯವರ ವಲಯ ದಲ್ಲಿ ವೈನ್‌ಸ್ಟೋರ್‌ಗಳ ರಿನೀವಲ್‌ಗೆ ಮೂವತ್ತೋ ನಲವತ್ತೋ ಸಾವಿರ ಮತ್ತು ಬಾರಿನ ರಿನೀವಲ್‌ನ ಲಂಚ ಐವತ್ತೋ ಅರವತ್ತೋ ಸಾವಿರವಾದರೆ

ದಕ್ಷಿಣ ವಲಯದ ಡಿಸಿ ಮಂಜುನಾಥನ ಆರ್ಭಟವೇ ವಿಪರೀತ. ಕೇವಲ ಲೈಸೆನ್ಸ್ ನವೀಕರಣಕ್ಕೆಂದೇ ಮಂಜುನಾಥ್ 60 ರಿಂದ 70 ಸಾವಿರ ಕೇಳುತ್ತಾನೆ. ಬಾರಿಗಾದರೆ ಅದು 80 ಸಾವಿರಕ್ಕೇರುತ್ತದೆ. ಶಿಫ್ಟಿಂಗಿಗೆ ಬೇರೆಲ್ಲ ಎರಡೋ ಎರಡೋವರೆಯೋ ಕಿತ್ತರೆ ಈಗ ಮೂರುವರೆಯಿಂದ ನಾಲ್ಕರ ಕಮ್ಮಿ ಮುಟ್ಟುವುದೇ ಇಲ್ಲ. ಇನ್ನು ಸಿಎಲ್9ಕ್ಕಾದರೆ ಐದು ಲಕ್ಷಕ್ಕೆ ನಯಾಪೈಸೆ ಕಮ್ಮಿಯಾದರೂ ತಲೆ ಎತ್ತಿ ಕೂಡ ನೋಡುವುದಿಲ್ಲ.

ಬೆಂಗಳೂರು ನಗರದ ನಾಲ್ವರು ಡಿಸಿಗಳ ಪೈಕಿ ಡಾ. ಮಂಜುನಾಥ್ ನಡೆಸುತ್ತಿರುವ ಸುಲಿಗೆಯ ವಿರುದ್ಧ ಯಾರೂ ಉಸಿರೆತ್ತುವಂತಿಲ್ಲ. ಏಕೆಂದರೆ ಆತ ಮಂತ್ರಿ ಜಾರಕಿಹೊಳಿಯ ತಂಗಿಯ ಗಂಡ!

ಬಿಜೆಪಿ ಆಳ್ವಿಕೆಯಿದ್ದಾಗ ರೇಣುಕಾಚಾರ್ಯನನ್ನು ಮುಂದಿಟ್ಟುಕೊಂಡು ಇಡೀ ಅಬಕಾರಿಯನ್ನಾಳಿದ ಮಂಜುನಾಥ್ ತನಗೆ ಛೇಲಾಗಳಂತಿದ್ದ ಭ್ರಷ್ಟ ಅಧಿಕಾರಿಗಳನ್ನೆಲ್ಲ ಆಯಕಟ್ಟಿನ ಜಾಗಕ್ಕೆ ತಂದ. ಯಾರೆಲ್ಲ ಪ್ರಾಮಾಣಿಕ ಮತ್ತು ಕರ್ತವ್ಯನಿಷ್ಠ ಅಧಿಕಾರಿಗಳಿದ್ದರೋ ಅಂಥವರನ್ನೆಲ್ಲ ಎತ್ತಂಗಡಿ ಮಾಡಿ ಕಾಟ ಕೊಟ್ಟ. ಇನ್ನೂರು ಮಂದಿ ಅಬಕಾರಿ ಸಬ್‌ಇನ್ಸ್‌ಪೆಕ್ಟರ್‌ಗಳು ಮತ್ತು 400 ಮಂದಿ ಗಾರ್ಡುಗಳ ನೇಮಕಾತಿಗೂ ಸುಲಿಗೆ ಶುರುವಿಟ್ಟಿದ್ದ. ಆದರದು ಲೋಕಸೇವಾ ಆಯೋಗಕ್ಕೆ ಹೋಗಿದ್ದರಿಂದಾಗಿ ಇಡೀ ನೇಮಕಾತಿ ಕರ್ಮಕಾಂಡಕ್ಕೆ ತಡೆಯೊದಂತಾಗಿತ್ತು. ಕಾಂಗ್ರೆಸ್ ಅಧಿಕಾರಕ್ಕೆ ಬಂದಿದ್ದೇ ಹುಷಾರಾದ ಸಿದ್ದರಾಮಯ್ಯ ಜಾರಕಿಹೊಳಿಗೆ ಬುದ್ಧಿ ಹೇಳಿ ಇಐಬಿಯ ಜಂಟಿ ಆಯುಕ್ತರ ಹುದ್ದೆಯಿಂದ ಈತನನ್ನು ಹೊರದಬ್ಬಿಸಿದ್ದರು. ಅಲ್ಲಿಗೆ ಕೇವಲ ಬೆಂಗಳೂರು ದಕ್ಷಿಣ ಡಿಸಿ ಹುದ್ದೆಗಷ್ಟೇ ಮಂಜುನಾಥ್ ತೃಪ್ತನಾಗಬೇಕಿತ್ತು.

ಅಟ್ಟಹಾಸ ಆರಂಭ

ಆದರೆ ಮಂಜುನಾಥ್‌ನ ಅಧಿಕಾರದಾಹ ಮತ್ತು ಲಂಚದ ದುರಾಶೆ ತಣಿಯಬೇಕಲ್ಲ. ಮಂತ್ರಿಯೇ ತನ್ನ ಭಾಮೈದನಾದ ಮೇಲೆ ಹಿಂದಿಗಿಂತ ಅಟ್ಟಹಾಸ ಮೆರೆಯದೇ ಇರುವುದುಂಟಾ? ಇದಕ್ಕೆ ಪೂರಕವೆಂಬಂತೆ ಮಂಜುನಾಥ್‌ಗೆ ಮತ್ತೊಂದು ಬಡ್ತಿಕೊಟ್ಟು ರಾಜ್ಯ ವಿಚಕ್ಷಣ ದಳದ ಜಂಟಿ ಆಯುಕ್ತನನ್ನಾಗಿ ಪ್ರತಿಷ್ಠಾಪಿಸುವ ಸಕಲ ಸಿದ್ಧತೆಗಳಿಗೂ ಮಂತ್ರಿ ಜಾರಕಿಹೊಳಿ ಅಣಿಯಾಗಿದ್ದಾರೆ. ಇನ್ನೊಂದು ತಿಂಗಳೊಳಗೆ ಮಂಜುನಾಥ್‌ನ ಬಡ್ತಿ ಪ್ರಕ್ರಿಯೆ ಮುಗಿಸುವಂತೆ ಜಾರಕಿಹೊಳಿ ಕಚೇರಿಯಿಂದ ಆಯುಕ್ತ ಮೀನಾರಿಗೆ ವಿಶೇಷ ಆದೇಶವೂ ರವಾನೆಯಾಗಿದೆ. ಒಮ್ಮೆ ಬಡ್ತಿ ಆಯಿತೆಂದರೆ ಮಂಜುನಾಥ್ ಬೆಂಗಳೂರು ಡಿಸಿ ಹುದ್ದೆಯಿಂದ ಇಐಬಿಯ ಜಂಟಿ ಆಯುಕ್ತನಾಗುತ್ತಾರೆ. ಅಲ್ಲಿಗೆ ತಿಂಗಳಾಂಪ್ರತಿ 1 ಕೋಟಿಯ ಎತ್ತುವಳಿಗೆ ಆತನೇ ಅಧಿಪತಿಯಾದಂತೆ. ವರ್ಷಕ್ಕದು 12 ಕೋಟಿ. ಕಾಂಗ್ರೆಸ್ ಅಧಿಕಾರಾವಧಿಯಲ್ಲಿ ಕನಿಷ್ಠ ಮೂರು ವರ್ಷಗಳ ಕಾಲ ಆ ಹುದ್ದೆಯಲ್ಲಿದ್ದರೂ ಅದೇ 36 ಕೋಟಿಯಾಗುತ್ತದೆ. ಯಾರಿಗುಂಟು ಯಾರಿಗಿಲ್ಲ.

ಒಮ್ಮೆ ಅಬಕಾರಿ ಅಧಿಪತ್ಯ ಇಂಥ ಭ್ರಷ್ಟನ ಕೈ ಸೇರಿತೆಂದರೆ ಹಿಂದೆ ಬಿಜೆಪಿ ಕಾಲಕ್ಕೆ ಎಂಥ ಭಯಾನಕ ಸುಲಿಗೆಯಿತ್ತೋ ಅದೇ ಪುನರಾವರ್ತನೆ ಆಗುವುದಂತೂ ಶತಸ್ಸಿದ್ಧ. ಇದನ್ನೆಲ್ಲ ಲೆಕ್ಕ ಹಾಕಿಯೇ ಅಬಕಾರಿ ಇಲಾಖೆಯ ಪ್ರಾಮಾಣಿಕರೆಲ್ಲ ಒಗ್ಗಟ್ಟಾಗಿದ್ದಾರೆ. ಮಂಜುನಾಥ್‌ನನ್ನು ಇಐಬಿಗೆ ತರದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಕಂಡಕಂಡವರಿಂದ ಒತ್ತಡ ಹಾಕಿಸುತ್ತಿದ್ದಾರೆ. ಹಾಗಂತ ಬಾವನನ್ನು ಅಷ್ಟಕ್ಕೇ ಕೈಬಿಡುವ ಆಸಾಮಿಯಂತೂ ಜಾರಕಿಹೊಳಿಯಲ್ಲ. ಹಿಂಬಾಗಿಲಿನಿಂದಾದರೂ ಅಬಕಾರಿ ಅಧಿಪತ್ಯಕ್ಕೆ ಮಂಜುನಾಥ್‌ನನ್ನು ತರದೇ ವಿರಮಿಸುವುದಿಲ್ಲ.

ಸದ್ಯ ಅಬಕಾರಿ ಸುಲಿಗೆಯಂತೂ ಶುರುವಾಗಿದೆ. ಅದಕ್ಕೆ ಮಂತ್ರಿಯ ತಂಗಿ ಗಂಡನದ್ದೇ ನೇತೃತ್ವ ಎಂಬುದು ಕೂಡ ನಿಚ್ಚಳವಾಗಿದೆ.

■ ರಾ.ಸೋಮನಾಥ್

ಲಿಕ್ಕರ್ ದಂಧೆಕೋರರಿಗೆಲ್ಲ ಮಂತ್ರಿ ಭಾವನೇ ಗಾಡ್‌ಫಾದರ್!

ಇಡೀ ಅಬಕಾರಿ ಇಲಾಖೆಯ ಸುಲಿಗೆಯನ್ನು ಮಂತ್ರಿ ಜಾರಕಿಹೊಳಿ ಹೇಗೆ ತನ್ನ ಭಾವನ ಮೂಲಕ ಸಂಭಾಳಿಸುತ್ತಿದ್ದಾರೆಂಬುದಕ್ಕೆ ಸದ್ಯದ ಪರಿಸ್ಥಿತಿಗಿಂತ ಬೇರೆ ಉದಾಹರಣೆಯೇ ಬೇಕಿಲ್ಲ. ನಿನ್ನೆ ಮೊನ್ನೆಯ ತನಕ ಇಐಬಿಯ ಜಂಟಿ ಆಯುಕ್ತರ ಹುದ್ದೆಯ ಹೆಚ್ಚುವರಿ ಅಧಿಕಾರವನ್ನೂ ಚಲಾಯಿಸುತ್ತಿದ್ದ ಡಿಸಿ ಮಂಜುನಾಥ್‌ಗೆ ಸದ್ಯಕ್ಕೇನೋ ಆ ಹುದ್ದೆಯಿಂದ ಬಿಡುಗಡೆಯಾಗಿದೆ ನಿಜ. ಅಲ್ಲಿಗೆ ಬೆಂಗಳೂರು ಪಶ್ಚಿಮ ವಲಯದ ಡಿಸಿ ಸೋಮಶೇಖರ್ ಎಂಬ ಮಾಜಿ ಪೊಲೀಸ್ ಅಧಿಕಾರಿಯನ್ನು ತಂದಿರುವುದೂ ನಿಜವೆ. ಹಾಗಂತ ಸೋಮಶೇಖರ್ ಇಐಬಿಯ ಇನ್‌ಚಾರ್ಜ್ ಜಂಟಿ ಆಯುಕ್ತರೆಂದು, ಮಂಜುನಾಥ್‌ನಿಂದ ಇಐಬಿ ಮುಕ್ತವೆಂದೂ ಯಾರೂ ಭಾವಿಸಬೇಕಿಲ್ಲ.


ಏಕೆಂದರೆ ರಾಜ್ಯ ವಿಚಕ್ಷಣಾ ದಳಕ್ಕೆ ಸದ್ಯ ಸೂಪರಿಂಟೆಂಡೆಂಟ್ ಆಗಿರುವ ಶಿವಣ್ಣಗೌಡ ಪಾಟೀಲ್ ಹೇಳಿಕೇಳಿ ಮಂಜುನಾಥ್‌ನ ಪಕ್ಕಾ ಏಜೆಂಟ್. ಇಐಬಿಯ ಸೂಪರಿಂಟೆಂಡೆಂಟ್ ಹುದ್ದೆಯ ಜೊತೆಗೇ ಮೈಸೂರು ಜಿಲ್ಲೆಗೂ ಅಬಕಾರಿ ಡಿಸಿ ಹೆಚ್ಚುವರಿ ಇನ್‌ಚಾರ್ಜಾಗಿರುವ ಶಿವಣ್ಣಗೌಡ ಪಾಟೀಲ್ ಬಿಜೆಪಿ ಸರ್ಕಾರದಲ್ಲಿ ಮಂತ್ರಿಯಾಗಿದ್ದ ರಾಜೂಗೌಡರ ಸ್ವಂತ ಚಿಕ್ಕಪ್ಪನ ಮಗ. ಇದೇ ಕಾರಣಕ್ಕೆ ಇಐಬಿಯ ಉನ್ನತ ಹುದ್ದೆಗೆ ಬಂದ ಶಿವಣ್ಣಗೌಡ ಪಾಟೀಲ್ ಕಾಂಗ್ರೆಸ್ ಅಧಿಕಾರಕ್ಕೆ ಬರುತ್ತಿದ್ದಂತೆ ಮಂತ್ರಿಯ ಭಾವ ಮಂಜುನಾಥ್‌ನ ಶಿಷ್ಯನಾಗಿಬಿಟ್ಟಿದ್ದ.

ಹೀಗೆ ಶಿವಣ್ಣಗೌಡನನ್ನು ತನ್ನ ಭಟ್ಟಂಗಿಯಾಗಿ ಮಂಜುನಾಥ್ ನೇಮಿಸಿಕೊಳ್ಳುವುದಕ್ಕೂ ಕಾರಣವಿದೆ. ಶಿವಣ್ಣಗೌಡ ಮಹಾನ್ ಪ್ರಚಂಡ ಮತ್ತು ಲಿಕ್ಕರ್ ಸಾಮ್ರಾಜ್ಯದ ಸಕಲ ಪಾತಕಿಗಳಿಗೂ ಆಪದ್ಬಾಂಧವ. ಸ್ಪಿರಿಟ್ ಕಾಳಸಂತೆಕೋರರು, ಗೋವಾದ ಲಿಕ್ಕರ್ ಸ್ಮಗ್ಲರ್‌ಗಳು, ಕಳ್ಳಭಟ್ಟಿ ಪಾತಕರು, ಕಳ್ಳ ಲಿಕ್ಕರ್ ತಯಾರಕರೆಲ್ಲ ಈ ಶಿವಣ್ಣಗೌಡನನ್ನು ಮುಂದಿಟ್ಟುಕೊಂಡೇ ಕೋಟಿ ಕೋಟಿ ದೋಚುತ್ತಿದ್ದಾರೆ. ಈ ಪೈಕಿ ತಮಿಳುನಾಡಿಗೆ ... ಲಿಕ್ಕರ್ ಸ್ಮಗಲ್ ಮಾಡುವ ಹೊಸಮಗ್ಗದ ರಾಮಚಂದ್ರ ಎಂಬಾತ ಇದೇ ಶಿವಣ್ಣಗೌಡ ಪಾಟೀಲನಿಗೆ ಮಂತ್ಲಿ ಪಾವತಿದಾರ.

ಬೆಂಗಳೂರಿನ ಸಿದ್ದರಾಜು, ತುಮಕೂರಿನ ಚನ್ನದೇವರು, ಕಮ್ಮನಹಳ್ಳಿಯ ಬಾಲಸುಬ್ರಹ್ಮಣಿ ಮತ್ತು ಆತನ ಅಳಿಯ ಗಣೇಶ್, ಟ್ಯಾನರಿ ರಸ್ತೆಯ ಮುಜೀಬ್ ಮುಂತಾದ ಲಿಕ್ಕರ್ ಸ್ಮಗ್ಲರ್‌ಗಳೆಂದರೆ ಅಬಕಾರಿ ಇಲಾಖೆಯ ಪ್ರಾಮಾಣಿಕರೆಲ್ಲರ ಕಿವಿ ನೆಟ್ಟಗಾಗುತ್ತದೆ. ಗೋವಾದಿಂದ ಚೀಪ್ ಲಿಕ್ಕರ್ ತರಿಸಿ ಅದನ್ನು ಕೇರಳ ಮತ್ತು ತಮಿಳುನಾಡಿಗೆ ಸಾಗಿಸುವುದು, ಸ್ಪಿರಿಟ್ ಸ್ಮಗ್ಲಿಂಗ್ ಇತ್ಯಾದಿ ಮಾಡಿಯೇ ಕೋಟ್ಯಾಧಿಪತಿಗಳಾದ ಈ ದಂಧೆಕೋರರಿಗೆಲ್ಲ ಅಬಕಾರಿ ವಿಚಕ್ಷಣ ದಳದ ಶಿವಣ್ಣಗೌಡ ಪಾಟೀಲನೇ ಗಾಡ್‌ಫಾದರ್!

ಇದಲ್ಲದೆ ಕೆ.ಆರ್.ಪುರದ ಚಂದ್ರಮೌಳಿ ಎಂಬಾತ ಕೇರಳಕ್ಕೆ ಸ್ಪಿರಿಟ್ ಹೊಡೆಯುವುದಷ್ಟೇ ಅಲ್ಲ ಗೋವಾದ ಲಿಕ್ಕರ್ ಮತ್ತು ಬಾಟಲಿಗಳ ನಕಲಿ ಕ್ಯಾಪ್ ಸಾಗಿಸುತ್ತಾನೆ. ಚಿತ್ರದುರ್ಗದ ತಿಪ್ಪೇಸ್ವಾಮಿ ಎಂಬಾತನದ್ದೂ ಇದೇ ಕಸುಬು. ಇಂಥ ಸ್ಮಗ್ಲರ್‌ಗಳು, ದಂಧೆಕೋರರನ್ನು ಮುಂದಿಟ್ಟುಕೊಂಡು ಅಬಕಾರಿ ಅಧಿಕಾರಿ ಶಿವಣ್ಣಗೌಡ ಪಾಟೀಲ್ ಸಿಕ್ಕಾಪಟ್ಟೆ ಖಮಾಯಿಸುತ್ತಿದ್ದಾನೆಂದರೆ ಅದಕ್ಕೆ ಬೆಂಗಾವಲಾಗಿರುವವನೇ ಮಂತ್ರಿ ಭಾವ ಮಂಜುನಾಥ್!

ಹಿಂದೆ ಇನ್ಸ್‌ಪೆಕ್ಟರ್ ಸೌದಾಗರ್ ಅಬಕಾರಿ ಮತ್ತು ಲಾಟರಿ ಜಾರಿ ದಳಕ್ಕೆ ಅಧಿಕಾರಿಯಾಗಿದ್ದಾಗ ಇಂಥ ಸ್ಮಗ್ಲಿಂಗ್ ದೊರೆಗಳನ್ನೆಲ್ಲ ಜೈಲಿಗಟ್ಟಿದ್ದರು. ತದನಂತರ ಕುಮಾರ್ ಕರಿನಿಂಗ ಬಂದಾಗಲೂ ದಂಧೆ ನಿಯಂತ್ರಣದಲ್ಲೇ ಇತ್ತು. ಮೊದಮೊದಲು ಶಿವಣ್ಣಗೌಡ ಸ್ಟ್ರಿಕ್ಟ್ ಆಗಿಯೇ ಇದ್ದ. ಬಿಜೆಪಿ ಸರ್ಕಾರದಲ್ಲಿ ರಾಜೂಗೌಡ ಮಂತ್ರಿಯಾಗುತ್ತಿದ್ದಂತೆ ನಿರ್ಲಜ್ಜ ಲೂಟಿಗೆ ನಿಂತ. ಆವತ್ತು ಶುರುವಾದ ಇಂಥ ಅಕ್ರಮಗಳೆಲ್ಲ ಕಾಂಗ್ರೆಸ್ ಅಧಿಕಾರಕ್ಕೆ ಬಂದ ನಂತರವೂ ಮಂತ್ರಿ ಸಂಬಂಧಿಯ ಶ್ರೀರಕ್ಷೆಯೊಂದಿಗೆ ಮತ್ತಷ್ಟು ವಿಜೃಂಭಣೆಯಿಂದ ನಡೆಯುತ್ತದೆಯೆಂದರೆ ಅಬಕಾರಿ ವ್ಯವಸ್ಥೆ ಎಕ್ಕುಟ್ಟಿ ಹೋಗದೇ ಇದ್ದೀತ್ಯಾ?



ಮೋದಿಯ ಬೆಂಗಳೂರು ಪ್ರೇಯಸಿ

ಯಾರಿವಳು ಮಾನಸಿ?

ಹಗಲೂರಾತ್ರಿ ಈ ದೇಶದ ಅಭಿವೃದ್ಧಿಯ ಬಗ್ಗೆ, ಯುವಶಕ್ತಿಯ ಬಗ್ಗೆ, ಸಂಸ್ಕೃತಿ ರಕ್ಷಣೆಯ ಬಗ್ಗೆಯೇ ಯೋಚಿಸುತ್ತಿರುತ್ತೇನೆ, ಈ ದೇಶದ ಉದ್ಧಾರವೇ ತನ್ನ ಏಕೈಕ ಆಶೆ, ತನಗೆ ಕುಟುಂಬ ಎಂಬುದಿರಲಿ ಖಾಸಗಿ ಬದುಕೆಂಬುದೇ ಇಲ್ಲ ಎಂದೆಲ್ಲ ಪೋಸು ಕೊಡುತ್ತಿದ್ದ ನರಹಂತಕ ನರೇಂದ್ರ ಮೋದಿ ಅದೆಂತಹ ವಿಕೃತ ಮನಸ್ಸಿನವನು ಎಂಬುದು 'ಮಹಿಳೆ ಮೇಲೆ ಅಕ್ರಮ ಬೇಹುಗಾರಿಕೆ' ಎಂಬ ಹಗರಣದಿಂದ ಬಟಾಬಯಲಾಗಿದೆ.

ಈ ಹಗರಣದಲ್ಲಿ ಮೋದಿಯ ಸರ್ವಾಧಿಕಾರಿ ಗುಣವೂ, ಕಾನೂನಿಗೆ ಬಗೆಗೆ ಆತನಿಗಿರುವ ಉಡಾಫೆ ಸ್ವಭಾವವೂ, ಇತರರ ಖಾಸಗಿ ಬದುಕಿನ ಬಗ್ಗೆ ಆತನಿಗಿರುವ ಹೇವರಿಕೆಯೂ ಸ್ಪಷ್ಟವಾಗಿದೆಯಲ್ಲದೆ ಮಹಿಳೆಯೋರ್ವಳಿಂದ ತಿರಸ್ಕೃತಗೊಂಡು 'ಪ್ರೇಮ ಮತ್ಸರ'ದಲ್ಲಿ ಕುದ್ದುಹೋಗಿರುವ ಮಜಬೂತಾದ ಸಂಗತಿಯೂ ಅಡಕವಾಗಿದೆ.

ಇದೆಲ್ಲ ಈಗ ಬಹಿರಂಗಗೊಂಡಿದ್ದರೂ ಇದು ನಡೆದದ್ದು ಹಲವಾರು ವರ್ಷಗಳ ಹಿಂದೆ.

ಈ ಕತೆಯ ಹೀರೋಯಿನ್ ಹೆಸರು ಮಾನಸಿ ಸೋನಿ. ಇದರಲ್ಲಿ ಹೀರೋ ಇಲ್ಲ, ಬದಲಾಗಿ ಹೀರೋಯಿನ್‌ಳನ್ನು ಇನ್ನಿಲ್ಲದಂತೆ ಕಾಡುವ ರೌಡಿ ಗ್ಯಾಂಗಿನ ಲೀಡರ್ ಒಬ್ಬನಿದ್ದಾನೆ. ಆತನೇ ನರೇಂದ್ರ ಮೋದಿ. ಆತನ ಪ್ರಮುಖ ಸೈಡ್ ಕಿಕ್‌ನ ಹೆಸರು ಅಮಿತ್ ಶಾ. ಕಾಮಿಡಿ ಒದಗಿಸಿರುವವರು ಐಪಿಎಸ್ ಅಧಿಕಾರಿ ಜಿ.ಎಲ್.ಸಿಂಘಲ್. ಇದರ ನಿರ್ದೇಶಕ ಐಎಎಸ್ ಅಧಿಕಾರಿ ಪ್ರದೀಪ್ ಶರ್ಮ. ಅಂದ ಹಾಗೆ ಇದು ನರೇಂದ್ರ ಮೋದಿಯ ಖಾಸಾ ಲವ್ ಸ್ಟೋರಿ!

ಭೂಕಂಪನದ ಸುತ್ತ ಲವ್ ಡವ್

ಈ ಕತೆ ಪ್ರಾರಂಭವಾಗಿದ್ದು 2005ರಲ್ಲಿ, 2001ರಲ್ಲಿ ಸಂಭವಿಸಿದ ಭೂಕಂಪನದಲ್ಲಿ ಗುಜರಾತಿನ ಹಲವು ನಗರಗಳು ಉರುಳಿಬಿದ್ದಿದ್ದವು. ಅವುಗಳಲ್ಲಿ ಕಚ್ ಜಿಲ್ಲೆಯ ಭುಜ್ ನಗರವೂ ಒಂದಾಗಿತ್ತು. ಆದ ಆ ಕಚ್ ಜಿಲ್ಲೆಯ ಡಿಸಿ ಆಗಿದ್ದವರು ಐಎಎಸ್ ಅಧಿಕಾರಿ ಪ್ರದೀಪ್ ಶರ್ಮ. ಅವರು ಭೂಕಂಪನದಲ್ಲಿ ನಶಿಸಿದ್ದ ಕಟ್ಟಡಗಳನ್ನು ಜೀರ್ಣೋದ್ಧಾರ ಮಾಡುವ ಕೆಲಸದಲ್ಲಿ ತೊಡಗಿದ್ದರು. ಭುಜ್ ನಗರದಲ್ಲಿರುವ ಒಂದು ಗುಡ್ಡದ ಮೇಲೆ ಒಂದು ಕೈತೋಟವನ್ನು ನಿರ್ಮಿಸಲು 2005ರಲ್ಲಿ ಮುಂದಾದರು. ಈ ಕುರಿತು ಅವರು ಪ್ರಕಟಿಸಿದ್ದ ಟೆಂಡರ್‌ಗೆ ಸ್ಪಂದಿಸಿದವರಲ್ಲಿ ಮಾನಸಿ ಸೋನಿ ಎಂಬ ಮಹಿಳಾ ವಾಸ್ತುವಿನ್ಯಾಸಕಾರಿಯೂ ಇದ್ದರು. ಮೂಲತಃ ಗುಜರಾತಿನವರಾದ ಮಾನಸಿ ಆಗ ಬೆಂಗಳೂರು ನಿವಾಸಿ ಆಗಿದ್ದರು.

ಆಕೆಯ ಪ್ರತಿಭೆಯ ಕಾರಣಕ್ಕೋ ಅಥವಾ ಗುಜರಾತಿನ ಮೂಲದವರು ಎಂಬ ಕಾರಣಕ್ಕೋ, ಅಂತೂ ಆ 'ಹಿಲ್ ಗಾರ್ಡನ್' ನಿರ್ಮಿಸುವ ಗುತ್ತಿಗೆ ಮಾನಸಿ ಸೋನಿ ಪಾಲಾಯಿತು. ಆಕೆ ಆ ಕೆಲಸವನ್ನು ಕೈಗೆತ್ತಿಕೊಂಡಾಗ ಆಕೆ ಮತ್ತು ಪ್ರದೀಪ್ ಶರ್ಮ ನಡುವೆ ಸ್ನೇಹ ಏರ್ಪಟ್ಟಿತು. ಕೆಲವು ತಿಂಗಳಲ್ಲಿ ಮಾನಸಿ ತನಗೆ ವಹಿಸಿದ್ದ ಗಾರ್ಡನ್ ವಿನ್ಯಾಸದ ಕೆಲಸವನ್ನು ಮುಗಿಸಿದಳು. ಆ ಗಾರ್ಡನ್‌ಅನ್ನು 2006ರಲ್ಲಿ ಉದ್ಘಾಟನೆ ಮಾಡಲು ಸ್ವತಃ ಮುಖ್ಯಮಂತ್ರಿ ನರೇಂದ್ರ ಮೋದಿಯೇ ಆಗಮಿಸಿದ. ಆಗ ಮಾನಸಿಯನ್ನು ಮೋದಿಗೆ ಪರಿಚಯಿಸಿದ್ದು ಡಿಸಿ ಪ್ರದೀಪ್ ಶರ್ಮ.

ಮಾನಸಿ ನಿರ್ಮಿಸಿದ್ದ ತೋಟದ ಸೌಂದರ್ಯವೋ ಅಥವಾ ಮಾನಸಿಯ ಸೌಂದರ್ಯವೋ, ಒಟ್ಟಾರೆಯಾಗಿ ಮೋದಿ ಮಾರುಹೋದ. ಕೂಡಲೇ ತನ್ನ ಖಾಸಗಿ ಮೊಬೈಲ್ ನಂಬರ್‌ಅನ್ನು ಮಾನಸಿಯ ಕೈಗಿಟ್ಟು "ಯಾವಾಗ ಬೇಕಾದರೂ ನನ್ನನ್ನು ಸಂಪರ್ಕಿಸು" ಎಂದು ಆಕೆಗೆ ಹೇಳಿದ.

ಮಜನೂ ಮೋದಿ!

ಮೋದಿ ಪ್ರಭಾವಿ ಮುಖ್ಯಮಂತ್ರಿ. ಮಾನಸಿ ಆಗಿನ್ನೂ ಪ್ರತಿ ಕಣದಲ್ಲೂ ಜೀವನೋತ್ಸಾಹ ತುಂಬಿಕೊಂಡಿದ್ದ ಯುವತಿ; ಅಧಿಕಾರದತ್ತ ಆಕರ್ಷಿತಗೊಳ್ಳುವ ಮನಃಸ್ಥಿತಿಯವಳು. ಮೋದಿಯ ಖಾಸಗಿ ಮೊಬೈಲ್ ನಂಬರ್ ಸಿಕ್ಕಿದ್ದೇ ತಡ ಆಕೆ ಆಗೀಗ ಆತನಿಗೆ ಫೋನ್ ಮಾಡಲಾರಂಭಿಸಿದಳು. ಕುಟುಂಬ, ಕೆಲಸ ಎಂದೆಲ್ಲ ಆಕೆ ಆಗಾಗ್ಗೆ ಗುಜರಾತ್ ರಾಜಧಾನಿ ಅಹಮದಾಬಾದಿಗೆ ಹೋಗುತ್ತಿದ್ದಳಾದ್ದರಿಂದ ಮೋದಿಯನ್ನೂ ಭೇಟಿ ಮಾಡಲಾರಂಭಿಸಿದಳು. ಆಗ ಶುರುವಾಯಿತು ಮೋದಿ ಮತ್ತು ಮಾನಸಿ ನಡುವಿನ ಗುಪ್ತ ಡಿಂಗ್ ಡಾಂಗ್!

ಮೋದಿಗೆ ಈ ಹಿಂದೆಯೇ ಮದುವೆಯಾಗಿ ದ್ದರೂ ಆತ ಕೈಹಿಡಿದ ಹೆಂಡತಿಯನ್ನು ತಿರಸ್ಕರಿಸಿರುವವನು. ತಾನು ಆರೆಸ್ಸೆಸ್‌ನ ನಿಷ್ಠಾವಂತ ಕಾರ್ಯಕರ್ತ ಎಂದು ಹೇಳಿಕೊಳ್ಳುವ ಮೋದಿ ಇತರೆ ಚೆಡ್ಡಿ ಕಾರ್ಯಕರ್ತರಂತೆ ತಾನೂ ಬ್ರಹ್ಮಚಾರಿ ಎಂದು ಪೋಸು ಕೊಡುವವನು. ಇಂತಹ ಮೋದಿ ಗುಪ್ತವಾಗಿ ಮಾನಸಿ ಜೊತೆ ಅದೆಷ್ಟು ಗಾಢ ಸಂಬಂಧ ಹೊಂದಿದನೆಂದರೆ ಆಕೆ ಯಾವ ಗಳಿಗೆಯಲ್ಲಿ ಹೋದರೂ ಆತ ಅದೆಷ್ಟೇ ಪ್ರಮುಖ ಕೆಲಸದಲ್ಲಿ ತೊಡಗಿದ್ದರೂ ಆತ ಅದನ್ನೆಲ್ಲ ಬಿಟ್ಟು ಆಕೆಯನ್ನು ಬರಮಾಡಿಕೊಳ್ಳುತ್ತಿದ್ದ, ತನ್ನೆಲ್ಲ ಜವಾಬ್ದಾರಿಗಳ ನಡುವೆಯೇ ಆತ ದಿನಕ್ಕೆ ಕನಿಷ್ಠವೆಂದರೂ ಆಕೆಯೊಂದಿಗೆ ಹತ್ತಾರು ಬಾರಿ ಫೋನ್‌ನಲ್ಲಿ ಮಾತನಾಡುತ್ತಿದ್ದ.

ಮೋದಿ ಮತ್ತು ಮಾನಸಿ ನಡುವಿನ ಸಂಬಂಧದ ಬಗ್ಗೆ ಪ್ರದೀಪ್ ಶರ್ಮನಿಗೆ ಗೊತ್ತಾಗಲು ಬಹಳ ದಿನಬೇಕಾಗಲಿಲ್ಲ.

ಒಮ್ಮೆ 2006ರ ಮಾರ್ಚ್‌ನಲ್ಲಿ ಪ್ರದೀಪ್ ಶರ್ಮನಿಗೆ ಫೋನ್ ಮಾಡಿದ ಮಾನಸಿ ತಾನು ಅಹಮದಾಬಾದಿಗೆ ಆಗಮಿಸಿರುವುದಾಗಿಯೂ ಮಾರನೆ ದಿನ ಭುಜ್ ನಗರಕ್ಕೆ ಬಂದು ಶರ್ಮನನ್ನು ಭೇಟಿ ಆಗುವುದಾಗಿಯೂ ಹೇಳಿದಳು. ಆದರೆ ಆಕೆ ಭುಜ್ ನಗರಕ್ಕೆ ಹೋಗಲೇ ಇಲ್ಲ, ಯಾಕೆ ಎಂದು ವಿಚಾರಿಸಲು ಶರ್ಮ ಆಕೆಯ ಮೊಬೈಲ್ ಫೋನಿಗೆ ಕರೆ ಮಾಡಿದರೆ ಅದು ಸ್ವಿಚ್ ಆಫ್ ಆಗಿತ್ತು, ಆದರೆ ಮಾರನೆ ದಿನವೂ ಆಕೆಯ ಫೋನ್ ಆಫ್ ಆಗಿತ್ತು.

ಮೂರು ದಿನಗಳ ನಂತರ ಪ್ರತ್ಯಕ್ಷವಾದ ಮಾನಸಿಯನ್ನು "ಏನಾಯಿತು? ಎಲ್ಲಿದ್ದೆ?" ಎಂದು ಶರ್ಮ ಕೇಳಿದಾಗ ಆಕೆ ತಾನು ಮೋದಿಯ ಮನೆಯಲ್ಲಿ ಉಳಿದುಕೊಂಡಿದ್ದೆ ಎಂದು ಉತ್ತರಿಸಿದಾಗ ಶರ್ಮನಿಗೆ ಅಚ್ಚರಿ ಆಗಿತ್ತು, ಅಷ್ಟೇ ಅಲ್ಲ, ತಾನು ಮೋದಿಯ ಮನೆಯಲ್ಲಿ ತಂಗಿದ್ದಾಗ ತನಗೆ ಜ್ವರ ಬಂತೆಂದೂ, ತನಗಾಗಿ ವೈದ್ಯರನ್ನು ಕರೆಸಬೇಕೆಂದು ಮೋದಿಯನ್ನು

⏭ 12

ಒಂದು ನಿಗೂಢ ಪ್ರೇಮಕತೆ



ಮೋದಿ ಮತ್ತು ಅಮಿತ್ ಶಾ

ಮೋದಿಯನ್ನು 'ಮೋಡಿ' ಮಾಡಿದ ಬೆಂಗಳೂರಿನ ಬೆಡಗಿ ಮಾನಸಿ

ಈಕೆಯ ಹೆಸರು ಖಂಡಿತವಾಗಿಯೂ 'ಮಾಧುರಿ' ಅಲ್ಲ, ಆಕೆಯ ನಿಜವಾದ ಹೆಸರು ಮಾನಸಿ ಸೋನಿ.

ಮಾನಸಿ ಗುಜರಾತ್ ಮೂಲದವಳು. ಆಕೆಯ ತಂದೆ ಪ್ರಾನ್‌ಲಾಲ್ ಮದುವೆಯಾಗಿದ್ದು 1971ರಲ್ಲಿ, ಆತನಿಗೆ ಮೂವರು ಮಕ್ಕಳು. ಮಕ್ಕಳ ಹೆಸರು ಹಿರಿತ್, ಚಿಂತನ್ ಮತ್ತು ಮಾನಸಿ. ಪ್ರಾನ್‌ಲಾಲ್ ಹಲವು ದಶಕಗಳಿಂದ ಆರೆಸ್ಸೆಸ್ ಮತ್ತು ಅದರ ಇತರೆ ಸಂಘಟನೆಗಳೊಂದಿಗೆ ನಿಕಟಸಂಪರ್ಕ ಹೊಂದಿದವರಾಗಿದ್ದಾರೆ.

ಒಂದು ದಶಕದ ಹಿಂದೆ ಪ್ರಾನ್‌ಲಾಲ್ ಮಧ್ಯಮ ವರ್ಗದ ಸಾಮಾನ್ಯ ವ್ಯಕ್ತಿಯಾಗಿದ್ದರು. ಆದರೆ ಯಾವಾಗ ನರಹಂತಕ ನರೇಂದ್ರ ಮೋದಿ ಗುಜರಾತಿನ ಮುಖ್ಯಮಂತ್ರಿಯಾದನೋ ಅಂದಿನಿಂದ ಪ್ರಾನ್‌ಲಾಲ್ ಅವರ ಆಸ್ತಿಪಾಸ್ತಿಗಳು ಹೆಚ್ಚುತ್ತಾ ಹೋಗಿವೆ. ಇವತ್ತು ಪ್ರಾನ್‌ಲಾಲ್ ಗುಜರಾತಿನ ಅತಿ ಶ್ರೀಮಂತರಲ್ಲಿ ಒಬ್ಬ ಎನಿಸಿಕೊಂಡಿದ್ದಾನೆ.

ಮಾನಸಿ ಮತ್ತು ಆಕೆಯ ಇಬ್ಬರು ಸಹೋದರರೂ ಬೆಂಗಳೂರಿನ ಬಿಎಂಎಸ್ ಇಂಜಿನಿಯರಿಂಗ್ ಕಾಲೇಜಿನಿಂದ ವಿವಿಧ ಕ್ಷೇತ್ರಗಳಲ್ಲಿ ಪದವಿ ಪಡೆದಿದ್ದಾರೆ.

ವಾಸ್ತುಶಿಲ್ಪದಲ್ಲಿ ಪದವಿ ಪಡೆದಿರುವ ಮಾನಸಿ ಮೋದಿಯನ್ನು ಭೇಟಿ ಆಗಿದ್ದು 2005ರಲ್ಲಿ, ಸ್ವಲ್ಪ ದಿನಗಳಲ್ಲೇ ಮಾನಸಿ ಮತ್ತು ಮೋದಿ ನಡುವೆ ಲವ್ ಅಫೇರ್ ಶುರುವಾಯಿತು. ಅದೇ 2005ರಲ್ಲಿ ನಡೆದ ಶರದ್ ಉತ್ಸವದಲ್ಲಿ ಮೋದಿಗೆಂದು 25,000 ರೂಪಾಯಿಗಳ ವೆಚ್ಚದಲ್ಲಿ ಒಂದು ಒಂಟೆ ಗಾಡಿಯನ್ನು ಅಲಂಕರಿಸಲಾಗಿತ್ತು, ಆಗ ಮೋದಿ ಮಾನಸಿಯೊಂದಿಗೆ ಈ ಗಾಡಿಯಲ್ಲಿ ಕುಳಿತು ಬೆಳದಿಂಗಳಲ್ಲಿ ಸುತ್ತಾಡಿದ್ದ, ಆತನಿಗೆಂದೇ ವಿಶೇಷ ಟೆಂಟ್ ಅನ್ನೂ ನಿರ್ಮಿಸಲಾಗಿತ್ತು, ಅವತ್ತು ಮೋದಿ ಮತ್ತು ಮಾನಸಿ ಇಬ್ಬರೂ ಆ ಟೆಂಟಿನಲ್ಲೇ ಉಳಿದುಕೊಂಡಿದ್ದರು. ಅವರಿಬ್ಬರಿಗೆಂದೇ ಅವತ್ತು ಸ್ಪೆಷಲ್ ಭೋಜನ ವ್ಯವಸ್ಥೆಯನ್ನೂ ಮಾಡಲಾಗಿತ್ತು,

2006ರ ಮಾರ್ಚ್ ತಿಂಗಳಲ್ಲಿ ಒಮ್ಮೆ ಮಾನಸಿ ಮೋದಿಯ ಮನೆಯಲ್ಲಿ ಉಳಿದುಕೊಂಡಿದ್ದಾಗ ಆಕೆಗೆ ರಕ್ತಸ್ರಾವ ಪ್ರಾರಂಭವಾಯಿತು. ಮನೆಯಲ್ಲೇ ಅದಕ್ಕೆ ಚಿಕಿತ್ಸೆ ನೀಡಿದರೂ ಅದರಿಂದ ಏನೂ ಉಪಯೋಗವಾಗಲಿಲ್ಲ, ಆಗ



ಆಕೆಯನ್ನು ಬರೋಡಾದಲ್ಲಿರುವ ಒಂದು ನರ್ಸಿಂಗ್ ಹೋಮಿಗೆ ಸೇರಿಸಿ ಚಿಕಿತ್ಸೆ ಕೊಡಿಸಲಾಯಿತು. ಹಲವರ ಪ್ರಕಾರ ಆಗ ಆಕೆ ಮೋದಿಯಿಂದ ಗರ್ಭ ಧರಿಸಿದ್ದರಿಂದ ಆಕೆಗೆ ಅಬಾರ್ಷನ್ ಮಾಡಿಸಲಾಗಿತ್ತು.

2008ರಲ್ಲಿ ಮಾನಸಿ ತನ್ನ ಇಂಜಿನಿಯರ್ ಸಹೋದರರ ಜೊತೆಗೂಡಿ ಈಕ್ವಿಲಿಬ್ರಿಯಮ್ ಎನರ್ಜಿ ಪ್ರೈವೇಟ್ ಲಿಮಿಟೆಡ್ ಎಂಬ ಖಾಸಗಿ ಕಂಪನಿಯನ್ನು ಶುರುಮಾಡಿದಳು. ಈ ಕಂಪನಿಯು ವಿದ್ಯುತ್ ವಲಯದಲ್ಲಿ ನಿರತವಾಗಿದ್ದು ಮೋದಿಯ ಗುಜರಾತ್ ಸರ್ಕಾರ ಈ ಕಂಪನಿಗೆ ಹಲವಾರು ಕಾಂಟ್ರಾಕ್ಟ್‌ಗಳನ್ನು ಕೊಡಿಸಿದೆ. ಜೊತೆಗೆ ವಿವಿಧ ಖಾಸಗಿ ಕಂಪನಿಗಳೂ ಮಾನಸಿಯ ಕಂಪನಿಗೆ ದೊಡ್ಡದೊಡ್ಡ ಕಾಂಟ್ರಾಕ್ಟ್‌ಗಳನ್ನು ಕೊಡುವಂತೆ ನೋಡಿಕೊಂಡ. ಪರಿಣಾಮವಾಗಿ ಮಾನಸಿ ಮತ್ತು ಆಕೆಯ ಸಹೋದರರ ಕಂಪನಿ ದೊಡ್ಡದಾಗಿ ಬೆಳೆದು ನಿಂತಿತು.

ವಿವಿಧ ಕಾರಣಗಳಿಗೆ 2009ರಲ್ಲಿ ಮೋದಿ ಮತ್ತು ಮಾನಸಿ ನಡುವಿನ ಸಂಬಂಧ ಅಂತ್ಯಗೊಂಡಿತು. ಹೇಗಾದರೂ ಮಾಡಿ ಮಾನಸಿಗೆ ಮದುವೆ ಮಾಡಿಸಿದರೆ ಆಕೆ ತನ್ನೊಂದಿಗೆ ಹೊಂದಿದ್ದ ಸಂಬಂಧದ ಬಗ್ಗೆ ಬಾಯಿ ಮುಚ್ಚಿಕೊಂಡಿರುತ್ತಾಳೆಂದು ಭಾವಿಸಿದ ಮೋದಿ ಆಕೆಯ ತಂದೆಯ ಜೊತೆಗೂಡಿ ಅವಳಿಗೆ ವರ ಒಬ್ಬನನ್ನು ಹುಡುಕಲಾರಂಭಿಸಿದ. ಮಾನಸಿಯನ್ನು ಮದುವೆಯಾಗುವಂತೆ ಶೇಖರ್ ವಿದ್ಯಾರ್ಥಿ ಎಂಬ ಐಎಎಸ್ ಅಧಿಕಾರಿಯನ್ನು ಒಪ್ಪಿಸುವಲ್ಲಿ ಮೋದಿ ಯಶಸ್ವಿಯಾದ.

ಹರಿಯಾಣ ಮೂಲದವನಾದ ಶೇಖರ್ ವಿದ್ಯಾರ್ಥಿ ಆಗ ಗುಜರಾತ್ ಕಾಡರ್‌ನಲ್ಲಿದ್ದ. ಆದರೆ ಯಾವಾಗ ಮಾನಸಿ ಮದುವೆಯ ಹಿಂದೆ ಮೋದಿಯ ಪ್ರೇಮ ಸಲ್ಲಾಪ ಅಡಗಿದೆ ಎಂದು ಶೇಖರ್ ವಿದ್ಯಾರ್ಥಿಗೆ ಗೊತ್ತಾಯಿತೋ ಆತ ಮಾನಸಿಯನ್ನು ಮದುವೆಯಾಗಲು ನಿರಾಕರಿಸಿದ. ಅಷ್ಟೇ ಅಲ್ಲ, 2010ರಲ್ಲಿ ಆತ ತನ್ನ ಕಾಡರ್‌ಅನ್ನೇ ಹರಿಯಾಣಕ್ಕೆ ಬದಲಾಯಿಸಿಕೊಂಡು ಗುಜರಾತಿನಿಂದ ಪಲಾಯನ ಮಾಡಿದ.

ಆಗ ಮತ್ತೋರ್ವ ವರನಿಗೆ ಅನ್ವೇಷಣೆ ಪ್ರಾರಂಭವಾಯಿತು. ಈ ಬಾರಿ ವರನನ್ನು ಹುಡುಕುವ ಜವಾಬ್ದಾರಿಯನ್ನು ಬಿಜೆಪಿಯ ಖಜಾಂಚಿ ಸುರೇಂದ್ರ ಪಟೇಲ್ ಎಂಬಾತನಿಗೆ ನೀಡಲಾಗಿತ್ತು, ಈ ಸುರೇಂದ್ರ ಪಟೇಲ್ ಮೋದಿಗೆ ಹತ್ತಿರವಾಗಿರುವವನು. ಆತ ಸತ್ಯನ್ ನಾಯಕ್ ಎಂಬ ವರನನ್ನು ಹಿಡಿದು ತಂದ.

2010ರ ಕೊನೆಯ ತಿಂಗಳಲ್ಲೋ ಅಥವಾ 2011ರ ಆರಂಭದ ತಿಂಗಳಲ್ಲೋ ಸತ್ಯನ್ ಮತ್ತು ಮಾನಸಿ ಮದುವೆ ಜರುಗಿತು. ಆ ಮದುವೆ ಕಾರ್ಯ ಅದೆಷ್ಟು ಗೌಪ್ಯವಾಗಿ ನಡೆಯಿತೆಂದರೆ ಅದಕ್ಕೆ ವರ ಸತ್ಯನ್‌ನ ಸ್ನೇಹಿತರನ್ನೂ ಆಹ್ವಾನಿಸಿರಲಿಲ್ಲ.

ಮೋದಿ ಮತ್ತು ಮಾನಸಿನ ಸಂಬಂಧ ಕುರಿತು ಐಎಎಸ್ ಅಧಿಕಾರಿ ಪ್ರದೀಪ್ ಶರ್ಮ 2011ರಲ್ಲೇ ಸುಪ್ರೀಮ್ ಕೋರ್ಟಿಗೆ ಸಲ್ಲಿಸಿದ ಮನವಿ ಪತ್ರದಲ್ಲಿ ಉಲ್ಲೇಖಿಸಿದಾಗ ಮೋದಿ "ನಾನು ಕನ್ಯಾದಾನ ಮಾಡಿದ್ದೇನೆ. ನಾನು ಆಕೆಯ ತಂದೆ ಇದ್ದಂತೆ" ಎಂದು ಬೊಗಳಿದ್ದ.

ಮದುವೆಯ ನಂತರ ಅಹಮದಾಬಾದಿನ ಶಾಲಿಗ್ರಾಮ ಏರಿಯಾದಲ್ಲಿ ಮಾನಸಿ ಮತ್ತು ಸತ್ಯನ್ ದಂಪತಿಗೆ ಒಂದು ಫ್ಲಾಟ್‌ಅನ್ನು ಕೊಡಲಾಗಿತ್ತು, ಅವರಿಬ್ಬರೂ ಅದೇ ಫ್ಲಾಟಿನಲ್ಲಿ ಇತ್ತೀಚಿಗಿನ ತನಕ ವಾಸಿಸುತ್ತಿದ್ದರು. ಆದರೆ ನಾಲ್ಕೈದು ದಿನಗಳ ಹಿಂದೆ ಮೋದಿಯ ಅಕ್ರಮ ಬೇಹುಗಾರಿಕೆಯ ಹಗರಣ ಸ್ಫೋಟಗೊಂಡಿತೋ ಅಂದಿನಿಂದ ಮಾನಸಿ ಮತ್ತು ಸತ್ಯನ್ ಆ ಫ್ಲಾಟಿನಿಂದ ಮಂಗಮಾಯವಾಗಿದ್ದಾರೆ.

ಮಾನಸಿಯ ಪ್ರೇಮ ಪ್ರಸಂಗ ಮತ್ತು ಮದುವೆಯಾದ ರೀತಿ ನೋಡಿದರೆ ಆಕೆಯ ಬದುಕಿನಲ್ಲಿ ಮೋದಿ ಮತ್ತು ಅಮಿತ್ ಶಾ ಖಾಪ್ ಪಂಚಾಯತ್‌ನ ದುಷ್ಟ ನಾಯಕರಂತೆ ವರ್ತಿಸಿರುವುದು ಗೊತ್ತಾಗುತ್ತದೆ.

ಮಾನಸಿ ಈಗ ಮೋದಿಯ ಮಾನಸಿಕ ಭಯೋತ್ಪಾದನೆಯಿಂದ ಅದೆಷ್ಟು ಹೆದರಿದ್ದಾಳೆಂದರೆ ಫೇಸ್‌ಬುಕ್ ತಾಣದಿಂದ ಮಾತ್ರವಲ್ಲ, ಇಂಟರ್‌ನೆಟ್‌ನ ಇತರೆ ಎಲ್ಲ ಕಡೆಯಲ್ಲೂ ತನ್ನ ಫೋಟೋಗಳನ್ನು ಮತ್ತು ತನ್ನನ್ನು ಕುರಿತಾದ ವಿಚಾರಗಳನ್ನು ತೆಗೆದುಹಾಕಿದ್ದಾಳೆ. ನಮ್ಮ ಹುಡುಕಾಟದಲ್ಲಿ ಸಿಕ್ಕಿರುವ ಆಕೆಯ ಒಂದು ಚಿಕ್ಕ ಫೋಟೋವನ್ನು ಇಲ್ಲಿ ಪ್ರಕಟಿಸಿದ್ದೇವೆ.



ಮೋದಿಯೇ 'ಸಾಹೇಬ' ಎಂದು ಜಗತ್ತಿಗೆ ಸ್ಪಷ್ಟಪಡಿಸಿದ ಚೆಡ್ಡಿಗಳು

ಮಾನಸಿ ಸೋನಿ ಎಂಬ ಮಹಿಳೆಯ ಮೇಲೆ ಅಕ್ರಮವಾಗಿ ನಿಗಾ ಇಡಲಾಗಿತ್ತು ಎಂಬ ಸುದ್ದಿ ಸ್ಫೋಟಿಸುತ್ತಿದ್ದಂತೆ ಬಿಜೆಪಿಯ ನಾಯಕರು 'ಡ್ಯಾಮೇಜ್ ಕಂಟ್ರೋಲ್'ಗೆ ಮುಂದಾದರು. ಆದರೆ ಮೋದಿ ಇಮೇಜಿಗೆ ಆಗಿದ್ದ ಡ್ಯಾಮೇಜ್‌ಅನ್ನು ಕಂಟ್ರೋಲ್ ಮಾಡುವ ಬದಲು ಅವರು ಹೆಚ್ಚಿನ ಡ್ಯಾಮೇಜ್ ಮಾಡಿದರು ಎಂದೇ ಹೇಳಬಹುದು.

ಯಾಕೆಂದರೆ ಮೊದಲನೆಯದಾಗಿ ಈ ಹಗರಣವನ್ನು ಜಂಟಿಯಾಗಿ ಸ್ಫೋಟಿಸಿದ 'ಕೋಬ್ರಾ ಪೋಸ್ಟ್' ಮತ್ತು 'ಗುಲೈಲ್' ಎಲ್ಲೂ ಆ ಮಹಿಳೆಯ ನಿಜವಾದ ಹೆಸರನ್ನು ಹೇಳಿರಲಿಲ್ಲ, ಬದಲಾಗಿ ಆಕೆಗೆ 'ಮಾಧುರಿ' ಎಂಬ ಹೆಸರನ್ನು ಕೊಟ್ಟಿದ್ದವು. ಹಾಗೆಯೇ ಜಿ.ಎಲ್.ಸಿಂಘಲ್ ಎಂಬ ಹಿರಿಯ ಗುಜರಾತ್ ಪೊಲೀಸ್ ಅಧಿಕಾರಿ ಸಿಬಿಐಗೆ ನೀಡಿದ್ದ ರೆಕಾರ್ಡಿಂಗ್‌ಗಳನ್ನು 'ಅಧಿಕೃತ' ಎಂದು ಎಲ್ಲೂ ಹೇಳಿರಲಿಲ್ಲ. ಇಷ್ಟೇ ಮುಖ್ಯವಾಗಿ ಆ ರೆಕಾರ್ಡಿಂಗ್‌ಗಳಲ್ಲಿರುವ ಅಮಿತ್ ಶಾನ 'ಸಾಹೇಬ್' ಕೂಡ ಯಾರೆಂದು ಸ್ಪಷ್ಟಪಡಿಸಿರಲಿಲ್ಲ.

ಇದಕ್ಕೆ ಬಿಜೆಪಿ ನಾಯಕರು ಮಾಡಿದ್ದೆಲ್ಲ ತದ್ವಿರುದ್ಧವಾಗಿತ್ತು. ಈ ಹಗರಣದಿಂದಾಗಿ ತಮ್ಮ ಪ್ರಧಾನಿ ಅಭ್ಯರ್ಥಿಯ ರಾಜಕೀಯ ಆಕಾಂಕ್ಷೆಗೆ ಧಕ್ಕೆ ಬರುತ್ತದೆ, ಆ ಮೂಲಕ ತಮ್ಮ ಪಕ್ಷದ ಆಶಯವೆಲ್ಲ ನುಚ್ಚುನೂರಾಗುತ್ತದೆ ಎಂಬ ಆತಂಕಕ್ಕೆ ಬಿದ್ದ ಚೆಡ್ಡಿಗಳು ಈ ಹಗರಣದ ರೂವಾರಿಯಾದ ಮೋದಿಯ ರಕ್ಷಣೆ ಬಗ್ಗೆ ಯೋಚಿಸಿದರೇ ಹೊರತು ಆ ಮಹಿಳೆಯ ರಕ್ಷಣೆ ಬಗ್ಗೆ ಅಲ್ಲ. ಆ ಕಾರಣಕ್ಕೇ ಅವರು ಮಾನಸಿಯ ತಂದೆ ಪ್ರಾನ್‌ಲಾಲ್ ಸೋನಿಯಿಂದ ಮೋದಿಯ ಪರವಾದ ಪತ್ರಿಕಾ ಹೇಳಿಕೆಯನ್ನು ಕೊಡಿಸಿದರು. ಹಾಗೆ ಮಾಡುವ ಮೂಲಕ ಸೋನಿ ಅವರ ಕುಟುಂಬ ಮತ್ತು ಅವರ ಮಗಳ ಹೆಸರಿಗೆ ಕಳಂಕ ತಾಗುವಂತೆ ಮಾಡಿದರು.

ಮೋದಿಯ ರಕ್ಷಣೆಗೆಂದು ಅವರು ಪ್ರಾನ್‌ಲಾಲ್ ಸೋನಿಯಿಂದ ಕೊಡಿಸಿದ್ದ ಹೇಳಿಕೆಯಾದರೂ ಎಂತಹದ್ದಾಗಿತ್ತು?

"ಈ ರೆಕಾರ್ಡಿಂಗ್‌ಗಳು ನನ್ನ ಮಗಳನ್ನು ಕುರಿತದ್ದಾಗಿವೆ. ನನ್ನದು ಗುಜರಾತಿನ ಕುಚ್ ಜಿಲ್ಲೆಯ ಸಾಮಾನ್ಯ ಕುಟುಂಬ. ನನ್ನ ಹೆಂಡತಿಗೆ ಅಹಮದಾಬಾದಿನಲ್ಲಿ ಆಪರೇಶನ್ ಮಾಡಿಸಬೇಕಿದ್ದರಿಂದ ಈಗ ಬೆಂಗಳೂರಿನಲ್ಲಿ ವಾಸಿಸುವ ನನ್ನ ಮಗಳು ಅಹಮದಾಬಾದಿಗೆ ಬಂದು ಒಂದು ಹೋಟೆಲ್‌ನಲ್ಲಿ ತಂಗಿದ್ದಳು. ಆಕೆ ಹೊತ್ತಲ್ಲದ ಹೊತ್ತಿನಲ್ಲಿ ಹೋಟೆಲ್‌ನಿಂದ ಆಸ್ಪತ್ರೆಗೆ ಹೋಗಬೇಕಿದ್ದರಿಂದ ಸಹಜವಾಗಿಯೇ ಆಕೆಯ ಸುರಕ್ಷತೆ ಬಗ್ಗೆ ತಂದೆಯಾದ ನನ್ನಲ್ಲಿ ಆತಂಕವಿತ್ತು. ಆಗ ನಾನು ನಮ್ಮ ಕುಟುಂಬಕ್ಕೆ ಹತ್ತಿರ ಇರುವ ಮುಖ್ಯಮಂತ್ರಿ ಮೋದಿಯವರ ಸಹಾಯವನ್ನು ಕೋರಿದೆ. ರಾಜ್ಯದ ಮುಖ್ಯಸ್ಥರಾದ ಮೋದಿಯವರು ನನ್ನ ಕೋರಿಕೆ ಮೇರೆಗೆ ನನ್ನ ಮಗಳ ಮೇಲೆ ನಿಗಾ ಇಟ್ಟಿದ್ದರು." ಇದು ಮಾನಸಿಯ ತಂದೆ ಪ್ರಾನ್‌ಲಾಲ್ ಕೊಟ್ಟ ಪತ್ರಿಕಾ ಹೇಳಿಕೆ.

ಇದನ್ನು ಆಧರಿಸಿಯೇ ಬಿಜೆಪಿಯ ರಾಷ್ಟ್ರಾಧ್ಯಕ್ಷ ರಾಜನಾಥ್ ಸಿಂಗ್ "ನಮ್ಮ ಪ್ರಧಾನಮಂತ್ರಿ ಅಭ್ಯರ್ಥಿ ಯಾವ ಅಕ್ರಮವನ್ನೂ ಮಾಡಿಲ್ಲ. ಆ ಮಹಿಳೆಯ ತಂದೆಯ ಕೋರಿಕೆ ಮೇರೆಗೆ ಆಕೆಗೆ ರಕ್ಷಣೆಯನ್ನು ಒದಗಿಸಲಾಗಿತ್ತು. ರಾಜ್ಯದ ಮುಖ್ಯಸ್ಥನಿಗೆ ತನ್ನ ಜನರಿಗೆ ರಕ್ಷಣೆ ಕೊಡುವ ಜವಾಬ್ದಾರಿ ಇರುತ್ತದೆ. ಆದ್ದರಿಂದ ಮೋದಿ ತನ್ನ ರಾಜಕೀಯ ಧರ್ಮವನ್ನು ಪಾಲಿಸುತ್ತಿದ್ದರು" ಎಂದು 'ಸ್ಪಷ್ಟೀಕರಣ' ಕೊಟ್ಟಿದ್ದಾರೆ.

ಇಲ್ಲಿ ಹಲವು ಸೂಕ್ಷ್ಮಗಳನ್ನು ಗಮನಿಸಬೇಕು.

1: ಹೀಗೆ ಹೊತ್ತಲ್ಲ ಹೊತ್ತಿನಲ್ಲಿ ತಮ್ಮ ಜವಾಬ್ದಾರಿಗಳ ನಿಮಿತ್ತ ಹೊರಗೆ ಹೋಗಬೇಕಿರುವ ಎಲ್ಲಾ ಮಹಿಳೆಯರಿಗೆ ಮೋದಿ 'ರಕ್ಷಣೆ' ಕೊಡಿಸುತ್ತಾರೆಯೇ?

2: ಆಕೆಗೆ 'ರಕ್ಷಣೆ' ಕೊಡುವುದು ಮೋದಿಯ ಅಸಲಿ ಉದ್ದೇಶವಾಗಿದ್ದರೆ ಆಕೆಯ ಸುತ್ತ ಮಫ್ತಿಯಲ್ಲಿರುವ ಪೊಲೀಸರನ್ನು ನೇಮಿಸಬೇಕಿತ್ತು, ಅದಕ್ಕೆ ವಿರುದ್ಧವಾಗಿ ಆಕೆಯ ಖಾಸಗಿ ಸಂಭಾಷಣೆಗಳ ಮೇಲೆ, ಚಲನವಲನಗಳ ಮೇಲೆ ಆಕೆಗೆ ಗೊತ್ತಾಗದಂತೆ ನಿಗಾ ಇಟ್ಟದ್ದು ಯಾವ ರೀತಿಯಲ್ಲಿ 'ರಕ್ಷಣೆ' ಆದೀತು?

3. ಪ್ರಾನ್‌ಲಾಲ್ ಅವರು ಕೋರಿದರು ಎಂಬ ಮಾತ್ರಕ್ಕೆ ರಾಜ್ಯ ಗುಪ್ತದಳ, ಕ್ರೈಮ್ ಬ್ರಾಂಚ್ ಮತ್ತು ಆಂಟಿ ಟೆರರಿಸ್ಟ್ ಸ್ಕ್ವಾಡ್‌ನ ಸಿಬ್ಬಂದಿಯನ್ನು ತನ್ನ ಖಾಸಗಿ ಪಡೆ ಎಂಬಂತೆ 'ನಿಯೋಜಿಸಿದ್ದು' ಅಕ್ರಮವಲ್ಲವೇ?

4: ಆಕೆಗೆ 'ರಕ್ಷಣೆ' ನೀಡುವುದಕ್ಕೂ, ಆಕೆಯ ಮೊಬೈಲ್‌ಗಳನ್ನು ಕದ್ದಾಲಿಸುವುದಕ್ಕೂ ಎತ್ತಿಂದೆತ್ತನ ಸಂಬಂಧ?

5: ಮಾನಸಿಯ ತಾಯಿ ಆಸ್ಪತ್ರೆಯಲ್ಲಿ ಇದ್ದದ್ದು ಹಲವು ದಿನಗಳ ಮಟ್ಟಿಗೆ ಮಾತ್ರ. ಆದರೂ ಯಾಕೆ ಪೊಲೀಸರು ಆಕೆಯ ಮೇಲೆ ಸುಮಾರು ಎರಡು ತಿಂಗಳ ಕಾಲ ನಿಗಾ ಇಟ್ಟಿದ್ದರು? ಅದರ ಅವಶ್ಯಕತೆ ಏನಿತ್ತು?

ಇಂತಹ ಯಾವ ಪ್ರಶ್ನೆಗಳಿಗೂ ರಾಜನಾಥ್ ಸಿಂಗ್ ಅವರ ಬಳಿಯಾಗಲಿ, ಮೋದಿಯ ಸನ್ನಿ ಹಿಡಿಸಿಕೊಂಡಿರುವವರ ಬಳಿಯಾಗಲಿ ಉತ್ತರಗಳಿಲ್ಲ.

ಇಷ್ಟೇ ಅಲ್ಲದೆ, ಈ ಹಗರಣ ಹೊರಬಿದ್ದನಂತರ ಆ ಮಹಿಳೆಗೂ, ಪ್ರದೀಪ್ ಶರ್ಮ ಎಂಬ ಐಎಎಸ್ ಅಧಿಕಾರಿಗೂ ಅನೈತಿಕ ಸಂಬಂಧ ಇತ್ತೆಂದೂ, ಆಕೆಗೆ ಭಯೋತ್ಪಾದಕರೊಂದಿಗೆ ನಂಟು ಇತ್ತೆಂದೂ ಈಗ ಮೋದಿಯ ತುತ್ತೂರಿ ಆಗಿರುವ 'ಇಸ್ತ್ರೀವಾಲಿ' ಮಧು ಕಿಶ್ವರ್ ತರಹದವರಿಂದ ಆರೋಪಿಸುತ್ತಿರುವುದು ಎಂತಹ ಮಹಿಳಾ ವಿರೋಧಿ ನಿಲುವಲ್ಲವೇ?

ಇವೆಲ್ಲದಕ್ಕೆ ಸಮ ಎಂಬಂತೆ ಬಿಜೆಪಿ ನಾಯಕರು ಮಾಡಿದ ಇನ್ನೊಂದು ಎಡವಟ್ಟು ಯಾವುದೆಂದರೆ ಪ್ರಾನ್‌ಲಾಲ್ ಸೋನಿ ಅವರಿಂದ ಮೋದಿ ಪರ ಹೇಳಿಕೆ ಕೊಡಿಸುವ ಮೂಲಕ ಈ ಅಕ್ರಮ ರೆಕಾರ್ಡಿಂಗ್‌ಗಳು 'ಅಧಿಕೃತ'ವೆಂದೂ, ಅದರಲ್ಲಿರುವ ಅಮಿತ್ ಶಾನ 'ಸಾಹೇಬ' ಸ್ವತಃ ಮೋದಿ ಎಂದೂ ಚೆಡ್ಡಿಗಳೇ ದೃಢೀಕರಿಸಿದ್ದಾರೆ.

ವಿನಾಶಕಾಲಕ್ಕೆ ವಿಪರೀತ ಬುದ್ಧಿ ಎಂದು ಇದಕ್ಕೇ ಹೇಳಿರಬೇಕು!

ಮೋದಿಯ 'ರಕ್ಷಣಾ' ಪರಿ ಇಂತಹದ್ದು...


ಅಮಿತ್ ಶಾ

ಮಾನಸಿ ಸೋನಿ ಎಂಬ ಮಹಿಳೆಗೆ ನರಹಂತಕ ಮೋದಿಯ ಸರ್ಕಾರ 'ರಕ್ಷಣೆ' ಒದಗಿಸಿತ್ತು ಎಂದು ಬಿಜೆಪಿ ನಾಯಕರು ಈಗ ಸುಳ್ಳು ಬೊಗಳುತ್ತಿದ್ದಾರೆ. ಆದರೆ ವಾಸ್ತವವಾಗಿ ಅದು ಎಂತಹ 'ರಕ್ಷಣೆ' ಆಗಿತ್ತು ಎಂಬುದಕ್ಕೆ ಮೋದಿಯ ನಂಬಿಗಸ್ಥ ಬಂಟ ಅಮಿತ್ ಶಾ ಪೊಲೀಸ್ ಅಧಿಕಾರಿ ಜಿ.ಎಲ್.ಸಿಂಘಲ್ ಎಂಬುವವರೊಂದಿಗೆ ನಡೆಸಿದ ಹಲವು ಸಂಭಾಷಣೆಗಳ ತುಣುಕುಗಳನ್ನು ಇಲ್ಲಿ ನೀಡಿದ್ದೇವೆ.

ಶಾ: ಸಾಹೇಬರು ಮತ್ತೆ ಮತ್ತೆ ಕೇಳುತ್ತಿದ್ದಾರೆ. ಏರ್‌ಪೋರ್ಟ್‌ನಲ್ಲಿ ಏನಾಯಿತು?

ಸಿಂಘಲ್: ಆ ಹುಡುಗ ಬಂದು ಆಕೆಯನ್ನು ಬಿಟ್ಟು ಹೋದ. ನಮ್ಮವರು ಇನ್ನೂ ಅಲ್ಲೇ ಇದ್ದಾರೆ. ಇನ್ನೊಂದು ಹತ್ತು ನಿಮಿಷಗಳಲ್ಲಿ ವಿಮಾನ ಟೇಕ್ ಆಫ್ ಆಗುತ್ತದೆ. ಆಕೆ ಎಲ್ಲಿ ಹೋದರೂ ನಮ್ಮವರು ಅವಳನ್ನು ಹಿಂಬಾಲಿಸುತ್ತಾರೆ.

ಶಾ: ಯಾರೋ ಸಾಹೇಬರಿಗೆ ಹೇಳಿದರಂತೆ, ಅವರಿಬ್ಬರೂ ಎರಡು ಬಾರಿ ಹೊರಗೆ ಹೋಗಿದ್ದರು ಅಂತ. ನೀವು ಅಷ್ಟು ಸರಿಯಾಗಿ ಆಕೆಯ ಚಲನವಲನವನ್ನು ಗಮನಿಸುತ್ತಿಲ್ಲ ಅಂತ ಅನ್ನಿಸುತ್ತಿದೆ.

ಸಿಂಘಲ್: ಎಸ್ ಸರ್.

ಶಾ: ಅವರಿಬ್ಬರೂ ಶಾಪಿಂಗ್ ಹೋಗಿದ್ದರಂತೆ.

ಸಿಂಘಲ್: ಎಸ್ ಸರ್.

ಶಾ: ಅವನನ್ನು ನೋಡಕ್ಕೆ ಬಂದಿದ್ದನಲ್ಲ ಆ ಹುಡುಗ, ಅವನ ಜೊತೆಗೆ ಹೋಗಿದ್ದಳಂತೆ.

ಸಿಂಘಲ್: ನಮ್ಮವರನ್ನು ಬಿಲ್ಡಿಂಗ್ ಒಳಗೆ ಬಿಡುತ್ತಿಲ್ಲ.

ಶಾ: ಮಧ್ಯಾಹ್ನದ ಊಟಕ್ಕೂ ಹೊರಗೆ ಹೋಗಿದ್ದರು ಅಂತ ಯಾರೋ ಸಾಹೇಬರಿಗೆ ಹೇಳಿದ್ದಾರೆ.

ಸಿಂಘಲ್: ರೈಟ್... ರೈಟ್...

ಶಾ: ಅವಳು ಯಾವನ ಜೊತೆ ಹೋಗುತ್ತಾಳೆ ಅನ್ನೋದನ್ನು ಎಚ್ಚರದಿಂದ ಗಮನಿಸಿ...

****

ಶಾ: ರಾತ್ರಿ ಏನಾಯಿತು?

ಸಿಂಘಲ್: ಅವಳು ರಾತ್ರಿ 23:30ರಿಂದ ಒಂದು ಗಂಟೆತನಕ ಆ ಹುಡುಗನೊಂದಿಗೆ ಅವನ ಕಾರ್‌ನಲ್ಲಿದ್ದಳು. ಮಧ್ಯರಾತ್ರಿ ಒಂದು ಗಂಟೆಗೆ ಹೋಟೆಲ್ ರೂಮಿಗೆ ಹಿಂದಿರುಗಿದಳು.

ಶಾ: ಅವಳು ಉಳಿದುಕೊಂಡಿರುವ ಹೋಟೆಲ್‌ನ ಫೋನ್ ನಂಬರ್ ಪಡೆಯಿರಿ. ಅವಳನ್ನು ಭೇಟಿ ಆಗಲು ಯಾರ್‍ಯಾರು ಬಂದಿದ್ದರು ಎಂಬ ವಿವರಗಳನ್ನು ಸಂಗ್ರಹಿಸಿ.

ಸಿಂಘಲ್: ಓಕೆ ಸರ್.

****

ಶಾ: ಅವಳು ಈಗ ಎಲ್ಲಿದ್ದಾಳೆ?

ಸಿಂಘಲ್: ನವರಂಗ್ ಏರಿಯಾದ 'ಹ್ಯಾವ್ ಮೋರ್'ನಲ್ಲಿದ್ದಾಳೆ.

ಶಾ: ಆ ಹುಡುಗನ ಜೊತೆ ಇದ್ದಾಳಾ?

ಸಿಂಘಲ್: ಹೌದು ಸರ್, ಆ ಹುಡುಗನ ಜೊತೆಯೇ ಇದ್ದಾಳೆ.

ಶಾ: ಆ ವಂಜಾರ ಜೈಲಿನಲ್ಲಿ ಎಷ್ಟು ದಿನದಿಂದ ಇದ್ದಾನೋ ಅಷ್ಟು ದಿನಗಳ ಕಾಲ ಆ ಹುಡುಗನನ್ನೂ ಜೈಲಿಗೆ ಹಾಕು.

ಸಿಂಘಲ್: ಎಸ್ ಎಸ್.

ಶಾ: ನೀನು ಧೈರ್ಯವಾಗಿರು. ಗಟ್ಟಿಯಾಗಿರು.

ಸಿಂಘಲ್: ನಿಸ್ಸಂಶಯವಾಗಿಯೂ ಸರ್.

ಶಾ: ಅವನು ಎಷ್ಟು ದೊಡ್ಡ ವ್ಯಕ್ತಿ ಆಗಿದ್ದರೂ ಪರವಾಗಿಲ್ಲ, ಅವನನ್ನು ಜೈಲಿಗೆ ಹಾಕು.

ಸಿಂಘಲ್: ರೈಟ್ ಸರ್.

****

ಶಾ: ಮಧ್ಯಾಹ್ನದ ಊಟಕ್ಕೆ ಹೊರಗೆ ಹೋದರಾ?

ಸಿಂಘಲ್: ಇಲ್ಲ, ಇಲ್ಲ, ಅವರಿಬ್ಬರೂ ಇನ್ನೂ ಚಿತ್ರಮಂದಿರದಲ್ಲಿದ್ದಾರೆ.

ಶಾ: ಇನ್ನೂ ಅಲ್ಲೇ ಇದ್ದಾರಾ?

ಸಿಂಘಲ್: ಎಸ್ ಸರ್.

ಶಾ: ರಾತ್ರಿ ಕಟ್ಟೆಚ್ಚರ ವಹಿಸಿ. ಆಕೆ ಹೋಟೆಲ್‌ನಿಂದ ತಪ್ಪಿಸಿಕೊಳ್ಳದಂತೆ ನೋಡಿಕೊಳ್ಳಿ.

ಸಿಂಘಲ್: ಹೋಟೆಲ್‌ನ ಹಿಂದೆ, ಮುಂದೆ, ಎಲ್ಲಾ ಕಡೆ ನಮ್ಮವರನ್ನು ಇಟ್ಟಿದ್ದೇನೆ.

****

ಶಾ: ಅವಳು ಉಳಿದುಕೊಂಡಿರುವ ರೂಮ್ ನಂಬರ್ ಮತ್ತು ಯಾರನ್ನು ಆಕೆ ಭೇಟಿ ಮಾಡಿದಳು ಎಂಬ ವಿವರಗಳನ್ನು ಸಂಗ್ರಹಿಸಿ.

ಸಿಂಘಲ್: ಶೂರ್ ಸರ್.

ಶಾ: ಬೇಕಾದರೆ ಇನ್ನಷ್ಟು ಸಿಬ್ಬಂದಿಯನ್ನು ಕರೆಸಿಕೊಳ್ಳಿರಿ.

ಸಿಂಘಲ್: ಓಕೆ ಸರ್.

ಶಾ: ಅವರಿಬ್ಬರನ್ನು ಕಾರ್ ಮತ್ತು ಸ್ಕೂಟರ್‌ಗಳ ಮೇಲೆ ಹಿಂಬಾಲಿಸಿ.

ಸಿಂಘಲ್: ಓಕೆ ಸರ್.

****

ಸಿಂಘಲ್: ಅವಳು ತನ್ನ ರಿಲಯನ್ಸ್ ನಂಬರ್‌ನಿಂದ ಯಾರಿಗೋ ಎರಡು ಮಿಸ್ಡ್ ಕಾಲ್ ಕೊಟ್ಟಳು ಸಾರ್.

ಶಾ: ಆ ನಂಬರ್‌ಗಳು ಮತ್ತು ಅವುಗಳ ಬಿಲ್‌ಗಳು ಬೇಕಲ್ಲ ಏನು ಮಾಡೋದು?

ಸಿಂಘಲ್: ಆದರೆ ಅವು ಬೆಂಗಳೂರು ನಂಬರ್‌ಗಳು ಸರ್.

ಶಾ: ಸಾಹೇಬರ ಜೊತೆ ಈ ಬಗ್ಗೆ ಮಾತನಾಡುತ್ತೇನೆ.


ಸಿಂಘಲ್: ನಾನೂ ಆ ಟೆಲಿಕಾಮ್ ಕಂಪನಿಯ ಯಾವುದಾದರೂ ಸಿಬ್ಬಂದಿ ಜೊತೆ ಡೀಲ್ ಮಾಡಿಕೊಂಡು ಪ್ರಯತ್ನಿಸುತ್ತೇನೆ ಸರ್.

****

ಸಿಂಘಲ್: ನಿನ್ನೆ ಬಂದಿದ್ದನಲ್ಲಾ ಆ ಹುಡುಗ, ಅವನೊಂದಿಗೆ ಆಕೆ ಕಾಫಿ ಡೇಗೆ ಹೋಗಿದ್ದಾಳೆ ಸರ್.

ಶಾ: ಅಂದರೆ ಆಸ್ಪತ್ರೆಯಿಂದ ನೇರವಾಗಿ ಕಾಫಿ ಡೇಗೆ ಹೋದಳಾ?

ಸಿಂಘಲ್: ಹೌದು ಸರ್. ಅವನ ಜೊತೆ ... ಕಾರ್‌ನಲ್ಲಿ ಹೋಗಿದ್ದಾಳೆ ಸರ್.



ಸಿಂಘಲ್: ಓಕೆ ಸರ್.

****

ಶಾ: ಅವಳು ಬೇರೆ ವ್ಯವಸ್ಥೆ ಮಾಡಿಕೊಂಡಿದ್ದಾಳೆ ಅನ್ನಿಸುತ್ತಿದೆ. ಅದಕ್ಕೆ ಅವಳ ಲ್ಯಾಂಡ್ ನಂಬರ್‌ನ ಬಿಲ್ಲಿನ ಪ್ರಿಂಟ್‌ಔಟ್ ತೆಗೆದುಕೊಳ್ಳಿ, ಗೊತ್ತಾಯಿತಾ? ಅವಳ ಮೇಲೆ ಹಗಲುರಾತ್ರಿ ನಿಗಾ ಇಡಿ. ಬೇಕಂದರೆ ಇದಕ್ಕೆಂದು ಆಂಟಿ ಟೆರರಿಸ್ಟ್ ಸ್ಕ್ವಾಡ್‌ನಿಂದ ಇನ್ನೊಂದಿಷ್ಟು ಜನರ ನೆರವು ಪಡೆಯಿರಿ.

ಸಿಂಘಲ್: ಎಸ್ ಸರ್.

ಶಾ: ಏನಂದೆ ಅಂತ ಅರ್ಥ ಆಯ್ತಾ... ರಾತ್ರಿ ಗೊರಕೆ ಹೊಡೆಯಬೇಡಿ.

ಸಿಂಘಲ್: ಸರ್, ಎಟಿಎಸ್‌ನವರ ಬಗ್ಗೆ ನನಗೆ ವಿಶ್ವಾಸ ಇಲ್ಲ, ಆದಕ್ಕೆ ನಾನು ಚುಡಾಸಮಾ ಅವರೊಂದಿಗೆ ಮಾತನಾಡಿ ಅಲ್ಲಿಂದ ಒಂದಿಬ್ಬರನ್ನು ಕರೆಸಿಕೊಳ್ಳಲಾ?

ಶಾ: ನಾನು ಹೇಳಿದೆ ಅಂತಲೂ, ಇದು ಆಗಲೇ ಬೇಕು ಅಂತ ಹೇಳಿದೆ ಅಂತಲೂ ಆತನಿಗೆ ಹೇಳು.

ಸಿಂಘಲ್: ಎಸ್ ಸರ್.

ಈಗ ಹೇಳಿ ಇದು ಆಕೆಯನ್ನು ಬೇರೆಯವರಿಂದ ರಕ್ಷಿಸಿದಂತೆ ಯಾವ ನಿಟ್ಟಿನಿಂದ ಕಾಣಿಸುತ್ತೆ? ಬದಲಾಗಿ ಆಕೆ ಎಲ್ಲಿದ್ದಾಳೆ, ಯಾರೊಂದಿಗಿದ್ದಾಳೆ, ಏನು ಮಾಡುತ್ತಿದ್ದಾಳೆ ಎಂಬೆಲ್ಲ ಮಾಹಿತಿಯನ್ನು ಆಕೆಗೆ ಗೊತ್ತಾಗದಂತೆ ಸಂಗ್ರಹಿಸುವುದು ... ಕುತೂಹಲ?

10 ◀◀
ಕೇಳಿದ್ದಾಗಿಯೂ. ಅದಕ್ಕೆ ಮೋದಿ ತಾವಿರುವ ಪರಿಸ್ಥಿತಿಯಲ್ಲಿ ವೈದ್ಯರನ್ನು ಕರೆಯಲಾಗುವುದಿಲ್ಲ ಎಂದಿದ್ದೂ, ಆನಂತರ ಆಕೆಯನ್ನು ತನ್ನ ಕಾರಿನಲ್ಲಿ ಆಸ್ಪತ್ರೆಗೆ ಕಳುಹಿಸಿದ್ದನ್ನೂ ಮಾನಸಿ ಶರ್ಮನಿಗೆ ಹೇಳಿದಳು. ಆಗ ಮೋದಿ ಮತ್ತು ಮಾನಸಿ ನಡುವಿನ ಸಂಬಂಧದ ಬಗ್ಗೆ ಶರ್ಮನಿಗೆ ಅರ್ಥವಾಯಿತು.

ಯಾವ ಕಾರಣಕ್ಕೆ ಮಾನಸಿ ಮೋದಿಯೊಂದಿಗಿನ ತನ್ನ ಸಂಬಂಧದ ಬಗ್ಗೆ ಶರ್ಮನಿಗೆ ಹೇಳಿದಳು? ಶರ್ಮ ತನ್ನ ಮಿತ್ರ ಎಂಬ ಕಾರಣಕ್ಕೋ? ಮೋದಿಯಂತಹ ಪ್ರಭಾವಿ ವ್ಯಕ್ತಿಯೊಂದಿಗಿನ ತನ್ನ ಆಪ್ತತೆಯ ಬಗ್ಗೆ ಕೊಚ್ಚಿಕೊಳ್ಳಲೋ? ಗೊತ್ತಿಲ್ಲ, ಆದರೂ ಆಕೆ ತನಗೆ ಹೇಳಿದಳು ಎಂದು ಶರ್ಮ ಹೇಳಿದ್ದಾರೆ.

ಈ ಗುಪ್ತ ಸಂಬಂಧದ ಬಗ್ಗೆ ಶರ್ಮನಿಗೆ ಗೊತ್ತಾದರೂ ಅದು ಅವರಿಬ್ಬರಿಗೆ ಬಿಟ್ಟ ಖಾಸಗಿ ವಿಚಾರ ಎಂದು ಶರ್ಮ ಸುಮ್ಮನಾದರು.

ಸಿಕ್ಕಿತು ಖಾಸಗಿ ಫೋನ್ ನಂಬರ್

ಹೀಗೆ 2005ರಲ್ಲಿ ಮಾನಸಿ ಜೊತೆಗೆ ಪ್ರಾರಂಭವಾದ ಮೋದಿಯ ಸಂಬಂಧ ಎರಡು ವರ್ಷಗಳ ಕಾಲ ಹೆಚ್ಚಿನವರ ಗಮನಕ್ಕೆ ಬಾರದಂತೆ ಮುಂದುವರೆಯಿತು. ಈ ಅವಧಿಯಲ್ಲಿ ಶರ್ಮನನ್ನು ಭಾವನಗರ್‌ನ ಮುನಿಸಿಪಲ್ ಕಮೀಷನರ್ ಆಗಿ ವರ್ಗ ಮಾಡಲಾಯಿತು.

2008ರ ನವೆಂಬರ್ ತಿಂಗಳಲ್ಲಿ ಶರ್ಮನಿಗೆ ಫೋನ್ ಮಾಡಿದ ಮಾನಸಿ, ಆಲಂಗ್ ನೌಕಾಂಗಣದಲ್ಲಿ ಮೋದಿ ತನಗೆ ಒಂದು ಪ್ರಾಜೆಕ್ಟ್ ಕೊಟ್ಟಿರುವುದಾಗಿಯೂ, ಅದಕ್ಕೆ ಸಂಬಂಧಪಟ್ಟಂತೆ ತಾನು ಭಾವನಗರಕ್ಕೆ ಬರುತ್ತಿರುವುದಾಗಿಯೂ ಹೇಳಿದಳು. ಆಕೆ ಭಾವನಗರಕ್ಕೆ ಬಂದ ದಿನಗಳಲ್ಲಿ ಮೋದಿ ಗುಜರಾತಿನಲ್ಲಿರಲಿಲ್ಲ, ಬದಲಾಗಿ ವಿದೇಶ ಪ್ರವಾಸದಲ್ಲಿದ್ದ. ಆದರೂ ಮಾನಸಿಯೊಂದಿಗೆ ಮಾತನಾಡದೆ ಮೋದಿಗೆ ಇರಲಿಕ್ಕಾಗುತ್ತಿರಲಿಲ್ಲ, ಆತ ಪದೇಪದೇ ಮಾನಸಿಗೆ ಫೋನ್ ಮಾಡಿದನಲ್ಲದೆ ಹಲವಾರು ಎಸ್‌ಎಂಎಸ್‌ಗಳನ್ನೂ ಕಳುಹಿಸಿದ. ಆಗ ಆತ ಕಳುಹಿಸಿದ್ದ ಒಂದೆರಡು ಎಸ್‌ಎಂಎಸ್‌ಗಳನ್ನು ಮಾನಸಿ ಶರ್ಮನಿಗೆ ತೋರಿಸಿದಳು. ಆಗ ಶರ್ಮ ಯಾತಕ್ಕೂ ಇರಲಿ ಎಂದು ಮೋದಿ ಎಸ್‌ಎಂಎಸ್ ಕಳುಹಿಸಿದ್ದ ಮೊಬೈಲ್ ನಂಬರ್‌ಅನ್ನು ಮಾನಸಿಯಿಂದ ಪಡೆದು ಅದನ್ನು ತನ್ನ ಖಾಸಗಿ ಮೊಬೈಲ್‌ನಲ್ಲಿ ಸೇವ್ ಮಾಡಿದ. ಆ ನಂಬರ್ 9909923400 ಆಗಿತ್ತು.

ಅದೇ ಸಂದರ್ಭದಲ್ಲಿ ಮಾನಸಿಯು ತಮ್ಮ ಸಂಬಂಧದ ಬಗ್ಗೆ ಶರ್ಮನಿಗೆ ಹೇಳಿದ್ದೀಯಾ ಎಂದು ಮೋದಿ ವಿಚಾರಿಸಿದ್ದಾಗಿಯೂ ಶರ್ಮನಿಗೆ ಹೇಳಿದ್ದಳು.

CAW-CAW BY MANJUL



twitter @MANJULtoons
facebook- fb.me/cartoonsbymanjul



ಬಿರುಕು ಮೂಡಿತೂ, ಸಂಶಯ ಶುರುವಾಯಿತೂ

ನಂತರದ ದಿನಗಳಲ್ಲಿ ಮೋದಿ ಮತ್ತು ಮಾನಸಿ ನಡುವೆ ಏನಾಯಿತೋ ಸ್ಪಷ್ಟವಾಗಿ ಯಾರಿಗೂ ಗೊತ್ತಿಲ್ಲ, ಹಲವರ ಪ್ರಕಾರ ಆಕೆ ತಮ್ಮ ನಡುವಿನ ಸಂಬಂಧವನ್ನು ಅಧಿಕೃತಗೊಳಿಸೋಣ ಎಂದು ಒತ್ತಾಯ ಮಾಡಿದಳು. ಆದರೆ ಅದಕ್ಕೆ ಒಪ್ಪದ ಮೋದಿ 'ಹೊರ ಪ್ರಪಂಚಕ್ಕೆ ನಮ್ಮ ನಡುವಿನ ಸಂಬಂಧ ಏನಿದ್ದರೂ ತಂದೆ ಮತ್ತು ಮಗಳ ಸಂಬಂಧ' ಎಂದ. ಇನ್ನೂ ಕೆಲವರ ಪ್ರಕಾರ ಸ್ವಾಮ್ಯ ಪ್ರವೃತ್ತಿಯ ಮೋದಿ ಆಕೆಯ ಮೇಲೆ ಹಲವಾರು ನಿಬಂಧನೆಗಳನ್ನು ಹೇರಲಾರಂಭಿಸಿದ; ಆಕೆ ತನ್ನ ಪುರುಷ ಮಿತ್ರರೊಂದಿಗೆ ಓಡಾಡುವುದನ್ನು ಒಪ್ಪದ ಮೋದಿ ಆಕೆ ಇತರೆ ಪುರುಷರೊಂದಿಗೆ ಸ್ನೇಹ ಇಟ್ಟುಕೊಳ್ಳಬಾರದೆಂದೆಲ್ಲ ಒತ್ತಡ ತರಲಾರಂಭಿಸಿದ. ಆದರೆ ಮಾನಸಿ ಆಧುನಿಕ ಯುವತಿ; ವಾಸ್ತುವಿನ್ಯಾಸ ತಜ್ಞೆ ಆದ್ದರಿಂದ ಪುರುಷರೊಂದಿಗೆ ಬೆರೆಯುವುದು ಅನಿವಾರ್ಯವಾಗಿತ್ತು, ಹೀಗೆ ತಾನು ಯಾರೊಂದಿಗೆ ಎಲ್ಲಿಗೆ ಹೋಗುತ್ತೇನೆ, ಯಾರೊಂದಿಗೆ ಮಾತನಾಡುತ್ತೇನೆ ಎಂದೆಲ್ಲ ನಿರ್ಧರಿಸುವ ಹಕ್ಕು ಮೋದಿಗೆ ಇಲ್ಲವೆಂದು ಮಾನಸಿ ವಾದಿಸಲಾರಂಭಿಸಿದಳು. ಇವೆಲ್ಲ ವಿಷಯಗಳು ಅವರಿಬ್ಬರ ನಡುವೆ ಬಿರುಕುಗಳನ್ನು ಮೂಡಿಸಿ 2009ರಲ್ಲಿ ಮಾನಸಿ ಮೋದಿಯನ್ನು ತೊರೆದಳು. ಆದರೂ ಆಕೆ ಆಗೀಗ ಬೆಂಗಳೂರಿನಿಂದ ಗುಜರಾತಿಗೆ ಹೋಗಿ ಬರುವುದನ್ನು ಮುಂದುವರೆಸಿದಳಲ್ಲದೆ ಮಿಶ್ರನೊಂದಿಗೂ ಆಗಾಗ್ಗೆ ಮಾತನಾಡುತ್ತಿದ್ದಳು.

2009 ಜೂನ್ ಅಥವಾ ಜುಲೈ ತಿಂಗಳಲ್ಲಿ ಒಂದು ಆಕಸ್ಮಿಕ ಘಟನೆ ಸಂಭವಿಸಿತು. ತನ್ನ ಖಾಸಗಿ ಮೊಬೈಲ್‌ನಿಂದ ಯಾರನ್ನೋ ಮಾತನಾಡಿಸಲು ಉದ್ದೇಶಿಸಿದ್ದ ಶರ್ಮ ಅಪ್ಪಿತಪ್ಪಿ ಮಾನಸಿಯಿಂದ ಪಡೆದಿದ್ದ ಮೋದಿಯ 9909923400 ಖಾಸಗಿ ಫೋನ್ ನಂಬರ್ ಒತ್ತಿದ. ಅದು ಒಂದೆರಡು ಬಾರಿ ರಿಂಗ್ ಆದನಂತರ ತಾನು ಮೋದಿಗೆ ಫೋನ್ ಮಾಡಿರುವ ಅರಿವು ಶರ್ಮನಿಗೆ ಆಗಿ ಆತ ಅದನ್ನು ಕಟ್ ಮಾಡಿ ಸುಮ್ಮನಾದ.

ಆದರೆ ಮೋದಿ ಸುಮ್ಮನಾಗಲಿಲ್ಲ, ತನ್ನ ಖಾಸಗಿ ನಂಬರ್ ಅದು ಹೇಗೆ ಬೇರೆಯವರಿಗೆ ಸಿಕ್ಕಿತು ಎಂದು ಆತಂಕಗೊಂಡ ಮೋದಿ ಪೊಲೀಸರಿಗೆ ಹೇಳಿ ತನ್ನ ನಂಬರ್‌ಗೆ ಯಾರ ಫೋನ್‌ನಿಂದ ಕರೆ ಬಂದಿತ್ತು ಎಂದು ಪತ್ತೆಹಚ್ಚಲು ಆದೇಶಿಸಿದ. ಆಗ ಗೊತ್ತಾಯಿತು ಅದು ಭಾವನಗರ್‌ನ ಮುನಿಸಿಪಲ್ ಕಮೀಷನರ್ ಪ್ರದೀಪ್ ಶರ್ಮನ ಮೊಬೈಲ್‌ನಿಂದ ಬಂದಿದ್ದ ಕರೆ ಎಂದು. ಅವತ್ತಿನಿಂದ ಶರ್ಮನ ಮೇಲೆ ಮೋದಿಯ ಪೊಲೀಸರು ನಿಗಾ ಇಡಲಾರಂಭಿಸಿದರು. ಹಾಗೆ ನಿಗಾ ಇಟ್ಟಾಗ ಮಾನಸಿ ಶರ್ಮನೊಂದಿಗೆ ಸಂಪರ್ಕದಲ್ಲಿದ್ದಾಳೆ ಎಂದೂ ಮೋದಿಗೆ ಗೊತ್ತಾಯಿತು.

ಬೇಹುಗಾರಿಕೆ ಶುರು

ಆಗ ಶುರುವಾಯಿತು ಮೋದಿಯ ಪೀಕಲಾಟ. ಎಲ್ಲಿ ತನ್ನೊಂದಿಗೆ ಮಾನಸಿ ಹೊಂದಿದ್ದ ಸಂಬಂಧದ ಬಗ್ಗೆ ಶರ್ಮನಿಗೆ ಹೇಳುತ್ತಾಳೋ, ಎಲ್ಲಿ ತನ್ನ ಸಾರ್ವಜನಿಕ ಇಮೇಜಿಗೆ ಅದರಿಂದ ಧಕ್ಕೆ ಆಗುತ್ತದೋ ಎಂದು ಹೆದರಿದ ಮೋದಿ ಶರ್ಮನಿಗೆ ಪಾಠ ಕಲಿಸಲು ಸಜ್ಜಾದ.

ಅದಕ್ಕೆ ಇನ್ನೊಂದು ಕಾರಣವೂ ಇತ್ತು, ಇದೇ ಶರ್ಮನ ಅಣ್ಣ ಕುಲ್ದೀಪ್ ಶರ್ಮ ಅದೇ ಗುಜರಾತಿನಲ್ಲಿ ಹಿರಿಯ ಐಪಿಎಸ್ ಅಧಿಕಾರಿಯಾಗಿದ್ದು 2002ರ ಕೋಮು ಗಲಭೆಯಲ್ಲಿ ಮೋದಿ ಮತ್ತು ಆತನ ಭಂಟ ಅಮಿತ್ ಶಾನ ಪಾತ್ರದ ಬಗ್ಗೆ ನ್ಯಾಯಾಲಯಕ್ಕೆ ಸತ್ಯ ವರದಿಯನ್ನು ಕೊಡುವ ಮೂಲಕ ಮೋದಿಯ ಕೆಂಗಣ್ಣಿಗೆ ಗುರಿಯಾಗಿದ್ದರು. ಅತ್ತ ಅಣ್ಣ ಕೊಟ್ಟ ಕಷ್ಟ ಇತ್ತ ತಮ್ಮ ಮಾಡಬಹುದಾದ ಅನಾಹುತದ ಬಗ್ಗೆ ಚಿಂತಾಕ್ರಾಂತನಾದ ಮೋದಿ ಶರ್ಮನ ಬಾಯಿ ಮುಚ್ಚಿಸಲು ಮುಂದಾದ.

ಆಗಲೇ ಶರ್ಮ ಮತ್ತು ಮಾನಸಿ - ಇಬ್ಬರ ಟೆಲಿಫೋನ್ ಮತ್ತು ಚಲನವಲನಗಳ ಮೇಲೆ ಮೋದಿಯ ಗೂಂಡಾಗಳು ನಿಗಾ ಇಡಲಾರಂಭಿಸಿದ್ದು. ಆ ಕದ್ದಾಲಿಕೆ ಜವಾಬ್ದಾರಿಯನ್ನು ಮೋದಿ ಗ್ಯಾಂಗ್ ಗುಂಪು ವಹಿಸಿದ್ದು ಆಗ ಅಮಿತ್ ಶಾನಿಗೆ ಹತ್ತಿರವಾಗಿದ್ದ ಜಿ.ಎಲ್.ಸಿಂಘಲ್ ಎಂಬ ಪೊಲೀಸ್ ಅಧಿಕಾರಿಗೆ.

ಆದರೆ ಅಷ್ಟು ಹೊತ್ತಿಗೆ ಇದೇ ಮೋದಿ ಮತ್ತು ಶಾನಿಗೆ ಹತ್ತಿರವಾಗಿದ್ದ 'ನಕಲಿ ಎನ್‌ಕೌಂಟರ್ ಸ್ಪೆಷಲಿಸ್ಟ್' ಎಂದು ಕುಖ್ಯಾತಿ ಪಡೆದಿದ್ದ ಇನ್ನೋರ್ವ ಹಿರಿಯ ಪೊಲೀಸ್ ಅಧಿಕಾರಿ ಶೊರಾಬುದ್ದೀನ್ ಕೊಲೆ ಪ್ರಕರಣದಲ್ಲಿ ಜೈಲುಪಾಲಾಗಿದ್ದ. ಅದನ್ನು ನೋಡಿ ತನ್ನ ರಕ್ಷಣೆಗೆ ತಾನು ಕೆಲವು ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಸಿಂಘಲ್‌ಗೆ ತೋಚಿದ್ದರೆ ಅಚ್ಚರಿ ಇಲ್ಲ, ಆ ಕಾರಣಕ್ಕೆ ಶರ್ಮ ಮತ್ತು ಮಾನಸಿ ಮೇಲೆ ಮಾಡುತ್ತಿದ್ದ ಬೇಹುಗಾರಿಕೆ ಕುರಿತಂತೆ ಶಾನೊಂದಿಗೆ ನಡೆಸಿದ ಹಲವು ಫೋನ್ ಸಂಭಾಷಣೆಗಳನ್ನು ಸಿಂಘಲ್ ರೆಕಾರ್ಡ್ ಮಾಡಿಕೊಂಡಿರಲಿಕ್ಕೂ ಸಾಕು. ಮಾನಸಿ ಮೇಲಿನ ಬೇಹುಗಾರಿಕೆ ಅದೆಷ್ಟು ದಿನ ಮುಂದುವರೆಯಿತು ಎಂಬುದು ಸ್ಪಷ್ಟವಾಗಿಲ್ಲ, ಆದರೆ 2009ರ ಆಗಸ್ಟ್ 4ರಿಂದ ಸೆಪ್ಟೆಂಬರ್ 6ರ ತನಕ ಶಾನೊಂದಿಗಿನ ಫೋನ್ ಸಂಭಾಷಣೆಗಳನ್ನು ಸಿಂಘಲ್ ರೆಕಾರ್ಡ್ ಮಾಡಿಕೊಂಡಿದ್ದ. ಅದೇ ಬರೋಬ್ಬರಿ 267 ಕರೆಗಳಾಗುತ್ತೆ. ಪ್ರತಿ ದಿನ ಮಾನಸಿ ಮತ್ತು ಶರ್ಮ ಕುರಿತಂತೆ ಸಿಂಘಲ್‌ಗೆ ಶಾ ಕನಿಷ್ಠ ಎಂಟು ಬಾರಿ ಫೋನ್ ಮಾಡಿದ್ದಾನೆ ಎಂದರೆ ಈ ಬಗ್ಗೆ ಮೋದಿಗೆ ಅದೆಷ್ಟು ಆತಂಕವಿತ್ತು ಎಂದು ಅರ್ಥವಾಗುತ್ತದೆ.

ಕಾಲಕ್ರಮೇಣ ಹೀಗೆ ಮಾನಸಿ ಮತ್ತು ಶರ್ಮ ಮೇಲೆ ನಿಗಾ ಇಡುವುದರಿಂದ ಯಾವ ಪ್ರಯೋಜನವೂ ಇಲ್ಲ ಎಂದು ಮೋದಿಗೆ ಅನ್ನಿಸಿರಬೇಕು. ಆಗ ಆತ ಶರ್ಮ ಅಕ್ರಮಗಳನ್ನು ಎಸಗಿದ್ದಾರೆ ಎಂದು ಆರೋಪಿಸಿ ಆತನ ವಿರುದ್ಧ ಹಲವಾರು ದೂರುಗಳನ್ನು ದಾಖಲಿಸಿದ. ಆನಂತರ ಶರ್ಮನನ್ನು ಸೇವೆಯಿಂದ ಅಮಾನತ್ತು ಮಾಡಿದನಲ್ಲದೆ 2010ರಲ್ಲಿ ಅವರನ್ನು ಜೈಲಿಗೂ ದೂಡಿದ.

2011ರಲ್ಲೇ ಶರ್ಮ ಅವರು ಸುಪ್ರೀಂಕೋರ್ಟಿಗೆ ಸಲ್ಲಿಸಿದ ಮನವಿಯಲ್ಲಿ ತನ್ನ ವಿರುದ್ಧ ಮೋದಿಯ ಸರ್ಕಾರ ಸುಳ್ಳು ಆರೋಪಗಳನ್ನು ಹೊರಿಸುತ್ತಿದೆ ಎಂದೂ, ಅದಕ್ಕೆ ಕಾರಣ ಮೋದಿಯ ವಿರುದ್ಧ ತನ್ನ ಸಹೋದರ ಕುಲ್ದೀಪ್ ಶರ್ಮ ಕೈಗೊಂಡ ಕಟ್ಟುನಿಟ್ಟಿನ ಕ್ರಮಗಳು ಮತ್ತು ಮಾನಸಿ ಸೋನಿ ಎಂಬ ಮಹಿಳೆಯೊಂದಿಗೆ ಮೋದಿ ಹೊಂದಿದ್ದ ಸಂಬಂಧದ ಬಗ್ಗೆ ತನಗೆ ಗೊತ್ತಿರುವುದು ಎಂದೂ ಆರೋಪಿಸಿದ್ದರು.

ಆಗಲೇ ಮೋದಿಯ ಈ ಅಕ್ರಮ ಸಂಬಂಧ ಹಲವರ ಗಮನಕ್ಕೆ ಬಂದಿದ್ದರೂ ಆದು ಆತನ ಖಾಸಗಿ ವಿಷಯ

ಅಮಿತ್ ಶಾ ಎಂತಹವನು?



ನರಹಂತಕ ನರೇಂದ್ರ ಮೋದಿಯ ಪರಮಾಪ್ತನೂ, ನಂಬಿಗಸ್ಥ ಭಂಟನೂ ಆಗಿರುವ ಅಮಿತ್ ಶಾ ಎಂತಹವನು ಎಂದು ನೋಡಿದರೆ ಮೋದಿಯ ಕುತಂತ್ರಿ ವ್ಯಕ್ತಿತ್ವವೂ, ಶಾನ ನೀಚಬುದ್ಧಿಯೂ ಅರ್ಥವಾಗುತ್ತದೆ.

ಮೋದಿಯಂತೆ ಶಾ ಕೂಡ ಚಿಕ್ಕಂದಿನಿಂದಲೇ ಆರೆಸ್ಸೆಸ್‌ನ ಕೋಮುವಾದಿ ಅಡ್ಡೆಯಲ್ಲೇ ಬೆಳೆದವನು. ಅಂದರೆ ಈತ ಹುಟ್ಟಿನಲ್ಲಿ ಜೈನ್ ಧರ್ಮದವನಾದರೂ ಆರೆಸ್ಸೆಸ್‌ನ ಕರ್ಮಠ ಹಿಂದೂತ್ವ ಸಿದ್ಧಾಂತವನ್ನು ಮೈಗೂಡಿಸಿಕೊಂಡವನು.

ಶಾ ಆರೆಸ್ಸೆಸ್‌ನ ವಿದ್ಯಾರ್ಥಿ ಸಂಘಟನೆಯಾದ ಎಬಿವಿಪಿಯ ನಾಯಕನಾಗಿದ್ದಾಗ 80ರ ದಶಕದಲ್ಲಿ ಬಿಜೆಪಿ ನಾಯಕ ಎಲ್.ಕೆ.ಅಡ್ವಾನಿಗೆ ಹತ್ತಿರವಾದ. ಅಡ್ವಾನಿಯ ಗಾಂಧಿನಗರ ಲೋಕಸಭಾ ಕ್ಷೇತ್ರದಲ್ಲಿ ಅವರ ಪ್ರಚಾರಾಂದೋಲನದ ನಾಯಕತ್ವವನ್ನು ವಹಿಸಿಕೊಂಡು ಅವರ ಗೆಲುವಿಗೆ ಕೆಲಸ ಮಾಡಿದ್ದ.

2003ರಲ್ಲಿ ಮೋದಿ ಎರಡನೆ ಬಾರಿಗೆ ಮುಖ್ಯಮಂತ್ರಿ ಆದಾಗ ಶಾನನ್ನು ತನ್ನ ಸಚಿವ ಸಂಪುಟಕ್ಕೆ ಸೇರಿಸಿಕೊಂಡ. ಆಗ ಶಾ ಗುಜರಾತಿನಲ್ಲೇ ಮಂತ್ರಿ ಸ್ಥಾನ ಪಡೆದ ಅತಿ ಕಿರಿಯ ವ್ಯಕ್ತಿಯಾಗಿದ್ದನಲ್ಲದೆ ಆತನಿಗೆ ಮೋದಿ ಬರೋಬ್ಬರಿ ಹತ್ತು ಇಲಾಖೆಗಳ ಉಸ್ತುವಾರಿಯನ್ನು ದಯಪಾಲಿಸಿದ. ಅವುಗಳಲ್ಲಿ ಪೊಲೀಸ್ ವ್ಯವಸ್ಥೆಯನ್ನು ಒಳಗೊಂಡಿರುವ ಗೃಹ ಇಲಾಖೆಯೂ ಒಂದಾಗಿತ್ತು.

ಹೀಗೆ ಅಧಿಕಾರ ಸಿಕ್ಕಿದ್ದೇ ತಡ ಶಾ ತನ್ನ ದುರಾಡಳಿತವನ್ನು ಪ್ರಾರಂಭಿಸಿದ. ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡಲು ಇರುವ ಪೊಲೀಸ್ ಇಲಾಖೆಯನ್ನು ತನ್ನ ಖಾಸಗಿ ಗೂಂಡಾಗಳ ಪಡೆ ಎಂದೇ ಪರಿಗಣಿಸಿದ ಶಾನ ನೇತೃತ್ವದಲ್ಲಿ ಹಲವಾರು ನಕಲಿ ಎನ್‌ಕೌಂಟರ್‌ಗಳು ನಡೆದವು. ಅವುಗಳಲ್ಲಿ ಪ್ರಮುಖವಾದದ್ದು ಶೊರಾಬುದ್ದೀನ್ ಕೊಲೆ ಪ್ರಕರಣ. ಶೊರಾಬುದ್ದೀನ್, ಆತನ ಪತ್ನಿ ಕೌಸರ್ ಬಿ ಮತ್ತು ಪ್ರತ್ಯಕ್ಷ ಸಾಕ್ಷಿ ಪ್ರಜಾಪತಿ - ಈ ಮೂವರನ್ನೂ ಕೊಂದು ಹಾಕಿದ್ದು 'ಎನ್‌ಕೌಂಟರ್ ಸ್ಪೆಷಲಿಸ್ಟ್' ಎಂದೇ ಕುಖ್ಯಾತಿ ಪಡೆದಿದ್ದ ಡಿ.ಜಿ. ವಂಜಾರ ಎಂಬ ಪೊಲೀಸ್ ಅಧಿಕಾರಿಯ ತಂಡ. ಈ ಕೊಲೆಗಳು ನಡೆಯುವ ಮುನ್ನ ವಂಜಾರ ಜೊತೆ ಫೋನ್ ಮೂಲಕ ಸತತವಾಗಿ ಸಂಪರ್ಕದಲ್ಲಿದ್ದವನು ಇದೇ ಶಾ! ದಾಖಲೆಗಳ ಪ್ರಕಾರ ಆಗ ಶಾ ವಂಜಾರನಿಗೆ 331 ಕರೆಗಳನ್ನು ಮಾಡಿದ್ದ. ಈ ವಿಷಯ ನ್ಯಾಯಾಲಯಕ್ಕೆ ಗೊತ್ತಾಗಿ ಸಿಬಿಐ ವಿಚಾರಣೆಗೆ ಆದೇಶಿಸಿತ್ತು, ತನಿಖೆ ಮಾಡಿದ ಸಿಬಿಐ, ಶಾನ ಆದೇಶದಲ್ಲೇ ವಂಜಾರ ತಂಡ ಆ ಮೂವರನ್ನು ನಕಲಿ ಎನ್‌ಕೌಂಟರ್‌ನಲ್ಲಿ ವಿನಾಕಾರಣ ಸಾಯಿಸಿತು ಎಂದು ನ್ಯಾಯಾಲಯಕ್ಕೆ ತನ್ನ ವರದಿಯಲ್ಲಿ ಹೇಳಿತ್ತು.

ಸಿಬಿಐ ವರದಿಯನ್ನಾಧರಿಸಿ ನ್ಯಾಯಾಲಯ ಶಾನನ್ನು ಬಂಧಿಸಿತ್ತು. ಜೈಲಿನಿಂದ ತನ್ನ ಮಿತ್ರನನ್ನು ಹೊರತೆಗೆಯಲು ಶ್ರಮಿಸಿದ ಮೋದಿ ಆ ನಿಟ್ಟಿನಲ್ಲಿ ಖ್ಯಾತ ವಕೀಲ ರಾಮ್ ಜೇಠ್ಮಲಾನಿ ಅವರ ನೆರವು ಪಡೆದ. ಜಾಮೀನು ಕುರಿತಂತೆ ನ್ಯಾಯಾಲಯದಲ್ಲಿ ನಡೆದ ಸವಾಲು ಪಾಟಿ ಸವಾಲು ಸಮಯದಲ್ಲಿ ಶಾ ಹಲವಾರು ಬಾರಿ "ನನಗೆ ಯಾವುದೂ ನೆನೆಪಿಲ್ಲ" ಎಂದೇ ಉತ್ತರಿಸಿದ್ದ. ಆದರೇನಂತೆ, ಕೊನೆಗೂ ಶಾಗೆ ಜಾಮೀನು ಸಿಗುವಂತೆ ಜೇಠ್ಮಲಾನಿ ನೋಡಿಕೊಂಡರು. ಆದರೆ ನ್ಯಾಯಾಲಯ ಶರತ್ತುಬದ್ಧ ಜಾಮೀನನ್ನು ನೀಡಿತು. ಅದರಂತೆ ಶೊರಾಬುದ್ದೀನ್ ನಕಲಿ ಎನ್‌ಕೌಂಟರ್ ಕುರಿತ ತನಿಖೆ ಮತ್ತು ವಿಚಾರಣೆ ಮುಗಿಯುವ ತನಕ ಶಾ ಗುಜರಾತಿನಲ್ಲಿ ಕಾಲಿಡುವಂತಿಲ್ಲ.

ಈಗ ಜಾಮೀನಿನ ಮೇಲೆ ಜೈಲಿನ ಹೊರಗೆ ಇರುವ ಶಾನನ್ನು ಮೋದಿ ಉತ್ತರ ಪ್ರದೇಶದಲ್ಲಿನ ಬಿಜೆಪಿಯ ಪ್ರಚಾರಾಂದೋಲನದ ನೇತಾರನ್ನಾಗಿಸಿದ್ದಾನೆ. ದೌರ್ಜನ್ಯ ದುರಾಡಳಿತ, ಪಿತೂರಿ, ಕೊಲೆ ಇತ್ಯಾದಿ ಕ್ರಿಮಿನಲ್ ಕ್ರಿಯೆಗಳಲ್ಲಿ ಪಳಗಿರುವ ಶಾ ಈಗ ಉತ್ತರ ಪ್ರದೇಶದಲ್ಲಿ ಕಾರ್ಯೋನ್ಮುಖನಾಗಿರುವುದರಿಂದಲೇ ಅಲ್ಲಿನ ಮುಜಾಫರ್‌ನಗರದಲ್ಲಿ ಇತ್ತೀಚೆಗೆ ಕೋಮುಗಲಭೆಗಳು ನಡೆದು ಹತ್ತಾರು ಜನ ಸಾವಿಗೀಡಾದರು. ಇದರಲ್ಲಿ ಅಚ್ಚರಿ ಪಡುವಂತಹದ್ದು ಏನೂ ಇಲ್ಲ ಅಲ್ಲವೇ?

ಮಧು ಕಿಶ್ವರ್ ಎಂಬ ಹುಚ್ಚಿ



ಇತ್ತೀಚೆಗೆ ಚಡ್ಡಿಗಳು ಮಧು ಕಿಶ್ವರ್ ಎಂಬ ಮಾಜಿ ಸ್ತ್ರೀವಾದಿಯನ್ನು ಮೆರೆಸುತ್ತಿದ್ದಾರೆ. ಇದಕ್ಕೆ ಕಾರಣ ಈ ಕಿಶ್ವರ್ ಇತ್ತೀಚೆಗೆ ಮೋದಿಯನ್ನು ಎಲ್ಲೆಡೆ ಹಾಡಿಹೊಗಳುತ್ತಿರುವುದು. ಇತ್ತೀಚೆಗೆ ಕರ್ನಾಟಕದ ಚಡ್ಡಿಗಳೂ ಈಕೆಯನ್ನು ಬೆಂಗಳೂರಿಗೆ ಕರೆಸಿಕೊಂಡು 'ಮೋದಿಯ ಅಭಿವೃದ್ಧಿ ಮಾದರಿ' ಬಗ್ಗೆ ಈಕೆಯಿಂದ ಭಾಷಣ ಬಿಗಿಸಿಕೊಂಡು ತಲೆದೂಗಿದ್ದರು.


ಮಾನಸಿ ಸೋನಿ ಎಂಬ ಯುವತಿಯನ್ನು ಅಕ್ರಮವಾಗಿ ಅಮಿತ್ ಶಾನ ಆದೇಶದಂತೆ ಹಿಂಬಾಲಿಸಿದ ಪೊಲೀಸರ ಕ್ರಮದ ಬಗ್ಗೆಯೂ ಈ ಕಿಶ್ವರ್ ನೀಡಿರುವ ಪ್ರತಿಕ್ರಿಯೆ ಆಘಾತಕಾರಿಯಾಗಿದೆ. ಈ ಕುರಿತು ಟ್ವಿಟರ್‌ನಲ್ಲಿ ಕಿಶ್ವರ್ ಬಿತ್ತರಿಸಿದ ಸಂದೇಶ ಹೀಗಿತ್ತು: "ತಾತನ ವಯಸ್ಸಿನಾದ, ಭ್ರಷ್ಟನೂ, ವ್ಯಭಿಚಾರಿಯೂ ಆದ ಪ್ರದೀಪ್ ಶರ್ಮನೊಂದಿಗೆ ಆಕೆಗೆ ಅನೈತಿಕ ಸಂಬಂಧ ಇತ್ತು. ಅದನ್ನು ತಡೆಯಬೇಕೆಂದು ಆಕೆಯ ತಂದೆ ಕೋರಿದ್ದರಿಂದ ಪೊಲೀಸರು ಆಕೆಯ ಮೇಲೆ ನಿಗಾ ಇಟ್ಟಿದ್ದರು: ಅದರಲ್ಲಿ ತಪ್ಪೇನಿದೆ?"

ಮೊದಲನೆಯದಾಗಿ ಮಾನಸಿ ಮತ್ತು ಪ್ರದೀಪ್ ಶರ್ಮ ನಡುವೆ ಅಂತಹ ಒಂದು ಸಂಬಂಧ ಇದ್ದಿದ್ದರೆ ಅದು ಅವರ ಖಾಸಗಿ ವಿಚಾರ. ಎರಡನೆಯದಾಗಿ ಆಕೆಯ ಮೇಲೆ ನಿಗಾ ಇಡಲು ಮಾನಸಿ ಅಪ್ರಾಪ್ತ ವಯಸ್ಸಿನ ಬಾಲಕಿಯಲ್ಲ. ಮೂರನೆಯದಾಗಿ ತಾನು ಯಾರೊಂದಿಗೆ, ಯಾಕೆ ಮತ್ತು ಹೇಗೆ ಇರಬೇಕೆಂದು ನಿರ್ಧರಿಸುವವಳು ಮಾನಸಿಯೇ ಹೊರತು ಬೇರೆ ಯಾರೂ ಅಲ್ಲ, ನಾಲ್ಕನೆಯದಾಗಿ ಮತ್ತು ಬಹಳ ಮುಖ್ಯವಾಗಿ ಕ್ರೈಂ ಬ್ಯೂರೋ, ಇಂಟೆಲಿಜೆನ್ಸ್ ಬ್ಯೂರೋ ಮತ್ತು ಆಂಟಿ ಟೆರರಿಸ್ಟ್ ಸ್ಕ್ವಾಡ್‌ನ ಸಿಬ್ಬಂದಿಯನ್ನು ಅಕ್ರಮವಾಗಿ ಉಪಯೋಗಿಸಿ ಆಕೆಯ ಮೇಲೆ ನಿಗಾ ಇಡಲು ಆಕೆ ಕ್ರಿಮಿನಲ್ ಅಲ್ಲ, ಆಕೆಯ ವಿರುದ್ಧ ಅಂತಹ ಯಾವುದೇ ದೂರುಗಳಿಲ್ಲ.

ಈ ಎಲ್ಲ ವಿಷಯಗಳನ್ನು ಕಿಶ್ವರ್ ಮುಂದೆ ಪ್ರಸ್ತಾಪಿಸಿದಾಗ ಆಕೆ ನೀಡಿದ ಉತ್ತರ ಹೇಗಿತ್ತು ಗೊತ್ತೆ? "ಆಕೆಯ ಮೇಲೆ ಅಕ್ರಮವಾಗಿ ನಿಗಾ ಇಡಲಾಗಿತ್ತು ಅಂತ ಯಾರು ದೂರು ಕೊಟ್ಟಿದ್ದಾರೆ? ಆಕೆಯೂ ಹಾಗೆ ದೂರಿಲ್ಲವಲ್ಲ? ಆಕೆ ಯಾವುದೋ ಭಯೋತ್ಪಾದಕ ಗುಂಪಿನೊಂದಿಗೆ ನಂಟು ಇಟ್ಟುಕೊಂಡಿರಲೂಬಹುದು. ಅದು ಮುಖ್ಯ ವಿಷಯವಾಗಿದ್ದು ಅದನ್ನು ತನಿಖೆ ಮಾಡಬೇಕಿದೆ. ಆಕೆ ಮತ್ತೋರ್ವ ಇಶ್ರತ್ ಜಹಾನ್ ಆಗಿರಲಿಕ್ಕೂ ಸಾಕು. ಆದ್ದರಿಂದ ಆಕೆಯ ಮೇಲೆ ನಿಗಾ ಇಟ್ಟಿದ್ದು ತಪ್ಪೇನಲ್ಲ"

ಅಂದರೆ ಮಧು ಕಿಶ್ವರ್ ಪ್ರಕಾರ ಹೆಣ್ಣುಮಕ್ಕಳು ದೊಡ್ಡವರಾಗಿದ್ದರೂ, ತಮ್ಮ ಕಾಲ ಮೇಲೆ ನಿಂತಿದ್ದರೂ ಅವರು ಸದಾ ತಮ್ಮ ತಂದೆ, ಗಂಡ ಅಥವಾ ಮಗನ ನಿಗಾದಲ್ಲೇ ಉಳಿದಿರಬೇಕು. ಹಾಗೆಯೇ ಇಶ್ರತ್ ಜಹಾನ್‌ಗೆ ಹೇಗೆ ಸುಳ್ಳುಸುಳ್ಳೇ ಭಯೋತ್ಪಾದಕಿ ಎಂದು ಹಣೆಪಟ್ಟಿ ಕಟ್ಟಿ ನಕಲಿ ಎನ್‌ಕೌಂಟರ್‌ನಲ್ಲಿ ಮುಗಿಸಲಾಯಿತೋ ಹಾಗೆ ಮಾನಸಿಯ ಮಾನಮರ್ಯಾದೆ ಮತ್ತು ಬದುಕನ್ನೇ ನಾಶ ಮಾಡಬೇಕು.

ಈಗ ಅರ್ಥವಾಯ್ತಾ ಯಾಕೆ ಈ ಮಧು ಕಿಶ್ವರ್ ಚಡ್ಡಿಗಳ ಪಾಲಿಗೆ ಹಿರೋಯಿನ್ ಆಗಿದ್ದಾಳೆ ಅಂತ?
ಈ ಮಧು ಕಿಶ್ವರ್ ಮಹಿಳಾ ಕುಲಕ್ಕೇ ಒಂದು ದೊಡ್ಡ ಕಳಂಕ ಎಂದರೆ ತಪ್ಪಾಗಲಾರದು ಅಲ್ಲವೇ?



ಗುಜರಾತ್ ಮಾದರಿ: ಮಹಿಳೆಯರ ವೈಯಕ್ತಿಕ ಜೀವನದಲ್ಲಿ ಮೂಗುತೂರಿಸುವುದು....

...ದು ಸುಮ್ಮನಾಗಿದ್ದರು. ಆದರೀಗ ಈ ಖಾಸಗಿ ಸಂಬಂಧವನ್ನು ಮುಚ್ಚಿಹಾಕಲು ಮೋದಿ ತನ್ನ ಅಧಿಕಾರವನ್ನು ದುರುಪಯೋಗಪಡಿಸಿಕೊಂಡಿದ್ದು ಹೊರಬಿದ್ದಿದೆ.

ಅದಕ್ಕೂ ಒಂದು ಹಿನ್ನೆಲೆ ಇದೆ.

ಯಾವ ಸಿಂಘಲ್ ಮಾನಸಿ ಮತ್ತು ಶರ್ಮ ಮೇಲೆ ಅಕ್ರಮವಾಗಿ ನಿಗಾ ಇಟ್ಟಿದ್ದನೋ ಅದೇ ಸಿಂಘಲ್ ಆನಂತರ ಇಶ್ರತ್ ಜಹಾನ್‌ಳ ನಕಲಿ ಎನ್‌ಕೌಂಟರ್ ಕೇಸಿನಲ್ಲಿ ಆರೋಪಿಯಾಗಿ ಜೈಲು ಪಾಲಾಗಿದ್ದ. ಅದು ಹೇಗೋ ಜಾಮೀನು ಪಡೆದು ಹೊರಬಂದ ಸಿಂಘಲ್ ಮೋದಿ ಮತ್ತು ಶಾನನ್ನು ನಂಬಿದರೆ ತಾನು ಕೂಡ ವಂಜಾರನಂತೆ ವರ್ಷಾನುಗಟ್ಟಲೆ ಜೈಲು ಪಾಲಾಗುತ್ತೇನೆಂದು ಅರ್ಥ ಮಾಡಿಕೊಂಡ. ಆ ಕಾರಣಕ್ಕೇ ಆತ ರೆಕಾರ್ಡ್ ಮಾಡಿಕೊಂಡಿದ್ದ ಸಂಭಾಷಣೆಗಳ ಪ್ರತಿಗಳನ್ನು ಕಳೆದ ಜೂನ್ ತಿಂಗಳಲ್ಲಿ ಸಿಬಿಐಗೆ ಒಪ್ಪಿಸಿದ. ಈಗ ಅವು ಇಶ್ರತ್ ಜಹಾನ್ ಕೊಲೆ ಕೇಸಿನಲ್ಲಿ ಸಿಬಿಐನ ಪಂಚನಾಮವಾಗಿದೆಯಲ್ಲದೆ 'ಗುಲೈಲ್' ಮತ್ತು 'ಕೋಬ್ರಾ ಪೋಸ್ಟ್' ಎಂಬ ವೆಬ್ ಪೋರ್ಟಲ್‌ಗಳ ಮೂಲಕ ಹೊರಬಿದ್ದಿವೆ.

ಎಲ್ಲೆಲ್ಲೂ ಮಾನಸಿ

ಆ ರೆಕಾರ್ಡಿಂಗ್‌ಗಳಿಂದ ಗೊತ್ತಾಗುವುದೇನೆಂದರೆ ಗುಜರಾತಿನ ಇಂಟೆಲಿಜೆನ್ಸ್ ಬ್ಯೂರೋ, ಕ್ರೈಮ್ ಬ್ರಾಂಚ್ ಮತ್ತು ಆಂಟಿ ಟೆರರಿಸ್ಟ್ ಸ್ಕ್ವಾಡಿನ ಎಂಟು ಅಧಿಕಾರಿಗಳು ಮಾನಸಿಯನ್ನು ಸುಮಾರು ಎರಡು ತಿಂಗಳ ಕಾಲ ಹಿಂಬಾಲಿಸಿದರು. ಆಕೆಯ, ಆಕೆಯ ಕುಟುಂಬದವರ, ಆಕೆಯ ಸ್ನೇಹಿತರ ಫೋನ್ ಸಂಭಾಷಣೆಗಳನ್ನು ಕದ್ದು ಆಲಿಸಿದರು. ಆಕೆ ಯಾರ್‍ಯಾರೊಂದಿಗೆ ಮಾತನಾಡಿದಳೋ, ಭೇಟಿ ಆದಳೋ ಎಲ್ಲವನ್ನೂ ದಾಖಲಿಸಿಕೊಂಡರು. ಆಕೆಯ ಮೇಲೆ ಇಟ್ಟಿದ್ದ ನಿಗಾ ಎಷ್ಟು ತೀವ್ರವಾಗಿತ್ತೆಂದರೆ ಆಕೆ ಹೋಟೆಲ್, ಮಾಲ್, ಏರ್‌ಪೋರ್ಟ್, ಸಿನಿಮಾ, ಐಸ್ ಕ್ರೀಮ್ ಪಾರ್ಲರ್, ಕಾಫಿ ಡೇ, ಜಿಮ್ ಎಲ್ಲಿ ಹೋದರೂ ಆಕೆಗೆ ಗೊತ್ತಾಗದಂತೆ ಹಿಂಬಾಲಿಸಲಾಗಿತ್ತು. ಮಾತ್ರವಲ್ಲ ಆಕೆ ಸಂಬಂಧಿಕರ ಮನೆಗೆ ಕೊಟ್ಟ ಭೇಟಿಗಳನ್ನಲ್ಲದೆ ಆಕೆಯ ತಾಯಿ ಆಸ್ಪತ್ರೆಯಲ್ಲಿದ್ದಾಗ ಆಕೆ ಅಲ್ಲಿಗೆ ಹೋದಾಗಲೂ ಪೊಲೀಸರು ಆಕೆಯ ಬೆನ್ನಿಗೆ ಬಿದ್ದಿದ್ದರು.

ಅಷ್ಟೇ ಮುಖ್ಯವಾಗಿ ಆ ರೆಕಾರ್ಡಿಂಗ್‌ಗಳಿಂದ ಗೊತ್ತಾಗುವ ಅಂಶ ಯಾವುದೆಂದರೆ ಹೀಗೆ ಮಾನಸಿ ಮತ್ತು ಶರ್ಮನ ಮೇಲೆ ಇಟ್ಟಿದ್ದ ಕಟ್ಟೆಚ್ಚರಕ್ಕೆ ಕಾರಣ ಆಕೆಯ ರಕ್ಷಣೆ ಅಲ್ಲ ಬದಲಾಗಿ ಅವರಿಬ್ಬರನ್ನು ಹೇಗಾದರೂ ನಿಗ್ರಹಿಸುವುದೇ ಆಗಿತ್ತು ಎಂಬುದು (ವಿವರಗಳಿಗೆ ಬಾಕ್ಸ್ ನೋಡಿ).

ರೆಕಾರ್ಡಿಂಗ್‌ಗಳಲ್ಲಿ ಮೋದಿಯ ಹೆಸರನ್ನು ನೇರವಾಗಿ ಪ್ರಸ್ತಾಪಿಸಲ್ಲವಾದರೂ ಶಾ ಯಾರನ್ನು 'ಸಾಹೇಬ್' ಎಂದು ಕರೆಯುತ್ತಿದ್ದಾನೆ ಎಂಬುದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಜೊತೆಗೆ ಶರ್ಮನೊಂದಿಗೆ ಮಾನಸಿ ಹೊಂದಿದ್ದ ಸ್ನೇಹದ ಬಗ್ಗೆಯೂ ಮೋದಿ 'ಪ್ರೇಮ ಮತ್ಸರ'ದಿಂದ ಹಲುಬುತ್ತಿದ್ದ ಎನಿಸುತ್ತದೆ. ಹಾಗೆಯೇ ಮುಖ್ಯವಾಗಿ ತಾನು ಹೊಂದಿದ್ದ ವೈಯಕ್ತಿಕ ಸಂಬಂಧದ ವಿಚಾರ ಎಲ್ಲಿ ಹೊರಬಿದ್ದು ತನ್ನ ರಾಜಕೀಯ ಮಹತ್ವಾಕಾಂಕ್ಷೆ ನುಚ್ಚು ನೂರಾಗುತ್ತದೋ ಎಂಬ ಮೋದಿಯ ಆತಂಕ ಸಾಬೀತಾಗುತ್ತದೆ.

ಅದಕ್ಕಿಂತ ಮುಖ್ಯವಾಗಿ ಮೋದಿ ತನ್ನ ದುರುದ್ದೇಶಗಳ ಈಡೇರಿಕೆಗೆ ಎಂತಹ ಅಕ್ರಮಗಳಿಗೂ ಹೇಸುವುದಿಲ್ಲ ಎಂದು ಅರ್ಥವಾಗುತ್ತದೆ. ಆತ ಗುಜರಾತಿನಲ್ಲಿ ನಡೆಸುತ್ತಿರುವುದು ಪ್ರಜಾಸತ್ತಾತ್ಮಕ ಸರ್ಕಾರವಲ್ಲ ಬದಲಾಗಿ ಲಂಗುಲಗಾಮಿಲ್ಲದ ಪೊಲೀಸ್ ರಾಜ್ಯ ಎಂದು ಗೊತ್ತಾಗುತ್ತದೆ.

ಬಿಜೆಪಿಯ ಚಿಕ್ಕಟ್ಟು


ಇಂತಹದ್ದೇ ಹಗರಣದಲ್ಲಿ ಕಾಂಗ್ರೆಸ್ ಉಪಾಧ್ಯಕ್ಷ ರಾಹುಲ್ ಗಾಂಧಿಯೋ, ಮತ್ಯಾರೋ ಕಾಂಗ್ರೆಸ್ ನಾಯಕರೋ ಸಿಕ್ಕಿಬಿದ್ದಿದ್ದರೆ ಇಷ್ಟುಹೊತ್ತಿಗೆ ಬಿಜೆಪಿಯ ನಾಯಕರು ಆಕಾಶ ಮತ್ತು ಭೂಮಿಯನ್ನು ಒಂದು ಮಾಡುವಂತೆ ಅರಚಾಡುತ್ತಿದ್ದರು. ಆದರೆ ಈಗ ಅವರು [illegible] ರಕ್ಷಣೆಗೆ [illegible] ಮತ್ತು [illegible] ಅವರ [illegible] ಕೊಂಡಿದ್ದಾರೆ. ಮಾನಸಿಯ [illegible]

ತಂದೆಯಿಂದಲೇ 'ತನಿಖೆ ಅಗತ್ಯ'ವಿಲ್ಲ ಎಂಬ ಹೇಳಿಕೆಯನ್ನು ಕೊಡಿಸುವ ಮೂಲಕ ಇದಕ್ಕೆ ಅಂತ್ಯ ಹಾಡಲು ಯತ್ನಿಸುತ್ತಿದ್ದಾರೆ. ಈ ಹಗರಣದಲ್ಲಿ ಮಾನಸಿ ಸೋನಿ ಎಂಬ ಮಹಿಳೆ ನಿಮಿತ್ತ ಮಾತ್ರ. ಆಕೆ ಮತ್ತು ಮೋದಿ ನಡುವಿನ ಸಂಬಂಧ ಅವರ ಖಾಸಗಿ ವಿಚಾರ. ಅದಕ್ಕಿಂತ ಇಲ್ಲಿ ಮುಖ್ಯವಾಗಿರು ವುದು ಸ್ವಾರ್ಥಕ್ಕಾಗಿ ಕಾನೂನುಗಳ ಉಲ್ಲಂಘನೆ, ಅಧಿಕಾರದ ದುರ್ಬಳಕೆ, ಖಾಸಗಿ ಜೀವನದ ಪ್ರೈವಸಿಯ ಹರಣ...

ಇದನ್ನೆಲ್ಲ ಮಾಡಿರುವ ಮೋದಿ ಈ ದೇಶದ ಪ್ರಧಾನಿ ಆಗುವ ಬದಲು ಜೈಲಿನಲ್ಲಿರಬೇಕಲ್ಲವೇ?

● ಗೌರಿ ಲಂಕೇಶ್

ಸಂಘ ಪರಿವಾರವನ್ನು ಬಯಲಿಗೆಳೆಯುತ್ತಿರುವ ಪತ್ರಕರ್ತ ಆಶೀಶ್ ಖೇತಾನ್



ಮೋದಿಯ ಪ್ರಸ್ತುತ 'ಪ್ರೇಮ ಮತ್ಸರ' ಹಗರಣವನ್ನು ಪತ್ತೆ ಹಚ್ಚಿದ್ದು ಆಶೀಶ್ ಖೇತಾನ್ ಎಂಬ ಪತ್ರಕರ್ತ.

ಈತ ಬೇರೆ ಯಾರೂ ಅಲ್ಲ, ಈ ಹಿಂದೆ 2002ರ ಗುಜರಾತ್ ನರಮೇಧದ ಹಿಂದೆ ಇದ್ದದ್ದು ಸಂಘಪರಿವಾರದ ಕೊಲೆಗಡುಕರು ಎಂದು ಸ್ಟಿಂಗ್ ಆಪರೇಷನ್ ಮೂಲಕ ಬಹಿರಂಗಪಡಿಸಿದ್ದೂ ಇದೇ ಆಶೀಶ್. ಈತ ಆಗ ಗುಪ್ತವಾಗಿ ಸೆರೆಹಿಡಿದಿದ್ದ ವೀಡಿಯೋ ದೃಶ್ಯಗಳನ್ನು ನ್ಯಾಯಾಲಯ ಗಣನೆಗೆ ತೆಗೆದುಕೊಂಡಿದ್ದರಿಂದ ಬಾಬು ಭಜರಂಗಿ ಎಂಬ ಚಿಲ್ಲಿ ಕೊಲೆಗಡುಕನಿಗೆ ನ್ಯಾಯಾಲಯ ಜೀವಾವಧಿ ಶಿಕ್ಷೆಯನ್ನು ವಿಧಿಸಿದೆ.

ಹಾಗೆಯೇ ಮಾಲೆಗಾಂವ್ ಬಾಂಬ್ ಸ್ಫೋಟ ಮತ್ತು ಪುಣೆಯ ಜರ್ಮನ್ ಬೇಕರಿ ಬಾಂಬ್ ಬ್ಲಾಸ್ಟ್ ಪ್ರಕರಣಗಳಿಗೆ ಸಂಬಂಧಪಟ್ಟಂತೆ ಹೇಗೆ ಮಹಾರಾಷ್ಟ್ರದ ಪೊಲೀಸರು ಅಮಾಯಕ ಮುಸ್ಲಿಮ್ ಯುವಕರನ್ನು ಅನ್ಯಾಯವಾಗಿ ಬಂಧಿಸಿ ಅವರಿಗೆ ಚಿತ್ರಹಿಂಸೆ ನೀಡುತ್ತಿದ್ದಾರೆಂದು ಪ್ರತ್ಯೇಕ ತನಿಖೆಗಳ ಮೂಲಕ ಸಾಬೀತು ಪಡಿಸಿರುವುದು ಇದೇ ನೇರ ನಿಷ್ಠುರ ಪತ್ರಕರ್ತ ಆಶೀಶ್.

ಭಯೋತ್ಪಾದಕ ಕೃತ್ಯಗಳನ್ನು ಕುರಿತಂತೆ ಪೊಲೀಸರು ನೀಡುವ ಮಾಹಿತಿಯನ್ನು ಇತರೆ ಪತ್ರಕರ್ತರು ಪ್ರಶ್ನಿಸದೆ ಬರೆದುಕೊಳ್ಳುವ ಪರಿಪಾಠವನ್ನು ರೂಢಿ ಮಾಡಿಕೊಂಡಿರುವ ಇಂದಿನ ಪರಿಸ್ಥಿತಿಯಲ್ಲಿ ತಾನೇ ಪ್ರತ್ಯೇಕ ತನಿಖೆಗಳನ್ನು ನಡೆಸಿ ಸತ್ಯವನ್ನು ಹೊರಗೆಳೆಯುವುದನ್ನು ಆಶೀಶ್ ತಮ್ಮ ಪತ್ರಿಕಾ ಧರ್ಮವಾಗಿ ಪಾಲಿಸುತ್ತಾ ಬಂದಿದ್ದಾರೆ.

ಈ ಹಿಂದೆ, ಔಟ್‌ಲುಕ್, ತೆಹೆಲ್ಕಾ ಪತ್ರಿಕೆಗಳಲ್ಲದೆ ಕೆಲಕಾಲ ಹೆಡ್‌ಲೈನ್ಸ್ ಟುಡೆ ಟಿವಿ ಚಾನೆಲ್‌ನಲ್ಲೂ ಕೆಲಸ ಮಾಡಿದ್ದ ಆಶೀಶ್ ಇತ್ತೀಚೆಗೆ ತಮ್ಮದೇ ಆತ ಗುಲೈಲ್ (ಅಂದರೆ ಕ್ಯಾಟರ್ ಬಿಲ್ಲು) ಎಂಬ ವೆಬ್ ಪೋರ್ಟಲ್‌ಅನ್ನು ಪ್ರಾರಂಭಿಸಿದ್ದಾರೆ.

ಆಶೀಶ್ ಖೇತಾನ್ ಅವರಿಗೆ ಅಭಿನಂದನೆಗಳು. ●

ಮೋದಿಯ ಪೊಲೀಸ್ ಸಾಮ್ರಾಜ್ಯ

ನಿಯಮಗಳ ಪ್ರಕಾರ ಯಾವ್ದೇ ಸರ್ಕಾರ ಯಾರದ್ದೇ ಟೆಲಿಫೋನ್ ಅನ್ನು ಕದ್ದು ಆಲಿಸಬೇಕೆಂದರೆ, ಅವರ ಚಲನವಲನಗಳ ಮೇಲೆ ಪೊಲೀಸರು ನಿಗಾ ಇಡಬೇಕೆಂದರೆ ಅದಕ್ಕೆ ಸೂಕ್ತ ನ್ಯಾಯಾಲಯ ಅಥವಾ ಅಧಿಕಾರಿಯ ಅನುಮತಿ ಪಡೆದಿರಬೇಕು. ಹಾಗೆ ಮಾಡದೆ ತನಗೆ ಇಷ್ಟ ಬಂದವರ ಫೋನ್ ಸಂಭಾಷಣೆಗಳ ಮೇಲೆ ಮತ್ತು ಚಲನವಲನಗಳ ಮೇಲೆ ನಿಗಾ ಇಡುವುದು ಕಾನೂನುಬಾಹಿರ ಮಾತ್ರವಲ್ಲ ಅದು ಪ್ರಜೆಗಳ ಖಾಸಗಿ ಬದುಕಿನ ಮೇಲೆ ಅಕ್ರಮವಾಗಿ ದಾಳಿ ಮಾಡಿದ್ದಕ್ಕೆ ಸಮನಾಗುತ್ತದೆ. ಸಂವಿಧಾನ ಪ್ರಜೆಗಳಿಗೆ ನೀಡಿರುವ ರಕ್ಷಣೆಯ ಉಲ್ಲಂಘನೆಯಾಗುತ್ತದೆ.

ಆದರೆ ಕಾನೂನು, ನೀತಿ, ನಿಯಮಗಳಿಗೆ ನರಹಂತಕ ನರೇಂದ್ರ ಮೋದಿ ಎಂದೂ ಕಿಂಚಿತ್ತೂ ಕಿಮ್ಮತ್ತು ಕೊಟ್ಟಿಲ್ಲ. ಬದಲಾಗಿ ಆತನ ಆಡಳಿತದಲ್ಲಿ ಅವುಗಳ ಮೇಲೆ ವ್ಯಾಪಕ ದಾಳಿಗಳೇ ನಡೆದಿವೆ. ಅದಕ್ಕೆ ಒಂದು ಸೂಕ್ತ ಉದಾಹರಣೆ ಇತ್ತೀಚೆಗೆ ಹಿಂದೂಸ್ತಾನ್ ಟೈಮ್ಸ್ ಎಂಬ ದೆಹಲಿ ಮೂಲದ ಇಂಗ್ಲಿಷ್ ದೈನಿಕದಲ್ಲಿ ಪ್ರಕಟಗೊಂಡಿರುವ ವರದಿ.

ಆ ವರದಿ ಹೀಗಿದೆ:

"ಗುಜರಾತ್ ರಾಜ್ಯದಲ್ಲಿ ಕದ್ದಾಲಿಸುವಿಕೆ ಅದೆಷ್ಟು ವ್ಯಾಪಕವಾಗಿದೆ ಎಂದರೆ ಆ ರಾಜ್ಯದ ಡೈರೆಕ್ಟರ್ ಜನರಲ್ ಆಫ್ ಪೊಲೀಸ್ ಅಮಿತಾಭ್ ಪಾಠಕ್ ಅವರಿಗೆ ಕಳೆದ ಮೇ ತಿಂಗಳಲ್ಲಿ ತನ್ನ ಇಲಾಖೆಯ ಸಿಬ್ಬಂದಿ ತಮ್ಮ ಅರಿವಿಗೆ ತರದೆ ಬರೋಬ್ಬರಿ 93,000 ಮೊಬೈಲ್ ಫೋನ್‌ಗಳ ಕಾಲ್ ಡಿಟೈಲ್ ರೆಕಾರ್ಡ್ಸ್ (ಸಿಡಿಆರ್)ಗಳನ್ನು ಸಂಗ್ರಹಿಸಿಟ್ಟಿದ್ದು ಗೊತ್ತಾಗಿ ಅವರಿಗೆ ದೊಡ್ಡ ಶಾಕ್ ಆಗಿತ್ತು. ಈ ಸಿಡಿಆರ್‌ಗಳನ್ನು 2012ರ ಡಿಸೆಂಬರ್ ತಿಂಗಳಿನಿಂದ ಸಂಗ್ರಹಿಸಲಾಗಿತ್ತು.

ಈ ವಿಷಯ ಗೊತ್ತಾಗುತ್ತಿದ್ದಂತೆ ಪಾಠಕ್ ಅವರು ಒಂದು ಸುತ್ತೋಲೆಯನ್ನು ಹೊರಡಿಸಿ ಇನ್ನು ಮುಂದೆ ಸೂಪರಿಂಟೆಂಡೆಂಟ್ ಆಫ್ ಪೊಲೀಸ್ (ಎಸ್‌ಪಿ) ಮತ್ತು ಅದಕ್ಕಿಂತ ಹಿರಿಯ ಸ್ಥಾನದಲ್ಲಿರುವ ಅಧಿಕಾರಿಗಳು ಮಾತ್ರ ಮೊಬೈಲ್ ಕಂಪನಿಗಳಿಂದ ಸಿಡಿಆರ್‌ಗಳನ್ನು ಪಡೆಯತಕ್ಕದ್ದು ಎಂದು ಆದೇಶಿಸಿದರು."

ಆದರೆ ಮೋದಿ ಸರ್ಕಾರ ತನ್ನ ರಾಜಕೀಯ ವೈರಿಗಳ, ವಿರೋಧಿಗಳ, ಸಾಮಾನ್ಯ ಜನರ ಫೋನ್ ಕಾಲ್‌ಗಳನ್ನು ಅಕ್ರಮವಾಗಿ ಕದ್ದಾಲಿಸುತ್ತಿರುವುದು ಇತ್ತೀಚಿನ ವಿದ್ಯಮಾನವಲ್ಲ. ಬದಲಾಗಿ 2002ರಲ್ಲಿ ಅಲ್ಪಸಂಖ್ಯಾತರ ಮಾರಣಹೋಮ ನಡೆದು ಅದು ವ್ಯಾಪಕ ವಿರೋಧಕ್ಕೆ ಗುರಿಯಾದಾಗಿನಿಂದ ನಡೆದುಬರುತ್ತಿರುವ ಅಕ್ರಮವಾಗಿದೆ.

ಉದಾಹರಣೆಗೆ ಗುಜರಾತ್ ಗಲಭೆಗಳು ಕುರಿತಂತೆ ವಿಚಾರಣೆ ನಡೆಸಿದ ನಾನಾವತಿ ಆಯೋಗದ ಮುಂದೆ ಆಗ ಇಂಟೆಲಿಜೆನ್ಸ್ ಬ್ಯೂರೋದ ಮುಖ್ಯಸ್ಥರಾಗಿದ್ದ ಪೊಲೀಸ್ ಅಧಿಕಾರಿ ಆರ್.ಬಿ.ಶ್ರೀಕುಮಾರ್ ಅವರು ಸಲ್ಲಿಸಿದ್ದ ಅಫಿಡವಿತ್‌ನಲ್ಲಿ ಹೀಗೆಂದು ಹೇಳಿದ್ದರು: "ಗಲಭೆಗಳ ನಂತರ ಮುಖ್ಯಮಂತ್ರಿ ನರೇಂದ್ರ ಮೋದಿಯವರು ನನ್ನನ್ನು ಕರೆದು ಬಿಜೆಪಿ ನಾಯಕ ಹರೇನ್ ಪಾಂಡ್ಯ ಮತ್ತು ಕಾಂಗ್ರೆಸ್ ನಾಯಕ ಶಂಕರ್‌ಸಿಂಗ್ ವಘೇಲಾ ಅವರ ಮೊಬೈಲ್ ಫೋನ್‌ಗಳನ್ನು ಟ್ಯಾಪ್ ಮಾಡಲು ಬಾಯಿಮಾತಿನಲ್ಲಿ ಹೇಳಿದರು. ಆದರೆ ಸೂಕ್ತ ಪರವಾನಗಿ ಪಡೆಯದೆ ಹಾಗೆ ಮಾಡಲು ಸಾಧ್ಯವಿಲ್ಲ ಎಂದು ಉತ್ತರಿಸಿದ ನಾನು ಅವರಿಬ್ಬರ ಫೋನ್ ಕರೆಗಳನ್ನು ಕದ್ದಾಲಿಸಲು ನಿರಾಕರಿಸಿದೆ."

ಇದಾದ ನಂತರ ಶ್ರೀಕುಮಾರ್ ಅವರನ್ನು ಇಂಟೆಲಿಜೆನ್ಸ್ ಬ್ಯೂರೋದಿಂದ ಮೋದಿ ಕಿತ್ತುಹಾಕಿದನಲ್ಲದೆ ತನ್ನ ಆದೇಶವನ್ನು ಪಾಲಿಸುವ ಅಧಿಕಾರಿಯನ್ನು ಆ ಸ್ಥಾನದಲ್ಲಿ ಕೂರಿಸಿದ ಮತ್ತು ತನ್ನ ಅಕ್ರಮಗಳನ್ನು ಮುಂದುವರೆಸಿದ. ಆಗ ಸ್ವತಃ ಹರೇನ್ ಪಾಂಡ್ಯ, ವಘೇಲಾ ಮತ್ತು ಮೋದಿಯ ದುರಾಡಳಿತವನ್ನು ವಿರೋಧಿಸಿದ್ದ ಬಿಜೆಪಿಯ ಮತ್ತೋರ್ವ ನಾಯಕ ಗೋವರ್ಧನ್ ಜಡಾಫಿಯಾ ಅವರುಗಳು ತಮ್ಮ ಫೋನ್ ಕರೆಗಳನ್ನು ಕದ್ದಾಲಿಸಲಾಗುತ್ತಿದೆ ಎಂದು ಮಾಧ್ಯಮಗಳ ಮುಂದೆ ಆರೋಪಿಸಿದ್ದರು.

ಆದರಲ್ಲೂ ಹರೇನ್ ಪಾಂಡ್ಯ ಅವರಿಗೆ ಆದದ್ದು ಅತಿ ಘೋರ ಅನ್ಯಾಯ. ಪಾಂಡ್ಯ [illegible] ಪೊಲೀಸರು [illegible] ಅವರು ಗುಜರಾತ್ ಗಲಭೆ ಕುರಿತಂತೆ ಸ್ವತಂತ್ರ ವಿಚಾರಣೆ ನಡೆಸುತ್ತಿದ್ದ [illegible] ಅವರ ಆಯೋಗದ ಮುಂದೆ ಗುಪ್ತವಾಗಿ ಮಾಹಿತಿ ಸಲ್ಲಿಸಿದ್ದು ಮೋದಿಯ [illegible] ಬಂದಿತು. ಅದಾದ ಕೆಲವೇ ದಿನಗಳಲ್ಲಿ [illegible]



ಇಶ್ರತ್ ಜಹಾನ್ ಎನ್‌ಕೌಂಟರ್ ಆದಾಗ....

ವಾಕ್‌ಗೆಂದು ಹೋಗಿದ್ದಾಗ ದುಷ್ಕರ್ಮಿಗಳು ಅವರ ಮೇಲೆ ಗುಂಡು ಹಾರಿಸಿ ಕೊಂದು ಹಾಕಿದರು. ಪಾಂಡ್ಯ ಅವರ ಕೊಲೆಯ ಹಿಂದೆ ಮೋದಿಯ ಕೈವಾಡವಿದೆ ಎಂದು ಪಾಂಡ್ಯ ಅವರ ಪತ್ನಿ ಆರೋಪಿಸುತ್ತಲೇ ಬಂದಿದ್ದಾರೆ.


ಈಗ ಮತ್ತೆ ಕಾನೂನು ನಿಯಮಗಳನ್ನು ಉಲ್ಲಂಘಿಸಿ ಯಾವುದೇ ರೀತಿಯಲ್ಲಿ ಕ್ರಿಮಿನಲ್ ಅಲ್ಲದ, ಕಾನೂನು ಮತ್ತು ಸುವ್ಯವಸ್ಥೆಗೆ ಹಾನಿಕಾರಕ ಅಲ್ಲದ ಮಾನಸಿ ಸೋನಿ ಎಂಬ ಮಹಿಳೆಯ (ಆಕೆಯ ಕುಟುಂಬದವರು ಮತ್ತು ಸ್ನೇಹಿತರೂ ಸೇರಿದಂತೆ) ಫೋನ್ ಕರೆಗಳು ಮತ್ತು ಚಲನವಲನಗಳ ಮೇಲೆ ಖಾಸಗಿ ಕಾರಣಕ್ಕೆ ಅಕ್ರಮವಾಗಿ ನಿಗಾ ಇಡಲಾಗಿತ್ತು ಎಂಬ ಸುದ್ದಿ ಹೊರಬಿದ್ದಿದೆ. ಇದು ಆಘಾತಕಾರಿ ಸುದ್ದಿಯಾಗಿದೆಯಲ್ಲದೆ, ಇನ್ನೂ ಯಾರ್‍ಯಾರ ಮೇಲೆ ಹೀಗೆ ಕಾನೂನುಬಾಹಿರವಾಗಿ ನಿಗಾ ಇಡಲಾಗಿದೆ ಎಂಬ ಪ್ರಶ್ನೆ ಕೇಳಿಬರುತ್ತಿದೆ.

ಸರ್ವಾಧಿಕಾರಿ ಧೋರಣೆಯ ಮೋದಿ ತನ್ನ ಬಿಜೆಪಿ ಪಕ್ಷದಲ್ಲೇ ಇರುವ ಪ್ರತಿಸ್ಪರ್ಧಿಗಳ, ವಿರೋಧ ಪಕ್ಷಗಳಲ್ಲಿರುವ ರಾಜಕೀಯ ವೈರಿಗಳ, ಅಲ್ಪಸಂಖ್ಯಾತ ಸಮುದಾಯಗಳ ಮುಖಂಡರ, ಮಾನವಹಕ್ಕು ಹೋರಾಟಗಾರರ, ಪತ್ರಕರ್ತರ, ಆತನ ಕೋಮುವಾದಿ ಸಿದ್ಧಾಂತವನ್ನು ವಿರೋಧಿಸುವವರ, ಆತನ ವಿರುದ್ಧ ನ್ಯಾಯಾಲಯಗಳ ಮೆಟ್ಟಿಲುಗಳನ್ನು ಏರಿರುವವರ, ನಿಯಮಗಳನ್ನು ಪಾಲಿಸುವ ಅಧಿಕಾರಿಗಳ, ಆತನ ಅಭಿವೃದ್ಧಿ ಮಾದರಿ ಟೊಳ್ಳು ಎಂದು ಎತ್ತಿ ತೋರಿಸಿರುವ ಕಾಂಪ್ಟ್ರೋಲರ್ ಅಂಡ್ ಆಡಿಟರ್ ಜನರಲ್ ಅವರ, ವಿಶೇಷ ತನಿಖಾ ದಳದ ಸದಸ್ಯರ, ಆತನನ್ನು ಹಲವಾರು ಬಾರಿ ಟೀಕಿಸಿರುವ ನ್ಯಾಯಾಧೀಶರ... ಇವರೆಲ್ಲರ ಮೇಲೂ ಮೋದಿ ಅಕ್ರಮವಾಗಿ ನಿಗಾ [illegible] ಸಾಕು ಎಂಬ ಆತಂಕಗಳು ಈಗ [illegible]

ಇದಕ್ಕೆ ಕಾರಣವೂ ಇದೆ. ಹೀಗೆ ಕಾನೂನುಗಳನ್ನು ಮುರಿಯುವ, [illegible] ವರ್ತಿಸುವ, ಸುಳ್ಳು ಬೊಗಳುವ, ಇತಿಹಾಸವನ್ನು ತಿರುಚುವ [illegible] ಹತ್ಯೆಗೈಯುವ ಮೋದಿ ಆಕಸ್ಮಿಕವಾಗಿ ಪ್ರಧಾನಿ ಆದರೆ ನಮ್ಮ ದೇಶದಲ್ಲಿ [illegible] ಹೊರಟುಹೋಗಿ ಅದರ ಜಾಗದಲ್ಲಿ ಪೊಲೀಸ್ [illegible] ಪ್ರಜ್ಞಾವಂತರನ್ನು ಕಾಡುತ್ತಿದೆ. ಇದಾಗ [illegible] ಮೂಲಕ ಇದರಲ್ಲಿ ಮೋದಿಯ ಕೈವಾಡವನ್ನು ಬಹಿರಂಗಪಡಿಸಬೇಕಿದೆ.

[illegible]

'ಈ ದೇಶ ಯಾವುದೇ ಧರ್ಮದ, ಜಾತಿಯ ಸ್ವತ್ತಲ್ಲ'



ಮಂಗಳೂರಿನ ಭಯೋತ್ಪಾದಕರ ವಕೀಲನೆಂಬ ಹಣೆಪಟ್ಟಿ ಅಂಟಿಸಿಕೊಂಡ ಹಿರಿಯ ವಕೀಲ ಪುರುಷೋತ್ತಮ ಪೂಜಾರಿಯವರ ಸಂದರ್ಶನ ನಡೆಸಲು ಗೆಳೆಯ ಆಸಿಫ್‌ನೊಂದಿಗೆ ಅವರ ಕಚೇರಿ ಯಿರುವ ಮಂಗಳೂರು ಲೈಟ್‌ಹೌಸ್ ಹಿಲ್‌ನ ಮ್ಯಾಕ್ಸಿಮಸ್ ಬಿಲ್ಡಿಂಗ್ ಬಳಿ ಕಾಯುತ್ತಿದ್ದೆ. ಸ್ವಲ್ಪ ಹೊತ್ತಿನಲ್ಲಿ ಕಡು ಕೆಂಪು ಬಣ್ಣದ ಕಾರೊಂದನ್ನು ಬುರ್ಖಾಧಾರಿ ಮಹಿಳೆಯೊಬ್ಬರು ಚಲಾಯಿಸುತ್ತಾ ಬಂದರು. ಡ್ರೈವರ್ ಸೀಟಿನ ಪಕ್ಕದ ಸೀಟಿನಿಂದ ರಾಜ್ಯದ ಅತ್ಯಂತ ಹಿರಿಯ ವೃತ್ತಿನಿರತ ವಕೀಲರೆಂಬ ಖ್ಯಾತಿಯ 90 ಹರೆಯದ ಪುರುಷೋತ್ತಮ ಪೂಜಾರಿ ಇಳಿದರು. ಸ್ವಲ್ಪವೂ ಬಾಗಿರದ ಬೆನ್ನಿನ ಅವರ ಲವಲವಿಕೆಯ ನಡೆ ನಮ್ಮನ್ನು ಆಶ್ಚರ್ಯಚಕಿತರನ್ನಾಗಿಸಿತು. ಕಾರು ಚಲಾಯಿಸುತ್ತಾ ಬಂದ ಬುರ್ಖಾಧಾರಿ ಮಹಿಳೆ ನುಸ್ರತ್ ಫಾತಿಮ. 2009ರ ಏಪ್ರಿಲ್‌ನಲ್ಲಿ ಮಾನವ ಹಕ್ಕುಗಳ ಉಲ್ಲಂಘಕರ ವಿರುದ್ಧ ಧ್ವನಿಯೆತ್ತಿ ಹೋರಾಡಿದ ಕಾರಣಕ್ಕಾಗಿ ಮಂಗಳೂರಿನ ಪೊಲೀಸ್ ದುಷ್ಟಕೂಟದ ಸಂಚು ಮತ್ತು ಹಿಂದೂತ್ವವಾದಿ ಗೂಂಡಾಗಳ ಗುಂಡಿಗೆ ಎದೆಯೊಡ್ಡಿ ಹುತಾತ್ಮರಾದ ನೌಶಾದ್ ಕಾಶಿಂಜೆಯವರ ಮಡದಿ. ನೌಶಾದ್ ಕಾಶಿಂಜೆ ಪುರುಷೋತ್ತಮ ಪೂಜಾರಿಯವರ ಪುತ್ರನಂತಿದ್ದವರು. ಅವರ ಮರಣದ ಬಳಿಕ ಅವರ ಮಡದಿ ಮಕ್ಕಳಿಗೆ ದಿಕ್ಕಿಲ್ಲದಂತಾಗಲು ಬಿಡದ ಆ ಹಿರಿಜೀವ ಮತ್ತು ನುಸ್ರತ್ ಫಾತಿಮಾರ ನಡುವಿನ ಗುರು-ಶಿಷ್ಯೆ ಪ್ರೀತಿ ಪದಗಳಿಗೆ ನಿಲುಕದ್ದು ಎಂಬುವುದು ನಮಗೆ ಒಂದೇ ನೋಟಕ್ಕೆ ಮನದಟ್ಟಾಯಿತು. ಕೋಮು ಸೌಹಾರ್ದ ಚಳವಳಿಯ ಕಾರ್ಯಕರ್ತರಾದ ನಾವು ಆ ಅಪೂರ್ವ ದೃಶ್ಯವನ್ನು ಕಂಡು ಭಾವುಕರಾದೆವು.

ಕೇಸರಿ ಅಫೀಮಿನ ನಶಾತಪ್ತ ಪೊಲೀಸರಿಗೆ, ಮಾನವ ಹಕ್ಕುಗಳ ಉಲ್ಲಂಘಕರಿಗೆ ಸಿಂಹಸ್ವಪ್ನದಂತಿರುವ ಪೂಜಾರಿಯವರು ತಮ್ಮ ಅತ್ಯಂತ ಉತ್ಸಾಹದಿಂದ ನಮ್ಮೊಂದಿಗೆ ಮನಬಿಚ್ಚಿ ಮಾತನಾಡಿದರು.

• *ಸರ್, ತಮ್ಮ ಊರು ಬಾಲ್ಯ, ಕುಟುಂಬ, ಶಿಕ್ಷಣ ಇತ್ಯಾದಿ ಬಗ್ಗೆ ಸ್ವಲ್ಪ ಹೇಳಿ...*

ಮಂಗಳೂರಿನ ಕೊಂಚಾಡಿ ನನ್ನ ಊರು. ನನ್ನ ತಂದೆ ಕುಂಞಪ್ಪ ಪೂಜಾರಿ ಶೇಂದಿ ಅಂಗಡಿ ಇಟ್ಟುಕೊಂಡಿದ್ದರು. ತಾಯಿ ತಿಮ್ಮಕ್ಕ. ಆರ್ಥಿಕವಾಗಿ ಸ್ವಲ್ಪ ಮಟ್ಟಿಗೆ ಅನುಕೂಲಸ್ಥ ಕುಟುಂಬ ನಮ್ಮದು. ಪ್ರಾಥಮಿಕ, ಪ್ರೌಢ ಮತ್ತು ಪದವಿ ಶಿಕ್ಷಣ ಮಂಗಳೂರಿನಲ್ಲೇ ಪಡಕೊಂಡು ಆ ಬಳಿಕ ಮದ್ರಾಸ್‌ಗೆ ತೆರಳಿ ಅಲ್ಲಿ ಕಾನೂನು ವ್ಯಾಸಂಗ ಮಾಡಿದೆ.

• *ವೃತ್ತಿಯ ಆರಂಭಿಕ ದಿನಗಳು ಹೇಗಿದ್ದವು?*

1952ರಲ್ಲಿ ಕಾನೂನು ಪದವಿ ಪಡೆದುಕೊಂಡು ಬಂದು 1956 ರವರೆಗೆ ಕೆ.ವೈ.ಪೂಜಾರಿಯವರೊಂದಿಗೆ ಜೂನಿಯರ್ ಆಗಿ ವೃತ್ತಿ ನಿರ್ವಹಿಸಿದೆ. ಸುಮಾರು 20 ವರ್ಷಗಳ ಕಾಲ ಕೊಂಚಾಡಿಯಿಂದ ಮಂಗಳೂರಿಗೆ ಸೈಕಲ್ ತುಳಿದುಕೊಂಡು ಬರುತ್ತಿದ್ದೆ. ನಾನು ಅಂದಿನಿಂದ ಇಂದಿನವರೆಗೂ ಅಂದರೆ ಸುಮಾರು 60 ವರ್ಷಗಳ ವೃತ್ತಿ ಜೀವನದಲ್ಲಿ ಬರೇ ದುಡ್ಡಿಗಾಗಿ ವೃತ್ತಿ ನಿರ್ವಹಿಸಿದ್ದಿಲ್ಲ, ಅಂದ ಮಾತ್ರಕ್ಕೆ ಧರ್ಮಾರ್ಥ ಪ್ರಾಕ್ಟೀಸ್ ಮಾಡುತ್ತಿದ್ದೆ ಎಂದಲ್ಲ, ನಾನು ಇಂದಿಗೂ ಬಾಡಿಗೆ ಮನೆಯಲ್ಲಿದ್ದೇನೆ.

• *ಅಂದಿನ ನ್ಯಾಯಾಲಯಗಳ ಕಾರ್ಯಕಲಾಪಗಳು ಮತ್ತು ಇಂದಿನ ಕಾರ್ಯಕಲಾಪಗಳ ಮಧ್ಯೆ ಎಂತಹ ವ್ಯತ್ಯಾಸವನ್ನು ತಾವು ಗುರುತಿಸಿದ್ದೀರಿ?*

ಅಜಗಜಾಂತರ ವ್ಯತ್ಯಾಸ ಇದೆ. ಅಂದು ನ್ಯಾಯಾಂಗ ಮತ್ತು ಕಾರ್ಯಾಂಗ ಈ ಪಾಟ ಭ್ರಷ್ಟಗೊಂಡಿರಲಿಲ್ಲ, ಅಂದು ಉನ್ನತ ಹುದ್ದೆಯಲ್ಲಿದ್ದವರಿಗೆ ಸಮಾಜ ನಮ್ಮನ್ನು ಗಮನಿಸುತ್ತಿದೆ ಎಂಬ ಭಯವಿತ್ತು, ಇಂದು ನೈತಿಕತೆ ಮತ್ತು ಮಾನ ಮರ್ಯಾದೆ ಉನ್ನತ ಹುದ್ದೆಯಲ್ಲಿರುವ ಯಾರಿಗಿದೆ? 1956 ರವರೆಗೆ ಮನೆಗಾರರು, ತಹಸೀಲ್ದಾರರು ಮುಂತಾದವರು ಪ್ರಮೋಶನ್ ಆಗಿ ಫಸ್ಟ್ ಕ್ಲಾಸ್ ಮ್ಯಾಜಿಸ್ಟ್ರೇಟ್ ಆಗುತ್ತಿದ್ದರು. ಅವರೆಲ್ಲಾ ಅಪಾರ ಅನುಭವ ಗಳಿಸಿದ ಬಳಿಕ ಪ್ರಮೋಶನ್ ಪಡೆದು ಜಡ್ಜ್ ಆಗಿ ನಿಯುಕ್ತಿಗೊಳ್ಳುತ್ತಿದ್ದರು. 1956ರಲ್ಲಿ seperation of the judiciary and the executive ಆಯಿತು. ಇಂದು ಡಿಗ್ರಿ ಪಡೆದು ಸ್ಪರ್ಧಾತ್ಮಕ ಪರೀಕ್ಷೆ ಪಾಸು ಮಾಡಿಕೊಂಡು ಜಡ್ಜ್ ಆಗಿ ಬರುತ್ತಾರೆ. ಅವರ ತಲೆಯಲ್ಲಿ 'ನಾವು ಬಹಳ ಬುದ್ಧಿವಂತರು, ಇವರೆಲ್ಲಾ ಇನ್ನೂ ಪ್ರಾಕ್ಟೀಸ್ ಮಾಡ್ತಿದ್ದಾರೆ' ಎಂಬ ಒಂದು ರೀತಿಯ ಭ್ರಮೆ ಕೂತಿರುತ್ತದೆ. ಕೆಲವು ಜಡ್ಜ್‌ಗಳಿಗೆ ವಾದ ಪ್ರತಿವಾದಗಳನ್ನು ಸರಿಯಾಗಿ ಆಲಿಸುವ ವ್ಯವಧಾನವೂ ಇರುವುದಿಲ್ಲ, ಹೌದು. ಇಂದು ನನ್ನ ಮುಂದೆ ಜಡ್ಜ್ ಆಗಿ ಕೂತ ಯಾರೂ ಕೂಡಾ ನಾನು ಪ್ರಾಕ್ಟೀಸ್ ಪ್ರಾರಂಭಿಸುವ ಕಾಲಕ್ಕೆ ಹುಟ್ಟಿರಲಿಲ್ಲ.

ಭ್ರಷ್ಟಾಚಾರ ನಮ್ಮ ನ್ಯಾಯಾಂಗ ವ್ಯವಸ್ಥೆಯನ್ನು ಯಾವ ರೀತಿ ತುಂಬಿಬಿಟ್ಟಿದೆಯೆಂದರೆ ಕೆಲವು ವಕೀಲರುಗಳು ಪ್ರತಿವಾದಿ ವಕೀಲರುಗಳಿಂದ ದುಡ್ಡಿನ ಗಂಟು ಪಡೆದುಕೊಂಡು ಕೇಸು ಸೋಲುತ್ತಾರೆ. ತನ್ನನ್ನೇ ನಂಬಿಕೊಂಡ ಕಕ್ಷಿದಾರನ ಬೆನ್ನಿಗೆ ಚೂರಿ ಇರಿಯುತ್ತಾರೆ.

ಪ್ರಾಮಾಣಿಕವಾಗಿ ಕೇಸ್ ಗೆಲ್ಲುವ ಯೋಗ್ಯತೆ ಇಲ್ಲದವರು ಕೆಲವು ನ್ಯಾಯಾಧೀಶರನ್ನು ಕೇಸು ತಮ್ಮೆಡೆಗೆ ತಿರುಗುವಂತೆ ಮಾಡುವ ವಕೀಲರೂ ನಮ್ಮ ಮಧ್ಯೆ ಇದ್ದಾರೆ. ನನ್ನ ವೃತ್ತಿ ಬದುಕಿನಲ್ಲಿ ನನ್ನ ವೃತ್ತಿಗೆ ದ್ರೋಹ ಬಗೆಯುವಂತಹ ಯಾವುದೇ ಕೆಲಸವನ್ನೂ ಮಾಡದ ಕಾರಣ ನಾನು ಇಂದಿಗೂ ವೃತ್ತಿನಿರ್ವಹಿಸುತ್ತಿದ್ದೇನೆ.

• *ಸರ್, ರಾಜ್ಯದ ಅತ್ಯಂತ ಹಿರಿಯ ವೃತ್ತಿನಿರತ ವಕೀಲರಾದ ತಾವು, ಈ 90 ರ ಹರೆಯದಲ್ಲೂ ಅದೇ ಉತ್ಸಾಹ ಉಳಿಸಿಕೊಂಡಿದ್ದೀರಲ್ಲ?*

ಇದರಲ್ಲಿ ಗುಟ್ಟೇನೂ ಇಲ್ಲ, ನನಗೆ ಇಸ್ಪೀಟು, ಮದ್ಯ ಹೆಣ್ಣು, ಕ್ಲಬ್ ಮುಂತಾದ ಯಾವುದೇ ದುಶ್ಚಟಗಳಿಲ್ಲ, ನಾನು ಆರೋಗ್ಯವನ್ನು ಉಳಿಸಿಕೊಂಡಿದ್ದೇನೆ: ನನಗಿರುವ ಒಂದೇ ಒಂದು ಅಭ್ಯಾಸ ವಕಾಲತ್ತು, ನನ್ನ ಪಾಲಿಗೆ ಇದೊಂದು ಸೋಶಿಯಲ್ ಕಮಿಟ್‌ಮೆಂಟ್. ನ್ಯಾಯ ವಂಚಿತರಿಗೆ, ನ್ಯಾಯ ನಿರಾಕರಿಸಲ್ಪಟ್ಟವರಿಗೆ ನ್ಯಾಯ ಒದಗಿಸಿಕೊಡುವುದು ನನ್ನ ಬದುಕಿನ ಗುರಿಯೂ ಹೌದು.


ಶಿಷ್ಯೆ ಮತ್ತು ನೌಶಾದ್ ಕಾಶಿಂಜೆಯವರ ಪತ್ನಿ ನುಸ್ರತ್ ಜೊತೆ ಪೂಜಾರಿ

• *ಒಂದೊಮ್ಮೆ ಜನತಾ ಪಕ್ಷದಲ್ಲಿ ಗುರುತಿಸಿಕೊಂಡಿದ್ದಿರಲ್ಲಾ? ರಾಜಕೀಯದ ಬಗ್ಗೆ ಆಸಕ್ತಿ ಇದೆಯೇ?*

ಜನತಾ ಪಕ್ಷದಲ್ಲಿ ಗುರುತಿಸಿಕೊಳ್ಳುವುದಕ್ಕಿಂತ ಬಹಳ ಹಿಂದೆ ಕಾಂಗ್ರೆಸ್ ಪಕ್ಷದವರು ನನ್ನನ್ನು ಸಂಪರ್ಕಿಸಿದ್ದರು. ಮಂಗಳೂರಿನಲ್ಲಿ ಪಾರ್ಲಿಮೆಂಟ್ ಎಲೆಕ್ಷನ್‌ಗೆ ಕಂಟೆಸ್ಟ್ ಮಾಡಲು ಅವರಿಗೆ ಓರ್ವ ಹಿಂದುಳಿದ ವರ್ಗದ ಅಭ್ಯರ್ಥಿ ಬೇಕಿತ್ತು, ನಮ್ಮ ಬಿಲ್ಲವ ಸಮುದಾಯ ದಕ್ಷಿಣ ಕನ್ನಡ ಜಿಲ್ಲೆಯ ಅತ್ಯಂತ ದೊಡ್ಡ ಸಮುದಾಯವಾದ್ದರಿಂದ ಇಂದಿರಾ ಗಾಂಧಿಯವರು ಟಿಕೆಟ್ ಆಫರ್ ಮಾಡಿದ್ದರು. ನಾನು ನಿರಾಕರಿಸಿದ ಬಳಿಕ ಅವರು ಮಂಗಳೂರಿನ ಇನ್ನೋರ್ವ ಬಿಲ್ಲವ ನ್ಯಾಯವಾದಿ ಎಲ್ಯಣ್ಣ ಪೂಜಾರಿಯವರನ್ನು ಸಂಪರ್ಕಿಸಿದರು. ಅವರೂ ಆ ಆಫರನ್ನು ನಯವಾಗಿ ತಿರಸ್ಕರಿಸಿದ ಬಳಿಕ ಜನಾರ್ದನ ಪೂಜಾರಿಯವರನ್ನು ಸಂಪರ್ಕಿಸಿದರು.

ತುರ್ತು ಪರಿಸ್ಥಿತಿಯ ಮುಖಾಂತರ ಪ್ರಜೆಗಳ ವಾಕ್ ಸ್ವಾತಂತ್ರ್ಯಕ್ಕೆ ಇಂದಿರಾ ಗಾಂಧಿಯವರು ಬೇಡಿ ಹಾಕಿದ್ದರಿಂದ ಸಹಜವಾಗಿಯೇ ನಾನು ಜನತಾ ಪಕ್ಷದ ಸೆಳೆತಕ್ಕೊಳಗಾದೆ. ಆ ಕಾಲದಲ್ಲಿ ಅತೀ ಹೆಚ್ಚು ಆಂತರಿಕ ಸ್ವಾತಂತ್ರ್ಯವಿದ್ದ ಪಕ್ಷ ಜನತಾ ಪಕ್ಷ. I am a freedom lover. ನಾನು ಅಲ್ಲಿಂದಲೂ ದೂರವಾಗಿ ಬಿಟ್ಟು ಕೇವಲ ನನ್ನ ವೃತ್ತಿಯನ್ನೇ ಅತಿದೊಡ್ಡ social commitment ಎಂದು ಬಗೆದು ಹೆಚ್ಚು ಹೆಚ್ಚು ಮಾನವ ಹಕ್ಕುಗಳ ಉಲ್ಲಂಘನೆಗಳ ಕೇಸುಗಳನ್ನು ವಹಿಸಿಕೊಳ್ಳಲಾರಂಭಿಸಿದೆ.

• *ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅತೀ ಹೆಚ್ಚು ಬಿಲ್ಲವ ಯುವಕರು ಸಂಘ ಪರಿವಾರದ ಕ್ರಿಮಿನಲ್ ಕೂಟದ ಸದಸ್ಯರಾಗುತ್ತಿದ್ದಾರೆ. ಯಾಕೆ ಹೀಗೆ....?*

ಇದು ಬಹಳ ನೋವಿನ ಸಂಗತಿ. ನಮ್ಮ ಯುವಕರಿಗೆ ಮೊಟ್ಟ ಮೊದಲಾಗಿ ಶಿಕ್ಷಣದ ಕೊರತೆಯಿದೆ. ಎರಡನೆಯದಾಗಿ ಅವರನ್ನು ರಾಜಕೀಯ ಮುಖಂಡರು ಓಟ್ ಬ್ಯಾಂಕ್ ರಾಜಕೀಯಕ್ಕೆ ಬಳಸುತ್ತಿದ್ದಾರೆಯೇ ಹೊರತು ಅವರಿಗೆ ಯಾವೊಬ್ಬ ರಾಜಕೀಯ, ಸಾಮಾಜಿಕ ಮುಖಂಡನೂ ಸರಿಯಾದ ಮಾರ್ಗದರ್ಶನ ನೀಡುತ್ತಿಲ್ಲ. ಯಾವ ಬ್ರಾಹ್ಮಣನ ಮಗನೂ ಕೋಮುಗಲಭೆಯಲ್ಲಿ ನೇರವಾಗಿ ಭಾಗಿಯಾಗುವುದಿಲ್ಲ, ಕ್ರಿಮಿನಲ್ ಕೃತ್ಯಗಳಲ್ಲಿ ಭಾಗಿಯಾಗುವುದಿಲ್ಲ, ನಮ್ಮ ಯುವಕರನ್ನು ಸಂಘ ಪರಿವಾರದವರು ಬ್ರೈನ್‌ವಾಶ್ ಮಾಡ್ತಾರೆ. ನಮ್ಮ ಯುವಕರಿಗೆ ಹಿಂದೂ ವೀರರು ಎಂಬ ಹಣೆಪಟ್ಟಿ ಹಚ್ಚಿ ಪೊಳ್ಳು ಹೀರೋಗಳನ್ನಾಗಿ ಮಾಡಿ ಕೆಲವರು ದೂರ ನಿಂತು ತಮಾಷೆ ನೋಡ್ತಿರ್ತಾರೆ. ಇದರಿಂದಾಗಿ ತಮ್ಮ ಹೆತ್ತವರು ಪ್ರತಿನಿತ್ಯ ಎಷ್ಟು ನೋವು, ಸಂಕಟ ಅನುಭವಿಸುತ್ತಿರುತ್ತಾರೆ ಎಂಬುವುದು ಅವರಿಗೆ ಅರ್ಥವಾಗುವುದೇ ಇಲ್ಲ.

• *ನಾನು ನೋಡಿದ ಮಟ್ಟಿಗೆ ಅನೇಕ ಬಿಲ್ಲವ ಯುವತಿಯವರು ಸಂಘ ಪರಿವಾರವನ್ನು ದ್ವೇಷಿಸುತ್ತಾರೆ...*

ಹೌದು, ದ್ವೇಷಿಸುತ್ತಾರೆ. ಯಾವುದೇ ಕೋಮುಗಲಭೆಯ ನೇರ ಪರಿಣಾಮ ಮಹಿಳೆಯರ ಮೇಲಾಗುತ್ತದೆ. ಬಿಲ್ಲವ ಯುವತಿಯರು ಸಂಘ ಪರಿವಾರದ ಷಡ್ಯಂತ್ರವನ್ನು ಚೆನ್ನಾಗಿ ಅರ್ಥೈಸಿಕೊಂಡಿದ್ದರಿಂದಲೇ ಆ ಮನುಷ್ಯ ವಿರೋಧಿಗಳ ಬಗ್ಗೆ ಅವರಿಗೆ ಸಿಟ್ಟಿದೆ. ನಮ್ಮ ಯುವತಿಯರಿಗೆ ಅರ್ಥವಾದದ್ದು ಎಷ್ಟು ಬೇಗ ಯುವಕರಿಗೆ ಅರ್ಥವಾಗುತ್ತದೋ ಅಷ್ಟು ನಮ್ಮ ಸಮಾಜಕ್ಕೆ ಒಳಿತಿದೆ.

• *ಅನೇಕ ಬಾರಿ ನಮ್ಮ ಬಾರ್ ಅಸೋಸಿಯೇಶನ್‌ಗಳು ಕೆಲವೊಂದು ಕೇಸ್‌ಗಳನ್ನು ಸಂಘದ ಯಾವ ಸದಸ್ಯನೂ ಎತ್ತಿಕೊಳ್ಳಬಾರದು ಎಂಬ ಫತ್ವಾ ಹೊರಡಿಸುತ್ತದಲ್ಲಾ?*

ಹೌದು, ಆದರೆ ನಾನು ನನ್ನ ವೃತ್ತಿ ಜೀವನದಲ್ಲಿ ಯಾವತ್ತೂ ಇಂತಹ ಫತ್ವಾಗಳಿಗೆ ತಲೆ ಬಾಗಲಿಲ್ಲ, ಇದು ನಮ್ಮ ಸಂವಿಧಾನದ ಆಶಯಕ್ಕೆ ವಿರುದ್ಧವಾದುದು. ನಮಗೆ ಪದವಿ ಪ್ರಧಾನ ಮಾಡುವಾಗ ನಮ್ಮಿಂದ ಓಥ್ ತೆಗೆದುಕೊಳ್ಳಲಾಗುತ್ತದೆ. "ನಾನು ನಮ್ಮ ಸಂವಿಧಾನದ ಆಶಯಕ್ಕೆ ಬದ್ಧನಾಗಿ ವೃತ್ತಿ ನಿರ್ವಹಿಸುತ್ತೇನೆ". ನೋಡಿ ನಮ್ಮ ಕಾನೂನಿನ ಪ್ರಕಾರ ಅಪರಾಧ ಸಾಬೀತಾಗುವವರೆಗೆ ಯಾರೂ ಅಪರಾಧಿಯಲ್ಲ ಕೇವಲ ಆರೋಪಿಯಷ್ಟೆ. ಅಪರಾಧಿ ಮತ್ತು ನಿರಪರಾಧಿ ಎಂಬುವುದನ್ನು ನ್ಯಾಯಾಲಯ ತೀರ್ಮಾನಿಸಬೇಕೇ ಹೊರತು ಬಾರ್ ಅಸೋಸಿಯೇಶನ್ ಗಳಲ್ಲ, ಒಬ್ಬ ಎಷ್ಟೇ ಗುರುತರವಾದಂತಹ ತಪ್ಪೆಸಗಿದರೂ ಆತನನ್ನು ರಸ್ತೆ ಮಧ್ಯೆ ನಿಲ್ಲಿಸಿ ಕಲ್ಲೆಸೆದು ಕೊಲ್ಲುವಂತಿಲ್ಲ.

• *ಪೊಲೀಸರು ಮೃಗಗಳಂತೆ ವರ್ತಿಸುವ ಬಗ್ಗೆ...?*

ನೋಡಿ, ನಮ್ಮ ಕಾನೂನು may arrest ಅಂತ ಹೇಳುತ್ತದೆಯೇ ಹೊರತು shall arrest ಅಂತ ಎಲ ಹೇಳುವುದಿಲ್ಲ, ಇಂದು ಪೊಲೀಸರು ಯಾರಾದ್ರೂ ದೂ ದಾಖಲಿಸಿದಾಕ್ಷಣ ಯಾವ ಮೆಟೀರಿಯಲ್ಲೂ ಇಲ್ಲದೇ ತಂ ಲಾಕಪ್‌ನೊಳಗೆ ತಳ್ಳಿಬಿಡ್ತಾರೆ. ಅವರ ಕೆಲಸ ತನಿಖೆ ನಡ ಚಾರ್ಜ್‌ಶೀಟ್ ಸಲ್ಲಿಸುವುದೇ ಹೊರತು ಆರೋಪಿತನ ಶಿಕ್ಷಿಸುವುದಲ್ಲ. ಪೊಲೀಸರ ವಿರುದ್ಧ ಕಾನೂ ಮಾತನಾಡಿದರೆ ಪೊಲೀಸರೊಂದಿಗೆ ಅನುಚಿತ ವರ್ತ ಎಂದು ಕೇಸು ದಾಖಲಿಸುವ ಪರಿಪಾಠ ಯಥೇಚ್ಛವಾ ನಮ್ಮ ನಾಡಿನಲ್ಲಿ ಬೆಳೆದಿದೆ. ಪೊಲೀಸ್ ರಿಫಾರ್ಮ್ಸ್ ಅ ನಮ್ಮ ಪ್ರಭುತ್ವ ಸುಮ್ಮನೆ ಮಾತನಾಡುತ್ತದೆಯೇ ಹೊರ ಪೊಲೀಸರು ರಿಫಾರ್ಮ್ ಆದ ಒಂದು ಘಟನೆಯ ನೀವು ತೋರಿಸಿ. ಎಲ್ಲಕ್ಕಿಂತ ಮುಂಚಿತವಾಗಿ ಪೊಲೀ ನಾಲಿಗೆಯನ್ನು ರಿಫಾರ್ಮ್ ಮಾಡಬೇಕು. ದರ್ಪಿ ಪೊಲೀಸರ, ಮಾನವ ಹಕ್ಕುಗಳ ಉಲ್ಲಂಘಕ ಪೊಲೀ ವಿರುದ್ಧ ಜನ ದೂರು ದಾಖಲಿಸಲು ಮುಂದೆ ಬರಬೇ ಕಾನೂನಿನ ರುಚಿಯನ್ನು ಅವರಿಗೆ ತೋರಿಸಬೇ ಪೊಲೀಸರೆಂದರೆ ಇಲ್ಲಿನ ಫ್ಯೂಡಲ್ ದೊರೆಗಳ ಪೊಲೀಸರನ್ನು ಹುದ್ದೆಗೆ ಸೇರಿಸುವ ಮುನ್ನ ಅವರಿಗೆ ಮಾ ಹಕ್ಕುಗಳ ಬಾಲಪಾಠ ಕಲಿಸಬೇಕು.

• *ಪೊಲೀಸ್ ಇಲಾಖೆಯ ಕೇಸರೀಕರಣದ ಬಗ್ಗೆ ಏ ಹೇಳ್ತೀರಿ?*


ಈ ದೇಶ ಯಾವುದೇ ಧರ್ಮದ, ಜಾತಿಯ ಸ್ವತ್ತ ಸಂಘ ಪರಿವಾರದವರಿಗೆ ಈ ದೇಶವನ್ನು ಯಾರೂ ಗುತ್ತಿ ಕೊಟ್ಟಿಲ್ಲ, ನಮ್ಮ ಸಂವಿಧಾನವನ್ನು ಒಪ್ಪದವರಿಗೆ ಬದುಕುವ ಹಕ್ಕೇ ಇಲ್ಲ, ಸಂಘಪರಿವಾರದವರ ಕಿತಾ ಯಾವ ಕ್ಷೇತ್ರದಲ್ಲಿ ಇಲ್ಲ ಹೇಳಿ, ಶಿಕ್ಷಣ ಕ್ಷೇತ್ರದಲ್ಲಿ ಇಲ ಅವರು ಇಲ್ಲಿ ಅಧಿಕಾರದಲ್ಲಿದ್ದುದು ಬಹಳ ಹ್ರಸ್ವ ಅವಧಿ ಮಾತ್ರ. ಆದರೆ ಅವರು ಮಾಡಿದ ಕಿತಾಪತಿಯೇ ಕಡಿಮೆಯದ್ದಾ? ಅವರು ಎಲ್ಲಾ ಕ್ಷೇತ್ರದಲ್ಲೂ ತಮ್ಮವರ ತುಂಬಿಸಿಬಿಟ್ಟಿದ್ದಾರೆ. ಕೇಸರೀಕರಣವನ್ನು ಇಲ್ಲವಾಗಿಸಬೇಕಂ ಮೊಟ್ಟ ಮೊದಲು ಅದರ ವಿಷಬೀಜಗಳು ಎಲ್ಲೆಲ್ಲಾ ಬಿದ್ದಿ ಎಲ್ಲೆಲ್ಲಾ ಮೊಳಕೆಯೊಡೆದು ಮರವಾಗಿ ಬೆಳೆದಿದೆ ಅ ಅನ್ವೇಷಿಸಿ ಅವುಗಳನ್ನು ಕಿತ್ತೊಗೆಯುವಂತಹ ಕೆಲಸವ ಪ್ರಭುತ್ವ ಮಾಡಬೇಕು. ಅಂತಹ ಇಚ್ಛಾಶಕ್ತಿ ಯಾ ಸರಕಾರಕ್ಕಿದೆ ಎಂಬುವುದೇ ನಮ್ಮ ಮುಂದಿರುವ ಸವಾ

• *ನಮ್ಮ ಸರಕಾರಗಳು ಜಾರಿಗೆ ತರುವ ಮನು ವಿರೋಧೀ ಕಾಯಿದೆಗಳ ಬಗ್ಗೆ ಏನಂತೀರಿ?*

ಪೋಟಾ, ಟಾಡಾ, ಕೋಕಾ, ಈ ರೀತಿ ಹತ್ತಾ ಕಾಯಿದೆಗಳು ಜಾರಿಗೆ ಬಂದಿವೆ. ಕ್ರಮೇಣ ಅವುಗ ಬಿದ್ದು ಹೋಗಿವೆ. ದುರಂತ ಏನೆಂದರೆ ನಮ್ಮ ದೇಶದ ಕಾನೂನು ರೂಪಿಸುವವರಲ್ಲಿ ಹೆಚ್ಚಿನವರು ಕಾನೂ ಕುರಿತಂತೆ ಆಳವಾದ ಜ್ಞಾನ ಇಲ್ಲದವರು. ಅದಕ್ಕಿಂತಲೂ ಆತಂಕಕಾರಿ ಸಂಗತಿಯೇನೆಂದರೆ ಕ್ರಿಮಿನಲ್ ರಾಜಕಾರಣಿಗ ಕಾಯಿದೆ ರೂಪಿಸುವವರಾಗುತ್ತಿದ್ದಾರೆ: ಕಂಬಿಯೊಳ ಬೇಕಾದವರು ಕಾಯಿದೆ ರೂಪಿಸುವವರಾದ ಅದರಿಂದಾಗುವ ಅಪಾಯ ಎಂತಹದ್ದಿರಬಹುದೆಂದು ನೀ ಯೋಚಿಸಿ. ನಮ್ಮ ಕಾನೂನನ್ನೇ ಸರಿಯಾಗಿ ಅನುಷ್ಠಾ ತಂದರೆ ಒಂದೊಂದು ಮೊಕದ್ದಮೆಗೆ ಒಂದೊಂದು ಕಾಯಿ ರೂಪಿಸುವ ಅಗತ್ಯ ಬೀಳುವುದಿಲ್ಲ, ನಮ್ಮ ಕೆಲವು ಸಂಸದ ಎಂಥವರು ಎಂದು ಗಮನಿಸಿ. ನಳಿನ್ ಕುಮಾ ಕಟೀಲ್‌ನಂಥಹ ತುಳು, ಕನ್ನಡ ಬಿಟ್ಟು ಬೇರೆ ಭ ಅರಿಯದವರು ಅವರಿಗೆ ಸಂಸತ್ತಿನ ಕಾರ್ಯಕಲಾಪಗಳ ಅರ್ಥೈಸಲು ಸಾಧ್ಯವಾಗುವುದಿಲ್ಲ. ನಮಗೆ ಜನಪ್ರಿ ವ್ಯಕ್ತಿಗಳು ಬೇಕಿಲ್ಲ ಜನಾನುರಾಗಿ ಪ್ರತಿನಿಧಿಗಳು ಬೇಕಾಗಿದ

• *ತಮ್ಮನ್ನು ಭಯೋತ್ಪಾದಕರ ವಕೀಲ ಎನ್ನುತ್ತಾರ*

ಹ್ಹ ಹ್ಹ ಹ್ಹಾ... ನಮ್ಮ ದೇಶದಲ್ಲಿ ಯಾರನ್ನು ಬೇಕಾದ ಭಯೋತ್ಪಾದನೆಯ ಆರೋಪದಲ್ಲಿ ಅಕ್ರಮವಾ ಬಂಧಿಸಬಹುದಾದರೆ, ಸಕ್ರಮವಾಗಿ ನಾ ಭಯೋತ್ಪಾದನೆಯ ಆರೋಪ ಹೊತ್ತವರ ಪರ ವಕಾಲ ವಹಿಸಬಾರದೇಕೆ. ನನ್ನನ್ನು ಭಯೋತ್ಪಾದಕರ ವಕೀ ಎನ್ನುವವ ಯಾರು? ಮುಗ್ಧರನ್ನು, ಅಮಾಯಕರ ಭಯೋತ್ಪಾದಕರನ್ನಾಗಿ ಸೃಷ್ಟಿಸುವವರೇ ಅಲ್ಲವ ಭಯೋತ್ಪಾದನೆಯ ಹೆಸರಲ್ಲಿ ಅಮಾಯಕ ಯುವಕರ ಬಂಧಿಸಿ ಮಾನವ ಹಕ್ಕುಗಳ ಉಲ್ಲಂಘನೆ ಮಾಡುವವರ ಕರೆಯಲಿ, ಕರೆಯಲಿ ಭಯೋತ್ಪಾದಕ ವಕೀಲ ಅ ಕರೆಯಲಿ ಅದಕ್ಕಿಂತ ಮಿಗಿಲಾದ ಇನ್ಯಾವುದೇ ಆರೋಪವ ಬೇಕಾದ್ರೆ ಹೊರಿಸಲಿ. ಆ ಮೂಲಕ ನನ್ನ ಬದ್ಧತೆಯಿ ನನ್ನನ್ನು ಯಾರೂ ಹಿಂದೆ ಸರಿಸಲಾರರು. ನಾನು ಮಾ


ಪೂಜಾರಿ ಅವರೊಂದಿಗೆ ಸಂದರ್ಶಕ ಇಸ್ಮತ್ ಫಜೀರ್

ಸುದ್ದಿಗನ್ನಡಿ
ಸಾಹಿತಿ-ಕಲಾವಿದ-ಚಿಂತಕರ
ಸಂದರ್ಶನ

• ಇಸ್ಮತ್ ಫಜೀರ

ೕದು ಕಾನೂನು ಘಾತುಕ ಕೆಲಸವೇನಲ್ಲ, ನ್ಯಾಯ ನಿಸಲ್ಪಟ್ಟವರಿಗೆ ಕಾನೂನು ನೆರವು ನೀಡುವ ಕೆಲಸ ಸ್ತಿದ್ದೇನೆ. ಈ ಬಗ್ಗೆ ನನಗೆ ಹೆಮ್ಮೆ ಇದೆ. ಇಂದು ಮಂಗಳೂರಿನಲ್ಲಿ ಎಷ್ಟು ಮುಸ್ಲಿಂ ಯುವಕರನ್ನು ಯೋತ್ಪಾದನೆಯ ಆರೋಪದ ಮೇಲೆ ಧಿಸಲಾಗಿದೆಯೋ, ಅದರಲ್ಲಿ ಒಂದೇ ಒಂದು ಕೇಸ್ ್ಯಾಲಯದಲ್ಲಿ ನಿಲ್ಲುವುದಿಲ್ಲ.

ನೋಡಿ ಈ ಭಯೋತ್ಪಾದನೆಯ ಆರೋಪದಿಂದ ಧುರಾಗಿ ವಿಚಾರಣಾಧೀನ ಕೈದಿಗಳಾಗಿ ತಮ್ಮ ಬದುಕಿನ ಮೂಲ್ಯ ವರ್ಷಗಳನ್ನು ಜೈಲಿನಲ್ಲಿ ಕಳೆಯುವ ಅಮಾಯಕ ುವಕರ ಕಳೆದು ಹೋದ ಬದುಕನ್ನು ಈ ಪೊಲೀಸರು, ಪ್ರಭುತ್ವ ಅವರಿಗೆ ಮರಳಿ ನೀಡುತ್ತದೆಯೇ? ಅವರು ುಭವಿಸುವ, ಅವರ ಕುಟುಂಬಸ್ಥರು ಅನುಭವಿಸುವ ಾನಸಿಕ ಯಾತನೆ ಈ ಸರಕಾರಗಳಿಗೆ, ಈ ಪೊಲೀಸರಿಗೆ ್ಥವಾಗುತ್ತದೆಯೇ? ತಮ್ಮ ಯೌವನದ ಅಮೂಲ್ಯ ರ್ಷಗಳನ್ನು ಜೈಲಿನಲ್ಲಿ ಕಳೆದು ಆರೋಪಮುಕ್ತರಾಗಿ ಾರಬಂದರೂ ಸಮಾಜದ ಕಣ್ಣಲ್ಲಿ ಅವರು ಯೋತ್ಪಾದಕರಾಗಿಯೇ ಉಳಿಯುತ್ತಾರೆ. ಸಾಮಾಜಿಕವಾಗಿ ೋಷಿತ ಬಹಿಷ್ಕಾರಕ್ಕೊಳಗಾಗುತ್ತಾರೆ. ಇದಕ್ಕೆಲ್ಲಾ ೊಲೀಸರು ಮತ್ತು ಪ್ರಭುತ್ವವೇ ಹೊಣೆ. ಅವರ ಭಿಮಾನವನ್ನು ಈ ವ್ಯವಸ್ಥೆ ಮರಳಿ ನೀಡುತ್ತದೆಯೇ? ಂತಹ ಅತ್ಯಂತ ನಿಕೃಷ್ಟತೆಗೊಳಗಾಗಿರುವ ಅಮಾಯಕ ುವಕರಿಗೆ ಕಾನೂನು ನೆರವು ನೀಡಿದರೆ ನಾನು ಯೋತ್ಪಾದಕರ ವಕೀಲ... ಈ ಕಾರಣಕ್ಕಾಗಿ ಯೋತ್ಪಾದಕರ ವಕೀಲನಾಗುವುದಾದರೆ ನನಗೆ ಬಹಳ ಸಂತೋಷ, ಆತ್ಮತೃಪ್ತಿಯಿದೆ.

• ಸರ್ ತಮ್ಮ ದಿವಂಗತ ಶಿಷ್ಯ ನೌಶಾದ್ ಕಾಶಿಂಜೆಯವರ ೊಲೆ ಕೇಸು ಏನಾಯಿತು?

(ಕೆಲವು ಕ್ಷಣ ಮೌನರಾಗಿ) ನಾನು ಎಲ್ಲಾ ಎವಿಡೆನ್ಸ್‌ಗಳನ್ನು ಕೋರ್ಟಿಗೆ ಸಲ್ಲಿಸಿದ್ದೇನೆ. ಆದರೆ ಈ ಕೇಸನ್ನು ಹಳ್ಳಹಿಡಿಸುವ ನಿಟ್ಟಿನಲ್ಲಿ ಸದ್ಯ ಆ ಕೋರ್ಟಿನ ಲಾಪಗಳನ್ನು ರದ್ದುಪಡಿಸಲಾಗಿದೆ. ಇನ್ನು ಯಾವಾಗ ಆ ಕೋರ್ಟನ್ನು ಓಪನ್ ಮಾಡ್ತಾರೋ ತಿಳಿಯದು. ಆದ್ರೆ ಾನು ಯಾವತ್ತೂ ಸುಮ್ಮನೆ ಕೂತಿಲ್ಲ. ಕೊಲೆಯಲ್ಲಿ ನೇರವಾಗಿ ಾಗಿಯಾದ ಮೂರು ಮಂದಿ ಈಗಲೂ ಜೈಲಿನಲ್ಲಿದ್ದಾರೆ. ಅವರಿಗೆ ಜಾಮೀನು ಸಿಗಲು ನಾನು ಬಿಟ್ಟಿಲ್ಲ. ಪರೋಕ್ಷವಾಗಿ ಾಗಿಯಾದ ಪೊಲೀಸರಿಗೆ ಶಿಕ್ಷೆಯಾಗದೇ ಬಿಡಲಾರೆ. ನನ್ನ ದುಕಿನ ಕೊನೆಕ್ಷಣದವರೆಗೂ ಆ ಕೇಸು ಸರಿಯಾದ ಹಾದಿಯಲ್ಲಿ ಸಾಗಿ ತಪ್ಪಿತಸ್ಥರಿಗೆ ಶಿಕ್ಷೆಯಾಗುವವರೆಗೂ ಹೋರಾಡುವೆ. ಅದರ ಹಿಂದೆ ಇದ್ದ ಎಲ್ಲಾ ದುಷ್ಟಶಕ್ತಿಗಳನ್ನು ಾನೂನಿನ ಕುಣಿಕೆಗೆ ತಂದೊಪ್ಪಿಸದೆ ವಿರಮಿಸಲಾರೆ.

• ಇತ್ತೀಚಿಗಿನ ಸೌಜನ್ಯ ಕೇಸನ್ನು ಸಿ.ಬಿ.ಐ.ಗೆ ೊಡಲಾಗಿದೆ, ಈ ಹಿಂದೆ ನೌಶದ್ ಕಾಶಿಂಜೆ ಕೊಲೆ ಕೇಸನ್ನು ಸಿ.ಬಿ.ಐ.ಗೆ ಕೊಡಬೇಕೆಂದು ಒತ್ತಡ ಬಂದಿತ್ತು. ಮ್ಮ ಅದು ಸಿ.ಬಿ.ಐ.ಗೆ ವರ್ಗಾವಣೆಯಾಗುವ ಹಂತದಲ್ಲೂ ತ್ತು, ಆದರೆ ಕೊನೆಕ್ಷಣದಲ್ಲಿ ಸಿ.ಬಿ.ಐ.ಗೆ ಕೊಡುವುದನ್ನು ಗಿನ ಸರ್ಕಾರ ತಪ್ಪಿಸಿತ್ತು ಅಲ್ಲವೆ?

ನೋಡಿ, ನಮ್ಮ ವ್ಯವಸ್ಥೆಯ ಹುಳುಕು ಇರುವುದೇ ಲ್ಲಿ. ಆ ಕೇಸಲ್ಲಿ ನಾನು ತಪ್ಪಿತಸ್ಥರೆಂದು ಬೊಟ್ಟು ಮಾಡಿ ೇಸ್ ಹಾಕಿದ ಇಬ್ಬರು ಪೊಲೀಸರನ್ನು ತನಿಖಾ ಸಮಿತಿಗೆ ೇಮಿಸಲಾಗಿತ್ತು. ಸಾಕ್ಷ್ಯಗಳನ್ನು ನಾಶ ಮಾಡಲು ೊರಟವರಿಗೆ ಇದಕ್ಕಿಂತ ದೊಡ್ಡ ಅನುಕೂಲ ಬೇಕೇ? ಸಾಕ್ಷ್ಯಗಳನ್ನು ನಾಶಪಡಿಸಿದ ಬಳಿಕ ಸಿ.ಬಿ.ಐ.ಗೆ ಕೊಟ್ಟರೇನು, ಾರ್ಯಾರಿಗೆ ಕೊಟ್ಟರೇನು? ಸಿ.ಬಿ.ಐ.ನವರು ನಮ್ಮಂತೆಯೇ ಮನುಷ್ಯರಲ್ಲವೇ? ಸಿಗಬೇಕಾದ ಸಾಕ್ಷ್ಯಗಳು ಸಿಗದಿದ್ದರೆ ಾವಾದರೂ ಏನು ಮಾಡುತ್ತಾರೆ?

• ಮಾನವ ಹಕ್ಕು ಕಾರ್ಯಕರ್ತರು ಪ್ರತಿನಿತ್ಯ ಭಯದಲ್ಲೇ ಬದುಕುವಂತಾಗಿದೆಯಲ್ಲವೇ? ಮಾನವ ಹಕ್ಕು ಆಯೋಗಗಳು ಏನು ಮಾಡುತ್ತಿವೆ?

ಮಾನವ ಹಕ್ಕು ಕಾರ್ಯಕರ್ತರಿಗೆ ದೊಡ್ಡ ಬೆದರಿಕೆ ಇರುವುದು ಪೊಲೀಸರಿಂದ. ನಾನು ಈಗಾಗಲೇ ಹೇಳಿದ್ದೆ ಪೊಲೀಸರೆಂದರೆ ಯಾರು? ಅವರೇನು ನಮ್ಮ ದೊರೆಗಳೇ? ಅಷ್ಟು ಪವರ್‌ಗಳನ್ನು ವ್ಯವಸ್ಥೆ ಯಾಕೆ ಅವರಿಗೆ ಕೊಡುತ್ತದೆ? ಪೊಲೀಸ್ ಆಕ್ಟ್‌ನಲ್ಲಿ ಅವರಿಗೆ ಯಾವ ಕೆಲಸಗಳನ್ನು ನಿಗದಿಪಡಿಸಲಾಗಿದೆಯೋ ಅಷ್ಟು ಕೆಲಸಗಳನ್ನು ಮಾತ್ರ ಅವರು ಮಾಡಿದರೆ ಸಾಕು ಅಂತ ಸರ್ಕಾರಗಳು ಅವರಿಗೆ ನಿರ್ದೇಶಿಸಿದರೆ ಮಾನವ ಹಕ್ಕುಗಳ ಉಲ್ಲಂಘನೆ ಅರ್ಧಕ್ಕೆ ಅರ್ಧ ಕಡಿಮೆಯಾಗುತ್ತವೆ. ಪೊಲೀಸ್ ಅಟ್ರಾಸಿಟಿ ಗಳೂ ಇಲ್ಲವಾಗುತ್ತದೆ.

ನಮ್ಮ ಎಸ್.ಎಚ್.ಆರ್.ಸಿ. ಮತ್ತು ಎನ್.ಎಚ್.ಆರ್.ಸಿ. ಹಲ್ಲು, ಉಗುರುಗಳಿಲ್ಲದ ಹುಲಿ. ಹೆಚ್ಚೆಂದರೆ ಅವು ು ಛೀಮಾರಿ ಹಾಕಬಹುದು ಎಂದು ಪೊಲೀಸರಿಗೆ ತಿಳಿದಿದೆ. ಮಾನವ ಹಕ್ಕುಗಳ ಉಲ್ಲಂಘನೆಯ ಕೇಸುಗಳಲ್ಲಿ ಶಿಕ್ಷಿಸುವ ಪಕ್ಷದಲ್ಲಾದರೂ ಮಾನವ ಹಕ್ಕು ಆಯೋಗಗಳಿಗೆ ನೀಡಬೇಕು. ಎಲ್ಲಕ್ಕಿಂತಲೂ ಹೆಚ್ಚಾಗಿ ಹಕ್ಕು ಆಯೋಗಗಳಲ್ಲಿ ರಾಜಕೀಯ ನುಸುಳಲು ಬಾರದು. ಅವುಗಳು ಸ್ವತಂತ್ರವಾಗಿ ಕಾರ್ಯನಿರ್ವಹಿಸಲು ಅವಕಾಶ ಮಾಡಿಕೊಡಬೇಕು.

08 ⏮ ಜೀವರಾಜ್‌ನ ಕೀಚಕ ಪುರಾಣ

ಅಂತ. ಹೈಸ್ಕೂಲ್‌ನಲ್ಲಿದ್ದಾಗಿನಿಂದಲೂ ಉತ್ತಮ ಭರತನಾಟ್ಯ ಪಟುವಾಗಿದ್ದ ಅರಣ್ಯ ಹತ್ತಾರು ಪ್ರದರ್ಶನಗಳನ್ನು ನೀಡಿದ್ದಳು. ಹಲವಾರು ಅವಾರ್ಡ್‌ಗಳನ್ನು ಪಡೆದಿರುವುದಲ್ಲದೆ, ದುಬೈನಲ್ಲೂ ಪ್ರದರ್ಶನ ನೀಡಿದ್ದಾಳೆ. ಇಂಥಾ ಪ್ರತಿಭಾವಂತ ಬಡಪಾಯಿ ಹೆಣ್ಣುಮಗಳ ಮೇಲೆ ಕಾಮುಕ ಪಶುಗಳ ಕಣ್ಣು ಬಿದ್ದಿದ್ದರಲ್ಲಿ ಆಶ್ಚರ್ಯವೇನೂ ಇಲ್ಲ.

ಹೀಗೆ ಬೆತ್ತಲೆ ಚಿತ್ರಗಳನ್ನು ತೋರಿಸಿದ ಶಾಸಕ ಮತ್ತು ಆತನ ಬೆಂಬಲಿಗರು ಈ ವಿಷಯವನ್ನು ಬಾಯಿಬಿಟ್ಟರೆ ಈ ಚಿತ್ರಗಳನ್ನು ಟೀವಿಗಳಲ್ಲಿ, ಇಂಟರ್‌ನೆಟ್‌ನಲ್ಲಿ ಹಾಕುವುದಾಗಿಯೂ, ನಿನ್ನನ್ನು ಮುಗಿಸಿಬಿಡುವುದಾಗಿಯೂ ಬೆದರಿಕೆ ಹಾಕಿದರು. ಆ ಸಂದರ್ಭದಲ್ಲಿ ಬಿಜೆಪಿಯದ್ದೇ ಸರ್ಕಾರ. ಜೀವರಾಜ್ ಸರ್ಕಾರದ ಮುಖ್ಯ ಸಚೇತಕನಾಗಿದ್ದ. ಇಂಥಾ ಸನ್ನಿವೇಶದಲ್ಲಿ ಈ ವಿಷಯವನ್ನು ಯಾರಲ್ಲೂ ಹೇಳಿಕೊಳ್ಳಲು ಧೈರ್ಯವಿಲ್ಲದೆ ಆ ಹುಡುಗಿ ಅನುಭವಿಸಿದ ಮಾನಸಿಕ ಯಾತನೆ ಹೇಳತೀರದು.

ಈ ಶಾಸಕ ಮತ್ತು ಆತನ ಪಟಾಲಂನಲ್ಲಿರುವ ಜೆಜಿ ನಾಗರಾಜ ಮತ್ತು ಆಶಿಶ್ ಕುಮಾರ್ ಎಂಬುವವರು ಈ ಹುಡುಗಿಗೆ ಆಗಾಗ್ಗೆ ಫೋನು ಮಾಡಿ ಬ್ಲ್ಯಾಕ್‌ಮೇಲ್ ಮಾಡುವುದನ್ನೇ ಕಾಯಕ ಮಾಡಿಕೊಂಡಿದ್ದರು. ಕುಮಾರಿ ಅರಣ್ಯ ಈ ನೋವನ್ನು ಯಾರಲ್ಲಿಯೂ ಹೇಳಿಕೊಳ್ಳಲಾಗದೆ ಹೇಗೋ ಸಹಿಸಿಕೊಂಡಳು.

ಅರಣ್ಯಳ ತಂದೆತಾಯಿಗಳು ಮಗಳಿಗೆ ಮದುವೆ ಮಾಡಿಸಲೆಂದು ವರನನ್ನು ಗೊತ್ತು ಮಾಡಿದರು. ವರನ ಕಡೆಯವರೂ ಒಪ್ಪಿ ಇದೇ ಜೂನ್ ತಿಂಗಳಲ್ಲಿ ಮದುವೆ ಎಂದು ನಿಶ್ಚಯವೂ ಆಯಿತು. ಎಲ್ಲಾ ಸುಸೂತ್ರವಾಗಿ ನಡೆಯುತ್ತಿದ್ದಾಗ ಇದ್ದಕ್ಕಿದ್ದಂತೆ ಒಂದುದಿನ ಗಂಡು ತನಗೆ ಈ ಸಂಬಂಧ ಬೇಡ ಎಂದುಬಿಟ್ಟ. ಹೀಗೆ ಮದುವೆ ಸಂಬಂಧ ಮುರಿದು ಹಾಕಿದ್ದು ಸ್ವತಃ ಜೀವರಾಜನೇ ಎಂಬುದು ಬಂಧುಗಳ ನೇರ ಆರೋಪ.

ಈ ಮದುವೆ ಮುರಿಯಲು ಕಾರಣ ಜೀವರಾಜ. ಈ ಹುಡುಗಿಯನ್ನು ಪರ್ಮನೆಂಟಾಗಿ ತನ್ನ ಸೆಟ್‌ಅಪ್ ಆಗಿ ಉಳಿಸಿಕೊಳ್ಳುವ ತಂತ್ರ ಹೂಡಿದ್ದನಂತೆ. ಕೇಳಿದಷ್ಟು ದುಡ್ಡು ಕೊಡುತ್ತೇನೆಂದು ಬೆಂಗಳೂರಿನಲ್ಲಿ ತಾನು ಮಾಡುವ ಮನೆಯಲ್ಲಿ ಆಕೆ ಸೆಟಲ್ ಆಗಬೇಕೆಂದು ಒತ್ತಡ ಹಾಕುತ್ತಿದ್ದನೆಂದೂ, ಈ ಕಾರಣದಿಂದಲೇ ಮದುವೆ ಮುರಿದು ಹಾಕಿದ್ದಾನೆಂದೂ ಆಕೆಯ ಬಂಧುಗಳು ಆಕ್ರೋಶ ವ್ಯಕ್ತಪಡಿಸುತ್ತಾರೆ. ಅಂದಹಾಗೆ ಈ ಜೀವರಾಜನಿಗೆ ಈಗ 50ರ ಹರೆಯ. ಬಾಳಿ ಬದುಕಬೇಕಾಗಿರುವ ನತದೃಷ್ಟ ಹುಡುಗಿಗೆ ಈಗಿನ್ನೂ 22 ವರ್ಷ. ಇದೇ ವಯಸ್ಸಿನ ಜೀವರಾಜನ ಮಗ ಎಂಬಿಬಿಎಸ್ ಓದುತ್ತಿದ್ದಾನೆ.

ಮದುವೆ ಮುರಿದುಬೀಳಲು ಶಾಸಕನ ಪಿತೂರಿಯೇ ಕಾರಣ ಎಂಬ ಗುಲ್ಲು ಎನ್‌ಆರ್‌ಪುರದಲ್ಲಿ ಹರಡಿ ಕೊನೆಗೆ ಅರಣ್ಯಳ ಮನೆಯವರ ಕಿವಿಗೂ ಬಿತ್ತು. ಆತಂಕಿತರಾದ ಮನೆಯವರು ಆಕೆಗೆ ಧೈರ್ಯ ಹೇಳಿ ವಿಚಾರಿಸಿದಾಗ ಆಕೆ ನಡೆದದ್ದೆಲ್ಲವನ್ನೂ ತನ್ನ ಬಂಧುಗಳಿಗೆ ವಿವರಿಸಿದ್ದಾಳೆ.

ಈ ಪ್ರಕರಣದ ಮತ್ತೊಂದು ಕುತೂಹಲಕರ ಅಂಶವೆಂದರೆ ಈ ನತದೃಷ್ಟ ಹುಡುಗಿಯ ಭಾವ ಮನು ಎಂಬುವವರು ಕೂಡ ಕಟ್ಟಾ ಬಿಜೆಪಿ ಕಾರ್ಯಕರ್ತರಾಗಿದ್ದು ಕಳೆದ ಹತ್ತು ವರ್ಷಗಳಿಂದಲೂ ಇದೇ ಜೀವರಾಜ್‌ನ ಗೆಲುವಿಗಾಗಿ ಹಗಲಿರುಳೂ ಶ್ರಮಿಸಿದ್ದಾನೆ. ಇಷ್ಟೆಲ್ಲ ನಡೆದು ಮೂರು ವರ್ಷ ಕಳೆದಿದ್ದರೂ ಈ ಶಾಸಕ ಮನುವಿನ ಹೆಗಲ ಮೇಲೆ ಕೈಹಾಕಿ ಓಡಾಡುತ್ತಿದ್ದ.

ಜೀವರಾಜನ ಕೀಚಕ ಮುಖದ ದರ್ಶನವಾಗುತ್ತಿದ್ದಂತೆ ಕೆರಳಿದ ಮನು ಜೀವರಾಜನ ವಿರುದ್ಧ ತಿರುಗಿಬಿದ್ದಿದ್ದಾನೆ. ಈ ಅನ್ಯಾಯವನ್ನು ಸರಿಪಡಿಸುವಂತೆ ಒತ್ತಾಯಿಸಿದ್ದಾನೆ. ಈ ಸಂದರ್ಭದಲ್ಲಿ ಕೆಲವಾರು ಮುಖಂಡರು ರಾಜೀ-ಕಬೂಲಿಗಳನ್ನೂ ನಡೆಸಿದ್ದಾರೆ. ಈ ಎಲ್ಲಕ್ಕೂ ಸಾಕ್ಷಿಯಾಗಿ ಮೊಬೈಲ್ ಸಂಭಾಷಣೆಗಳು ಹೇಗೂ ಸಿಕ್ಕೇಸಿಗುತ್ತವೆ.

ಹೀಗೆ ರಾಜೀ ಪಂಚಾಯ್ತಿಗಳಿಗೆ ಮನು ಬಗ್ಗದಿದ್ದಾಗ ಜೀವರಾಜ ತನ್ನ ಗೆಳೆಯ ಇನ್‌ಸ್ಪೆಕ್ಟರ್ ಕಾಶಿಯ ಸಲಹೆಯಂತೆ ವಿಧಾನಸೌಧ ಠಾಣೆಯಲ್ಲಿ ಕಂಪ್ಲೇಂಟ್ ಕೊಟ್ಟು ಮಣಿಸುವ ತಂತ್ರ ಹೂಡಿದ್ದಾನೆ. ಅದೂ ಕೂಡ ವರ್ಕ್‌ಔಟ್ ಆಗದಿದ್ದಾಗ ಕೆಲವು ಪತ್ರಿಕೆಗಳಲ್ಲಿ ಮತ್ತು ಟಿವಿ ಮಾಧ್ಯಮಗಳಲ್ಲಿ ಮನು ಮತ್ತು ಅರಣ್ಯಳ ಬಗ್ಗೆ ತಪ್ಪು ಅಭಿಪ್ರಾಯ ಕೊಡುವಂಥ ಸುದ್ದಿಗಳು ಪ್ರಕಟವಾದವು. ಅದರಲ್ಲಿ ಕುಮಾರಿ ಅರಣ್ಯಳ ಫೋಟೋ ಕೂಡ ಪ್ರಸಾರವಾಗಿತ್ತು. ಜೀವರಾಜನ ಬೆಂಬಲಿಗರು ಬ್ಲ್ಯಾಕ್‌ಮೇಲ್ ಮಾಡಿ ಬೆದರಿಸುವ ತಂತ್ರ ಮುಂದುವರೆಸಿಯೇ ಇದ್ದರು.

ಹೀಗೆ ನಾನಾರೀತಿಯಲ್ಲಿ ಮಾನಸಿಕವಾಗಿ ಜರ್ಜರಿತವಾಗಿ ಹೋಗಿದ್ದ ಕುಮಾರಿ ಅರಣ್ಯ ಬೇರೆ ದಾರಿ ಕಾಣದೆ ಪೋಲೀಸ್ ದೂರು ದಾಖಲಿಸುವ ನಿರ್ಧಾರಕ್ಕೆ ಬಂದಳು. ಚಿಕ್ಕಮಗಳೂರು ಜಿಲ್ಲೆ ನರಸಿಂಹರಾಜಪುರ ಪೋಲೀಸ್ ಠಾಣೆಯಲ್ಲಿ ದಿನಾಂಕ: 08/11/2013ರಂದು ಫಿರ್ಯಾದು ನೀಡಿ ತನ್ನ ಮೇಲೆ ಅತ್ಯಾಚಾರವೆಸಗಿದ ಪಾಪಿ ಜೀವರಾಜನಿಗೆ ಶಿಕ್ಷೆ ವಿಧಿಸುವಂತೆ ಕೋರಿದಳು.

ಆದರೆ ಎನ್‌ಆರ್ ಪುರ ಠಾಣೆಯ ಇನ್‌ಸ್ಪೆಕ್ಟರ್ ಕೃಷ್ಣಮೂರ್ತಿ ಮಾಡಿದ್ದೇನು ಗೊತ್ತೆ? ಕೇಸು ದಾಖಲಿಸುವ ಬದಲು ಆರೋಪಿ ಶಾಸಕನ ಜೊತೆಯಲ್ಲಿ ಸುದೀರ್ಘ ಸಂಭಾಷಣೆಯಲ್ಲಿ ತೊಡಗಿದ. ಕೊನೆಗೆ ಕಾಟಾಚಾರಕ್ಕೆ ಕೇಸು ದಾಖಲಿಸಿದ ಈ ಆಸಾಮಿ, ಅಸಹಾಯಕ ಹುಡುಗಿಗೆ ರಕ್ಷಣೆ ನೀಡಿ ತಪ್ಪಿತಸ್ಥರ ವಿರುದ್ಧ ಕ್ರಮ ತೆಗೆದುಕೊಳ್ಳುವ ಬದಲಿಗೆ ಬಲಿಪಶುವಾಗಿದ್ದ ಹುಡುಗಿಯನ್ನೇ ಅಪರಾಧಿ ಎಂಬಂತೆ ಠಾಣೆಗೆ ಕರೆಸಿ ಬೆದರಿಕೆ ಹಾಕಲು ಶುರುವಿಟ್ಟುಕೊಂಡ. 'ಈ ಬಗ್ಗೆ ತನಿಖೆ ನಡೆಸಬೇಕಾಗಿದೆ, ನನ್ನ ಜೊತೆ ಜೀಪಿನಲ್ಲಿ ಬಾ' ಎಂದು ಒತ್ತಾಯಪಡಿಸಿದ. 'ನಾನು ನನ್ನ ಪೋಷಕರ ಜೊತೆಯಲ್ಲಿ ಬರುತ್ತೇನೆ' ಎಂದರೂ ಕೇಳದೆ ಹೆದರಿಸಿ ಬೆದರಿಸಿ ಅರಣ್ಯಳ ಹೇಳಿಕೆಯನ್ನು ವಿಡಿಯೋ ಮಾಡಿಕೊಳ್ಳುವ ಪ್ರಯತ್ನ ಮಾಡಿದ.

ಸ್ಥಳೀಯ ಶಾಸಕ ಜೀವರಾಜನ ಆಪ್ತಕೂಟದಲ್ಲಿರುವ ಈ ಇನ್‌ಸ್ಪೆಕ್ಟರ್‌ನಿಂದ ತನಗೆ ನ್ಯಾಯ ಸಿಗುವುದಿಲ್ಲವೆಂಬುದನ್ನು ಮನಗಂಡ ಈ ಯುವತಿ ಕೊನೆಗೆ ಚಿಕ್ಕಮಗಳೂರು ಜಿಲ್ಲಾ ಎಸ್‌ಪಿಯವರಲ್ಲಿಗೆ ಹೋಗಿ ತನಗೆ ನ್ಯಾಯ ದೊರಕಿಸಿ ಕೊಡಬೇಕೆಂದು, ಅಪರಾಧಿಗಳ ಪರ ವಕಾಲತ್ತು ವಹಿಸಿರುವ ಇನ್‌ಸ್ಪೆಕ್ಟರ್ ಕೃಷ್ಣಮೂರ್ತಿಯ ಮೇಲೆ ಕ್ರಮ ಜರುಗಿಸಬೇಕೆಂದೂ ಅಹವಾಲು ಸಲ್ಲಿಸಿದ್ದಾಳೆ. ಎಸ್‌ಪಿಯವರ ಸೂಚನೆಯಂತೆ ಡಿವೈಎಸ್‌ಪಿಯವರು ಪ್ರಾಥಮಿಕ ವಿಚಾರಣೆ ನಡೆಸಿ, ಮ್ಯಾಜಿಸ್ಟ್ರೇಟರ ಮುಂದೆ ಅರಣ್ಯಳ ಹೇಳಿಕೆ ದಾಖಲಿಸುವಂತೆ ಸೂಚಿಸಿದ್ದಾರೆ. ಅದರಂತೆ ಮಾನ್ಯ ಮ್ಯಾಜಿಸ್ಟ್ರೇಟರ ಮುಂದೆ ಸುಮಾರು 2 ತಾಸುಗಳ ಸುದೀರ್ಘ ಹೇಳಿಕೆ ನೀಡಿ ತನ್ನ ಮೇಲೆ ಜೀವರಾಜ್ ನಡೆಸಿದ ದೌರ್ಜನ್ಯವನ್ನು ಎಳೆಎಳೆಯಾಗಿ ಬಿಡಿಸಿಟ್ಟಿದ್ದಾಳೆ.

ಒಬ್ಬ ಹೆಣ್ಣುಮಗಳ ಬದುಕನ್ನು ನಾಶಮಾಡಿ, ಅವಳ ಮಾನವನ್ನು ಹರಾಜು ಹಾಕಿದ ಇದೇ ಆಸಾಮಿ ಈಗ ತನ್ನ ಮಾನಹಾನಿ ಆಗುತ್ತಿದೆಯೆಂದು ಕಂಡಕಂಡವರಲ್ಲಿ ಅಲವತ್ತುಕೊಳ್ಳುತ್ತಿದ್ದಾನೆ ಎಂಬ ಸುದ್ದಿಕೇಳಿ ಯಾವ ಕಡೆಯಿಂದ ನಗಬೇಕೆಂಬುದೇ ತಿಳಿಯುತ್ತಿಲ್ಲ.


ಪೊಲೀಸರು ಸೂಕ್ತ ತನಿಖೆ ಕೈಗೊಳ್ಳಲು ಈ ಪಾತಕ ಕೃತ್ಯಕ್ಕೆ ಸಂಬಂಧಿಸಿದ ಮೊಬೈಲ್ ಕರೆಗಳು ಮಹತ್ವದ ಸಾಕ್ಷಿಯನ್ನೊದಗಿಸುತ್ತವೆ. ಹೀಗೆ ನ್ಯಾಯ ವಿಚಾರಣೆ ಕ್ರಮವಾಗಿ ನಡೆದಲ್ಲಿ ಇಂಥಾ ಅಪರಾಧಕ್ಕೆ ಜೀವಾವಧಿ ಶಿಕ್ಷೆ ಗ್ಯಾರಂಟಿ. ಹಾಗಾದರೆ ಸದ್ಯದಲ್ಲೇ ಮತ್ತೊಬ್ಬ ಮೋದಿ ಶಿಷ್ಯ ಹಾಲಪ್ಪ ರಘುಪತಿ ಭಟ್ಟ, ಬ್ಲೂ ಬಾಯ್ಸ್ ಪಟ್ಟಿಗೆ ಸೇರಲಿದ್ದಾನೆ.

• ದೊಡ್ಡಿಪಾಳ್ಯ ನರಸಿಂಹಮೂರ್ತಿ

ಮೋದಿ ಸೋಲಿಸಿ-ಭಾರತ ಉಳಿಸಿ ರ‍್ಯಾಲಿಯ ಚಿತ್ರಗಳು

ನವೆಂಬರ್ 17ರಂದು ಬೆಂಗಳೂರಿಗೆ ಬಂದ ನರೇಂದ್ರ ಮೋದಿಯ ವಿರುದ್ಧ ಕರ್ನಾಟಕ ಕೋಮು ಸೌಹಾರ್ದ ವೇದಿಕೆಯು ಸಂಘಟಿಸಿದ್ದ ಪ್ರತಿಭಟನಾ ಸಭೆಗಳು ಬೆಂಗಳೂರು, ಮಂಡ್ಯ, ಚಿಕ್ಕಮಗಳೂರು, ಉಡುಪಿ, ಮಂಗಳೂರು, ಶಿವಮೊಗ್ಗ, ಭದ್ರಾವತಿ, ಗಂಗಾವತಿ, ಬಳ್ಳಾರಿ ಹಾಗೂ ಇನ್ನೂ ಅನೇಕ ಕಡೆ ನಡೆದವು.

'ಮೋದಿ ಸೋಲಿಸಿ-ಭಾರತ ಉಳಿಸಿ' ಪ್ರತಿಭಟನೆಯ ಕೆಲವು ಫೋಟೋಗಳನ್ನು ಇಲ್ಲಿ ಪ್ರಕಟಿಸಿದೆ.










ಭಾರತ ರತ್ನ ಸಚಿನ್ ತೆಂಡೂಲ್ಕರ್ ಎಂಬ ವಿದ್ಯಮಾನ

ಅಂಚಿನಿಂದ....



ಒಂದು ಸಾಧಾರಣ ಮಧ್ಯಮ ವರ್ಗದ ಹುಡುಗನೊಬ್ಬ ಅಸಾಧಾರಣ ಎತ್ತರಕ್ಕೆ ಏರಿ ನಿಲ್ಲುತ್ತಾನೆ. ಭಾರೀ ಸಂಖ್ಯೆಯ ಮಧ್ಯಮ ವರ್ಗವನ್ನು ಹೊಂದಿರುವ ಭಾರತ ದೇಶದಲ್ಲಿ ಅದನ್ನು ಅಭಿಮಾನದಿಂದ ನೋಡಿ, ಸ್ವೀಕರಿಸುವ ಕೋಟ್ಯಾಂತರ ಅಭಿಮಾನಿಗಳಿದ್ದಾರೆ. ಕೆಲವು ಸಣ್ಣ ಪುಟ್ಟ ತಪ್ಪುಗಳನ್ನು ಮಾಡಿರಬಹುದಾದರೂ, ತಾನಾಡುವ ಕ್ರೀಡೆಯಲ್ಲಿ ವಿಶೇಷವಾದ ಕಲೆಗಾರಿಕೆಯನ್ನು ಹೊಂದಿರುವ ಈತನಲ್ಲಿ ಇತರ ಓರೆ-ಕೋರೆಗಳು ಕಡಿಮೆ ಎಂಬುದೇ ಬಹುತೇಕರ ಅಭಿಪ್ರಾಯ. ಕಲೆಗಾರಿಕೆಗಿಂತ ಹೆಚ್ಚಾಗಿ ಹತ್ತಿರತ್ತಿರ ಎರಡೂವರೆ ದಶಕಗಳ ಕಾಲ ಆಟಗಾರನೊಬ್ಬ ತನ್ನ ದೇಹದ ಸಾಮರ್ಥ್ಯವನ್ನೂ, ಮಾನಸಿಕ ದೃಢತೆಯನ್ನೂ ಕಾಪಾಡಿಕೊಂಡು ಬಂದಿರುವುದು ಆತನ ವಿಶೇಷತೆಯಾಗಿರುತ್ತದೆ.

ಆಟದಲ್ಲೂ ಅತ್ಯಂತ ಹೆಚ್ಚಿನ ದಾಖಲೆಗಳು ಆತನ ಹೆಸರಿನಲ್ಲೇ ಇರುತ್ತವೆ. ಈತ ಮೊದಲ ಒಂದು ದಶಕ ಚೆನ್ನಾಗಿಯೇ ಆಡಿದಾಗ, ಆ ಆಟದಿಂದಲೇ ತಂಡ ಗೆದ್ದಿರುವ ಉದಾಹರಣೆಗಳು ಹೆಚ್ಚು. ಆನಂತರ, ಹಲವು ಕಾರಣಗಳಿಂದಾಗಿ, ಆಟದ ಕ್ಷಮತೆ ಕುಗ್ಗಿದಾಗ ಅದೇ ರೀತಿ ತಂಡವನ್ನು ಗೆಲ್ಲಿಸಿಕೊಡಲಾಗಿಲ್ಲ. ಆದರೂ ಒಟ್ಟಾರೆ ಆಟವು ಸಾರ್ವಕಾಲಿಕ ದಾಖಲೆಯಾಗಿ ನಿಲ್ಲುವ ಎಲ್ಲಾ ಸಾಧ್ಯತೆಗಳೂ ಇವೆ. ನಿವೃತ್ತಿಯ ದಿನ ದೇಶದ ಅತ್ಯುನ್ನತ ಪ್ರಶಸ್ತಿಯನ್ನು ಪಡೆದುಕೊಂಡ ಈ ವ್ಯಕ್ತಿ ಸಚಿನ್ ತೆಂಡೂಲ್ಕರ್ ಎಂಬುದು ನಿಮಗೆಲ್ಲಾ ಗೊತ್ತಿದೆ.

ಏನೇ ಅರೆಕೊರೆಗಳಿದ್ದರೂ, ಸಭ್ಯನಾದ ಈತನ ಆಟವನ್ನು ನಾವು ಮೆಚ್ಚಲೇಬೇಕು ಎಂದು ಟೀಕಾಕಾರರೂ ಹೇಳುತ್ತಾರೆ. ಈತನಿಗೆ ಭಾರತ ರತ್ನ ಪ್ರಶಸ್ತಿ ಕೊಟ್ಟಿದ್ದೂ ಸರಿ ಎಂಬುದು ಆತನ ಅಭಿಮಾನಿಗಳದ್ದೂ ಅಭಿಪ್ರಾಯ. ಆದರೆ ಅದರ ಕುರಿತು ತಕರಾರೂ ಇದೆ. ಎಲ್ಲಾ ಪ್ರಶಸ್ತಿಗಳಿಗೂ ತಕರಾರು ಎತ್ತುವವರು ಇದ್ದೇ ಇರುತ್ತಾರಾದ್ದರಿಂದ ಅದರ ಬಗ್ಗೆ ತಲೆಕೆಡಿಸಿಕೊಳ್ಳಬೇಕಿಲ್ಲ ಎಂಬುದು ಸಚಿನ್ ಅಭಿಮಾನಿಗಳ ಅನಿಸಿಕೆಯಾಗಿರಲಿಕ್ಕೆ ಸಾಧ್ಯ.

ಹೌದು ಎಲ್ಲಾ ಪ್ರಶಸ್ತಿಗಳ ಕುರಿತೂ ತಕರಾರು ಇರಲು ಕಾರಣವಿದೆ. ಭಾರತ ರತ್ನದ ವಿಚಾರವನ್ನೇ ನೋಡಿ. ಈ ಪ್ರಶಸ್ತಿಗೆ ಹಿಂದೆ ಇನ್ನೂ ಹೆಚ್ಚಿನ ಮೌಲ್ಯವಿತ್ತು; ಈಗ ಅದು ಕಡಿಮೆಯಾಗಿದೆ ಎಂಬ ಮಾತನ್ನೂ ಒಪ್ಪಲು ಸಾಧ್ಯವಿಲ್ಲ. ಆ ಪ್ರಶಸ್ತಿಯನ್ನು ಈಗಾಗಲೇ ನೀಡಿರುವ ಎಲ್ಲರಿಗೂ 'ಅರ್ಹತೆ'ಯ ಕಾರಣಕ್ಕೇ ನೀಡಲಾಗಿದೆ ಎಂದು ಹೇಳಲಾಗದು. ಈಗಾಗಲೇ ಪ್ರಶಸ್ತಿ ಪಡೆದುಕೊಂಡಿರುವವರಲ್ಲಿ ಅರ್ಧಕ್ಕೂ ಹೆಚ್ಚು ಜನ ರಾಜಕಾರಣಿಗಳೇ (41ರಲ್ಲಿ 23) ಇದ್ದಾರೆ. ಹಾಗೆ ನೋಡಿದರೆ ಭಾರತ ರತ್ನ ಪಡೆದುಕೊಂಡ ವಿಶ್ವೇಶ್ವರಯ್ಯನವರಿಗೆ ಬ್ರಿಟಿಷ್ ಸರ್ಕಾರವು ನೈಟ್‌ಹುಡ್ (ಸರ್) ಪದವಿಯನ್ನೂ ನೀಡಿತ್ತು, ಭಾರತವನ್ನು ದೋಚಿ ಆಳುತ್ತಿದ್ದ ಬ್ರಿಟಿಷರೂ ಪದವಿಯನ್ನು ನೀಡುತ್ತಾರೆ, 'ಸ್ವತಂತ್ರ' ಭಾರತವೂ ಪದವಿ ನೀಡುತ್ತದೆ ಎಂದಾದರೆ ಅದು ಏನನ್ನು ಸೂಚಿಸುತ್ತದೆ. ರಾಜಸೇವಾಸಕ್ತ ಎಂಬುದು ಅಧಿಕೃತ ಪದವಿಯಾ ಪ್ರಶಸ್ತಿಯೋ ಅಥವಾ ಕೇವಲ ಹೊಗಳಿಕೆಯೋ ಗೊತ್ತಿಲ್ಲ, ಆದರೆ ರಾಜಸೇವಾಸಕ್ತರಾಗದವರಿಗೆ ಪ್ರಶಸ್ತಿ ಬರುವುದಿಲ್ಲ ಎಂಬುದಂತೂ ಖಾತರಿ. ಕೆಲವು ಸಾರಿ ಮಾತ್ರ ಜನಾಭಿಪ್ರಾಯದ ಒತ್ತಡದಿಂದ, ಜನಮಾನಸದಲ್ಲಿ ನಾಯಕರಾಗಿರುವವರಿಗೆ (ಉದಾ: ಅಂಬೇಡ್ಕರ್) ಅತ್ಯುನ್ನತ ಪ್ರಶಸ್ತಿಗಳನ್ನು ನೀಡಲಾಗುತ್ತದೆ. ಏನೇ ಇದ್ದರೂ ಪ್ರಶಸ್ತಿ ನೀಡಿದ್ದು (ಭಾರತ ರತ್ನವೇ ಇರಲಿ) ಅಥವಾ ನೀಡದಿದ್ದುದನ್ನು ಯಾವುದಾದರೂ ವ್ಯಕ್ತಿಯನ್ನು ಅಳೆಯುವ ಪ್ರಮುಖ ಮಾನದಂಡ ಆಗುವ ಸ್ಥಿತಿಯಂತೂ ಇಲ್ಲ.

ಆದರೂ ಸಚಿನ್ ತೆಂಡೂಲ್ಕರ್‌ರಿಗೆ ಭಾರತ ರತ್ನ ಘೋಷಿಸಿರುವ ಈ ಸಂದರ್ಭದಲ್ಲಿ ತೆಂಡೂಲ್ಕರ್ ಎಂಬ ವಿದ್ಯಮಾನವನ್ನು ವಿಶ್ಲೇಷಿಸುವ ಅಗತ್ಯವಿದೆ. ಅದು ಪ್ರಶಸ್ತಿಯ ಕಾರಣಕ್ಕೆ ಮಾತ್ರವಲ್ಲ; ಆತನನ್ನು 'ದೇವರು' ಎಂದು ಪದೇ ಪದೇ ಘೋಷಿಸಲಾಗುತ್ತಿರುವುದರಿಂದ ಮತ್ತು ಆತನ ನಿವೃತ್ತಿಯ ಸಂದರ್ಭದಲ್ಲಿ ಈ ದೇಶದ ಬಹುತೇಕ ಪತ್ರಿಕೆಗಳು ಹಾಗೂ ಟಿವಿ ಚಾನೆಲ್‌ಗಳು ಅದನ್ನೊಂದು ಚಾರಿತ್ರಿಕವಾಗಿ ಮಹತ್ವದ ಸಂಗತಿಯಂತೆ ಬಿಂಬಿಸುತ್ತಿರುವುದರಿಂದ.


ತೆಂಡೂಲ್ಕರ್‌ಗೆ ಈ ರೀತಿಯ ಮಹತ್ವವನ್ನು ಕೊಡಲಾಗುತ್ತಿರುವುದು ಕೇವಲ ಆತನ ಆಟಕ್ಕಲ್ಲ ಎಂಬುದು ಸ್ಪಷ್ಟವಾಗಿದೆ. ಅದರ ಹಿಂದೆ ಕ್ರಿಕೆಟ್ ಎಂಬ ಉದ್ದಿಮೆ, ಜಾಹೀರಾತು ಎಂಬ ಉದ್ದಿಮೆ, ಮಧ್ಯಮ ವರ್ಗದ ಸಾಮಾನ್ಯ ಜನರು ಅಸಾಮಾನ್ಯವಾದದ್ದನ್ನು ಸಾಧಿಸಬಹುದು ಎಂದು ಬಿಂಬಿಸುವ ಅಗತ್ಯವಿರುವ ನವ ಉದಾರವಾದಿ ಪ್ರಜಾತಂತ್ರದ ಉದ್ದಿಮೆ, ಟಿಆರ್‌ಪಿಗಾಗಿ ಅಸಹ್ಯಕರ ಮಟ್ಟಕ್ಕೆ ಇಳಿದಿರುವ ದೃಶ್ಯ ಮಾಧ್ಯಮದ ಉದ್ದಿಮೆ, ಮುದ್ರಣ ಮಾಧ್ಯಮದ ಉದ್ದಿಮೆ ಎಲ್ಲಕ್ಕೂ ಒಬ್ಬ ತೆಂಡೂಲ್ಕರ್‌ನ ಅಗತ್ಯವಿತ್ತು. ಇದು ಸಾರ್ವಕಾಲಿಕವಾಗಿ ಇದ್ದ ಅಗತ್ಯವಲ್ಲ, 1991ರ ನಂತರದಲ್ಲಿ ದೇಶದೊಳಗೆ ವ್ಯಾಪಿಸಿರುವ ಹೊಸದೊಂದು ಆರ್ಥಿಕತೆ ಮತ್ತು ಸಂಸತಿಯು ಸೃಷ್ಟಿಸಿರುವ ಅಗತ್ಯ. 1989ರಲ್ಲಿ ಸಚಿನ್ ಎಂಬ 16ರ ಹುಡುಗ, ಅದುವರೆಗಿನ ಕ್ರಿಕೆಟ್ ಕಲಿಗಳಲ್ಲಿ ಹೆಚ್ಚಿನವರು ನಿವೃತ್ತಿಯಾಗಲಾರಂಭಿಸಿದ್ದ ಹೊತ್ತಿನಲ್ಲಿ ಅಂತರರಾಷ್ಟ್ರೀಯ ಕ್ರಿಕೆಟ್‌ನ ಮೈದಾನಕ್ಕೆ ಇಳಿದ ಎಂಬುದನ್ನು ಗಮನಿಸಬೇಕು.

ಜಾಗತೀಕರಣವು ಮನುಷ್ಯರ ಅಭಿರುಚಿಗಳನ್ನೂ, ಅಭಿಪ್ರಾಯಗಳನ್ನೂ ಆಳಲಾರಂಭಿಸಿದ ಮೇಲೆ ಅದರಿಂದ ಕ್ರಿಕೆಟ್ ಹೇಗೆ ಹೊರತಾಗಿರಲು ಸಾಧ್ಯ? ಅಲ್ಲಿಂದ ಮುಂದೆ, ಶುರುವಾದ ಖಾಸಗಿ ಚಾನೆಲ್‌ಗಳು ಪ್ರತಿಯೊಂದು ಪಂದ್ಯವನ್ನು ನೇರ ಪ್ರಸಾರ ಮಾಡಲು ಆರಂಭಿಸಿದವು. ವ್ಯಾಪಾರ, ಜಾಹೀರಾತು, ಮಾಧ್ಯಮ ಮತ್ತು ಕ್ರಿಕೆಟ್‌ಗಳೆಲ್ಲವನ್ನೂ ಕಾರ್ಪೋರೇಟ್ ಉದ್ದಿಮೆಗಳು ಆವರಿಸಿದವು. ಗಾವಸ್ಕರ್, ರವಿಶಾಸ್ತ್ರಿಗಳಂತಹ ಹಿಂದಿನ ದೊಡ್ಡ ಆಟಗಾರರು ವೀಕ್ಷಕ ವಿವರಣೆಗಾರರಾಗಿ ಎಲ್ಲವನ್ನೂ ವೈಭವೀಕರಿಸಲು ಆರಂಭವಾಯಿತು. ಅವೆಲ್ಲದರ ಪರಮಾವಧಿಯ ಪ್ರತೀಕವಾಗಿ ಐಪಿಎಲ್ ಎಂಬ ಕ್ರಿಕೆಟ್ ಕ್ಯಾಬರೆ ಶುರುವಾಯಿತು. ಮಂದಿರಾ ಬೇಡಿಗಳು, ಚಿಯರ್ ಗರ್ಲ್‌ಗಳು ಕ್ರಿಕೆಟ್‌ನ ಜೊತೆ ಕಾಣಿಸಲಾರಂಭಿಸಿದರು.

ಈ ಪ್ರಕ್ರಿಯೆಯ ಆರಂಭದಲ್ಲೇ ಸಚಿನ್ ಎಂಬ ಆಟಗಾರನ ವ್ಯಾವಹಾರಿಕ ಸಾಧ್ಯತೆಗಳನ್ನು ಗುರುತಿಸಿದ ವರ್ಲ್ಡ್‌ಟೆಲ್‌ನ ಮುಖ್ಯಸ್ಥ ಮಾರ್ಕ್ ಮಾಸ್ಕರೆನ್ಹಾಸ್ ಎಂಬಾತನು 1995-96ರಲ್ಲೇ ಆತನ ಜೊತೆ 7.5 ಮಿಲಿಯನ್ ಡಾಲರ್‌ಗಳಿಗೆ ಜಾಹೀರಾತು ಒಪ್ಪಂದ ಕುದುರಿಸಿಕೊಂಡ. ಕೆಲವೇ ವರ್ಷಗಳಲ್ಲಿ ಅದು 18 ಮಿಲಿಯನ್ ಡಾಲರ್‌ಗಳಿಗೆ ಏರಿತು. ಉದ್ದಿಮೆಗೆ ಹೆಚ್ಚೆಚ್ಚು ಆಟ ನಡೆಯುವುದೂ ಅಗತ್ಯವಿತ್ತು. ಟಿವಿ ಚಾನೆಲ್‌ಗಳಿಗೂ ಅದು ಬೇಕಿತ್ತು. ಆ ಉದ್ದಿಮೆಯು ಸಚಿನ್‌ನನ್ನು ಯಾವ ಪರಿಯಲ್ಲಿ ಬಿಂಬಿಸಲಾರಂಭಿಸಿತೆಂದರೆ 'ಈ ಹುಡುಗ ಏಕಾಂಗಿಯಾಗಿ ಪ್ರಪಂಚದ ಅತ್ಯಂತ ವೈವಿಧ್ಯಮಯ ಪ್ರಜಾಪ್ರಭುತ್ವವನ್ನು ಒಗ್ಗೂಡಿಸಿದ ವ್ಯಕ್ತಿ' ಎಂದೆಲ್ಲಾ ಹೇಳಲಾಯಿತು.

ಸಚಿನ್ ಎಂಬಾತ ಕ್ರಿಕೆಟ್‌ಗಿಂತ ದೊಡ್ಡದಾಗಿ ಬೆಳೆಯಲಾರಂಭಿಸಿದ್ದು ಇವೆಲ್ಲದರ ಹಿನ್ನೆಲೆಯಲ್ಲಿ. ಆರಂಭದಲ್ಲಿ ಎದುರಾಳಿ ಬೌಲರ್‌ಗಳನ್ನು ಚೆಂಡಾಡುತ್ತಿದ್ದ ಎಳೆಯ ಹುಡುಗ ನಿಧಾನಕ್ಕೆ ಉದ್ದಿಮೆಗೆ ಬೇಕಾದ ಐಕಾನ್ ಆಗಿದ್ದನ್ನೂ ಕಾಣಬಹುದು. ಹಾಗಾಗಿಯೇ ಆತನ ಮೊದಲ 10 ವರ್ಷಗಳ ಆಟದ ಯಶಸ್ಸು ಮತ್ತು ಆನಂತರ ತನಗೆ ಉದ್ದಿಮೆಯು ಕೊಟ್ಟ ಇಮೇಜನ್ನು ಉಳಿಸಿಕೊಳ್ಳಲು ಮಾಡಿದ ಸರ್ಕಸ್ಸು ಎದ್ದು ಕಾಣುತ್ತದೆ. ಆ ಸರ್ಕಸ್ಸು ಆತನನ್ನು ಒಬ್ಬ ಸ್ವಾರ್ಥಿ ಆಟಗಾರನಾಗಿ, ತನ್ನ ಸ್ವಾರ್ಥಕ್ಕಾಗಿ ದೇಶದ ಮತ್ತು ತಂಡದ ಹಿತಾಸಕ್ತಿಯನ್ನೇ ಬಲಿಗೊಟ್ಟ ವ್ಯಕ್ತಿಯಾಗಿ ರೂಪಿಸಿತು. ಆತ ಒಂದು ದಿನದ ಪಂದ್ಯಗಳಲ್ಲಿ 100ನೇ ಶತಕ ಬಾರಿಸಲಿಕ್ಕಾಗಿ ಆ ಪಂದ್ಯದಲ್ಲಿ ಬಾಂಗ್ಲಾದಂತಹ ದುರ್ಬಲ ತಂಡದೆದುರು ಭಾರತ ತಂಡದ ಗೆಲುವನ್ನೇ ಬಲಿಗೊಟ್ಟಿದ್ದನ್ನು ಎಲ್ಲರೂ ನೋಡಿದ್ದಾರೆ. ಆತನ ಈ ರೀತಿಯ ಆಟಕ್ಕೆ ಅದೊಂದೇ ಉದಾಹರಣೆಯಾಗಿರಲಿಲ್ಲ.

ಅದಕ್ಕೆ ಸಾಕಷ್ಟು ಅಂಕಿ-ಅಂಶಗಳನ್ನು ಪರಿಣಿತರು ಒದಗಿಸಬಹುದು. ತೆಂಡೂಲ್ಕರ್ ಶತಕ ಹೊಡೆದಾಗ ಭಾರತ ತಂಡವು ಗೆದ್ದಿರುವುದು ಶೇ.67ರಷ್ಟು ಸಾರಿ. ಆದರೆ ಸೌರವ್ ಗಂಗೂಲಿ ಶತಕ ಬಾರಿಸಿದಾಗ ತಂಡವು ಶೇ.82ರಷ್ಟು ಸಾರಿ ಗೆದ್ದಿದೆ. ಗಿಲ್ ಕ್ರಿಸ್ಟ್ ಶತಕ ಬಾರಿಸಿದ ಪ್ರತೀ ಸಂದರ್ಭದಲ್ಲೂ (ಶೇ.100) ಆಸ್ಟ್ರೇಲಿಯಾ ಗೆದ್ದಿದೆ. ಅದೇ ರೀತಿ ಬ್ರಿಯಾನ್ ಲಾರಾ ಶೇ.84ರಷ್ಟು, ರಿಕಿ ಪಾಂಟಿಂಗ್ ಶೇ.83ರಷ್ಟು ಸಾರಿ ತಮ್ಮ ತಂಡವನ್ನು ತಮ್ಮ ಶತಕದೊಂದಿಗೆ ಗೆಲ್ಲಿಸಿಕೊಟ್ಟದ್ದಾರೆ.



ಟೆಸ್ಟ್ ಕ್ರಿಕೆಟ್‌ನಲ್ಲಿ ತಾವು ಆಡಿದಷ್ಟು ಸಮಯ ಒಟ್ಟು ತಂಡ ಗಳಿಸಿದ ರನ್‌ಗಳಲ್ಲಿ ಶೇ.15ರಷ್ಟನ್ನು ಗಳಿಸಿದ 45 ಆಟಗಾರರ ಒಂದು ಪಟ್ಟಿ ಮಾಡಲಾಗಿದೆ. ಇದು ಆಯಾ ಸಂದರ್ಭದಲ್ಲಿ ಈ ಆಟಗಾರ ತಂಡಕ್ಕೆ ಎಷ್ಟು ಮಹತ್ವದವನಾಗಿದ್ದ ಎಂಬುದನ್ನು ತೋರುತ್ತದೆ. ಅದರಲ್ಲಿ ಡಾನ್ ಬ್ರಾಡ್ಮನ್ ಮೊದಲಿಗರಾಗಿದ್ದರೆ, ಬ್ರಿಯಾನ್ ಲಾರಾ 3ನೇ ಸ್ಥಾನದಲ್ಲಿದ್ದಾರೆ, ಗಾವಸ್ಕರ್ 16ನೆಯವರಾಗಿದ್ದಾರೆ. ತೆಂಡೂಲ್ಕರ್ ಈ ಪಟ್ಟಿಯಲ್ಲಿ ಸ್ಥಾನವನ್ನೇ ಗಳಿಸಿಲ್ಲ. ಆದರೂ ಅಷ್ಟೊಂದು ರನ್‌ಗಳ ಕಿರೀಟ ಆತನದ್ದಾಗಲು ಕಾರಣವೇನೆಂದರೆ, ತೆಂಡೂಲ್ಕರ್ ಕ್ರಿಕೆಟ್ ಆರಂಭಿಸಿದ ಮೇಲೆ ಸಿಕ್ಕಾಪಟ್ಟೆ ಕ್ರಿಕೆಟ್ ನಡೆದಿದೆ ಮತ್ತು ಸಚಿನ್ ಬರೋಬ್ಬರಿ 23 ವರ್ಷಗಳ ಕಾಲ ಕ್ರಿಕೆಟ್ ಆಡಿದ್ದಾರೆ.

ಟೆಸ್ಟ್‌ಗಳಲ್ಲಿ ಅಷ್ಟೊಂದು ರನ್ ಗಳಿಸಿದ ಸಚಿನ್ (51 ಶತಕಗಳು ಮತ್ತು 67 ಅರ್ಧ ಶತಕಗಳು), ಒತ್ತಡದಲ್ಲಿದ್ದಾಗ, ಅಂದರೆ ಎರಡನೇ ಇನ್ನಿಂಗ್ಸ್‌ನಲ್ಲಿ ಗೆಲ್ಲಬೇಕಾದ ಒತ್ತಡದಲ್ಲಿದ್ದಾಗ ಎಷ್ಟು ಅರ್ಧ ಶತಕ ಅಥವಾ ಶತಕ ಗಳಿಸಿದ್ದಾರೆ? ಒಂದೂ ಇಲ್ಲ. ವಿ.ವಿ.ಎಸ್.ಲಕ್ಷ್ಮಣ್ ನಾಲ್ಕು ಸಾರಿ ಮತ್ತು ದ್ರಾವಿಡ್ ಮೂರು ಸಾರಿ ಅದನ್ನು ಸಾಧಿಸಿದ್ದಾರೆ. ಆದರೆ ತೆಂಡೂಲ್ಕರ್‌ರ 100ನೇ ಶತಕದಂತೆಯೇ ಅಜೇಯ 241 ರನ್‌ಗಳು ಬಂದಾಗ, ಭಾರತ ಗೆಲುವಿನ ಅವಕಾಶವನ್ನು ಕಳೆದುಕೊಂಡವು.

ಇವೆಲ್ಲದರ ಅರ್ಥ ತೆಂಡೂಲ್ಕರ್ ಕಳಪೆ ಆಟಗಾರನಾಗಿದ್ದರು ಎಂದೇನಲ್ಲ, ಹಾಗೆಂದು ಸರ್ವಶ್ರೇಷ್ಠ ಆಟಗಾರ ಸಹ ಅಲ್ಲ ಎಂಬುದನ್ನಷ್ಟೇ ಈ ಅಂಕಿ-ಅಂಶಗಳು ಹೇಳುತ್ತವೆ. ಇಷ್ಟಕ್ಕೂ ಸರ್ವಶ್ರೇಷ್ಠ ಆಟಗಾರ ಎಂದು ಹೇಳಲು ಇರುವ ಮಾನದಂಡಗಳೇನು ಎಂಬ ಪ್ರಶ್ನೆಯನ್ನು ಹಾಕಿಕೊಳ್ಳಲೇಬೇಕು. ಏಕೆಂದರೆ, ಸಚಿನ್‌ಗಾಗಿ ಭಾರತ ರತ್ನ ಪ್ರಶಸ್ತಿಯನ್ನು ಕೊಡಲು ಆ ಪ್ರಶಸ್ತಿಯ ಮಾನದಂಡಗಳನ್ನೇ 2011ರ ಡಿಸೆಂಬರ್ 16ರಂದು ಬದಲಿಸಲಾಯಿತು. ಹಿಂದೆ ಈ ಪ್ರಶಸ್ತಿಯನ್ನು ಕಲೆ, ಸಾಹಿತ್ಯ ವಿಜ್ಞಾನ ಕ್ಷೇತ್ರಗಳಲ್ಲಿ ಯಾರೂ ಮಾಡಿರದ ಸಾಧನೆ ಮಾಡಿರುವವರಿಗೆ ಮತ್ತು ಅತ್ಯುನ್ನತ ಮಟ್ಟದ ಸಾರ್ವಜ[...] ಸೇವೆಯನ್ನು ಮಾಡಿರುವವರಿಗೆ' ನೀಡಬೇಕಾಗಿತ್ತು, [...] 'ಮನುಷ್ಯ ಪ್ರಯತ್ನದ ಯಾವುದೇ ಕ್ಷೇತ್ರದಲ್ಲಿ ಅತ್ಯು[...] ಮಟ್ಟದ ಸೇವೆ/ಪ್ರತಿಭಾ ಪ್ರದರ್ಶನಗೈದಿರುವವರಿ[...] ನೀಡಬಹುದು.

ಅಂತಹ ಅತ್ಯುತ್ತಮ ಮಟ್ಟದ ಪ್ರತಿಭಾ ಪ್ರದರ್ಶನವ[...] ಸಚಿನ್ ಏನು ಮಾಡಿದ್ದರು? ಬ್ಯಾಟಿಂಗ್ ಆವರೇಜ್[...] ಜಾಕ್ ಕಾಲೀಸ್ ಮತ್ತು ಕುಮಾರ ಸಂಗಕ್ಕಾರ ಅವರಿಗಿ[...] ಹಿಂದೆ ಇರುವ, ಸಚಿನ್‌ಗೆ ಟೆಸ್ಟ್‌ನಲ್ಲಿ 16ನೇ ಸ್ಥಾನವಿದ[...] ಒಂದು ದಿನದ ಪಂದ್ಯಗಳಲ್ಲಿ 14ನೇ ಸ್ಥಾನವಿದೆ. ಭಾ[...] ತಂಡದ ನಾಯಕನಾಗಿ ಟೆಸ್ಟ್‌ಗಳಲ್ಲಿ 4ರಲ್ಲಿ ಗೆದ್ದು 9ರ[...] ಸಚಿನ್ ಸೋತಿದ್ದರು. ಒಂದು ದಿನದ ಪಂದ್ಯಗಳಲ್ಲಿ 23ರ[...] ಗೆದ್ದು 43ರಲ್ಲಿ ಸೋತಿದ್ದರು.


ಹೀಗೆಲ್ಲಾ ಇದ್ದರೂ ಸಚಿನ್ ಅತ್ಯಂತ ಶ್ರೀಮ[...] ಕ್ರಿಕೆಟಿಗನಾದರು. ಶ್ರೀಮಂತರ ಪಟ್ಟಿ ಮಾಡುವ ಫೋ[...] ಪತ್ರಿಕೆ ಹೇಳಿರುವಂತೆ ಆತನ ಬೆಲೆ 115 ಮಿಲಿಯ[...] ಡಾಲರ್. ತನ್ನದೇ ಸ್ವಂತದ ತೆಂಡೂಲ್ಕರ್ಸ್ ಮತ್ತು ಸಚಿ[...] ಎಂಬ ಎರಡು ದೊಡ್ಡ ಹೋಟೆಲ್‌ಗಳಲ್ಲದೇ, ಸಂಜ[...] ನಾರಂಗ್‌ನ ಮಾರ್ಸ್ ರೆಸ್ಟೋರೆಂಟ್‌ಗಳ ಪಾಲುದಾರನಾಗಿದ[...] ಫ್ಯೂಚರ್ ಗ್ರೂಪ್ ಮತ್ತು ಮಣಿಪಾಲ್ ಗ್ರೂಪ್[...] ಜೊತೆ ಸೇರಿ ಆರೋಗ್ಯ ಮತ್ತು ಫಿಟ್‌ನೆಸ್ ಸರಕುಗಳ[...] ತಯಾರಿಸುವ ಯೋಜನೆ ಇದೆ. ಈಗಾಗ[...] ಕೋಲ್ಗೇಟ್-ಪಾಮೋಲಿವ್, ಸಾನ್ಯೋ ಬಿಪಿಎಲ್, ವೀ[...] ಕೋಕಾ ಕೋಲಾ, ಕ್ಯಾನನ್, ಆದಿದಾಸ್, ತೋಷಿ[...] ಇತ್ಯಾದಿ ಕಂಪೆನಿಗಳ ಜಾಹೀರಾತು ಮಾಡೆಲ್ಲಾಗಿರುವುದ[...] ದೇಶವೆಲ್ಲಾ ನೋಡಿದೆ. ಆಗೆಲ್ಲಾ ವಿದೇಶೀ ಬಹುರಾಷ್ಟ್ರೀ[...] ಕಂಪೆನಿಗಳ ಏಜೆಂಟಾಗಿ ತಾನು ಕೆಲಸ ಮಾಡಬಾರದೆ[...] ದೇಶಪ್ರೇಮ ಯಾಕಿರಲಿಲ್ಲ ಎಂಬ ಪ್ರಶ್ನೆಗಳೇ[...] ಅಸಂಗತವಾಗಿದೆ.

ರಾಜ್ ಠಾಕ್ರೆಯೂ ಸೇರಿದಂತೆ ಎಲ್ಲಾ ರಾಜಕೀ[...] ಪಕ್ಷಗಳ ಜೊತೆಯೂ ಅತ್ಯುತ್ತಮ ಸಂಬಂಧ ಹೊಂದಿರು[...] ಸಚಿನ್‌ಗೆ ಅಂತಹ ನೈತಿಕ ಪ್ರಶ್ನೆಗಳಾವುವೂ ಕಾಡುವುದಿ[...] ಆತನ ಮೊದಲ ದಶಕದ ವ್ಯವಹಾರ ಪಾಲುದ[...] ಮಸ್ಕಾರೆನಸ್ ಒಬ್ಬ ವಂಚಕನಾಗಿದ್ದು, ದೂರದರ್ಶ[...] ವಂಚಿಸಿದ್ದ! ತನ್ನ ವಿದಾಯ ಭಾಷಣದಲ್ಲಿ ಸಚಿನ್ ಆತನ[...] ನೆನೆಸಿಕೊಂಡು, ಕೃತಜ್ಞತೆಗಳನ್ನರ್ಪಿಸಿದ. ಆತನಿಗೆ ವಿದೇಶದ[...] ಉಡುಗೊರೆಯಾಗಿ ಸಿಕ್ಕಿದ ಫೆರಾರಿ ಕಾರಿಗೆ ತೆರಿಗೆ ವಿನಾಯಿ[...] ಕೇಳಿದ ಪ್ರಕರಣ ಸಾಕಷ್ಟು ಪ್ರಚಾರದಲ್ಲಿದೆ. ಅದು ಕೋರ್ಟ್[...] ಮೆಟ್ಟಿಲೇರಿ, ವಿನಾಯಿತಿ ಕೊಡಬಾರದೆಂದಾಗ, ಫೆರಾರಿ[...] ಅದನ್ನು ಕೊಡುವಂತೆ ಮಾಡಿ, ಅದನ್ನು ಪಡೆದುಕೊಂ[...] ಸೂರತ್‌ನ ಉದ್ಯಮಿಯೊಬ್ಬರಿಗೆ 1.5 ಕೋಟಿಗೆ ಮಾರಿ[...] ಸುದ್ದಿ ಎಲ್ಲೆಡೆ ಪ್ರಚಾರದಲ್ಲಿಲ್ಲ.

ಸಚಿನ್ ಯಾಕೆ ಸಮಾಜೋದ್ಧಾರ ಮಾಡಬೇಕು? ಕ್ರಿಕೆ[...] ಆಡಿದರೆ ಸಾಲದೇ? ಎಂದು ಕೇಳುವವರೂ ಇದ[...] ಮೊದಲನೆಯದಾಗಿ ಕ್ರಿಕೆಟ್ ಎಂಬುದು ಕೇವಲ ಒಂ[...] ಕ್ರೀಡೆ ಅಲ್ಲ, ಸಚಿನ್ ಕೇವಲ ಒಬ್ಬ ಆಟಗಾರನೂ ಅ[...] ಆತನನ್ನು ಭಾರತವೆಂಬ ವೈವಿಧ್ಯಮಯ ಪ್ರಜಾಪ್ರಭುತ್[...] ರಾಯಭಾರಿಯಂತೆ, ದೇವರಂತೆ, ದೇಶದ ಮಕ್ಕಳ ಮು[...] ಮಾದರಿಯಂತೆ ಬಿಂಬಿಸಲಾಗುತ್ತಿದೆ ಎಂಬುದ[...] ಮರೆಯಬಾರದು. 'ಹಿಂದೂಸ್ತಾನವು ಎಂದೂ ಮರೆಯ[...] ಭಾರತ ರತ್ನ'ನೆಂದು ಇನ್ನು ಮುಂದೆ ಕೊಂಡಾಡಲಾಗುತ್[...] ಈ ಹಿನ್ನೆಲೆಯಲ್ಲಿ ಹೊಸ ಕಾಲದ ರತ್ನಗಳು ಹೇ[...] ರೂಪುಗೊಳ್ಳುತ್ತವೆ, ಯಾರು ತಯಾರಿಸುತ್ತಾರೆ ಎಂಬುದ[...] ಕೆದಕುವುದು ಅಗತ್ಯವಿದೆ.

ಭವಿಷ್ಯದ ಪ್ರಧಾನಿಯೊಬ್ಬನನ್ನು ಇದೇ ರೀ[...] ಉದ್ದಿಮೆಗಳು, ಜಾಹೀರಾತು ಕಂಪೆನಿಗಳು ಮ[...] ಮಾಧ್ಯಮಗಳು ತಯಾರಿಸುತ್ತಿರುವುದನ್ನೂ ನಾ[...] ನೋಡುತ್ತಿದ್ದೇವಲ್ಲವೇ? ಇವೆರಡು ವಿದ್ಯಮಾನಗಳಲ್ಲಿ ಏ[...] ಸಾಮ್ಯತೆ ಇಲ್ಲವೇ?

ಒಲ್ಲದ ಗಂಡನಿಗೆ ಮೊಸರಲ್ಲೂ ಕಲ್ಲು... ಒಲ್ಲದ ಹೆಂಡತಿಗೆ



- ಸಂಸಾರ ಎಂಬುದಕ್ಕೆ ಬೇಕಿರುವ ಮೂಲ ಸಾಧನ ಯಾವುದು?

-ಬಿ.ಎಸ್. ಕಿರಣ್‌ಕುಮಾರ್, ಕೆಬ್ಬೇಹಳ್ಳಿ

- ವೈರಾಗ್ಯ ಕಣಪ್ಪ!
- ಶಾದಿಭಾಗ್ಯ ಯೋಜನೆ ಎಲ್ಲರಿಗೂ ಸಿಗಬೇಕು ಅಂತ ಯಡಿಯೂರಪ್ಪ ಹಠ ಮಾಡುತ್ತಿರುವುದೇಕೆ?

- ಲಕ್ಷ್ಮೀಶ್, ಬೆಂಗಳೂರು

- ಮುದ್ದಿ ತನಗಾಗಿ ಹೀಗಸ್ತುತ್ತಿದ್ದಾರೆ ಅಂತಲ್ಲಾ ನಿಮ್ಮ ಗುಮಾನಿ.
- ಬೆಂಗಳೂರಿನ ಮೋದಿ ರ್‍ಯಾಲಿಗೆ ಬಂದವರಿಗೆ ತಲಾ ಐನೂರು ರೂಪಾಯಿ ಕೊಟ್ಟರಂತಲ್ಲ!

-ರಾಜೀವ್, ತುರುವೇಕೆರೆ

- ಕದ್ದ ದುಡ್ಡು ಹಂಚುವಾಗ ಕೈ ಉದ್ದ ಅಷ್ಟೆ.
- ತೇಜಸ್ವಿಯನ್ನು ನೆನಪಿಸುವ ಬರಹಗಾರ ವಸುದೇಂದ್ರ ಅಂತ ಶತಾವಧಾನಿ ಗಣೇಶ್ ತೀರ್ಪು ನೀಡಿದ್ದಾರೆ ಗೊತ್ತೆ.

-ಸುಮ, ಅರೆಕಟ್ಟೆ

- ಸುಮ್ಮನಿರಿ ಸುಮ. ನರಿ ಕೂಗು ಗಿರಿ ಮುಟ್ಟುವುದಿಲ್ಲ.
- ವಾಜಪೇಯಿಗೆ ಭಾರತ ರತ್ನ ಕೊಡಬಹುದಾ?

-ರಂಜಿತ್ ಗೌಡ, ಹಾಸನ

- ಈ ಜನ್ಮದಲ್ಲಿ ಅಷ್ಟು ಯೋಗ್ಯತೆ ಪಡೆದಿಲ್ಲ ಬಿಡಿ.
- ದೇವನೊಬ್ಬ-ನಾಮ ಹಲವು ಅನ್ನುತ್ತಾರಲ್ಲ, ಏನಿದರ ಅರ್ಥ ಗುರೂ!

-ನವೀನ್, ಗುಂಡ್ಲುಪೇಟೆ

- ದೇವರ ಹೆಸರಲ್ಲಿ ನಾಮ ಹಾಕುವವರ ಆತ್ಮನಿವೇದನೆ ಕಣಪ್ಪಾ.
- ಮಳೆ ಬಂದಾಗ ಕಾಮನಬಿಲ್ಲು ಮೂಡುತ್ತೆ, ಮದುವೆಯಾದಾಗ?

-ತುಕಾರಾಂ, ಬೆಳಗಾಂ

- ಗ್ರಹಣ ಬಂದು ಹೋಗುತ್ತಿರುತ್ತೆ.
- ಹೆಂಡತಿ ಅಂದರೆ ಹೇಗಿರಬೇಕು ಅಂತ ಒಂದು ಖಡಕ್ ಮಾತು ಹೇಳಿ ನೋಡೋಣ.

-ಸೋಮಶೇಖರ್, ದೆಹಲಿ

- 'ಪರರ ಹೆಂಡತಿಯಂತೆ' ಅನ್ನುವುದು ಗಂಡಸರ ಗುಣ.
- ಊರಿಗೆ ಬಂದವಳು ನೀರಿಗೆ ಬರದೆ ಇರ್ತಾಳಾ ಅಂತಿದ್ದ ನನ್ನ ಸ್ನೇಹಿತ ಆದ್ರೆ ಆಕೆ ನೀರಿಗೆ ಬರಲೇ ಇಲ್ಲ?

-ಬಿ.ಎಸ್. ನಾರಾಯಣಸ್ವಾಮಿ, ಬೋದನಹೊಸಹಳ್ಳಿ

- ನಿನ್ನ ಗೆಳೆಯ ಹಳೇ ಕಾಲದವನು, ಸುಮ್ಮನೆ ನಲ್ಲಿ ಹತ್ತಿರ ಕಾಯುತ್ತಾ ಒಣಗಬೇಡ.
- ಬ್ರಹ್ಮ ಮನುಷ್ಯರ ಹಣೇಬರಹವನ್ನು ಯಾವ ಭಾಷೆಯಲ್ಲಿ ಬರೆದಿರುತ್ತಾನೋ?

-ಚಂದ್ರಪ್ಪ, ಸಿರಿ[...]

- ಪುರೋಹಿತರ ವಂಚನೆಯ ಭಾಷೆಯಲ್ಲಿ.
- ಡಾಕ್ಟರ್‌ಗಳು ಪ್ಲಸ್ (+) ಗುರುತನ್ನೇ ಸಂಕೇ[...] ಮಾಡಿಕೊಂಡಿರುತ್ತಾರೆ ಯಾಕೆ?

-ಶಿವರಾಜ್, ನಿಡಸೊ[...]

- ಮೈನಸ್.... ರೋಗಿಯ ಪಾಲು ಅದಕ್ಕೆ.
- ಒಲ್ಲದ ಗಂಡನಿಗೆ ಮೊಸರಲ್ಲೂ ಕಲ್ಲು... ಒ[...] ಹೆಂಡತಿಗೆ?

-ಶಿವಕುಮಾರ್, ಕ[...]

- ಗಂಡ ತಂದ ಹೂವಿನಲ್ಲೂ ಹುಳ.
- ಗಂಡಸರು ಕೈ ಕುಲುಕಿ ಪರಿಚಯ ಮಾಡಿಕೊಂ[...] ಹೆಂಗಸರು ಕೈಮುಗಿದು ನಮಸ್ಕಾರ ಮಾಡುವುದೇ[...]

-ಪ್ರಸನ್ನ ದೇಸಾಯಿ, ಗ[...]

- ಪರಿಚಯವಾದ ತಕ್ಷಣ ಕರೆಂಟ್ ಶಾಕ್ ಕೊಡೋ[...] ಸರಿಯಲ್ಲ ಅಂತಿರಬೇಕು.



ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ಬ್ರಹ್ಮನೆಂಬ ಪುರುಷ ಮತ್ತು ಪುರೋಹಿತ

ಪುರಾಣವೆಂಬುದು ಪುಂಡರ ಗೋಷ್ಠಿ

ನಮ್ಮ ಪುರಾಣಗಳನ್ನು ವಿಶ್ಲೇಷಿಸಲು ಹೋದಾಗ ಉಂಟಾಗುವ ಬಹು ದೊಡ್ಡ ಸಮಸ್ಯೆಯೆಂದರೆ ಒಂದೇ ವಿಷಯದ ಬಗ್ಗೆ ಒಂದೊಂದು ರೀತಿಯಲ್ಲಿ ಹೇಳಿರುವುದು. ಹಾಗಾಗಿಯೇ ಅವುಗಳಿಂದ ಐತಿಹಾಸಿಕ ಘಟನಾವಳಿಗಳನ್ನು ಗುರುತಿಸಲು ಸಾಧ್ಯವಾಗದು. ಒಂದೊಂದು ಪುರಾಣವೂ ಆಯಾ ಕರ್ತೃವಿನ ಸೃಜನಶೀಲತೆ ಮತ್ತು ದೃಷ್ಟಿಕೋನದಂತೆ ಸತ್ಯ, ಸುಳ್ಳು, ಐತಿಹಾಸಿಕ, ಕಾಲ್ಪನಿಕ, ನೈತಿಕ, ಬೌದ್ಧಿಕ, ಬುದ್ಧಿವಂತಿಕೆ, ಮೂರ್ಖತನ; ಎಲ್ಲದರ ಯರ್‍ರಾಬಿರ್‍ರಿ ಮಿಶ್ರಣವಾಗಿಬಿಟ್ಟಿದೆ. ಅದಕ್ಕೇ ಅಲ್ಲಮನಿಗೆ ರೇಗಿ, ಪುರಾಣವೆಂಬುದು ಪುಂಡರ ಗೋಷ್ಠಿ ಎಂದು ಸಾರಾಸಗಟಾಗಿ ತಿರಸ್ಕರಿಸಿರುವುದು. ಆದರೂ ನಮ್ಮ ನೆಲದ ಸಾಂಸ್ಕೃತಿಕ ಮತ್ತು ಸಾಮಾಜಿಕ ಹಿನ್ನೆಲೆ, ಅವು ಈಗಿನ ಜನರ ಮನಸ್ಸು ಮತ್ತು ಧೋರಣೆಗಳ ಮೇಲೆ ಹೇಗೆ ಪ್ರಭಾವ ಬೀರಿದೆ ಎಂಬುದನ್ನು ತಿಳಿದುಕೊಳ್ಳಲು, ಅಹಿತ ಮತ್ತು ಅಸಹನೀಯವಾದ ಹಿಡಿತಗಳಿಂದ ಹೊರಬರಲು, ಬದುಕಿನ ಅಗತ್ಯ ಮತ್ತು ಅರಿವಿಗೆ ನೆರವಾಗುವ ಅಂಶಗಳನ್ನು ಸ್ವೀಕರಿಸಲು ಅವುಗಳನ್ನು ಪರಿಗಣಿಸಲೇಬೇಕಾಗಿದೆ. ತಲೆಚಿಟ್ಟು ಹಿಡಿಯುವಂತಹ, ವಾಸ್ತವ ನೆಲೆಗಟ್ಟಿನಿಂದ ತಾಳೆ ಹೊಂದಿಸಿಕೊಳ್ಳಲಾರದ, ತಾರ್ಕಿಕವಾಗಿ ವಿಚಾರ ಮಾಡಲು ಕಷ್ಟವಾಗುವ ಆ ವಿಷಯಗಳನ್ನು ಅವು ಹೇಳುವ ರೀತಿಯಲ್ಲಿಯೇ ಅಲ್ಲದೇ ಬೇರೆಯೇ ರೀತಿಯಲ್ಲಿ ಹೇಳುವ ಅಥವಾ ಗ್ರಹಿಸುವ ಸೂಕ್ಷ್ಮತೆಯಿದ್ದು, ತಾಳ್ಮೆಯಿದ್ದಲ್ಲಿ ಒಂದು ಹಂತಕ್ಕೆ ಅರ್ಥೈಸಬಹುದು. ಅದೂ ಕೂಡ ಚರಿತ್ರಾಕಾರ, ಸಮಾಜಶಾಸ್ತ್ರಕಾರ, ವೇದಾಂತಿ, ಸನಾತನ ಸಂಪ್ರದಾಯವಾದಿ, ಸಾಹಿತ್ಯ ಮತ್ತು ಕಲಾ ಸಂಶೋಧಕ, ತತ್ವಜ್ಞಾನಿ; ಹೀಗೆ ಎಲ್ಲರ ಅಧ್ಯಯನ ಮತ್ತು ಅರ್ಥಗ್ರಹಣಗಳಿಗೆ ಒಳಗಾಗಿ ಬೇರೆ ಬೇರೆ ರೀತಿಯೇ ವ್ಯಾಖ್ಯಾನ ಮಾಡಲ್ಪಡುತ್ತವೆ. ಆಯಾ ಅಧ್ಯಯನ ಕ್ಷೇತ್ರಗಳಿಂದ ಅವು ಸರಿಯಿದ್ದಿರಬಹುದು ಅಥವಾ ಸರಿ ಎನಿಸುವಂತೆ ಹೇಳಬಹುದು. ಹೀಗೆ ಪುರಾಣಗಳನ್ನು ಯಾವುದೇ ರೀತಿಯಲ್ಲಾದರೂ ಅಧ್ಯಯನ ಅಥವಾ ಅವಲೋಕನ ಮಾಡಿಕೊಳ್ಳಲು ಯಾರಿಗಾದರೂ ಸಾಧ್ಯತೆ ಇದೆ, ಹಾಗೆಯೇ ಸ್ವಾತಂತ್ರ್ಯವೂ ಇದೆ. ಆದರೆ, ಅವುಗಳಲ್ಲಿ ಯಾವುದು ಯಥಾರ್ಥವಾದುದು, ಯಾವುದನ್ನು ಒಪ್ಪಬೇಕು ಅಥವಾ ತಿರಸ್ಕರಿಸಬೇಕೆಂಬುದು ಅವರವರ ಆಸಕ್ತಿ ಮತ್ತು ದೃಷ್ಟಿ-ಧೋರಣೆಗಳೇ ನಿರ್ಧರಿಸುತ್ತವೆಯೇ ಹೊರತು ಇದೇ ಸತ್ಯವೆಂದು ವಾದಿಸಿ, ಇನ್ನೊಂದು ಬಗೆಯ ವಾದಿಗಳನ್ನು ಎದುರಾಳಿಗಳೆಂಬಂತೆ ನೋಡುತ್ತಾ ಚಟಕಾಯಿಸಲು ಯತ್ನಿಸುವುದು ಆಯಾ ವರ್ಗದ ಸಂಕುಚಿತ ಮನೋಭಾವ, ಅಪ್ರಬುದ್ಧ ಬೌದ್ಧಿಕ ಸ್ಥಿತಿ ಮತ್ತು ಏಕಪಕ್ಷೀಯವಾದ ವಿತಂಡ ವಾದವಾಗುವುದೇ ಹೊರತು ಸತ್ಯಾನ್ವೇಷಕ ಸಂವಾದವಾಗುವುದಿಲ್ಲ.

ಸೃಷ್ಟಿಯ ಮೂಲವು ಗಂಡೋ ಹೆಣ್ಣೋ?

ಪುರಾಣಗಳಲ್ಲಿ ಮತ್ತು ಇತರೇ ಕೃತಿಗಳಲ್ಲಿ ಕಂಡು ಬರುವ ಬ್ರಹ್ಮನು ಗಂಭೀರವಾಗಿ, ಲಘುವಾಗಿ, ನಾಟಕೀಯವಾಗಿಯೂ ಕಾಣಿಸಿಕೊಳ್ಳುತ್ತಾನೆ. ಹಲವರ ಪ್ರಕಾರ ಈತನೇ ಸೃಷ್ಟಿಕರ್ತ. ಆದರೂ ಈತನಿಗೂ ಹುಟ್ಟೆಂಬುದು ಉಂಟು. ಸಮುದ್ರದ ಅಲೆಗಳ ಮೇಲೆ ಶೇಷಶಾಯಿಯಾಗಿ ಮಲಗಿರುವ ಶ್ರೀಮನ್ನಾರಾಯಣನ ಹೊಕ್ಕಳಿಂದ ಅರಳಿದ ಕಮಲವೊಂದು ಉದ್ಭವವಾಗಿ ಅದರಲ್ಲಿ ಬ್ರಹ್ಮನು ಕಾಣಿಸಿಕೊಂಡ. ಬ್ರಹ್ಮನೂ ತಾಯಿ ಇಲ್ಲದ ತಬ್ಬಲಿ ಎಂದು ಬಗೆದರೆ, ದೇವೀ ಮಹಾತ್ಮೆಯು ಆ ಕೊರತೆಯನ್ನು ನೀಗಿಸುತ್ತದೆ. ಆದಿಶಕ್ತಿ, ಮಹಾಮಾಯೆಯೇ ಬ್ರಹ್ಮ, ವಿಷ್ಣು ಮತ್ತು ಮಹೇಶ್ವರರಿಗೆ ಜನ್ಮಕೊಡುತ್ತಾಳೆ. ತಾತ್ವಿಕವಾಗಿ ಸೃಷ್ಟಿಯ ಪರಿಯನ್ನು ವಿಶ್ವಯೋನಿಯ ಪರಿಕಲ್ಪನೆಯಲ್ಲಿ ವಿವರಿಸುತ್ತಾ ಮಾತೃಪ್ರಧಾನವಾಗಿ ಒಂದು ಬಗೆಯ ಕಲ್ಪನೆಯನ್ನು ಕಟ್ಟಿಕೊಟ್ಟರೆ, ಮತ್ತೊಂದು ಬ್ರಹ್ಮನ್ ಎಂಬ ನಿರ್ಲಿಂಗ ಅಥವಾ ಪುರುಷ ಎಂಬ ಕಲ್ಪನೆ ಮಾತೃ ಪ್ರಧಾನಕ್ಕೆ ವಿರೋಧವಾಗಿ ವಿಶ್ಲೇಷಿಸಲು ಯತ್ನಿಸುತ್ತದೆ. ಬ್ರಹ್ಮನ್ ಮತ್ತು ಬ್ರಹ್ಮವೆಂಬುದು ಒಂದೇ ಅಲ್ಲ. ಬ್ರಹ್ಮವೆಂಬುದು ಮೂರ್ತ ಸ್ವರೂಪವಾದರೆ, ಬ್ರಹ್ಮನ್ ಎಂಬುದು ಅಮೂರ್ತ ಸ್ವರೂಪವಾದದ್ದು. ಹಿರಣ್ಯಗರ್ಭದ ಪರಿಕಲ್ಪನೆಯಲ್ಲಿ ಸೃಷ್ಟಿಯ ರಹಸ್ಯ ಇನ್ನೂ ರೋಚಕವಾಗಿ ಗೋಚರವಾಗುತ್ತದೆ. ಬ್ರಹ್ಮನಿಂದ ಸೃಷ್ಟಿಯಾದದ್ದು ಬ್ರಹ್ಮಾಂಡ. ಬ್ರಹ್ಮನ್ ಎಂಬುವುದನ್ನು ಪುರುಷ ಎಂದು ನೋಡುವುದಕ್ಕಿಂತ ನಿರ್ಲಿಂಗವಾಗಿ ನೋಡುವುದರಲ್ಲಿ ಹೆಚ್ಚಿನ ಸಮಜಾಯಿಷಿ ಇದೆ. ಅದನ್ನು ಸೃಷ್ಟಿಯನ್ನೂ ಮಾಡಲು ಸಾಧ್ಯವಿರುವಂತಹ ಶಕ್ತಿಯೆಂದು ಪರಿಗಣಿಸುವುದರಲ್ಲಿ ಒಂದು ವ್ಯಾಖ್ಯಾನವಿದೆ.

ನೀರು ಜೀವ ಜಗತ್ತಿನ ಮೂಲ ಎಂದು ವೈಜ್ಞಾನಿಕವಾಗಿ ಒಪ್ಪುವುದಾದರೆ ಅದೇ ವಿಷಯ ಬ್ರಹ್ಮನ ವಿಷಯದಲ್ಲೂ ಹೋಲಿಕೆಗೆ ಬರುವುದನ್ನು ಗಮನಿಸಬಹುದು. ಇಂಡೋ ಆರ್ಯನ್ ಮೂಲದ್ದಲ್ಲದ ನಾರಾ ಎಂಬ ನೀರಿನ ಬಹುವಾಚಕ ಪದವನ್ನು ಗಮನಿಸಿದರೆ, ನಾರಾ-ಯಣ ನೀರಿನ ಮೇಲೆ ಸ್ವಪ್ನ ಸ್ಥಿತಿಯಲ್ಲಿ ಮಲಗಿರುವವನು. ಅವನ ಹೊಕ್ಕಳಿಂದ ಹೊರಬರುವ ಕಮಲದ ಉದ್ದನೆಯ ದಂಟು ಮತ್ತು ಅದರ ಮೇಲೆ ಅರಳಿರುವ ಕಮಲ ಹಾಗೂ ಅದರಲ್ಲಿರುವ ಸೃಷ್ಟಿಕರ್ತ ಬ್ರಹ್ಮನ ಮೂರ್ತ ಸ್ವರೂಪ. ನಾನು ಗಮನಿಸುವ ಅಂಶಗಳೆಂದರೆ, ವಿಶ್ರಾಂತ ಸ್ಥಿತಿಯ ಶಕ್ತಿಯಲ್ಲಿ ವಿಕಾಸವಾದವನ್ನು ಸೂಚಿಸುವ ಅರಳಿರುವ ಕಮಲ. ಸೃಷ್ಟಿಯ ಮತ್ತು ಗರ್ಭದೊಳಗಿನ ಪೋಷಣೆಯ ಸಮಯದಲ್ಲಿ ತಾಯಿ ಮತ್ತು ಮಗುವಿನ ವಿಶೇಷ ಪಾತ್ರವಹಿಸುವ ಕರುಳುಬಳ್ಳಿಯಾಗಿ, ವಿಷ್ಣುವಿನ ಹೊಕ್ಕಳಿಂದ ಹೊರಗೆ ಬಂದ ಕಮಲದ ದಂಟು ಕಾಣಿಸುತ್ತದೆ. ಗರ್ಭ ಮತ್ತು ಅಂಡ ಇತ್ಯಾದಿ ಸೃಷ್ಟಿ ಸಂಬಂಧಿ ವಿಷಯಗಳೆಲ್ಲಾ ಹೆಣ್ಣಿಗೇ ಸಂಬಂಧಿಸಿದ್ದಾಗಿಯೂ, ಸೃಷ್ಟಿಕರ್ತನಾಗಿ ಬ್ರಹ್ಮ ಅಥವಾ ಸೃಷ್ಟಿಯ ಮೂಲವಾಗಿ ಪುರುಷನನ್ನು ಹೊಂದಿದ ಪರಿಕಲ್ಪನೆ ಯಾವುದರಿಂದ ಆಗಿರಬಹುದು ಎಂಬ ಪ್ರಶ್ನೆ ಮೂಡುತ್ತದೆ. ಸೃಷ್ಟಿ ಅಥವಾ ಜಗತ್ತಿನ ಉಗಮದ ಮೂಲವೆಂದು ವಿಶ್ವಯೋನಿಯ ಪರಿಕಲ್ಪನೆಯಲ್ಲಿ ಆದಿಶಕ್ತಿ ದೇವಿಯ ಕಲ್ಪನೆಯನ್ನು ಒಪ್ಪಿಕೊಳ್ಳುವುದು ತಾತ್ವಿಕವಾಗಿ ಅಥವಾ ಭಾವನಾತ್ಮಕವಾಗಿ ಸಹಜ [illegible]. ಆದರೆ ಬ್ರಹ್ಮನೆಂಬ ಪುರುಷನೇಕೆ ಇಲ್ಲಿ?

ಬ್ರಹ್ಮನೆಂಬ ಆಡಂ, ಸರಸ್ವತಿಯೆಂಬ ಈವ್

ಬೈಬಲ್‌ನ ಹಳೆಯ ಒಡಂಬಡಿಕೆಯ ಆದಿಕಾಂಡವು (ಜೆನಿಸಿಸ್) ಮತ್ತು ಭಾರತೀಯ ಪುರಾಣಗಳು ಸೃಷ್ಟಿಯ ವಿಷಯದಲ್ಲಿ ಕಟ್ಟಿಕೊಡುವ ಕಲ್ಪನೆಗಳಲ್ಲಿ ಬಹಳಷ್ಟು ಸಾಮ್ಯತೆಗಳಿವೆ. ನಿರಾಕಾರವಾಗಿರುವ ಅವಕಾಶದಲ್ಲಿ ಕಗ್ಗತ್ತಲಿದ್ದು ಅಲ್ಲಿದ್ದ ಆದಿಸಾಗರ ಮೇಲೆ ದೇವರಾತ್ಮ ಅಥವಾ ಶಕ್ತಿ ಚಲಿಸುತ್ತಿತ್ತು ಎಂದು ಜೆನಿಸಿಸ್ ಹೇಳುವುದನ್ನು ಭಾರತೀಯ ಕಲಾವಿದನ ಕುಂಚದಲ್ಲಿ ವಿಷ್ಣುವು ಸಾಗರದ ಮೇಲೆ ಮಲಗಿರುವುದನ್ನು ಕಾಣಬಹುದು. ಹಾಗೆಯೇ ಮತ್ತೊಂದು ಉಪಮೆಯನ್ನು ಗಮನಿಸಿದರೆ, ಜೆನಿಸಿಸ್‌ನಲ್ಲಿ ದೇವರು ಎಂಬ ಚೈತನ್ಯವು ಬೆಳಕಾಗಲಿ ಎಂದರೆ ಬೆಳಕಾಗುವುದು. ಅಂತೆಯೇ ತನ್ನಂತೆಯೇ ಇರುವ ಮಾನವನಾದ ಆದಮ್‌ನನ್ನು ಸೃಷ್ಟಿಸಿ, ಅವನು ನಿದ್ರಾವಶನಾಗಿರುವಾಗ ಅವನ ಎಲುಬಿನಿಂದಲೇ ಹೆಣ್ಣನ್ನು ಸೃಷ್ಟಿಸಿದಂತೆ, ಬ್ರಹ್ಮನಿಂದಲೇ ಸೃಷ್ಟಿಯಾಗುವ ಶತರೂಪೆ ಸರಸ್ವತಿ ಅವನನ್ನು ಕೂಡುವಂತವಳಾಗುತ್ತಾಳೆ.



ಋಕ್ ಶ್ಲೋಕಗಳು ಬ್ರಹ್ಮಾಂಡವೆಲ್ಲಾ ಬ್ರಹ್ಮನಿಂದ ಸೃಷ್ಟಿಸಲ್ಪಟ್ಟಿದೆ ಎಂದು ಹೇಳುತ್ತಾ ಅವನನ್ನು ಪುರುಷನನ್ನಾಗಿ ಮಾಡಿ ಋಗ್ವೇದ ಮತ್ತು ಅಥರ್ವಣವೇದದಲ್ಲಿ ಸೂಕ್ತವನ್ನು ಹಾಡುತ್ತದೆ. ಸೃಷ್ಟಿಯ ಪ್ರಕ್ರಿಯೆಯನ್ನು ಯಜ್ಞವಾಗಿ ಕಾಣುತ್ತಾ ಸಾಂಕೇತಿಕವಾಗಿ ಸಾವಿರ ತಲೆಗಳನ್ನು ಆರೋಪಿಸಿ ನಾನಾ ರೀತಿಯ ಸೃಷ್ಟಿಗಳನ್ನು ವಿವರಿಸುತ್ತಾ ಬ್ರಾಹ್ಮಣ ಬಾಯಿ, ಕ್ಷತ್ರಿಯ ತೋಳು, ವೈಶ್ಯನು ತೊಡೆಗಳಿಂದ ಮತ್ತು ಶೂದ್ರನು ಪಾದಗಳಿಂದ ಹುಟ್ಟಿದ ಎಂದು ವಿವರಿಸುತ್ತದೆ.

ಇಲ್ಲಿ ಬ್ರಾಹ್ಮಣ್ಯಾಧಿಕ್ಯದ ಅಧಿಕಾರದೊಂದಿಗೆ ಸೃಷ್ಟಿಯ ಕ್ರೆಡಿಟ್ಟನ್ನೂ ಪುರುಷನಿಗೆ ನೀಡಿರುವುದು ವೈದಿಕ ಬ್ರಾಹ್ಮಣರ ಧೋರಣೆಯ ಪ್ರತೀಕ. ಇದೆಲ್ಲದರ ಜೊತೆಗೆ ಬ್ರಹ್ಮನು ಪೌರೋಹಿತ್ಯದ ಅಧಿಪತಿಯಾಗಿಯೂ ಅಭಿವ್ಯಕ್ತವಾಗುತ್ತಾನೆ. ಹೀಗಾಗಿ ಬ್ರಾಹ್ಮಣ ಪುರೋಹಿತರ ಪ್ರತಿನಿಧಿಯಾಗಿ ಬ್ರಹ್ಮನಿದ್ದನೋ ಇಲ್ಲವೋ ಆದರೆ, ಬ್ರಹ್ಮನನ್ನು ತಮ್ಮ ಪೌರೋಹಿತ್ಯದ ತೆಕ್ಕೆಗೆ ಎಳೆದುಕೊಂಡ ಕೀರ್ತಿ ಬ್ರಾಹ್ಮಣ ಪುರೋಹಿತರಿಗೆ ಸಲ್ಲುತ್ತದೆ.

ಬಹುಶಃ ನಂತರದ ಕಾಲಘಟ್ಟದಲ್ಲಿ ಈ ಬ್ರಹ್ಮ ಪದವಿಗೆ ಏರಿದ ಯಾರೋ ಒಬ್ಬ ಬ್ರಹ್ಮ ಈ ಬ್ರಾಹ್ಮಣಾಧಿಕ್ಯದ ಪುರೋಹಿತಶಾಹಿಯನ್ನು ಸಮ್ಮತಿಸಲಾರ. ಹಾಗಾಗಿ ಅವನಿಗೆ ದೂರ್ವಾಸನೆಂಬ ಮಹರ್ಷಿಯ ನೆಪದಿಂದ ಪೂಜೆಗೆ ಅನರ್ಹನಾಗಿದ್ದಿರಬಹುದು. ವೇದಗಳನ್ನು ಮತ್ತು ಪುರಾಣಗಳನ್ನು ಪುರಸ್ಕರಿಸದ ಉಪನಿಷತ್ತಿನ ದಾರ್ಶನಿಕರು ಸೃಷ್ಟಿಯ ಜಿಜ್ಞಾಸೆಯನ್ನು ನಿರಾಕರಿಸಲಿಲ್ಲ, ಆರ್ಯರ ಪ್ರಾಬಲ್ಯತೆ ಪಡೆದಿದ್ದ ಇಂದ್ರಾದಿ ದೇವತೆಗಳನ್ನು ಮತ್ತು ಅವರ ಶಕ್ತಿ-ಸಾಮರ್ಥ್ಯಗಳನ್ನು ಪ್ರಶ್ನಿಸಿದ ಉಪನಿಷತ್ತಿನ ಆಚಾರ್ಯರು ಬ್ರಹ್ಮನಿಗೆ ಮಹತ್ವ ನೀಡದೇ ಬ್ರಹ್ಮನ್‌ನೆಂಬ ನಿರ್ಗುಣ ಮತ್ತು ನಿರಾಕಾರದ ಪರಿಕಲ್ಪನೆಯನ್ನು ಪ್ರೋತ್ಸಾಹಿಸಿದರು. ಅದರ ನಂತರ ಸೃಷ್ಟ್ಯಾಧಿಪತಿ ಬ್ರಹ್ಮನು ಬರಿಯ ಪೌರಾಣಿಕ ಕಥಾನಕಗಳಲ್ಲಿ ನಾಲ್ಕು ಮೊಗಗಳನ್ನು ಹೊತ್ತ ನಾಟಕೀಯ ಮತ್ತು ಸತ್ವಹೀನ ಪುರೋಹಿತನಂತೆ ಕಂಡು ಬಂದು ತನ್ನ ಮಾನ್ಯತೆಯನ್ನು ಕಳೆದುಕೊಂಡ.

ಪೌರಾಣಿಕ ಬ್ರಹ್ಮನ ಗತಿ

ಪುರಾಣಗಳಲ್ಲಿ ಬ್ರಹ್ಮನು ಜೀವಾತ್ಮನಾಗಿದ್ದು, ವಿಷ್ಣು ಮತ್ತು ಶಿವನು ಪರಮಾತ್ಮರಾಗಿ ಪದವಿಯನ್ನು ಪಡೆದವರಾಗಿದ್ದವರು. ಆದರೆ ಉಪನಿಷತ್ತುಗಳ ನಂತರ ರಚನೆಯಾದ ಪುರಾಣಗಳಲ್ಲಿ ನಿಷ್ಪಕ್ಷಪಾತ ಪರಮಾತ್ಮನಾಗಿಯೇ ಬ್ರಹ್ಮನು ರೂಪುಗೊಂಡನು. ಪುರಾಣದಲ್ಲಿ ಇವನ ಬಗ್ಗೆ ಬರುವ ಉಲ್ಲೇಖ ಯಾವ ರೀತಿಯದ್ದೆಂದರೆ, "ಬ್ರಹ್ಮನಿಗೆ ಪಂಚಮುಖಗಳಿದ್ದು ಶಿವನಿಗಿಂತ ತಾನು ಶ್ರೇಷ್ಠನೆಂಬ ಗರ್ವವು ಪ್ರಾಪ್ತವಾಗಲು, ಶಿವನು ಈತನ ಒಂದು ತಲೆಯನ್ನು ಕತ್ತರಿಸಿ ಚತುರ್ಮುಖ ಬ್ರಹ್ಮನನ್ನಾಗಿ ಮಾಡಿದನು. ಇದರಿಂದ ಇವನಿಗೆ ಬ್ರಹ್ಮಹತ್ಯಾದೋಷವು ಪ್ರಾಪ್ತವಾಗಲು, ಬ್ರಹ್ಮ ಕಪಾಲವೂ ಅವನ ಕೈಯಿಂದ ಜಾರಿಬಿತ್ತು. (ಬ್ರಹ್ಮಹತ್ಯಾ ದೋಷವೆಂಬುದು ಬ್ರಾಹ್ಮಣರಿಗೆ ಬ್ರಾಹ್ಮಣೇತರರಿಂದ ಯಾವುದೇ ತೊಂದರೆಯುಂಟಾಗದಂತೆ ಕಾಪಾಡಿಕೊಳ್ಳಲು ಮಾಡಿಕೊಂಡಿದ್ದಂತಹ ಒಂದು ಬೆದರಿಕೆಯ ಅಸ್ತ್ರ ಬೇಟೆಗಾರ, ಕಿರಾತ ಪಂಗಡದ ಶಿವನು ಬ್ರಾಹ್ಮಣಾಧಿಕ್ಯ ಪುರುಷ ಮತ್ತು ಪುರೋಹಿತನ ಸಂಕೇತವಾದ ಬ್ರಹ್ಮನನ್ನು ಭಿನ್ನಗೊಳಿಸಿದರೆ ಅವನಿಗೆ ಶಿಕ್ಷೆ ಅನಿವಾರ್ಯವೂ ಹೌದು, ಅಗತ್ಯವೂ ಹೌದು!)

ಶಿವ ಸಂಬಂಧಿ ಪುರಾಣಗಳಲ್ಲಿ ಶಿವನ ಮೇಲ್ಮೆಯನ್ನು ಸಾರಲು ಶಿವನೇ ಬ್ರಹ್ಮನಿಗೆ ಪೂಜಾ ಉತ್ಸವಗಳು ಸಲ್ಲದಂತೆ ಶಾಪವಿತ್ತನು. ಇಲ್ಲಿ ಈ ಕೆಲಸ ಮಾಡುವವನು ದೂರ್ವಾಸನಲ್ಲ.

ಬ್ರಹ್ಮನಿಗೆ ವಿಷ್ಣುವಿನ ನಾಭಿ ಕಮಲದಿಂದ ಜನಿಸುವಾಗ ಒಂದೇ ಮುಖವಿತ್ತು, ಅವನು ನಾಲ್ಕೂ ದಿಕ್ಕುಗಳನ್ನು ನೋಡಲನುಕೂಲವಾಗುವಂತೆ ನಾಲ್ಕು ಮುಖಗಳನ್ನು ಪಡೆದನು. ನಾಲ್ಕು ಮುಖಗಳಿಂದ ನಾಲ್ಕು ವೇದಗಳು ಹುಟ್ಟಿದವು. (ಈ ವೇದಗಳನ್ನು ರಚಿಸಿದವರು ಮನುಷ್ಯರಲ್ಲದ ದೇವತೆಗಳು ಎಂಬ ಪರಿಕಲ್ಪನೆಯನ್ನು ವೈದಿಕ ಬ್ರಾಹ್ಮಣರು ಏಕೆ ಹುಟ್ಟಿಹಾಕಿದರು ಎಂಬು ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಸುವಿವರವಾಗಿ ವಿಶ್ಲೇಷಿಸುತ್ತಾರೆ. ಅದನ್ನು ಮುಂದಿನ ಸಂಚಿಕೆಗಳಲ್ಲಿ ಕಾಣುತ್ತೇವೆ.) ಇವನಿಗೆ ಮರೀಚಿ, ಅಂಗಿರಸ್ಸು, ಅತ್ರಿ, ಪುಲಸ್ತ್ಯ, ಪುಲಹ, ಕ್ರತು ಎಂಬ ಆರು ಮಂದಿ ಮಾನಸಪುತ್ರರು. ಸನಂದನ, ಸನತ್ಕುಮಾರ ಮತ್ತು ಸನತ್ಸುಜಾತರು ಕೂಡ ಬ್ರಹ್ಮನ ಮಾನಸಪುತ್ರರೇ.

ಬ್ರಹ್ಮನ ಮುಖ ಭಾಗದಿಂದ ದೇವತೆಗಳೂ, ವಕ್ಷದಿಂದ ಪಿತೃಗಳೂ, ಕೆಳಗಿನ ಭಾಗದಿಂದ ಮಾನವರೂ, ಬೆನ್ನಿನ ಭಾಗದಿಂದ ರಾಕ್ಷಸರು ಮತ್ತು ಸಾಧ್ಯರೂ ಜನಿಸಿದರು. ಇದರಿಂದ ತಿಳಿಯುವುದೇನೆಂದರೆ, ಬ್ರಹ್ಮಪದವಿಯನ್ನು ಬರಿಯ ಆರ್ಯರು ಮಾತ್ರವಲ್ಲದೇ ಇತರರೂ ಪಡೆದಿದ್ದರೆಂದು ಕಾಣುತ್ತದೆ. ಆದ್ದರಿಂದಲೇ ಸುರರು ಮಾಡುವ ತಪಸ್ಸಿಗಿಂತ ಅಸುರರು ಮಾಡುವ ತಪಸ್ಸುಗಳಲ್ಲಿ ಬ್ರಹ್ಮನು ಪ್ರತ್ಯಕ್ಷವಾಗಿ ವರಗಳನ್ನು ಕೊಟ್ಟ ಉದಾಹರಣೆಗಳನ್ನು ಕಾಣುವುದುಂಟು. ಬ್ರಹ್ಮನು ವರ ಕೊಟ್ಟಾದ ಮೇಲೆ ಅದೇ ಅಸುರರ ಸಂಗಡ ವಿಷ್ಣುವು ನಾನಾ ರೂಪಗಳಿಂದ ಹೊಡೆದಾಡಿ ಅವರನ್ನು ಕೊಲ್ಲುವ ಉಲ್ಲೇಖಗಳುಂಟು. ಬ್ರಹ್ಮನು ದೇವತೆಯೇ ಆದ ಪಕ್ಷದಲ್ಲಿ, ಅದೇ ದೇವತೆಯ ಪಕ್ಷವಾದ ವಿಷ್ಣುವು ಕೊಲ್ಲುವುದು ವಿಚಿತ್ರವೇನಲ್ಲ, ಆದರೆ ಆ ಬ್ರಹ್ಮಪದವಿಯಲ್ಲಿರುವವನು ಆರ್ಯನಲ್ಲ ಎಂದು ತೋರುತ್ತದೆ.


ಇಂದ್ರ ಪದವಿಯಲ್ಲಿ ಒಬ್ಬನೇ ಇಂದ್ರನಲ್ಲದೇ ಅನೇಕರು ಬಂದು ಹೋಗಿದ್ದಿರಬಹುದಾದ ಉದಾಹರಣೆಗಳಿದ್ದಂತೆ, ಬ್ರಹ್ಮ ಪದವಿಯೂ ಕೂಡ ವಿವಿಧ ಪ್ರತ್ಯೇಕ ವ್ಯಕ್ತಿಗಳಿಗೆ ಅರ್ಪಿತವಾಗಿದ್ದಿರಬಹುದು.

ಶಿವನು ಮೃಗಧರನಾದ ಕತೆಗೆ ಬ್ರಹ್ಮನನ್ನು ಜೋಡಿಸುವ ಉಪಕತೆಯು ಪುರಾಣಗಳಲ್ಲಿ ಕಂಡುಬರುತ್ತದೆ. ಅದೆಂದರೆ, ಬ್ರಹ್ಮನು ತಾನೇ ಸೃಷ್ಟಿಸಿದ ಸರಸ್ವತಿಯನ್ನು ಕಾಮದಿಂದ ನೋಡಲು ಬಯಸಿದನೆಂದೂ, ಅವಳು ಹೆಣ್ಣು ಜಿಂಕೆಯಾಗಿ, ಶಿವನ ಬಳಿ ರಕ್ಷಣೆ ಬೇಡಿದಳೆಂದೂ, ಶಿವನು ಆ ಜಿಂಕೆಯನ್ನು ತನ್ನ ತೊಡೆಯ ಮೇಲಿಟ್ಟುಕೊಂಡು ರಕ್ಷಿಸಿ ಬ್ರಹ್ಮನನ್ನು ಬಾಣಗಳಿಂದ ಹೊಡೆದೋಡಿಸಿದನೆಂದೂ, ಇದರಿಂದ ಶಿವನಿಗೆ ಮೃಗಧರನೆಂದು ಹೆಸರು ಬಂತೆಂದೂ ಹೇಳಲಾಗುವುದು.

ಇದನ್ನು ವಾಸ್ತವ ನೆಲೆಗಟ್ಟಿನಿಂದ ನೋಡಿದಾಗ, ಒಂದು ಪಶು ಲಾಂಛನದ ಬುಡಕಟ್ಟಿನ ಹೆಣ್ಣನ್ನು ಬ್ರಹ್ಮನೆಂಬ ಪದವಿಯನ್ನು ಪಡೆದಿದ್ದ ಬ್ರಾಹ್ಮಣಾಧಿಕ್ಯ ಪುರೋಹಿತನು ವಶಪಡಿಸಿಕೊಳ್ಳಲು ನೋಡಿದಾಗ, ಬೇಟೆಗಾರ ಬುಡಕಟ್ಟಿನವರು ಆಕೆಯನ್ನು ರಕ್ಷಿಸಿದ್ದಿರಬಹುದು.

ಅದೇನೇ ಇರಲಿ, ಮಾತೃ ಪ್ರಧಾನವಾದ ತಾತ್ವಿಕ ನೆಲೆಗಟ್ಟನಿಂದ, ಪುರುಷಪ್ರಧಾನ ತಾತ್ವಿಕ ಚಿಂತನೆಗೆ ಒಯ್ದ ಸಾಮಾಜಿಕ ಪರಿಕಲ್ಪನೆ ಈ ಬ್ರಹ್ಮನದು ಎಂಬುವುದರಲ್ಲಿ ನನಗೆ ಸಂದೇಹವಿಲ್ಲ. ■

ಅಲೆಕ್ಸಾಂಡರ್ ಮತ್ತು ಮೋದಿ ದೇಶದ ಇತಿಹಾಸ ಅರಿಯದ 'ದೇಶಪ್ರೇಮಿ'



ತಾನು ಭಾರಿ ಪುಸ್ತಕಗಳನ್ನು ಓದುತ್ತೇನೆ ಎಂಬಂತೆ reuters ಸುದ್ದಿ ಸಂಸ್ಥೆಗೆ ಪೋಸ್ ಕೊಟ್ಟ ಬೂಸಿ ಬಸ್ಯ


ಜನಪ್ರಿಯನಾಗುವ ಆತುರದಲ್ಲಿರುವ ಮೋದಿ ಭಾರಿ ಎಡವಟ್ಟುಗಳನ್ನು ಮಾಡಿ ಜನರ ಅಪಹಾಸ್ಯಕ್ಕೆ ಗುರಿಯಾಗುತ್ತಿದ್ದಾನೆ. ಅಕ್ಟೋಬರ್ 27, 2013ರಂದು ಬಿಹಾರದ ಪಾಟನಾದಲ್ಲಿ ಮೋದಿ ಪಡೆಯ 'ಹೂಂಕಾರ ರ‍್ಯಾಲಿ' ನಡೆಯಿತಷ್ಟೆ. ಪ್ರೈಮರಿ ಶಾಲೆಯ ಮಗುವೊಂದು ಟಿವಿಯಲ್ಲಿ ಮೋದಿ ಭಾಷಣ ನೋಡಿತು. ಗೊಂದಲಕ್ಕೀಡಾಗಿ ಅಮ್ಮನಲ್ಲಿ ಹೇಳಿತು "ಅಮ್ಮಾ ಅಮ್ಮಾ, ಹಿಂದಿನ ಕಾಲದ ಫೇಮಸ್ ವಿಶ್ವವಿದ್ಯಾಲಯವಾದ ತಕ್ಷಶಿಲೆ ಇರುವುದು ಪಾಕಿಸ್ತಾನದ ಪಂಜಾಬ್ ಪ್ರಾಂತದಲ್ಲಮ್ಮಾ. ಹಾಗಂತ ನಮ್ಮ ಟೀಚರೇ ಹೇಳಿದ್ದಾರಮ್ಮ. ಆದರೆ ಇವನು ಮಾತ್ರ ತಕ್ಷಶಿಲೆ ಬಿಹಾರ್‌ನಲ್ಲಿದೆ ಅಂತ ಹೇಳ್ತಿದಾನಲ್ಲಾ? ಮತ್ತೆ ಅಲೆಕ್ಸಾಂಡರ್ ದಿ ಗ್ರೇಟ್ ಗಂಗಾ ನದಿ ಬಯಲಿನವರೆಗೆ ಬಂದಿದ್ದ; ಬಿಹಾರಿಗಳು ಅವನನ್ನು ಸೋಲಿಸಿದರು ಅಂತಲೂ ಹೇಳ್ತಿದಾನೆ. ನಮ್ಮ ಪಠ್ಯಪುಸ್ತಕದಲ್ಲಿ ಹೀಗೆ ಬರೆದಿಲ್ಲವಲ್ಲಾ? ಅಲೆಕ್ಸಾಂಡರ್ ಸಿಂಧೂ ನದಿಯಿಂದ ಈಚೆಗೆ ಬಂದೇ ಇರಲಿಲ್ಲ. ಅವನು ಝೀಲಂ ನದಿ ಕ್ರಾಸ್ ಮಾಡಿ ಪಂಜಾಬ್‌ನ ಅರಸ ಪೋರಸ್ ವಿರುದ್ಧ ಯುದ್ಧ ಮಾಡಿದ್ದ. ಇದೇ ಅವನ ಲಾಸ್ಟ್ ಯುದ್ಧ. ಯಾಕಂದ್ರೆ ಬಿಯಾಸ್ ಉಪನದಿವರೆಗೆ ಹೋಗಿದ್ರೂ ಅಲ್ಲಿಗೆ ಮುಟ್ಟಿದಾಗ ಅವನ ಸೋಲ್ಜರ್ಸ್ ಬಂಡಾಯವೆದ್ರು. ಹಾಗಾಗಿ ಅಲೆಕ್ಸಾಂಡರ್ ತನ್ನೂರಿಗೆ ವಾಪಸ್ ಹೋದ ಅಂತ ಟೀಚರ್ ಕೂಡ ಕಲಿಸಿದ್ದಾರಮ್ಮಾ. ಅಷ್ಟೇ ಅಲ್ಲಮ್ಮಾ, ಇವನು ಚಂದ್ರಗುಪ್ತ ಮೌರ್ಯ ಗುಪ್ತ ವಂಶದ ಅರಸ; ಆತನ ಆಡಳಿತ ಕಾಲ ಸುವರ್ಣಯುಗವಾಗಿತ್ತು ಅಂತ ಕೂಡ ಹೇಳ್ತಿದಾನೆ. ಆದರೆ ಚಂದ್ರಗುಪ್ತ ಮೌರ್ಯ ಗುಪ್ತ ವಂಶದವನಲ್ಲ, ಮೌರ್ಯ ವಂಶದ ರಾಜನಮ್ಮಾ! ಸುವರ್ಣಯುಗವೆಂದು ಕರೆಯುವುದು ಸುಮಾರು 700 ವರ್ಷಗಳ ನಂತರ ಆಳಿದ ಗುಪ್ತ ವಂಶದ ಇಮ್ಮಡಿ ಚಂದ್ರಗುಪ್ತನ ಕಾಲವನ್ನಮ್ಮಾ. ನಮ್ಮ ಟೆಕ್ಸ್ಟ್‌ಬುಕ್‌ನಲ್ಲಿ ಎಲ್ಲವೂ ಇದೆ ನೋಡಮ್ಮಾ! ಹಾಗಾದರೆ ಇವನಿಗೆ ಸೊನ್ನೆ ಮಾರ್ಕ್ ಕೊಡಬೇಕಲ್ವಾ?!"

ಮೋದಿಯ ಇತಿಹಾಸಪ್ರಜ್ಞೆ ಎಷ್ಟೊಂದು ಕೆಳಮಟ್ಟದಲ್ಲಿದೆ ಎನ್ನುವುದಕ್ಕೆ ಇನ್ನೂ ಎರಡು ನಿದರ್ಶನ ಇಲ್ಲಿದೆ.

ಬೂದಿ ಬಾಬಾ


* ಇತ್ತೀಚೆಗೆ ದೈನಿಕ್ ಭಾಸ್ಕರ್ ಎಂಬ ಪತ್ರಿಕೆ ಜೊತೆ ಮಾತನಾಡಿದ ಮೋದಿ, ಸರ್ದಾರ್ ಪಟೇಲರ ಅಂತ್ಯಸಂಸ್ಕಾರಕ್ಕೆ ನೆಹರೂ ಹೋಗಿರಲಿಲ್ಲವೆಂದು ಬೊಗಳೆ ಬಿಟ್ಟ. ಸತ್ಯ ಏನೆಂದರೆ ಅಂದು ಮುಂಬಯಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ನೆಹರೂ ಮತ್ತು ರಾಷ್ಟ್ರಾಧ್ಯಕ್ಷ ರಾಜೇಂದ್ರ ಪ್ರಸಾದ್ ಇಬ್ಬರೂ ಭಾಗವಹಿಸಿದ್ದರು! ಇದನ್ನು ಮುಂಬಯಿ ಪ್ರಾಂತದ ಮುಖ್ಯಮಂತ್ರಿಯಾಗಿದ್ದ ಮೊರಾರ್ಜಿ ದೇಸಾಯಿಯವರೆ ತನ್ನ ಆತ್ಮಕತೆಯಲ್ಲಿ ಬರೆದಿದ್ದಾರೆ. ಇಷ್ಟೇ ಅಲ್ಲ, ಅವರಿಬ್ಬರು ಮುಂಬಯಿಗೆ ಬಂದಿದ್ದ ಸುದ್ದಿ ಹಾಗೂ ನೆಹರೂರ ಸಂತಾಪದ ವಾಕ್ಯಗಳು ಅಂದಿನ ಟೈಮ್ಸ್ ಆಫ್ ಇಂಡಿಯ ಪತ್ರಿಕೆಯಲ್ಲೂ ಪ್ರಕಟವಾಗಿವೆ!

* ನವಂಬರ್ 10ರಂದು ಗುಜರಾತ್‌ನ ಬಾಲಸಿನೋರ್ ಎಂಬಲ್ಲಿ ಆಸ್ಪತ್ರೆಯೊಂದರ ಉದ್ಘಾಟನೆಯ ಸಂದರ್ಭದಲ್ಲಿ ಮೋದಿ ಬಾಯಿಂದ ಉದುರಿದ ನುಡಿಮುತ್ತುಗಳನ್ನು ನೋಡಿ: '... ಗುಜರಾತ್‌ನ ಹೆಮ್ಮೆಯ ಪುತ್ರ ಶ್ಯಾಮ್ ಪ್ರಸಾದ್ ಮುಖರ್ಜಿ ಭಾರತೀಯ ಕ್ರಾಂತಿಕಾರಿಗಳ ಗುರುವೆಂದು ಪರಿಗಣಿಸಲ್ಪಟ್ಟಿದ್ದರು. ... ಅವರು ಲಂಡನ್‌ನಲ್ಲಿ ಇಂಡಿಯಾ ಹೌಸ್ ... ಕ್ರಾಂತಿಕಾರಿ ಸಂಘಟನೆಯನ್ನೂ ಸ್ಥಾಪಿಸಿದ್ದರು. ... ಅವರು 1930 ... ಸ್ವಿಟ್ಜರ್‌ಲ್ಯಾಂಡ್‌ನ ಜಿನೀವಾದಲ್ಲಿ ತೀರಿಕೊಂಡರು. ... ... ಆ... ನಮ್ಮ ಸರ್ಕಾರ ಮಾತ್ರ ಅವರ ಅಸ್ಥಿಯನ್ನು ಭಾರತಕ್ಕೆ ತ... ಇಲ್ಲ. ... ಆ ಕೆಲಸವನ್ನು 2003ರಲ್ಲಿ ನಾನು ಮಾಡಿ...' ಎಂದು ಮುಂತಾಗಿ ಉದ್ದುದ್ದ ಭಾಷಣ ಬಿಗಿದ! ಆ... ಶ್ಯಾಮಾ ಪ್ರಸಾದ್ ಮುಖರ್ಜಿ ಹುಟ್ಟಿದ್ದು ಬಂಗಾಳದಲ್ಲಿ, ಆ... ಓರ್ವ ಬಂಗಾಳಿ. ಗುಜರಾತಿ ಅಲ್ಲ, ಜನ ಸಂಘದ ಸ್ಥಾಪಕ... ಸಂಘಪರಿವಾರದ ಓರ್ವ ಸುಪ್ರಸಿದ್ಧ ನಾಯಕನೂ ಆಗಿದ್ದ ಅ... 1953ರಲ್ಲಿ ಭಾರತದಲ್ಲೇ ವಿಧಿವಶರಾದರು. 1930ರಲ್ಲಿ ... ಅಸಲಿಗೆ ಮೋದಿ ಹೇಳುತ್ತಿದ್ದುದು ಶ್ಯಾಮಾಜಿ ಕೃಷ್ಣ ವ... ಎಂಬ ಗುಜರಾತಿ ಸಂಸ್ಕೃತ ಪಂಡಿತನ ಕತೆಯನ್ನು!!



ಖೊಟ್ಟಿ ಅನುಕಂಪ

ಮೋದಿ ಹೇಳುತ್ತಿರುವ ಸುಳ್ಳುಗಳ ಸರಣಿಗೆ ಸಪ್ಟಂಬರ್ 15, 201... ಭಾಷಣವೂ ಸೇರುತ್ತದೆ. ಪ್ರಧಾನಿ ಅಭ್ಯರ್ಥಿಯಾಗಿ ಘೋಷಿಸಲ್ಪಟ್ಟ ನ... ಗುಜರಾತ್‌ನ ರೇವಾರಿ ಎಂಬಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಮಾತನಾಡ... ಕಚ್‌ನಲ್ಲಿ ಭಾರತ ಪಾಕಿಸ್ತಾನಗಳ ಗಡಿಯಲ್ಲಿರುವ ನಮ್ಮ ಯೋಧರಿಗಾಗಿ 7... ಕಿಮೀ ದೂರದಿಂದ ಕುಡಿಯುವ ನೀರು ತರುವ ಏರ್ಪಾಟು ಮಾಡಿ... ತಾನೆಂದು ಕೊಚ್ಚಿಕೊಂಡ. ಒಂಟೆಗಳ ಮೇಲೆ ನೀರು ಸಾಗಿಸಬೇಕಾ... ಪರಿಸ್ಥಿತಿಯನ್ನು ಕಂಡು ತಡೆಯಲಾರದೆ ಯೋಜನೆಯನ್ನು ಆರಂಭಿಸಿದೆ ಎಂ... ಕಣ್ಣೀರು ಹಾಕಿದ. ಆದರೆ ವಾಸ್ತವವೇನು? ನರ್ಮದಾ ನದಿಯ ನೀರನ್ನು 7... ಕಿಮೀ ಉದ್ದದ ಪೈಪ್‌ಲೈನ್ ಮೂಲಕ ಸುರೇಂದ್ರನಗರ, ಜಾಮ್‌ನಗರ, ... ಜಿಲ್ಲೆಗಳಿಗೆ ಮತ್ತು ಗಡಿಪ್ರದೇಶಗಳಿಗೆ ತರುವ ಯೋಜನೆಯನ್ನು ಆರಂಭಿಸಿದ... ದಿವಂಗತ ಪ್ರಧಾನಿ ರಾಜೀವ್ ಗಾಂಧಿ. ಯೋಜನೆಯ ನೀಲನಕ್ಷೆ 1999... ಸಿದ್ಧವಾಗಿತ್ತು, ಕಾಮಗಾರಿಯನ್ನು 2001ರ ಆರಂಭದಲ್ಲಿ ಅಂದಿನ ಮುಖ್ಯಮ... ಕೇಶುಭಾಯಿ ಪಟೇಲ್ ಉದ್ಘಾಟಿಸಿದ್ದರು. ಮುಂದಿನ ಎರಡು ವರ್ಷಗ... ಕಚ್‌ನ ರಾಪಾರ್ ಎಂಬಲ್ಲಿಗೆ ನೀರು ತಲುಪಿದೆ. ಆ ಸಂದರ್ಭದಲ್ಲಿ ಮಾತನಾ... ಮೋದಿ ಇಡೀ ಯೋಜನೆಯ ರೂವಾರಿಯಾದ ರಾಜೀವ್ ಗಾಂಧಿಗೆ ಅಭಿನಂ... ಸಲ್ಲಿಸಿದ್ದ. ರಾಪಾರ್‌ನಿಂದ ಗಡಿ ಪ್ರದೇಶಕ್ಕೆ ಮತ್ತೂ 100 ಕಿಮೀ ದೂರ. 100 ಕಿಮೀ ಪೈಪ್‌ಲೈನ್ ಕೆಲಸ ಮುಗಿಸಲು 10 ವರ್ಷಗಳು ಹಿಡಿದಿ... ಅದೂ ಮೋದಿ ಆಡಳಿತ ಕಾಲದಲ್ಲಿ. ಇಷ್ಟು ಸಾಲದೆ ಮೋದಿಯ ಅನುಕಂಪ... ಬರೀ ಖೊಟ್ಟಿ ಎನ್ನುವುದನ್ನು ಸಾಬೀತು ಮಾಡಲು?



ಸರ್ಪಸಂಸ್ಕಾರಕ್ಕೂ 'ಭಾರತ ರತ್ನ'!

ಸಚಿನ್ ತೆಂಡೂಲ್ಕರ್‌ಗೆ ಭಾರತ ರತ್ನ ಕೊಟ್ಟಿದ್ದಕ್ಕೆ ಅಭ್ಯಂತರವಿಲ್ಲ. ಆದರೆ ಟೈಮಿಂಗ್ ಸರಿ ಇಲ್ಲ ಅಷ್ಟೇ. ಕಾರಣ ಸಚಿನ್ ಕಾಂಗ್ರೆಸ್ ಪಕ್ಷದ ರಾಜ್ಯಸಭಾ ಸದಸ್ಯ. ಮೇಲಾಗಿ ಈಗ ಉತ್ತರದ ಐದು ರಾಜ್ಯಗಳಿಗೆ ವಿಧಾನ ಸಭೆ ಚುನಾವಣೆ ನಡೆಯುತ್ತಿದೆ. ಹಾಗಾಗಿ ಯುಪಿಎ ಸರಕಾರವು ತನ್ನದೇ ಪಕ್ಷದ ಸಂಸದನಿಗೆ ಭಾರತ ರತ್ನ ನೀಡಿರುವುದು ಈ ಚುನಾವಣೆಯ ಮೇಲೆ ಪ್ರಭಾವ ಬೀರುವ ಮುಖ್ಯ ಉದ್ದೇಶದಿಂದ ಎಂಬ ಆಪಾದನೆ ಬಂದಿರುವುದು ಭಾರತ ರತ್ನದಂತಹ ಅತ್ಯುನ್ನತ ಪ್ರಶಸ್ತಿಯ ಪ್ರಾಮುಖ್ಯತೆಯನ್ನು ಮಸುಕುಗೊಳಿಸಿದೆ. ಭಾರತ ರತ್ನಕ್ಕೆ ಪಕ್ಷ ರಾಜಕೀಯದ ಸೋಂಕು ಅಂಟಿದಂತೆ ಜನರಿಗೆ ಕಾಣಿಸುತ್ತಿದೆ. ಮುಂದಿನ ಜನವರಿಯಲ್ಲಿ ಪ್ರಜಾತಂತ್ರ ದಿನದಂದು ಇದನ್ನು ಕೊಟ್ಟಿದ್ದರೆ ಸರಿಯಾಗಿರುತಿತ್ತು.



ಕ್ರಿಕೆಟ್ ಎಷ್ಟಾದರೂ ಮನರಂಜನೆಯ ಕ್ಷೇತ್ರ. ಭಾರತದ ಅಭಿವೃದ್ಧಿಗೆ ಅಥವಾ ಸಾಮಾಜಿಕ ವಿಕಾಸಕ್ಕೆ ಕ್ರಿಕೆಟನಿಂದ ಏನೂ ಪ್ರಯೋಜನವಿಲ್ಲ. ಸಾಮಾನ್ಯ ಮನರಂಜನೆ ಕ್ಷೇತ್ರಕ್ಕೆ ಭಾರತ ರತ್ನದಂತಹ ಪ್ರಶಸ್ತಿ ಸರಿಯೇ? ಸಿ.ಎನ್.ಆರ್.ರಾವ್ ಅವರಿಗೆ ಕೊಟ್ಟಿರುವ ಭಾರತ ರತ್ನ ಪ್ರಶಸ್ತಿ ಅತ್ಯಂತ ಸಮಂಜಸ. ಭಾರತದ ವಿಜ್ಞಾನ ಕ್ಷೇತ್ರಕ್ಕೆ ಅವರು ಕೊಟ್ಟ ಕಾಣಿಕೆ ಅಪರಿಮಿತ. ವಿಜ್ಞಾನಕ್ಕೆ ಹೋಲಿಸಿದರೆ ಕ್ರಿಕೆಟ್ ಬರೀ ಯಕಶ್ಚಿತ. ಅದು ಯುವಜನರ ಸಮಯ ವ್ಯರ್ಥ ಮಾಡುವ ಒಂದು ಮನರಂಜನೆಯ ಸಾಧನ ಅಷ್ಟೇ. ಕ್ರಿಕೆಟ್ ಆಡುವುದು ಕೇವಲ ಒಂಬತ್ತು ದೇಶಗಳು ಮಾತ್ರ. ಅದೂ ಇಂಗ್ಲೆಂಡ್ ಹೊರತುಪಡಿಸಿ ಬೇರೆಲ್ಲಾ ದೇಶಗಳು ಹಿಂದುಳಿದ ದೇಶಗಳು. ಈ ಒಂಬತ್ತರಲ್ಲಿ ನಾಲ್ಕು ದೇಶಗಳು ಕೇವಲ ಭಾರತ ಉಪಖಂಡದಲ್ಲಿವೆ. ಅಮೆರಿಕಾ, ರಶಿಯಾ, ಜರ್ಮನಿ, ಚೀನದಂತಹಾ ಬೃಹತ್ ದೇಶಗಳಲ್ಲಿ ಯಾರೂ ಕ್ರಿಕೆಟ್ ಆಡುವುದಿಲ್ಲ. ಇದಕ್ಕೆ ಹೋಲಿಸಿದರೆ ಹಾಕೀ ಆಟವನ್ನು ಬಹಳ ದೇಶಗಳು ಆಡುತ್ತವೆ. ಒಲಂಪಿಕ್ಸ್‌ನಲ್ಲಿ ಭಾರತವೆಂದರೆ ಹಾಕೀ; ಹಾಕೀ ಎಂದರೆ ಭಾರತ ಎಂಬ ಕಾಲವೊಂದಿತ್ತು. ಧ್ಯಾನಚಂದ್‌ರಂತಹ ಆಟಗಾರರು ಮೈದಾನಕ್ಕೆ ಇಳಿದಾಗ ಎಲ್ಲಾ ದೇಶದ ಪ್ರೇಕ್ಷಕರು ಎದ್ದು ನಿಂತು ಗೌರವ ಸಲ್ಲಿಸುತ್ತಿದ್ದರು. ಭಾರತ ದೇಶಕ್ಕೆ ಇಷ್ಟೊಂದು ಗೌರವ ತಂದು ಕೊಟ್ಟ ಧ್ಯಾನಚಂದರಿಗೆ ಕೊಡದ ಭಾರತ ರತ್ನ ಸಚಿನರಿಗೆ ಕೊಟ್ಟದ್ದು ವಿವಾದ ಹುಟ್ಟು ಹಾಕಿದೆ. ಚೆಸ್ ಆಟದಲ್ಲಿ ಭಾರತಕ್ಕೆ ವಿಶ್ವವಿಜೇತ ಪಟ್ಟ ತಂದು ಕೊಟ್ಟ ವಿಶ್ವನಾಥನ್ ಆನಂದ್ ವಿದೇಶದಲ್ಲಿ ಎಲ್ಲರಿಗೂ ಗೊತ್ತು ಆದರೆ ಸಚಿನ್ ಯಾರೆಂದು ವಿದೇಶದಲ್ಲಿ ಹೆಚ್ಚಿನವರಿಗೆ ಗೊತ್ತಿಲ್ಲ. ಭಾರತ ರತ್ನ ಪಡೆದ ವಿಜ್ಞಾನಿಗಳು ಮಂಗಳ ಗ್ರಹಕ್ಕೆ ರಾಕೆಟ್ ಹಾರಿಸಬಲ್ಲರು. ಆದರೆ ಭಾರತ ರತ್ನ ಪಡೆದ ಕ್ರಿಕೆಟಿಗರು ಕೇವಲ ದೀಪಾವಳಿ ರಾಕೆಟ್ ಮಾತ್ರ ಉಡಾಯಿಸಬಲ್ಲರು!

ಸರ್ಪಸಂಸ್ಕಾರದಂತಹ ಮೂಢನಂಬಿಕೆಯು ಮೊದಲು ಕೇವಲ ಕರಾವಳಿಯ ತುಳು ಜನರಲ್ಲಿ ಮಾತ್ರ ಇತ್ತು. ಆದರೆ ಸಚಿನರಿಂದಾಗಿ ಈ ಮೌಢ್ಯ ಇಡೀ ಭಾರತಕ್ಕೆ ಪಸರಿಸಿತು. ಅಂದರೆ ಭಾರತ ರತ್ನ ಪ್ರಶಸ್ತಿಯು ಭಾರೀ ಮೌಢ್ಯದ ಪ್ರಸಾರಕ್ಕೂ ಸಲ್ಲುತ್ತದೆ ಎಂದಂತಾಯಿತು.

-ಪ್ರವೀಣ್ ಎಸ್. ಶೆಟ್ಟಿ, ಮಂಗಳೂರು

ಭಾರತ ರತ್ನಕ್ಕೆ ಅರಸರು ಅರ್ಹರಲ್ಲವೇ?

ವಿಜ್ಞಾನಿ ಸಿ.ಎನ್.ಆರ್.ರಾವ್ ಅವರಿಗೆ ಭಾರತ ರತ್ನ ನೀಡಿದ್ದು ಅಷ್ಟೇನೂ ವಿವಾದಾತ್ಮಕವಲ್ಲ. ಕ್ರಿಕೆಟರ್ ಸಚಿನ್ ತೆಂಡೂಲ್ಕರ್‌ಗೆ ನೀಡಿದ್ದರ ಬಗ್ಗೆ ಚರ್ಚೆ ಬೇಕಿಲ್ಲ, ಇದು ಯು.ಪಿ.ಎ ಸರ್ಕಾರದ ವಿವೇಚನೆಗೆ ಬಿಟ್ಟದ್ದು...

ನಿತೀಶ್ ಕುಮಾರ್ ಹಾಗೂ ಫಾರೂಕ್ ಅಬ್ದುಲ್ಲಾ ಅವರು ಅಟಲ್ ಬಿಹಾರಿ ವಾಜಪೇಯಿಯವರಿಗೆ ಭಾರತ ರತ್ನ ನೀಡಬೇಕೆಂದು ಈಚೆಗೆ ಹೇಳಿರುವುದು ಅದು ಅವರ ಮನದಾಳದ ಆಶಯವೋ, ವ್ಯಂಗ್ಯವೋ ಅಥವಾ ತಾವು ಪಕ್ಷಾತೀತರೆಂದು ತೋರಿಸಿಕೊಳ್ಳುವ ಕಾತುರವೋ, ಯು.ಪಿ.ಎ ಸರ್ಕಾರವನ್ನು ಮುಜುಗರಕ್ಕೆ ಸಿಕ್ಕಿಸುವ ರಾಜಕಾರಣವೋ ಒಂದೂ ಅರ್ಥವಾಗುತ್ತಿಲ್ಲ.

ಡಾ.ಬಾಬಾಸಾಹೇಬ್ ಅಂಬೇಡ್ಕರ್ ಅವರಿಗೆ ಮರಣೋತ್ತರ ಭಾರತ ರತ್ನ ನೀಡಿದ ನಂತರ ಈ ಪುರಸ್ಕಾರಕ್ಕೆ ಘನತೆ ಹೆಚ್ಚಿದ್ದು ನಿಜ. ಅಂತೆಯೇ ಈ ರಾಷ್ಟ್ರದಲ್ಲಿ ಅಸಮಾನತೆಗಳನ್ನು ಅಳಿಸಲು ಪ್ರಯತ್ನಿಸಿದ ಜ್ಯೋತಿಬಾ ಫುಲೆ, ಸಾವಿತ್ರಿಬಾ ಫುಲೆ, ಪೆರಿಯಾರ್, ಲೋಹಿಯಾ, ಕಾನ್ಶಿರಾಂರಂತಹ ಅನೇಕರಿಗೆ ಈ ಪುರಸ್ಕಾರ ದಕ್ಕಬೇಕಿದ್ದು ಈವರೆಗೆ ದಕ್ಕದೇ ಇದ್ದದ್ದಕ್ಕೆ ಕಾರಣಗಳನ್ನು ಹುಡುಕ ಬೇಕಿಲ್ಲವಷ್ಟೆ.

ಆದರೆ ಕಾಂಗ್ರೆಸ್‌ನವರೇ ಆಗಿದ್ದು ತನ್ನ ಒಡಲಲ್ಲಿ ಅಂಬೇಡ್ಕರ್, ಫುಲೆ, ಪೆರಿಯಾರ್‌ಗಳನ್ನು ಇಟ್ಟುಕೊಂಡು ಈ ನೆಲದ ಅಸಹಾಯಕರಾದ 'ಅಹಿಂದ' ವರ್ಗಗಳಿಗೆ ಧ್ವನಿ ನೀಡಿದ್ದು ದೇವರಾಜ ಅರಸು ಎಂಬುದನ್ನು ಅವರ ವಿರೋಧಿಗಳೂ ಒಪ್ಪಿಕೊಳ್ಳುತ್ತಾರೆ. ಅರಸು ಇಲ್ಲಿ ಹುಟ್ಟಿರ ದಿದ್ದರೆ ಇಲ್ಲಿನ ಹಿಂದುಳಿದ ವರ್ಗಗಳು, ದಲಿತರು ಹಾಗೂ ಅಲ್ಪಸಂಖ್ಯಾತರ ಪರಿಸ್ಥಿತಿ ಕಲ್ಪಿಸಿಕೊಳ್ಳಲಿಕ್ಕೂ ಕಷ್ಟವಾಗಿರುತಿತ್ತು. ಇಂದು ಆಡಳಿತ, ನ್ಯಾಯಾಂಗ, ಶಾಸಕಾಂಗಗಳಲ್ಲಿ ಬಹು ಜನರಾದ ಹಿಂದುಳಿದವರು ತಲೆಎತ್ತಿ ನಿಂತಿರುವುದು ಅರಸರಿಂದಾಗಿ ಎನ್ನುವುದು ಕಟುಸತ್ಯ.

ಇಂದು ಅಹಿಂದ ನಾಯಕ ಸಿದ್ಧರಾಮಯ್ಯನವರು ಮುಖ್ಯಮಂತ್ರಿಯಾಗಲಿಕ್ಕೂ ಅರಸರ ಕಾಣ್ಕೆ ಪ್ರತ್ಯಕ್ಷವಾಗೋ, ಪರೋಕ್ಷವಾಗೋ ಇದ್ದೇ ಇದೆ ಎನ್ನುವುದು ಎಲ್ಲರಿಗೂ ಗೊತ್ತಿದೆ. ಸಿದ್ಧರಾಮಯ್ಯನವರು ತಮ್ಮ ಕ್ಯಾಬಿನೆಟ್‌ನಲ್ಲಿ ಅರಸರಿಗೆ ಭಾರತ ರತ್ನ ನೀಡಬೇಕೆಂಬ ನಿರ್ಣಯ ಅಂಗೀಕರಿಸಿ ಅವರದೇ ಕೇಂದ್ರ ಸರ್ಕಾರಕ್ಕೆ ಕಳಿಸಿಕೊಟ್ಟರೆ ಇದು ಅಸಾಧ್ಯವಾಗುವುದಿಲ್ಲ.

ದೇವರಾಜ ಅರಸರಿಗೆ ಭಾರತ ರತ್ನ ನೀಡಬೇಕೆಂಬ ಆಶಯ ಇಡೀ ಕರ್ನಾಟಕದ ಬಹುಸಂಖ್ಯಾತರಾದ ಬಹು ಜನರ ಆಶಯವೆಂಬುದು ನೆನಪಿನಲ್ಲಿಡಬೇಕಾದ ವಾಸ್ತವ...

-ಸಿ.ಎಸ್.ದ್ವಾರಕಾನಾಥ್, ಬೆಂಗಳೂ...



ಮೌಢ್ಯಗಳನ್ನು ನಿಷೇಧಿಸುವುದು ಅವ...


ಕರ್ನಾಟಕ ಸರ್ಕಾರ ಮೂಢನಂಬಿಕೆಯ ವಿರ... ಮಹಾರಾಷ್ಟ್ರದ ಮಾದರಿಯಲ್ಲಿ ಕಾನೂನು ಮಾಡ... ಹೊರಟಿರುವುದು ವಿಪರ್ಯಾಸ. ಮಹಾರಾಷ್ಟ್ರ ಸಕಾ... 18 ವರ್ಷ ಚಳವಳಿ ಕಟ್ಟಿ, ಬೆಳೆಸಿ, ಮುನ್ನಡೆಸು... ನರೇಂದ್ರ ದಾಬೋಲ್ಕರ್‌ರ ಕೊಲೆಯ ನಂತರ ಆತು... ತುರವಾಗಿ 12 ಆಚರಣೆಗಳನ್ನು ಮಾತ್ರ ಮೂಢನಂ... ಗಳೆಂದು ತಿಳಿಸಿದೆ. ಆದರೆ ದಾಬೋಲ್ಕರ್ ಹೇಳಿದ ... ರಲ್ಲಿ 15 ಮೂಲೆಗುಂಪು ಮಾಡಿದೆ. ದಾಬೋಲ... ಅಂತವರಿಗೆ ರಕ್ಷಣೆಯ ಬಗ್ಗೆ ಯಾವುದೇ ವಿಧಾನಗಳ... ಮೂಢನಂಬಿಕೆಯ ಬಗ್ಗೆ ತರಬೇತಿ ಇಲ್ಲದ ಸಬ್ ಇನ್‌ಸ್ಪೆ... ರನ್ನು ವಿಚಾರಣೆಗೆ ನೇಮಿಸಿರುವುದು ಎಷ್ಟು ಸರಿ! ಇವೆಲ್ಲ... ಕಡೆಗೆ ಕರ್ನಾಟಕ ಸರ್ಕಾರ ಗಮನ ನೀಡಬೇಕಾಗಿದೆ.

ನಮ್ಮ ಸಂವಿಧಾನದಲ್ಲಿ ಕರ್ತವ್ಯಗಳಿಗಿಂತ ಹಕ್ಕುಗ... ಹೆಚ್ಚಿನ ಮಹತ್ವ ಇದೆ. ಹಕ್ಕುಚ್ಯುತಿಯಾದರೆ ಮೊಕದ್ದ... ಹೂಡಬಹುದು. ಆದರೆ ಕರ್ತವ್ಯಚ್ಯುತಿ ಮಾಡಿ... ಕಾನೂನುಕ್ರಮ ಜರುಗಿಸುವುದಿಲ್ಲ. ಸಂವಿಧಾನದ 51... ವಿಧಿಯಲ್ಲಿ ವೈಚಾರಿಕ ಮನೋಭಾವ ಬೆಳೆಸಿಕೊಳ್ಳುವ... ಮೂಲಭೂತ ಕರ್ತವ್ಯವಾಗಿದೆ. ಆದರೆ, ಧಾರ್ಮಿಕ ಸ್ವಾತ... ಹಕ್ಕುಗಳು ಸಹ ಮೂಲಭೂತ ಹಕ್ಕುಗಳಾಗಿರುವುದರ... ಹೆಚ್ಚಿನ ಮಹತ್ವ ಇದೆ. ಜೊತೆಗೆ 298 ವಿಧಿ ಕ... ಧಾರ್ಮಿಕ ಹಕ್ಕು ಮತ್ತು ನಂಬಿಕೆಗಳಿಗೆ ಧಕ್ಕೆ ತರಬಾರದೆಂ... ತಿಳಿಸುತ್ತದೆ.

ಧಾರ್ಮಿಕ ಹಕ್ಕನ್ನು ತಮ್ಮಗೆ ಇಷ್ಟಬಂದ ಹಾಗೆ ಬ... ಕೊಂಡು, ಮಾನವನ ಚಿಂತನಾಶಕ್ತಿಯನ್ನೆ ಪುರೋಹಿತ... ಮತ್ತು ಜೋತಿಷಿಗಳು ನಿಯಂತ್ರಿಸುತ್ತಿದ್ದಾರೆ. ಅವರು ಹ... ದಂತೆ ಎಲ್ಲವೂ, ಎಲ್ಲರೂ ಕೇಳುವಂತಾಗಿದೆ. ಕಾರ್ಪೋರೇ... ಕಂಪನಿಗಳನ್ನು ಕಾನೂನಿನೊಳಗೆ 'ವ್ಯಕ್ತಿ' ಎಂ... ಪರಿಗಣಿಸುವುದರಿಂದ ಸುಲಭವಾಗಿ ನುಣುಚಿಕೊಳ್ಳುತ್ತ... ಕಾರ್ಪೋರೇಟ್‌ಗಳು ಧಾರ್ಮಿಕ ಮುಖವಾಡಗಳ... ಹಾಕಿಕೊಂಡು ಬಾಬಾರಾಮ್, ರವಿಶಂಕರ್ ಗುರು... ಯಂತಹವರಿಗೆ ಮೊರೆಹೋಗಿದ್ದಾರೆ. ಅದೂ ಅಲ್ಲ... ಕಾನೂನು ಮಾಡಬೇಕಾದ ಕ್ಷೇತ್ರದಲ್ಲೇ ಮತ್ತು ವ್ಯಕ್ತಿಗಳಿಂದ... ಮೌಢ್ಯಗಳು ನಡೆಯುತ್ತಿವೆ.

ಇಷ್ಟೆಲ್ಲ ಅಡೆತಡೆಗಳಿದ್ದರೂ ನಮ್ಮ ರಾ... ಮೂಢನಂಬಿಕೆ ವಿರೋಧಿ ಕಾನೂನು ತುಂ... ಅವಶ್ಯಕವಾಗಿದೆ. ಭಯ ಮತ್ತು ಅರಿವಿನ ಕೊರತೆಯಿ... ಹುಟ್ಟಿಕೊಂಡ ಮೂಢ ನಂಬಿಕೆಗಳು ಜನರನ್ನು ತುಂ... ಬಾಧಿಸುತ್ತಿವೆ. ಜನರ ಆಲೋಚನೆಯನ್ನು ಕಟ್ಟಿಹಾಕು...

ಬೀದರ್‌ನಿಂದ ಬಂದ ಸಂಗೀತ ನಿರ್ದೇಶಕ-ವೀರ್ ಸಮರ್ಥ



ಸಂದರ್ಶನ

'ಶಿವಮಣಿ' ಚಿತ್ರದ 'ಮೊದಮೊದಲ ಮಾತು ಚಂದ ಕನವರಿಸೋ ಪ್ರೀತಿಗೆ...' ಹಾಗೂ 'ಕಾರಂಜಿ' ಚಿತ್ರದ 'ಈ ದಿನ ಹೊಸತಾಗಿದೆ..' ಹಾಡುಗಳ ಮೂಲಕ ಗಮನ ಸೆಳೆದು ಇದೀಗ 'ದ್ಯಾವ್ರೇ', 'ಪ್ರೀತಿ ಗೀತಿ ಇತ್ಯಾದಿ', 'ಸಾಫ್ಟ್‌ವೇರ್ ಗಂಡ', 'ಚಾರ್ಲಿ' ಚಿತ್ರಗಳಿಗೆ ಸಂಗೀತ ನೀಡಿರುವ ಭರವಸೆಯ ಸಂಗೀತ ನಿರ್ದೇಶಕ ವೀರ್ ಸಮರ್ಥ್ ಇಲ್ಲಿ ಮಾತಾಡಿದ್ದಾರೆ.

** ನಿಮ್ಮೂರು, ಕುಟುಂಬ, ವಿದ್ಯಾಭ್ಯಾಸದ ಕುರಿತು ಹೇಳ್ತೀರಾ?*

ಬೀದರ್ ಸಮೀಪದ ಬಕ್ಚೋಡಿ ಗ್ರಾಮ ನಮ್ಮೂರು. ತಂದೆ ಶಂಕರಪ್ಪ ನಿವೃತ್ತ ರೆವಿನ್ಯೂ ಇನ್ಸ್‌ಪೆಕ್ಟರ್. ತಾಯಿ ಬಸಮ್ಮ ಗೃಹಿಣಿ. ಓದಿದ್ದು ಬಿ.ಎ. ಜೊತೆಗೆ, ಮೀರಜ್ ಯೂನಿವರ್ಸಿಟಿಯಲ್ಲಿ ಸಂಗೀತ ವಿಶಾರದ ಪದವಿ ಮಾಡಿದ್ದೇನೆ. ಹಾಗೇನೆ ಸಂಗೀತ ವಿದ್ವತ್ತಿನಲ್ಲಿ ಡಿಪ್ಲೊಮಾ ಮುಗಿಸಿದ್ದೇನೆ.

** ನಿಮ್ಮ ಪ್ರಾಥಮಿಕ ಸಂಗೀತ ಕಲಿಕೆಯ ಬಗ್ಗೆ ಹೇಳ್ತೀರಾ?*

ನನಗೆ ಹದಿನೇಳು ವರ್ಷ ವಯಸ್ಸಿದ್ದಾಗ, ಬಲವಂತರಾವ್ ಕುಲಕರ್ಣಿ ಅನ್ನುವವರ ಹತ್ತಿರ ಹಿಂದೂಸ್ತಾನಿ ಸಂಗೀತ ಕಲಿಯಲು ಸೇರಿಕೊಂಡೆ. ಅವರ ಬಳಿ ಒಂದು ವರ್ಷ ಅಭ್ಯಾಸ ಮಾಡಿದ ನಂತರ, ಆಶಿತಾ ಘೋಷ್ ಹಾಗೂ ಸುರೇಖಾ ದತ್ ಮಹಾರಾಜ್ ಅನ್ನುವವರ ಬಳಿ ಕೆಲಕಾಲ ಅಭ್ಯಾಸ ಮಾಡಿದೆ. ಕೊನೆಗೆ ವಿದ್ವಾನ್ ದತ್ತು ಮಹಾರಾಜ್ ಅವರ ಶಿಷ್ಯನಾಗಿ ಸೇರಿಕೊಂಡೆ. ಈ ಎಲ್ಲರ ಬಳಿಯೂ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತಾಭ್ಯಾಸವನ್ನೇ ಮಾಡಿದ್ದು. ಆ ಕಾಲಕ್ಕೆ ದತ್ತು ಮಹಾರಾಜ್ ಅವರ ಬಳಿ ಶಿಷ್ಯನಾಗಿದ್ದು ನನ್ನ ಪಾಲಿಗೆ ಹೆಮ್ಮೆಯ ಸಂಗತಿ.

** ನಂತರದ ಘಟ್ಟದಲ್ಲಿ ಸಂಗೀತಾಭ್ಯಾಸದ ಪಥ ಮುಂದುವರಿದ ಬಗೆ ತಿಳಿಸುವಿರಾ?*

ನನಗೆ ಇಪ್ಪತ್ತೈದು ವರ್ಷ ವಯಸ್ಸಿದ್ದಾಗ, ಖ್ಯಾತ ಬಾಲಿವುಡ್ ಗಾಯಕ ಸುರೇಶ್ ವಾಡ್ಕರ್ ಅವರ ಬಳಿ ಸಂಗೀತ ಕಲಿಯುವ ಉದ್ದೇಶದಿಂದ ಮುಂಬೈಗೆ ಹೋದೆ. ಅದು ಹೇಗಾಯಿತೆಂದರೆ, ಯಾವುದೋ ಪತ್ರಿಕೆಯೊಂದರಲ್ಲಿ ಸುರೇಶ್ ವಾಡ್ಕರ್ ಅವರ ವಿಳಾಸ, ಫೋನ್ ನಂಬರ್ ಸಿಕ್ಕಿತು. ಆ ವೇಳೆಗೆ ಅವರು, ಅವರ ಗುರುಗಳ ಹೆಸರಿನಲ್ಲಿ ಮುಂಬಯಿಯ ಸಂತಾಕ್ರೂಜ್‌ನಲ್ಲಿ 'ಅಜಿವಸನ್ ಗುರುಕುಲ್' ಅನ್ನುವ ಸಂಸ್ಥೆ ನಡೆಸುತ್ತಿದ್ದರು. ಆ ಸಂಸ್ಥೆಯಲ್ಲಿ ಅನೇಕರು ಸಂಗೀತ ಕಲಿಯುತ್ತಿದ್ದರು. ನಾನೂ ಕೂಡ ಸುರೇಶ್ ವಾಡ್ಕರ್ ಅವರಿಗೆ ಡೈರೆಕ್ಟಾಗಿ ಫೋನ್ ಮಾಡಿದೆ. ಮುಂಬೈಗೆ ಬಂದು ಆಡಿಶನ್‌ನಲ್ಲಿ ಪಾಲ್ಗೊಳ್ಳುವಂತೆ ಹೇಳಿದರು. ಅದರಂತೆಯೇ ನಾನು ಮುಂಬೈಗೆ ಹೋದೆ. ಆಡಿಶನ್‌ನಲ್ಲಿ ಆಯ್ಕೆಯಾದೆ. ಸುರೇಶ್ ವಾಡ್ಕರ್ ಅವರ ಹತ್ತಿರ ಸೇರಿಕೊಂಡ ನಂತರ ಸಿನಿಮಾ ಹಾಡುಗಾರಿಕೆಯ ಟಚ್ ಸಿಕ್ಕಿತು. ನಾನು ಮೂಲತಃ ಗಾಯಕನಾಗಬೇಕೆಂದುಕೊಂಡಿದ್ದವನು.

** ನಿಮ್ಮ ಮುಂಬೈ ಬದುಕಿನ ಬಗ್ಗೆ ಇನ್ನಷ್ಟು ಹೇಳಿ...*

ಅಲ್ಲಿಂದ ಸಂಗೀತ ನಿರ್ದೇಶಕ ರವೀಂದ್ರ ಜೈನ್ ಅವರ ಬಳಿ ಶಿಷ್ಯನಾಗಿ ಸೇರಿಕೊಂಡೆ. ಸಿನಿಮಾ ಗೀತೆಗೆ ಟ್ಯೂನ್ ಹಾಕುವಾಗ ಅನುಸರಿಸಬೇಕಾದ ಅಂಶಗಳೇನು ಅನ್ನುವುದರ ಕುರಿತು ಅವರ ಬಳಿ ಗಮನಿಸಿದೆ. ಒಂದು ಹಾಡು, ಟ್ಯೂನ್‌ನಿಂದ ಹಿಡಿದು, ಮಾಸ್ಟರಿಂಗ್‌ವರೆಗಿನ ನಡುವೆ ತಾನು ಪಡೆದುಕೊಳ್ಳುವ ಸ್ವರೂಪಗಳ ಬಗ್ಗೆ ಗ್ರಹಿಸಿದೆ. ಆ ವೇಳೆಗೆ, ರವೀಂದ್ರ ಜೈನ್ ಅವರು ಅನೇಕ ಹಿಂದಿ, ಮರಾಠಿ, ಭೋಜ್‌ಪುರಿ ಸಿನಿಮಾಗಳು ಹಾಗೂ ಧಾರಾವಾಹಿಗಳಿಗೆ ಸಂಗೀತ ಕೊಡುತ್ತಿದ್ದರು. ಜೊತೆಗೆ ಸಾಕಷ್ಟು ಜೈನ್ ಭಜನ್‌ಗಳ ಆಲ್ಬಮ್‌ಗಳನ್ನೂ ಮಾಡುತ್ತಿದ್ದರು. ಅವುಗಳಲ್ಲಿ ನನಗೂ ಆಗಾಗ ಹಾಡುವ ಅವಕಾಶ ಕಲ್ಪಿಸಿಕೊಡುತ್ತಿದ್ದರು. ಹಾಗೆ ನೋಡಿದರೆ, ಅವರ 'ಶ್ರೀಕೃಷ್ಣ' ಧಾರಾವಾಹಿಗೆ ಹಾಡಿದ್ದೆ. ಉಳಿದಂತೆ ಅವರ ಶೋಗಳಲ್ಲಿ ರೆಗ್ಯುಲರಾಗಿ ಹಾಡ್ತಿದ್ದೆ.

** ಸೀರಿಯಸ್ಸಾಗಿ ಸಿನಿಮಾ ಸಂಗೀತದ ನಂಟು ಯಾವಾಗ ಸಿಗತೊಡಗಿದ್ದು?*

ರವೀಂದ್ರ ಜೈನ್ ಅವರ ಹತ್ತಿರ ಐದು ವರ್ಷ ಶಿಷ್ಯವೃತ್ತಿ ನಿರ್ವಹಿಸಿದ ನಂತರ, ಪ್ರಖ್ಯಾತ ಸಂಗೀತ ನಿರ್ದೇಶಕ ಇಸ್ಮಾಯಿಲ್ ದರ್ಬಾರ್ ಹಾಗೂ ಮತ್ತೊಬ್ಬ ಸಂಗೀತ ನಿರ್ದೇಶಕ ಸಂದೇಶ್ ಶಾಂಡಿಲ್ಯ ಅವರ ಒಡನಾಟ ಸಿಕ್ಕಿತು. ಅವರ ಹಾಡುಗಳಿಗೆ ಕೆಲವೊಮ್ಮೆ ಟ್ರ್ಯಾಕ್ ಹಾಡ್ತಿದ್ದೆ. ಕೋರಸ್ ಹಾಡ್ತಿದ್ದೆ. ಸಂದೇಶ್ ಶಾಂಡಿಲ್ಯ ಅವರು ಸಂಗೀತ ನೀಡಿದ್ದ 'ಕಭಿ ಖುಷಿ ಕಭಿ ಘಮ್' ಚಿತ್ರದ 'ಸೂರಜ್ ಹುವಾ ಮುದ್ಧಂ' ಹಾಡಿಗೆ ಹಾಡಿದ್ದ ಕೋರಸ್ ಹಾಗೂ ವಿಷಲ್ ಪಾರ್ಟ್ ನೆನಪಾಗುತ್ತಿದೆ. ಇಸ್ಮಾಯಿಲ್ ದರ್ಬಾರ್ ಅವರು 'ಹಮ್ ದಿಲ್ ದೇ ಚುಕೆ ಸನಮ್', 'ದೇವದಾಸ್' ಸೇರಿದಂತೆ ಅನೇಕ ಚಿತ್ರಗಳಿಗೆ ಸಂಗೀತ ನೀಡಿದ್ದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ನಾನವರ ಬಳಿ ಸೇರಿಕೊಂಡಾಗ 'ದೇವದಾಸ್' ಚಿತ್ರದ ವರ್ಕ್‌ನಲ್ಲಿ ಬ್ಯುಸಿಯಾಗಿದ್ದರು. ಉಳಿದಂತೆ, ಸಂದೇಶ್ ಶಾಂಡಿಲ್ಯ ಅವರು 'ಕಭಿ ಖುಷಿ ಕಭಿ ಘಮ್', 'ಗಂಗಾಜಲ್', 'ಜಬ್ ವಿ ಮೆಟ್' ಒಳಗೊಂಡಂತೆ ಅನೇಕ ಹಿಟ್ ಚಿತ್ರಗಳಿಗೆ ಮ್ಯೂಸಿಕ್ ನೀಡಿದ್ದನ್ನು ಜ್ಞಾಪಿಸಿಕೊಳ್ಳಬಹುದು.

** ನೀವು ಭೀಮಸೇನ ಜೋಷಿಯವರ ಜೊತೆಯೂ ಕೆಲಸ ಮಾಡಿದ್ದೀರಿ ಅಂತಲೂ ಕೇಳಿದ್ದುಂಟು. ಅದರ ಬಗ್ಗೆ ಸ್ವಲ್ಪ ಹೇಳ್ತೀರಾ?*


ಹೌದು. ಕೆಲಕಾಲ, ಭೀಮಸೇನ ಜೋಷಿಯವರ ಜೊತೆಗಿದ್ದೆ. ಅವರು ಹಾಡುವಾಗ ತಂಬೂರಿ ನುಡಿಸುತ್ತಿದ್ದೆ. ಹಾಗೇನೆ, ರಾಶಿದ್ ಖಾನ್ ಹಾಗೂ ಶುಭಾ ಮುದ್ಗಲ್ ಅವರ ಜೊತೆಯೂ ವರ್ಕ್ ಮಾಡಿದ್ದು ನನ್ನ ಸುಯೋಗ. ಅಂತಹ ಲೆಜೆಂಡ್‌ಗಳ ಜೊತೆ ಕೆಲಸ ಮಾಡುವಾಗ ಕಲಿಯೋದು ಬಹಳಷ್ಟಿರುತ್ತೆ, ನನ್ನ ಗ್ರಹಿಕಾ ಸಾಮರ್ಥ್ಯಕ್ಕೆ ಎಷ್ಟು ಸಾಧ್ಯವೋ ಅಷ್ಟು ಕಲಿತೆ. ಅಂದಹಾಗೆ ಅಂಥವರ ಸಂಪರ್ಕ ಸಿಕ್ಕಿದ್ದು, ಭೀಮಸೇನ ಜೋಷಿಯವರ ಶಿಷ್ಯ ವಿನಾಯಕ್ ಪ್ರಭು ಹಾಗೂ ಖ್ಯಾತ ಹಾರ್ಮೋನಿಯಂ ಪ್ಲೇಯರ್ ಸುಧೀರ್ ನಾಯಕ್ ಅವರ ಮೂಲಕ.

** ಹೆಚ್ಚಾಗಿ ಮುಂಬಯಿಯಲ್ಲೇ ಕಳೆದ ನಿಮಗೆ ಕನ್ನಡ ಚಿತ್ರರಂಗದ ನಂಟು ಹೇಗೆ ಸಿಕ್ಕಿತು?*

2004ರಲ್ಲಿ ನನ್ನ ಮದುವೆಯಾಯ್ತು, ನನ್ನ ಹೆಂಡತಿ ಬೆಂಗಳೂರಿನವರು. ಪ್ರಥಮ ದೀಪಾವಳಿಯ ನೆಪದಲ್ಲಿ ಬೆಂಗಳೂರಿನಲ್ಲಿ ಕೆಲಕಾಲ ಇರಬೇಕಾಯಿತು. ಆಗ ಗೆಳೆಯ ಪ್ರಕಾಶ್ ಅನ್ನುವವರ ಮೂಲಕ 'ಶಿವಮಣಿ' ಚಿತ್ರದ ನಿರ್ದೇಶಕ ಅಮರನಾಥ್ ಅವರ ಪರಿಚಯವಾಯಿತು. ರವೀಂದ್ರ ಜೈನ್ ಅವರ ಬಳಿ ಕೆಲಸ ಮಾಡಿದ್ದೆ ಅನ್ನೋ ಕಾರಣದಿಂದ 'ಶಿವಮಣಿ'ಗೆ ಮ್ಯೂಸಿಕ್ ಮಾಡುವ ಅವಕಾಶ ಸಿಕ್ಕಿತು. ಹಾಡುಗಳು ಹಿಟ್ ಆದವು. 'ಮೊದಮೊದಲ ಮಾತು ಚಂದ ಕನವರಿಸೋ ಪ್ರೀತಿಗೆ...' ಹಾಡಂತೂ ಪದೇ ಪದೇ ಟಿವಿಯಲ್ಲಿ, ರೇಡಿಯೋದಲ್ಲಿ ಪ್ರಸಾರವಾಗುತ್ತಿತ್ತು, ಆಗಂತೂ ನನಗೆ ತುಂಬಾ ಸಂತಸವಾಗುತ್ತಿತ್ತು, ನಿಜ ಹೇಳಬೇಕೆಂದರೆ 'ಶಿವಮಣಿ' ಚಿತ್ರಕ್ಕೆ ಎಂ.ಎಂ.ಕೀರವಾಣಿಯವರು ಸಂಗೀತ ನೀಡಬೇಕಿತ್ತು ಅಂತ ಆಮೇಲೆ ಗೊತ್ತಾಯಿತು.

** 'ಶಿವಮಣಿ'ಯ ನಂತರ ಯಾವ್ಯಾವ ಚಿತ್ರಗಳಿಗೆ ಸಂಗೀತ ನೀಡಲು ಅವಕಾಶ ಬಂದವು?*

'ಗಾಂಧೀ ಸ್ಮೈಲ್', 'ಕಾರಂಜಿ' ಚಿತ್ರಗಳು ಬಂದವು. 'ಕಾರಂಜಿ'ಯ 'ಈ ದಿನ ಹೊಸತಾಗಿದೆ..' ಹಾಡು ಹಿಟ್ ಆಯಿತು. ಆ ಹಾಡು ವರ್ಷದ ಟಾಪ್ ಟೆನ್ ಪಟ್ಟಿಯಲ್ಲಿತ್ತು ಅನ್ನುವುದು ಖುಷಿ. ಆನಂತರ 'ಒಲವೇ ವಿಸ್ಮಯ', 'ಮಂದಹಾಸ', 'ಅದ್ವೈತ', 'ನಿಂಬೆ ಹುಳಿ' ಚಿತ್ರಗಳಿಗೆ ಸಂಗೀತ ನೀಡಿದೆ. ಪ್ರತಾಪ್ ಗೌಡ ಅನ್ನುವ ನಿರ್ದೇಶಕರ ಹೆಸರಿಡದ ಚಿತ್ರಕ್ಕೆ ನನ್ನ ಸಂಗೀತದಲ್ಲಿ ಖ್ಯಾತ ಗಾಯಕಿ ಆಶಾ ಭೋಂಸ್ಲೆ ಹಾಡಿದ್ರು ಅನ್ನೋದನ್ನ ಇಲ್ಲಿ ಸ್ಮರಿಸಿಕೊಳ್ಳಬಹುದು.



ಆಶಾ ಬೋಂಸ್ಲೆ ಹಾಗೂ ಭೀಮಸೇನ್ ಜೋಶಿ ಜೊತೆ ವೀರ್

** ನಿಮ್ಮ ಮುಂದಿನ ಸಿನಿಮಾಗಳು ಯಾವುವು?*

ಯೋಗರಾಜ ಭಟ್ಟರ ಶಿಷ್ಯಂದಿರ 'ದ್ಯಾವ್ರೇ', 'ಪ್ರೀತಿ ಗೀತಿ ಇತ್ಯಾದಿ', 'ಚಾರ್ಲಿ' ಚಿತ್ರಗಳು ಹಾಗೂ ಜಗ್ಗೇಶ್ ನಟಿಸುತ್ತಿರುವ 'ಸಾಫ್ಟ್ ವೇರ್ ಗಂಡ', 'ಕಾರಂಜಿ' ನಿರ್ದೇಶಕ ಶ್ರೀಧರ್ ಅವರ 'ಜಾಲಿ ಬಾರು ಪೋಲಿ ಹುಡುಗರು' ಸೇರಿದಂತೆ ಒಂದೆರಡು ಇನ್ನೂ ಹೆಸರಿಡದ ಚಿತ್ರಗಳು ಸದ್ಯಕ್ಕೆ ಕೈಯಲ್ಲಿವೆ. 'ದ್ಯಾವ್ರೇ' ಹಾಡುಗಳು ಈಗಾಗಲೇ ಹಿಟ್ ಆಗಿರುವುದು ಮನಸ್ಸಿಗೆ ಖುಷಿ ತಂದಿದೆ. 'ಸಾಫ್ಟ್ ವೇರ್ ಗಂಡ' ಚಿತ್ರಕ್ಕೆ ಫೋಕ್ ಬೇಸ್ಡ್ ಟ್ಯೂನ್‌ಗಳನ್ನು ಕೊಟ್ಟಿದ್ದೇನೆ. ಈ ಚಿತ್ರದ ಹಾಡುಗಳು ಖಂಡಿತ ಹಿಟ್ ಆಗುತ್ತವೆಂಬ ವಿಶ್ವಾಸ ನನಗಿದೆ.

** ಅಷ್ಟು ಕಾಲ ಮುಂಬೈಯಲ್ಲಿ ಇದ್ದ ನಿಮಗೆ ಮತ್ತೆ ಮುಂಬೈಗೆ ಹೋಗಿ ಬಾಲಿವುಡ್ ಚಿತ್ರಗಳಿಗೆ ಮ್ಯೂಸಿಕ್ ಮಾಡಬೇಕು ಅನ್ನುವ ಕನಸುಗಳೇನಾದರು ಇವೆಯಾ?*


ಬಾಲಿವುಡ್ ಚಿತ್ರಗಳಿಗೆ ಸಂಗೀತ ನೀಡುವ ಕನಸುಗಳು ಯಾರಿಗಿರಲ್ಲ ಹೇಳಿ. ಅವಕಾಶಗಳು ಸಿಗಬೇಕಷ್ಟೇ. ಆ ನಿಟ್ಟಿನಲ್ಲಿ ಈಗಾಗಲೇ ನಿರ್ದೇಶಕರಾದ ಮಹೇಶ್ ಭಟ್, ಸೂರಜ್ ಬರ್ಜಾತ್ಯ ರಾಮ್ ಗೋಪಾಲ್ ವರ್ಮ ಕ್ಯಾಂಪಿನ ರೆಗ್ಯುಲರ್ ನಿರ್ಮಾಪಕ ಸಂದೀಪ್ ಗಂಗಟ್ಕರ್ ಅವರ ಜೊತೆ ಸಂಪರ್ಕದಲ್ಲಿದ್ದೀನಿ. ಮುಂದೆ ಏನಾಗುತ್ತೋ ನೋಡಬೇಕು.

** ನೀವು ಟ್ಯೂನ್ ಹಾಕಲು ಹಾರ್ಮೋನಿಯಂ ಆಯ್ಕೆ ಮಾಡಿಕೊಳ್ಳುತ್ತೀರಿ... ಇದರ ಗುಟ್ಟೇನು?*

ನನಗೆ ಹಾರ್ಮೋನಿಯಂ ನುಡಿಸೋದಂದ್ರೆ ತುಂಬಾ ಇಷ್ಟ. ಹಾಗೆ ನೋಡಿದರೆ ಇಳಯರಾಜಾ, ಹಂಸಲೇಖಾ, ಹಿಮೇಶ್ ರೇಶಾಮಿಯ, ಎಸ್.ಎ.ರಾಜ್‌ಕುಮಾರ್ ಸೇರಿದಂತೆ ಅನೇಕ ಸಂಗೀತ ನಿರ್ದೇಶಕರು ಈಗಲೂ ಹಾರ್ಮೋನಿಯಂ ಮೂಲಕವೇ ಟ್ಯೂನ್ ಹಾಕುವುದನ್ನು ನಾವಿಲ್ಲಿ ಗಮನಿಸಬಹುದು. ಹಾರ್ಮೋನಿಯಂ ಮೂಲಕ ರಾಗ ಹಾಕಿ ಒಂದು ಪ್ಯೂರ್ ಕ್ಲಾಸಿಕಲ್ ಬೇಸ್ಡ್ ಮ್ಯೂಸಿಕ್ಕಿಗೆ ಅವಕಾಶವಿರುವ ಸಿನಿಮಾಗೆ ಸಂಗೀತ ನೀಡುವಾಸೆ. ಉದಾಹರಣೆಗೆ 'ಮಲಯ ಮಾರುತ', 'ಶಂಕರಾಭರಣಂ', 'ಸಾಗರ ಸಂಗಮಂ' ಹಾಗೂ 'ಬೈಜು ಬಾವರ' ತರಹದ ಸಿನಿಮಾಗಳು.

** ನಿಮಗೆ ಯಾವುದಾದರು ಪ್ರಶಸ್ತಿಗಳು ಬಂದಿವೆಯಾ?*

'ಕಾರಂಜಿ' ಚಿತ್ರದ ಸಂಗೀತಕ್ಕಾಗಿ ರೇಡಿಯೋ ಮಿರ್ಚಿ ಅವಾರ್ಡ್ ಬಂದಿತ್ತು, ಹಾಗೇನೆ ಕಳೆದ ಎರಡು ವರ್ಷ ರೇಡಿಯೋ ಮಿರ್ಚಿ ಅವಾರ್ಡ್‌ಗೆ ಜ್ಯೂರಿಯಾಗಿದ್ದೆ. ■



ಅದರಿಂದ ನೊಂದವರು ಜೊತೆಗೆ ಮೂಢನಂಬಿಕೆಗಳನ್ನು ವಿರೋಧಿಸುವವರು ದೂರು ನೀಡಿ ನ್ಯಾಯ ಪಡೆಯುವಂತೆ ಕಾನೂನು ಇರಬೇಕು. ಇದಕ್ಕೆ ಸಂಬಂಧಿಸಿದಂತೆ ಜಿಲ್ಲಾಮಟ್ಟದಲ್ಲಿ ಸಮಿತಿ ಇರಬೇಕು. ಜನರು ಮೌಢ್ಯದಿಂದ ಮುಕ್ತರಾಗಬೇಕು. ಧಾರ್ಮಿಕ ಹಕ್ಕುಗಳಿಗೆ ತೊಂದರೆಯಾಗದಂತೆ ಮೌಢ್ಯಗಳನ್ನು ನಿಷೇಧಿಸುವ ಕಾನೂನು ಜಾರಿಗೆ ಬರಬೇಕು.

-ಜಗದಿ, ಜಲಮಂಗಳ, ರಾಮನಗರ

ಮೌಢ್ಯವನ್ನು ಪ್ರೀತಿಸೋ ಹರಕತ್ತಾದರೂ ಏನು?

ನೆರೆಯ ಮಹಾರಾಷ್ಟ್ರದಲ್ಲಿ ವಿಚಾರವಾದಿ ದಾಭೋಲಕರ್ ಹತ್ಯೆಯಾಯಿತು. ಆದರೆ ಅವನ ವೈಚಾರಿಕತೆಯನ್ನು ಹತ್ಯೆ ಮಾಡುವ ಸಾಮರ್ಥ್ಯ ಯಾವ ಅತ್ಯಾಧುನಿಕ ಆಯುಧಕ್ಕೂ ಇರಲಿಲ್ಲ, ಹೀಗಾಗಿಯೇ ಕೊನೆಗೂ ಆತ ಬಯಸಿದ್ದ ಮೂಢನಂಬಿಕೆಯ ಬಗೆಗಿನ ಮಸೂದೆ ಕ್ಯಾಬಿನೆಟ್‌ನಲ್ಲಿ ಮಂಡನೆಯಾಗಿ ಈಗ ಕೇಂದ್ರ ಸರಕಾರದ ಸ್ವೀಕೃತಿಗಾಗಿ ಕಾಯುತ್ತಿದೆ. ಹಾಗೆ ನೋಡಿದರೆ ಮಹಾರಾಷ್ಟ್ರ ಕ್ಯಾಬಿನೆಟ್ ಒಪ್ಪಿಕೊಂಡ ಈ ಮಸೂದೆ ಇಡೀ ದೇಶದಲ್ಲಿ ಮಾತ್ರವಲ್ಲದೇ ಇಡೀ ವಿಶ್ವದಲ್ಲಿಯೇ ಮೊದಲು ಎನಿಸುತ್ತದೆ. ಮಹಾರಾಷ್ಟ್ರದ ಮಾದರಿಯಲ್ಲಿ ನಮ್ಮಲ್ಲೂ ಅದನ್ನು ಜಾರಿಗೊಳಿಸುವ ಸಾಧ್ಯತೆಗಳಿವೆ.

ಇನ್ನು ಯಾವುದೇ ಒಂದು ಮಸೂದೆ ಪಾಸಾಗಿ, ಶಾಸನವಾಗಿ ಜಾರಿಗೆ ಬಂದರೆ ಅಲ್ಲಿಗೆ ಮುಗಿಯಲಿಲ್ಲ, ನಮ್ಮ ದೇಶದಲ್ಲಿ ಸ್ವಾತಂತ್ರ್ಯಪೂರ್ವದಿಂದಲೂ ಅನೇಕ ಬಗೆಯ ಶಾಸನಗಳಿವೆ. ಬಾಲ್ಯ ವಿವಾಹವಾಗಿರಬಹುದು, ವರದಕ್ಷಿಣೆ ಇರಬಹುದು, ಭ್ರೂಣ ಲಿಂಗ ಪತ್ತೆಗೆ ಸಂಬಂಧಿಸಿದ ಶಾಸನ, ಮಹಿಳೆಗೆ ಆಸ್ತಿ ಹಕ್ಕಿನ ಕಾಯ್ದೆ ಮುಂತಾದವುಗಳು ಇರುವಾಗಲೂ ಗಂಟೆಗೊಂದು ವರದಕ್ಷಿಣೆಯ ಸಾವುಗಳಿವೆ, ಅರ್ಧ ಗಂಟೆಗೆ ಒಂದು ಅತ್ಯಾಚಾರದ ಪ್ರಕರಣಗಳಿವೆ. ಹೀಗೆ ಕಾನೂನು ಜಾರಿಯಾದರೆ ಅಲ್ಲಿಗೆ ಮುಗಿಯಿತು, ಆ ಸಮಸ್ಯೆಯ ಇತಿಶ್ರೀ ಹಾಡಿದಂತೆಯೇ ಎಂದು ಭಾವಿಸುವ ಅವಶ್ಯಕತೆಯಿಲ್ಲ, ಜನಜಾಗೃತಿ ಮತ್ತು ದಾಭೋಲ್ಕರ್ ಹುಟ್ಟು ಹಾಕಿರುವ ಅಂಧ ಶ್ರದ್ಧಾ ನಿರ್ಮೂಲನ ಕೇಂದ್ರದಂತಹ ಘಟಕಗಳನ್ನು ದೇಶದ ಉದ್ದಗಲಕ್ಕೂ ಸ್ಥಾಪಿಸುವ, ಕಾರ್ಯನಿರ್ವಹಿಸುವ ಅಗತ್ಯತೆಯಿದೆ. ಅಂದಾಗ ಮಾತ್ರ ಈ ಬಗೆಯ ಮಸೂದೆಗಳಿಗೆ ಅರ್ಥ ಸಿಗುತ್ತದೆ. ಇಲ್ಲದಿದ್ದರೆ ಅನೇಕ ಶಾಸನಗಳ ಹಾಗೆ ಇದೂ ಒಂದು ಶಾಸನವಾಗಿ ಸಾಂದರ್ಭಿಕವಾಗಿ ಉಲ್ಲೇಖಿಸಿ ಹೇಳಬಹುದಾದ ಕಲಮಾಗಿ ಉಳಿಯುವ ಸಾಧ್ಯತೆಯಿದೆ.

-ಡಾ.ಎಸ್.ಬಿ.ಜೋಗುರ.

ಮೋದಿ ಒಂದು ಬಲೂನು. ಅದಕ್ಕೆ ಗುಜರಾತ್ ಹಾಗು ಬಿಜೆಪಿ ಸರ್ಕಾರಗಳು ಇರುವ ಕಡೆ ಗಾಳಿ ತುಂಬಿ ಕರ್ನಾಟಕಕ್ಕೆ ಕಳುಹಿಸಿದ್ದವು. ಇಲ್ಲಿ ಬೆಂಗಳೂರಿನಲ್ಲಿ ಆ ಬಲೂನಿಗೆ ವೈಚಾರಿಕ ಪ್ರತಿಭಟನೆಯ ಸೂಜಿ ಚುಚ್ಚಲಾಯಿತು. ಎಲ್ಲಾ ಟುಸ್...

ನೈತಿಕ ಪ್ರತಿರೋಧ ಒಂದು ಲಕ್ಷ ಕೋಮು ಕ್ರಿಮಿಗಳ ನಿರ್ಲಜ್ಜ ಹೊಗಳಿಕೆಗಳಿಗಿಂತ ದೊಡ್ಡದ್ದು.

- ರವಿ ಕುಮಾರ್, ಹಾಸನ

ಡಾ. ಹಯವದನ ಮೂಡಸಿಗ್ರಿ ಅವರು ಬರೆದ 'ವಿವೇಕಾನಂದರು ಬಲಪಂಥೀಯರಾಗಿರಲಿಲ್ಲ' ಲೇಖನವು ಸಂಘ ಪರಿವಾರದ ಇತಿಹಾಸ ತಿರುಚುವಿಕೆ ಪ್ರಯತ್ನದ ವಿರುದ್ಧ ಉತ್ತಮ ಅಸ್ತ್ರವಾಗಿದೆ. ಆಧಾರರಹಿತವಾಗಿ ಕೇವಲ ಮಾತಿನಿಂದ ಮರಳು ಮಾಡುವ ಚಕ್ರವರ್ತಿ ಸೂಲಿಬೆಲೆರಂಥವರಿಗೆ ಈ ಲೇಖನವು ತಕ್ಕ ಉತ್ತರವಾಗಿದೆ. 'ನಮೋ ಬ್ರಿಗೇಡ್' ಮೂಲಕ ಮೋದಿ ಜೊತೆ ವಿವೇಕಾನಂದರನ್ನು ಸಮೀಕರಿಸಿ ಜನರ ಹಾದಿ ತಪ್ಪಿಸುತ್ತಿರುವ ಈ ಸಂದರ್ಭದಲ್ಲಿ ಈ ಲೇಖನವು ಅತ್ಯಗತ್ಯವಾಗಿತ್ತು, ಲೇಖಕರಿಗೆ ಧನ್ಯವಾದಗಳು.

- ಇರ್ಷಾದ್ ಮೊಹಮ್ಮದ್, ಮಂಗಳೂರು

'ಸಸ್ಯಾಹಾರಿಗಳಿಗೆ ಮಾತ್ರ' ಎಂಬಂತಹ ಬೋರ್ಡುಗಳು ದಾವಣಗೆರೆಯಲ್ಲಿ ಓನಿಗೊಂದು ಸಿಗುತ್ತದೆ. ಒಮ್ಮೆ ನನ್ನ ಮುಸ್ಲಿಮ್ ಸಹೋದ್ಯೋಗಿಯೊಬ್ಬ ಬಾಡಿಗೆ ಮನೆಗೆ ಹುಡುಕಾಡಿ, ಸಿಗದೆ ಸುಸ್ತಾಗಿ, ಕೊನೆಗೆ 'ಜನತಾವಾಣಿ' ಪತ್ರಿಕೆಯಲ್ಲಿ "ನಾನು ಶಾಖಾಹಾರಿ. ಮನೆ ಬಾಡಿಗೆ ಕೊಡುವವರು ಫೋನ್ ಮಾಡಿ" ಎಂದು ಜಾಹೀರಾತು ನೀಡಿದ್ದ, ಅಲ್ಲಿಗೆ ಒಂದು ತಿಂಗಳ ಹುಡುಕಾಟ ಕೊನೆಯಾಯಿತು.

ಎಲ್ಲೆಡೆ 'ಶಾಖಾಹಾರಿಗಳಿಗೆ ಮಾತ್ರ' ಎಂಬ ಬೋರ್ಡ್ ಕಾಣುವ ಕನಸು ನನ್ನದು.

-ಟಿ.ರಾಮಚಂದ್ರಪ್ಪ, ದಾವಣಗೆರೆ

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು.ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿಸಬಹುದು.

Registered No.KA/RNP/BGS/2036/2011-13 Posted at : GPO, Bangalore-01, Friday

ಗುಟ್ಟಾಗೊಂದ್ ತಮಿಳ್ ಸ್ಟೋರಿ



ನಿರ್ಮಾಪಕ ಕೆ.ಮಂಜು ಸೈಲೆಂಟಾಗಿ ತಮಿಳಿನಲ್ಲೊಂದು ಸಿನಿಮಾ ಮಾಡಿ ಮುಗಿಸಿದ್ದಾರೆ. 'ಸುಂದರಪಾಂಡ್ಯನ್', 'ಸುಬ್ರಹ್ಮಣ್ಯ ಪುರಂ' ಚಿತ್ರಗಳ ಖ್ಯಾತಿಯ ಶಶಿಕುಮಾರ್ ಆ ಚಿತ್ರದ ಹೀರೋ. ಇದೆಲ್ಲ ಹೇಗೆ ನಡೀತಂದ್ರೆ, ಕೆ.ಮಂಜು ಶಶಿಕುಮಾರ್ ನಟಿಸಿದ್ದ 'ಸುಂದರಪಾಂಡ್ಯನ್' ತಮಿಳು ಚಿತ್ರವನ್ನು ಖರೀದಿಸಿ ಕರ್ನಾಟಕದಲ್ಲಿ ಬಿಡುಗಡೆ ಮಾಡಿದ್ದರು. ಆ ನೆಪದಲ್ಲಿ ಶಶಿಕುಮಾರ್ ಸಂಪರ್ಕ ಸಿಕ್ಕಿ, ಆ ಸಂಪರ್ಕ ಮಂಜು ತಮಿಳಿನಲ್ಲೊಂದು ಸಿನಿಮಾ ಮಾಡುವವರೆಗೆ ಬಂದು ನಿಂತಿದೆ.

ಇಷ್ಟಕ್ಕೂ ಕೆ.ಮಂಜು ಅವರು 'ಪರುತ್ತಿವೀರನ್' ಖ್ಯಾತಿಯ ಕಾರ್ತಿಕ್ ಹಾಕಿಕೊಂಡು ತಮಿಳಿನಲ್ಲಿ ಸಿನಿಮಾ ನಿರ್ಮಿಸುವ ಆಸೆ ಹೊಂದಿದ್ದರು. ಅದೇ ಉದ್ದೇಶದಲ್ಲಿದ್ದ ಮಂಜು ಅವರು, ಕಾರ್ತಿಕ್ ಜೊತೆ ಮಾತಾಡಿ ಅಡ್ವಾನ್ಸು ಕೂಡ ಕೊಟ್ಟು ಬರಬೇಕೆಂದು ನಿರ್ಧರಿಸಿ ಕೈಯಲ್ಲಿ ನಲವತ್ತು ಲಕ್ಷ ಇಟ್ಟುಕೊಂಡು ಚೆನ್ನೈಗೆ ಹೋಗಿದ್ದರು. ಆದರೆ ಒಂದು ಚಿತ್ರಕ್ಕೆ ಕಾರ್ತಿಕ್ ಸಂಭಾವನೆ ಬರೋಬ್ಬರಿ ಎಂಟು ಕೋಟಿ ರೂಪಾಯಿ ಇದ್ದು, ಮುಂಗಡವಾಗಿ ನಾಲ್ಕು ಕೋಟಿ ಕೊಡಬೇಕೆಂಬ ಸುದ್ದಿ ಮಂಜು ಅವರ ಕಿವಿಗೆ ಬಿದ್ದಿದ್ದೇ ತಡ ಗಾಬರಿಯಾದರು. ಕೈಯಲ್ಲಿ ಬರೀ ನಲವತ್ತು ಲಕ್ಷ ಇಟ್ಟುಕೊಂಡು ಸುಮ್ನೆ ಕಾರ್ತಿಕ್‌ರನ್ನು ಮೀಟ್ ಮಾಡುವುದು ಸರಿಯಲ್ಲವೆಂದು ಮಂಜು ಅವರಿಗೆ ಹೊಳೆದು ವಾಪಾಸು ಬೆಂಗಳೂರಿಗೆ ಬಂದರು. ಈ ಗ್ಯಾಪಿನಲ್ಲಿ ನಡೆದದ್ದೇ ಶಶಿಕುಮಾರ್ ಜೊತೆಗಿನ ಗುಟ್ಟಿನ ಸಿನಿಮಾ.



ಐಂದ್ರಿತಾ ರೇ ಬೆಂಗಾಳಿಗೆ

ಬೆಂಗಾಳಿ ಬೆಡಗಿ ಐಂದ್ರಿತಾ ರೇ ಕನ್ನಡ ಚಿತ್ರಗಳಲ್ಲಿ ಮಿಂಚಿದ್ದು ಗೊತ್ತಿರುವಂಥದ್ದೇ. ಈಕೆ ಇದೀಗ ತನ್ನ ಮಾತೃಭಾಷೆ ಬಂಗಾಳಿಯಲ್ಲಿ ತಯಾರಾಗುತ್ತಿರುವ 'ಬಚ್ಚನ್' ಅನ್ನುವ ಚಿತ್ರದಲ್ಲಿ ಅಭಿನಯಿಸಲಿದ್ದಾಳೆ. ರಾಜಾಚಂದ್ರ ನಿರ್ದೇಶನದ ಬಂಗಾಳಿಯ 'ಬಚ್ಚನ್' ಚಿತ್ರವು, ಕನ್ನಡದಲ್ಲಿ ಸುದೀಪ್ ಮಾಡಿದ್ದ 'ವಿಷ್ಣುವರ್ಧನ' ಚಿತ್ರದ ರಿಮೇಕ್ ಚಿತ್ರ. ಐಂದ್ರಿತಾ 'ವಿಷ್ಣುವರ್ಧನ'ದಲ್ಲಿ ನಟಿಸಿದ್ದಳು ಅನ್ನುವುದನ್ನು ಇಲ್ಲಿ ಗಮನಿಸಬೇಕು. ಸುದೀಪ್ ನಿರ್ವಹಿಸಿದ್ದ ಪಾತ್ರವನ್ನು ಬಂಗಾಳಿಯ ಖ್ಯಾತ ನಟ ಜೀತ್ ಮಾಡಲಿದ್ದಾರೆ. ಅಂದಹಾಗೆ, ಜೀತ್ ಸೆಲಿಬ್ರಿಟಿ ಕ್ರಿಕೆಟ್ ಲೀಗ್‌ನಲ್ಲಿ ಬೆಂಗಾಲಿ ಟೀಮ್‌ನ ನಾಯಕ ಆಗಿದ್ದವರು.

'ಕ್ರೇಜಿ ಕಪಲ್ಸ್' ಎಂಬೋ ರಿಯಾಲಿಟಿ ಶೋ

'ಮುಂಗಾರು ಮಳೆ' ಮೂಲಕ ಫೇಮಸ್ಸಾದ ಪದ್ಮಜಾ ರಾವ್ ಈಗ ನಿರ್ಮಾಪಕಿ ಕಂ ನಿರ್ದೇಶಕಿ. ಸಿನಿಮಾ ಅಂದುಕೊಂಡಿರಾ? ಅಲ್ಲ, ಅವರೀಗ ಜೀ ಕನ್ನಡಕ್ಕಾಗಿ 'ಕ್ರೇಜಿ ಕಪಲ್ಸ್' ಅನ್ನುವ ರಿಯಾಲಿಟಿ... ಮಾಡುತ್ತಿದ್ದಾರೆ. ನವೆಂಬರ್ ಇಪ್ಪತ್ತೈದರಿಂದ ಶೂಟಿಂಗ್ ಶುರುವಾಗ... ಈ ರಿಯಾಲಿಟಿ ಶೋ ವಿಶೇಷತೆ ಏನೆಂದರೆ 'ರೋಮಿಯೋಗೆ ಜ್ಯೂಲಿಯೆಟ್‌ಗೆ ರೆಸ್ಟು' ಅನ್ನುವ ಕಾನ್ಸೆಪ್ಟ್. ಈ ಕಾನ್ಸೆಪ್ಟ್ ಮೂಲಕ ಗ... ಒಂದಿಷ್ಟು ಫನ್ನಿ ಟಾಸ್ಕ್‌ಗಳು ಇರುತ್ತವೆ. ಹೆಂಡತಿ ಪ್ರೋತ್ಸಾಹಿಸಬೇಕು. ಹೊ... ಲವ್ವಲ್ಲಿ ಬಿದ್ದಿರುವ ಹಾಗೂ ಹೊಸದಾಗಿ ಮದುವೆಯಾದವರಿ... ಕಾರ್ಯಕ್ರಮದಲ್ಲಿ ಮೊದಲ ಆದ್ಯತೆ ಕೊಡಲಾಗುವುದಂತೆ. ರೇಡಿಯೋ... ಪೃಥ್ವಿ ಹಾಗೂ ವರ್ಷ ನಡೆಸಿಕೊಡಲಿರುವ ಈ ವಿಶಿಷ್ಟ ಕಾರ್ಯಕ್ರಮಕ್ಕೆ... ರವೀಂದ್ರನಾಥ್ ಟೈಟಲ್ ಸಾಂಗ್ ಮಾಡಿಕೊಟ್ಟಿದ್ದಾರೆ. ಆಂಟನಿ ಅನ್ನುವವರು ಶೀರ್ಷಿಕೆ ಸಾಹಿತ್ಯ ಬರೆದಿದ್ದಾರೆ. ಜೊತೆಗೆ, ಅಲ್ಲಲ್ಲಿ ರೀಮಿಕ್ಸ್ ಹಾಡುಗಳನ್ನು ಬಳಸಿಕೊಳ್ಳಲಾಗುವುದಂತೆ. ಅಂದಹಾಗೆ, ಈ... ಕಪಲ್ಸ್' ಕಾರ್ಯಕ್ರಮ 27 ಎಪಿಸೋಡ್‌ಗಳಲ್ಲಿ ಪ್ರಸಾರವಾಗಲಿದೆ.

'ಖತರ್ನಾಕ್' ತೆರೆಗೆ



ಮಳವಳ್ಳಿ ಸಾಯಿಕೃಷ್ಣ ನಿರ್ದೇಶನದ 'ಖತರ್ನಾಕ್' ಚಿತ್ರ ಈ ವಾರ ತೆರೆಗೆ ಬರುತ್ತಿದೆ. ಇದ್ಯಾವುದು 'ಖತರ್ನಾಕ್' ಸಿನಿಮಾ ಅಂತ ಟೆನ್ಶನ್ ಯಾರೂ ತಗೋಬೇಕಿಲ್ಲ. ವಿಕೃತ ಕಾಮಿ ಉಮೇಶ್ ರೆಡ್ಡಿ ಜೀವನವನ್ನು ಆಧರಿಸಿ ಮಾಡಲು ಹೊರಟ ಈ ಚಿತ್ರಕ್ಕೆ ಆರಂಭದಲ್ಲಿ 'ಉಮೇಶ್ ರೆಡ್ಡಿ' ಅಂತಲೇ ಹೆಸರಿಡಲಾಗಿತ್ತು. ಅದೇ ವೇಳೆಗೆ ಜೋಸೈಮನ್ ಅವರ ಮಗ ಹೀರೋ ಆಗಲು ಹೊರಟಿದ್ದ ಚಿತ್ರವೊಂದರ ಸುತ್ತಲೂ ಉಮೇಶ್ ರೆಡ್ಡಿ ನೆರಳೇ ಸುಳಿದಾಡಲು ಶುರುವಾದ ಮೇಲೆ ಸಾಯಿಕೃಷ್ಣ ಆತಂಕಕ್ಕೊಳಗಾದರು. ಈ ಎರಡೂ ಚಿತ್ರಗಳ ನಡುವೆ ಟೈಟಲ್ ವಿಷಯದಲ್ಲಿ ಒಂದು ತಣ್ಣನೆಯ ವಾದ-ವಿವಾದವೂ ಜರುಗಿತ್ತು. ಜೋಸೈಮನ್ ಪುತ್ರನ 'ಉಮೇಶ್ ರೆಡ್ಡಿ' ಆಮೇಲೆ ತೆರೆಗೆ ಬಂದು ಮರೆಗೆ ಹೋದ. ಆದರೂ ಡಿಸ್ಟರ್ಬ್ ಆಗಿದ್ದ ಸಾಯಿಕೃಷ್ಣ ತಕ್ಷಣ ತಮ್ಮ ಚಿತ್ರದ ಶೀರ್ಷಿಕೆಯನ್ನು ಬರೀ 'ಉಮೇಶ್' ಅಂತ ಬದಲಿಸಿದರು. ಯಾಕೋ ಅದೂ ಸರಿ ಬರಲಿಲ್ಲ ಅಂತನ್ನಿಸಿ ಕಡೆಗೆ ಖತರ್ನಾಕ್ ಐಡಿಯಾವೊಂದು ಹೊಳೆದಂತಾಗಿ ತಮ್ಮ ಚಿತ್ರಕ್ಕೆ 'ಖತರ್ನಾಕ್' ಅಂತಲೇ ಮರುನಾಮಕರಣ ಮಾಡಿಬಿಟ್ಟರು. ಅದೀಗ ಬಿಡುಗಡೆಯಾಗುತ್ತಿದೆ. ರವಿ ಕಾಳೆ ತುಂಬಾ ಚೆನ್ನಾಗಿ ನಟಿಸಿದ್ದಾರೆ ಅನ್ನುವ ಮಾತುಗಳೂ ಕೇಳಿಬರುತ್ತಿವೆ. ಸಾಯಿಯವರಿಗೆ ಒಂದು ಗುಡ್ ಲಕ್ ಹೇಳಿಬಿಡೋಣ.

ಕಸ್ತೂರಿಯಲ್ಲಿ 'ಕನಕದಾಸರು'



ರಾಧಿಕಾಳನ್ನು ಮದುವೆಯಾಗಿ, ಒಂದು ಮಗುವಿಗೆ ತಂದೆಯಾಗಿದ್ದು ಬಿಟ್ಟರೆ ಒಂದು ಕಾಲದ ಯಶಸ್ವೀ ನಿರ್ಮಾಪಕ ಎಚ್.ಡಿ. ಕುಮಾರಸ್ವಾಮಿ ಸಂಪೂರ್ಣವಾಗಿ ಚಿತ್ರರಂಗದ ನಂಟು ಕಳೆದುಕೊಂಡಿದ್ದರು ಅಂತಲೇ ಹೇಳಬೇಕಾಗುತ್ತದೆ. ರಾಜಕೀಯದಲ್ಲಿ ಬ್ಯುಸಿಯಾಗಿದ್ದೂ ಅದಕ್ಕೆ ಕಾರಣವಿರಬಹುದು ಅನ್ನಿ. ಇಂಥ ಕುಮಾರಸ್ವಾಮಿ ಈಗ 'ಕನಕದಾಸರು' ಎನ್ನುವ ಒಂದು ಮೆಗಾ ಧಾರಾವಾಹಿ ನಿರ್ಮಿಸಲು ಮನಸು ಮಾಡಿದ್ದಾರೆ. ಹಿರಿಯ ನಟ ಶ್ರೀನಿವಾಸಮೂರ್ತಿ ಅವರು ನಿರ್ದೇಶಿಸುತ್ತಿರುವ ಈ ಧಾರಾವಾಹಿ 'ಕನಕ ಜಯಂತಿ' ಪ್ರಯುಕ್ತ ನವೆಂಬರ್ ಇಪ್ಪತ್ತರಿಂದ ಪ್ರಸಾರವಾಗುತ್ತಿದೆ. ರುದ್ರಮೂರ್ತಿ ಶಾಸ್ತ್ರಿಯವರು ಬರೆದಿರುವ ಐನೂರು ಪುಟಗಳ ಕನಕದಾಸರ ಬದುಕನ್ನು ಕುರಿತ ಪುಸ್ತಕವನ್ನಾಧರಿಸಿ ತಯಾರಾಗುತ್ತಿರುವ ಈ ಧಾರಾವಾಹಿಯ ಸ್ಕ್ರಿಪ್ಟ್‌ಗೆ ಸ್ವತಃ ರುದ್ರಮೂರ್ತಿ ಶಾಸ್ತ್ರಿಯವರ ಸಹಕಾರವೂ ಇದೆ. ಈ ಧಾರಾವಾಹಿ ಮೂಲಕ ಕನಕದಾಸರ ಬಾಲ್ಯದಿಂದ ಹಿಡಿದು ಮುಪ್ಪಿನವರೆಗಿನ ಸುದೀರ್ಘ ಬದುಕಿನ ಪಯಣವನ್ನು ಕಟ್ಟಿ ಕೊಡುವ ಪ್ರಯತ್ನ ಶ್ರೀನಿವಾಸಮೂರ್ತಿಯವರದು. ಈಗಾಗಲೇ ಕನಕರ ಕುರಿತ ಐನೂರು ಪುಟಗಳ ಆ ಪುಸ್ತಕವನ್ನು ಕುಮಾರಸ್ವಾಮಿ ಓದಿದ್ದಾಗಿ ಹೇಳಿಕೊಂಡಿದ್ದಾರೆ.

ಹಾಗೆ ನೋಡಿದರೆ, ಶ್ರೀನಿವಾಸಮೂರ್ತಿಯವರು ಕನಕದಾಸರ ಕುರಿತ ಒಂದು ಸಿನಿಮಾ ಮಾಡಬೇಕೆಂಬ ಉತ್ಸಾಹ ತೋರಿದ್ದರು. ಆ ಸಿನಿಮಾದಲ್ಲಿ ಶಿವರಾಜ್‌ಕುಮಾರ್ ನಟಿಸಿದರೆ ಚೆನ್ನಾಗಿರುತ್ತೆ ಅನ್ನುವ ಆಶಯವೂ ಅವರದ್ದಾಗಿತ್ತು. ಆದೇಕೋ ಆ ಪ್ರಾಜೆಕ್ಟ್ ಶುರುವಾಗಲೇ ಇಲ್ಲ. ಮೂರ್ತಿಯವರ ಕನಸು ಈಗ 500-600 ಎಪಿಸೋಡ್‌ಗಳಿರುವ ಧಾರಾವಾಹಿಯಾಗುವ ಮೂಲಕ ನೆರವೇರುತ್ತಿದೆ ಅನ್ನಬಹುದು. ಕನಕದಾಸರಂತಹ ದಾರ್ಶನಿಕರ ಜೀವನಾದರ್ಶಗಳನ್ನು ಕನ್ನಡಿಗರಿಗೆ ಹೇಳಲು ಹೊರಟಿರುವ ಇಡೀ ತಂಡಕ್ಕೆ ಈ ಮೂಲಕ ಶುಭ ಕೋರೋಣ ಅಲ್ಲವೇ?



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427,
Fax : 26604536, E-mail :lankesh70@rediffmail.com